ಎಸ್.ಜಿ.ನರಸಿಂಹಾಚಾರ್ಯರ

ಕವಿತೆಗಳು

ಸಂಪಾದಕರು

ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ

ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರಿಯವರು (ಜನನ : ೧೯೩೩) ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗದಲ್ಲಿ ಪ್ರಾಧ್ಯಾಪಕರು. ಶ್ರೀಯುತರು ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ಗ್ರಂಥ ಸಂಪಾದನೆ, ನಿಘಂಟು ರಚನೆ ಮೊದಲಾದ ಶಾಸ್ತ್ರ ವಿಷಯಗಳಲ್ಲಿ ಗಾಢವಾದ ಪರಿಶ್ರಮ ಪಡೆದಿದ್ದಾರೆ. ಕನ್ನಡದ ವಿದ್ವತ್ ಪತ್ರಿಕೆಗಳಲ್ಲಿ, ಸ್ಮರಣ ಮತ್ತು ಸಂಭಾವನ ಗ್ರಂಥಗಳಲ್ಲಿ ಅನೇಕ ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ : ವಿದ್ವತ್ ಸಮಾವೇಶಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಶ್ರೀಯುತರು ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದ ಸಂದರ್ಭದಲ್ಲಿ (೧೯೭೭), ಕನ್ನಡ ಸಂಶೋಧನ ಕ್ಷೇತ್ರದಲ್ಲಿ ತಾವು ಸಲ್ಲಿಸಿರುವ ಸೇವೆಗಾಗಿ ಸನ್ಮಾನಿತರಾಗಿದ್ದಾರೆ. 'ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ' ಯೋಜನೆಯ ಸಂಪಾದಕರೂ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪಾದಕ ಮಂಡಲಿಯ ಸದಸ್ಯರೂ ಆಗಿದ್ದಾರೆ.

ಸ್ವತಂತ್ರವಾಗಿ, ಸಹಕರ್ತೃವಾಗಿ ಈವರೆಗೆ ಶ್ರೀಯುತರು ಸುಮಾರು ೪೦ ಪುಸ್ತಕಗಳನ್ನು ರಚಿಸಿದ್ದಾರೆ, ಸಂಪಾದಿಸಿದ್ದಾರೆ. 'ಮಹಾಕಾವ್ಯ ಲಕ್ಷಣ', 'ಕನ್ನಡ ಛಂದಸ್ಸು', 'ಶ್ರೀವತ್ಸ ನಿಘಂಟು', 'ಸಾಹಿತ್ಯ ಮಂಥನ', 'ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ', 'ಕನ್ನಡ ಛಂದಃಸ್ವರೂಪ', 'ಶಬ್ದಾರ್ಥ ವಿಹಾರ' —ಇವು ಅವರ ಗಮನಾರ್ಹ ಗ್ರಂಥಗಳಲ್ಲಿ ಕೆಲವು. ಇವುಗಳಲ್ಲಿ ಕೆಲವು ಬಹುಮಾನಿತ ಗ್ರಂಥಗಳು.

ಪ್ರಸ್ತುತ, 'ಎಸ್. ಜಿ. ನರಸಿಂಹಾಚಾರ್ಯರ ಕವಿತೆಗಳು' ಈ ಮಾಲೆಗೆ ಸೇರಿರುವ ಇನ್ನೊಂದು ಮಹತ್ತ್ವದ ಗ್ರಂಥ.

SG NARASIMHACHARYARA
RS 30.00
KAN 17056 1

IBH
ಐಬಿಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು 560 009

ಎಸ್. ಜಿ. ನರಸಿಂಹಾಚಾರ್ಯರ ಕವಿತೆಗಳು

(ಕವಿಚರಿತ್ರೆ, ಟಿಪ್ಪಣಿಗಳು, ಅನುಬಂಧಗಳೊಂದಿಗೆ)

ಸಂಪಾದಕ

ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ

ಐಬಿಎಚ್ ಪ್ರಕಾಶನ

ಗಾಂಧಿನಗರ ಬೆಂಗಳೂರು 560 009

S. G. NARASIMHACHARYARA KAVITHEGALU : The Complete Poetical Works of S. G. Narasimhacharya (1862-1907) with a biographical sketch, notes and appendices by Dr T.V Venkatachala Sastry, Professor of Kannada, Institute of Kannada Studies, Manasa Gangotri, Mysore-6. Published by G. K. Ananthram for IBH Prakashana, Fifth Main Road, Gandhinagar, Bangalore 560 009. Pp. xlviii+219; Price Paper-back Rs. 30.00, Calico Edition Rs. 50.00

© Reserved/1986

ಬೆಲೆ : ಸಾದಾ ಪ್ರತಿ ರೂ. 30
ಕ್ಯಾಲಿಕೊ ಪ್ರತಿ ರೂ. 50

ಮೊದಲ ಮುದ್ರಣ : 1986
ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್
ಐದನೆಯ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು 560 009
ಮುದ್ರಕರು : ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಜಯನಗರ, ಮೈಸೂರು 570 014

ಶ್ರೀರಂಗಪಟ್ಟಣ ಗೋವಿಂದರಾಜ ನರಸಿಂಹಾಚಾರ್ಯ

(ಸಪಾದ ಶತಮಾನೋತ್ಸವ ವರ್ಷ : ೧೮೬೨-೧೯೮೭)

ಇವರ ಅಗ್ರಗಣ್ಯ ಅಭಿಮಾನಿಗಳಾಗಿದ್ದ

ಡಾ. ಡಿ. ವಿ. ಗುಂಡಪ್ಪನವರಿಗೆ

ನಲ್ಮೆಯ ನೆನಪಿನಕಾಣಿಕೆ

ಅರಿಕೆ

ಎಸ್. ಜಿ. ನರಸಿಂಹಾಚಾರ್ಯರು (೧೮೬೨-೧೯೦೭) ಹೊಸಗನ್ನಡ ಸಾಹಿತ್ಯದ ಪ್ರವರ್ತಕರಲ್ಲಿ ಒಬ್ಬರೆಂದೂ ಕಣ್ಮಣಿಗಳೆಂದೂ ಖ್ಯಾತರಾದವರು. ತಮ್ಮ ಜೀವಿತಕಾಲದಲ್ಲಿ ಸರಳ ಸಂಭಾವಿತ ವ್ಯಕ್ತಿ, ಶ್ರೇಷ್ಠಕವಿ, ಘನವಿದ್ವಾಂಸರೆಂದು ಗಣ್ಯರಾಗಿದ್ದವರು. ಇವರು ಪ್ರಾಚೀನ ಗ್ರಂಥಗಳ ಸಂಪಾದನೆ, ಮಕ್ಕಳ ಸಾಹಿತ್ಯ, ಹೊಸಗನ್ನಡ ಕವಿತೆ ಈ ಮೂರು ಕ್ಷೇತ್ರಗಳಲ್ಲಿ ಅನನ್ಯವಾಗಿ ಶ್ರಮಿಸಿದ ಮಹನೀಯರು. ಹೊಸಗನ್ನಡ ಕವಿತೆಯ ಅರುಣೋದಯದ ಕಾಲದಲ್ಲಿ ಅವರು ನಿರ್ವಹಿಸಿದ ಪಾತ್ರಕ್ಕಾಗಿ ಇಂದು ಅವರನ್ನು ನಾವು ವಿಶೇಷವಾಗಿ ನೆನೆಯುತ್ತೇವೆ. ಅವರು ರಚಿಸಿದ ಮಧುರ ಮೋಹಕವಾದ ಬಿಡಿಗವಿತೆಗಳು, ಮುದ್ದಾದ ಕಾವ್ಯಾನುವಾದಗಳು ಸಂಖ್ಯೆಯಲ್ಲಿ ಸ್ವಲ್ಪವೇ ಆದರೂ ಭಾಷೆ ಶೈಲಿಗಳ ದೃಷ್ಟಿಯಿಂದ ಕನ್ನಡತನವನ್ನು ಮಿಗಿಲಾಗಿ ಮೆರೆಯುತ್ತವೆ ಎಂಬ ಕಾರಣಕ್ಕಾಗಿ ಅವನ್ನು ಕನ್ನಡಾಭಿಮಾನಿಗಳು ಓದುವುದೂ ಪಠ್ಯಗಳನ್ನಾಗಿ ಮಾಡಿ ಮಕ್ಕಳಿಂದಲೂ ಪ್ರೌಢ ವಿದ್ಯಾರ್ಥಿಗಳಿಂದಲೂ ಓದಿಸುವುದೂ ಒಂದು ಕಾಲಕ್ಕೆ ಸಾಮಾನ್ಯವಾಗಿತ್ತು. ಅವರ ಕಾವ್ಯಸಾಹಿತ್ಯದ ರುಚಿಯನ್ನು ಬಲ್ಲವರೆಲ್ಲರೂ, ಅವರ ಕವಿತೆಗಳನ್ನೆಲ್ಲಾ ಒಂದು ಕಡೆ ಕಾಣುವ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ಇದು ಕಾರ್ಯಗತವಾಗಲು ಕೆಲವು ತೊಡಕುಗಳಿದ್ದುವು. ಅವರ ಹೆಸರಿನಲ್ಲಿ ಪ್ರಕಟವಾಗಿ ಎಲ್ಲೆಲ್ಲಿಯೋ ಚೆದರಿದಂತಿದ್ದ ಗ್ರಂಥಗಳನ್ನೂ ಬಿಡಿಗವಿತೆಗಳನ್ನೂ ಹುಡುಕಿ ತೆಗೆಯುವುದೇ ಒಂದು ಕಷ್ಟವಾದರೆ, ಆ ಕಾಲದ ಪದ್ಧತಿಯಂತೆ ಅವರ ಎಷ್ಟೋ ಕವಿತೆಗಳು ಅವರ ಹೆಸರಿಲ್ಲದೆ ಅಚ್ಚಾಗಿ ಕರ್ತೃತ್ವವೇ ಒಂದು ಸಮಸ್ಯೆಯಾಗಿದ್ದುದು ಇನ್ನೊಂದು ಕಷ್ಟವಾಗಿತ್ತು. ಹೇಗಾದರೂ ಸರಿಯೆ, ಈ ಕವಿತೆಗಳನ್ನೆಲ್ಲ ಒಂದು ಕಡೆ ಸಂಕಲಿಸಿ, ಸಂಪಾದಿಸಿಕೊಡಬೇಕು ಎಂಬ ಒಂದು ಛಲ ಈಗ ಹಲವು ತಿಂಗಳುಗಳ ಹಿಂದೆ ನನ್ನ ಹೃದಯವನ್ನು ಹೊಕ್ಕು, ನನ್ನನ್ನು ಕಾಡತೊಡಗಿತು. ಇದಕ್ಕೆ ಕಾರಣವಾದ ಒಂದು ಸನ್ನಿವೇಶ ಎಂದರೆ, ಎಸ್. ಜಿ. ನರಸಿಂಹಾಚಾರ್ಯರು — ಎಂ. ಎ. ರಾಮಾನುಜಯ್ಯಂಗಾರ್ಯರ ಜೀವನ ಸಾಧನೆಗಳ ಬಗೆಗೆ ಮೈಸೂರು ಆಕಾಶವಾಣಿಯಲ್ಲಿ ನಾನು ಕೊಟ್ಟ ಉಪನ್ಯಾಸ. ಅದಕ್ಕಾಗಿ ಮೈಸೂರು ಆಕಾಶವಾಣಿಯ ವ್ಯವಸ್ಥಾಪಕ ಬಳಗದವರಿಗೆ ಮೊದಲು ನಾನು ನನ್ನ ಕೃತಜ್ಞತೆಗಳನ್ನು ಹೇಳಬೇಕು.

ಎಸ್. ಜಿ. ನ. ಅವರ ಕವಿತೆಗಳನ್ನು ಒಗ್ಗೂಡಿಸುವ ಶ್ರಮದಾಯಕವಾದ ಕೆಲಸವನ್ನು ನಾನು ಮಾಡುತ್ತಿರುವಾಗಲೇ, ಅವರ ಬದುಕಿನ ಬಗೆಗೆ ವಿಶದವಾಗಿ ತಿಳಿಯುವ ಕುತೂಹಲ ನನ್ನಲ್ಲಿ ಬೆಳೆಯಿತು. ಈ ಸಂಬಂಧದಲ್ಲಿ ಈಗ ತಿಳಿದಿರುವುದು ತೀರ ಸ್ವಲ್ಪ. ಆ ಸ್ವಲ್ಪವನ್ನೇ ನಾನು ದೊರಕಿಸಿಕೊಂಡು, ಓದಲು ತೊಡಗಿದೆ. ಇವುಗಳಲ್ಲಿ ಮುಖ್ಯವಾದವು ಈ ಕೆಲವು: ಎಂ. ಎ. ರಾಮಾನುಜಯ್ಯಂಗಾರ್ಯರು ಮೊದಲಾಗಿ ಕೆಲವರು

ಸಮಕಾಲೀನರ ಬಾಷ್ಪಾಂಜಲಿ ಲೇಖನಗಳು ಮತ್ತು ಕವಿತೆಗಳು ; ಡಿ. ವಿ. ಜಿ. ಅವರ 'ಜ್ಞಾಪಕ ಚಿತ್ರಶಾಲೆ'ಯೊಳಗಿನ ಎರಡು ನೆನಪುಗಳು ಮತ್ತು ಪ್ರಾಸಂಗಿಕ ಉಲ್ಲೇಖಗಳು; ತೀ. ನಂ. ಶ್ರೀಕಂಠಯ್ಯನವರ 'ಸಮಾಲೋಕನ' ಮತ್ತು ಎಸ್. ಅನಂತನಾರಾಯಣ ಅವರ 'ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ' ಎಂಬ ಕೃತಿಗಳಲ್ಲಿಯ ಸಂಬಂಧಿತ ಭಾಗಗಳು ; ಹಾಗೂ, ಹಾ. ತಿ. ಕೃಷ್ಣೇಗೌಡರು ಐಬಿಎಚ್., ಸಂಸ್ಥೆಗಾಗಿ ಬರೆದು ಕೊಟ್ಟಿದ್ದ 'ಎಸ್. ಜಿ. ನರಸಿಂಹಾಚಾರ್ಯರು' ಎಂಬ ಪುಸ್ತಿಕೆಯ ಹಸ್ತಪ್ರತಿ (ಇದು ಈಗ ಪ್ರಕಟವಾಗಿದೆ). ಇವುಗಳಲ್ಲಿ ದೊರೆಯುವ ಸಂಗತಿಗಳನ್ನೆಲ್ಲ ಒಗ್ಗೂಡಿಸಿ ಕೊಂಡು, ಅವರ ಜೀವನ ಸಾಧನೆಗಳ ಒಂದು ಚಿತ್ರವನ್ನು ರೂಪಿಸುವಾಗ ನಡುನಡುವೆ ಎಷ್ಟೋ ಅರೆಕೊರೆಗಳು ಕಣ್ಣೊತ್ತತೊಡಗಿದುವು. ಇವುಗಳಲ್ಲಿ ಪರಿಹರಿಸಬಹುದಾದ ವನ್ನೆಲ್ಲ ಪರಿಹರಿಸಿಕೊಂಡು, ನಾನೇ ಹೊಸದಾಗಿ ನಡಸಿದ ಶೋಧನೆಗಳ ಲಾಭವನ್ನೂ ಸೇರಿಸಿಕೊಂಡು ತಕ್ಕಮಟ್ಟಿಗೆ ತೃಪ್ತಿಕರವೆನ್ನಬಹುದಾದ ಒಂದು ಕವಿಚರಿತ್ರೆಯನ್ನೇನೋ ಬರೆವದ್ದಾಯಿತು. ಈ ಸಂಕಲನದ ಆರಂಭದಲ್ಲಿ ಅದನ್ನು ಕೊಟ್ಟಿದ್ದೇನೆ. ಈ ಭಾಗದಿಂದ ಹೊಸಗನ್ನಡ ಸಾಹಿತ್ಯದ ಇತಿಹಾಸರಚನೆಗೆ ಸ್ವಲ್ಪವಾದರೂ ಪ್ರಯೋಜನವಾಗುವುದೆಂದು ನಂಬಿದ್ದೇನೆ.

ಎಸ್. ಜಿ. ನ. ಅವರ ಕವಿಚರಿತ್ರೆಗೆ ಸಂಬಂಧಿಸಿ, ಇಲ್ಲಿ ಈ ಕೆಲವು ಮಾತನ್ನು ಹೇಳಬಹುದಾಗಿದೆ: (೧) ಎಸ್.ಜಿ. ನ. ಅವರ ಜನನ ಮರಣಗಳ ತೇದಿ ಮೊದಲುಗೊಂಡು ಬಂಧುಮಿತ್ರರ ವಿವರಗಳನ್ನು ಇಲ್ಲಿ ವಿಶದವಾಗಿ ನಿರೂಪಿಸಿದೆ. (೨) ಅವರ ವೃತ್ತಿಜೀವನದ ವಿವರಗಳನ್ನು ಸ್ಪಷ್ಟಪಡಿಸಿದೆ. (೩)ಸರ್ಕಾರದ ವಿದ್ಯಾ ಇಲಾಖೆಯಲ್ಲಿಯೂ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿಯೂ ಅವರು ಭಾಷಾಭಿವೃದ್ಧಿಗೆ ಕೈಕೊಂಡ ಕಾರ್ಯ ಗಳನ್ನು ವಿವರಿಸಿದೆ. (೪) ಗ್ರಂಥಸಂಪಾದನೆಯ ಕ್ಷೇತ್ರಕ್ಕೆ ಅವರ ಕೊಡುಗೆಯೇನೆಂಬುದನ್ನು ನಿರೂಪಿಸಿದೆ. (೫) 'ಕರ್ಣಾಟಕ ಕವಿಚರಿತೆ'ಯ ಸಿದ್ಧತೆಯಲ್ಲಿ ಅವರ ಕಾರ್ಯಭಾರ ಏನು, ಎಷ್ಟು ಎಂಬುದನ್ನು ವಿಶ್ಲೇಷಿಸಲು ಯತ್ನಿಸಿದೆ. (೬) ಸಹಕರ್ತೃವಾಗಿ ಅವರು ರಚಿಸಿದ ಗ್ರಂಥಗಳ ಹಾಗೂ ಸ್ವತಂತ್ರವಾಗಿ ರಚಿಸಿದ, ಅನುವಾದಿಸಿದ ಗದ್ಯಪದ್ಯಗ್ರಂಥಗಳ ವಿಚಾರ ದಲ್ಲಿ ಹೆಚ್ಚಿನ ವಿವರಗಳನ್ನು ಗುರುತಿಸಿದೆ. ಈವರೆಗೆ ಎಲ್ಲಿಯೂ ಉಲ್ಲೇಖವಾಗಿರದ ಒಂದೆರಡು ಗ್ರಂಥಗಳನ್ನು ಗಮನಿಸಿದೆ. ಹಿಂದಿನ ಉಲ್ಲೇಖಗಳಲ್ಲಿಯ ಸಂದಿಗ್ಧತೆಗಳನ್ನು ನಿವಾರಿಸಿದೆ. ಆದರೆ ಈ ಭಾಗದಲ್ಲಿ ಗುರುತಿಸಬೇಕಾದ ಗ್ರಂಥಗಳು ಇನ್ನೂ ಇವೆ ; ವಿಶದ ಪಡಬೇಕಾದ ಸಂಗತಿಗಳೂ ಇವೆ. (೭) ನಷ್ಟಪ್ರಾಯವಾಗಿ ನೆನೆಗುದಿಗೆ ಸಂದಿದ್ದ ಅವರ 'ಉತ್ತರರಾಮ ಚರಿತಂ' ನಾಟಕಾನುವಾದವನ್ನು ಹುಡುಕಿ ತೆಗೆದು ಪ್ರಕಟಿಸಿದೆ ; ಹೀಗೆ ಪ್ರಕಟಿಸುವಲ್ಲಿ ಸಂಪಾದನಕಾರ್ಯವನ್ನೂ ಕೈಕೊಂಡಿದೆ. (೮) ಮಕ್ಕಳ ಸಾಹಿತ್ಯಕ್ಕೆ ಅವರ ಸೇವೆಯನ್ನು ಸಮೀಕ್ಷಿಸಿದೆ. (೯) ವ್ಯಕ್ತಿತ್ವ ಸಾಧನೆಗಳ ಒಟ್ಟುನೋಟವನ್ನು ಕೊಟ್ಟಿದೆ.

ಮುಂದಿನ ಭಾಗ ನೇರವಾಗಿ ಪದ್ಯಸಂಕಲನದ ಭಾಗ, ಮುಖ್ಯಭಾಗ. ಇಲ್ಲಿ ಮೊದಲು ಎಸ್.ಜಿ. ನ. ಅವರ ಕಾವ್ಯಾನುವಾದಗಳನ್ನು, ಅವು ಮೊದಲು ಪ್ರಕಟವಾದ ವರ್ಷವನ್ನು

ಅನುಸರಿಸಿ, ಕ್ರಮವಾಗಿ, ಅವುಗಳ ಸಮಗ್ರರೂಪದಲ್ಲಿ ಕೊಟ್ಟಿದೆ. ಬಳಿಕ ಸ್ವತಂತ್ರ ಹಾಗೂ ಅನುವಾದಿತ ಬಿಡಿಗವಿತೆಗಳನ್ನು, ಅವುಗಳ ಅಕಾರಾದಿಕ್ರಮವನ್ನು ಹಿಡಿದು ಪ್ರಕಟಿಸಿದೆ. ಬಿಡಿಗವಿತೆಗಳು ರಚಿತವಾದ ವರ್ಷವನ್ನು ಅಥವಾ ತೇದಿಯನ್ನು ನಿರ್ಣಯಿಸುವುದು ಅಶಕ್ಯವಾದುದರಿಂದ ಹೀಗೆ ಮಾಡಿದೆ.

ಈ ಸಂಬಂಧದಲ್ಲಿಯೂ ಹೇಳತಕ್ಕ ಕೆಲವು ಮಾತುಗಳಿವೆ : (೧) ಈವರೆಗೆ ಎಸ್. ಜಿ. ನ. ಅವರ ಹೆಸರಿನಲ್ಲಿ ಪ್ರಕಟವಾಗಿರುವ ಕವಿತೆಗಳನ್ನೂ ಅವರವೆಂದು ರೂಢಿಯಾಗಿ ತಿಳಿಯುತ್ತ ಬಂದಿರುವ ಕವಿತೆಗಳನ್ನೂ, ದೊರೆತಷ್ಟು ಮಟ್ಟಿಗೆ ಇಲ್ಲಿ ಸಂಕಲಿಸಿದೆ. ಇವುಗಳ ಪ್ರಕಟನೆಯಲ್ಲಿ ಸಾಧ್ಯವಿದ್ದಮಟ್ಟಿಗೆ ಕಾಲದ ದೃಷ್ಟಿಯಿಂದ ಹೆಚ್ಚು ಹಳೆಯವಾದ ಪರಿಷ್ಕರಣಗಳನ್ನು ಗಮನಿಸಿದೆ. ಅವಶ್ಯವಿದ್ದೆಡೆ ಪಾಠಭೇದಗಳನ್ನು ಕ್ವಚಿತ್ತಾಗಿ ತೋರಿಸಿದೆ. ಕಾವ್ಯಾನುವಾದಗಳಲ್ಲಿಯೂ ಬಿಡಿಗವಿತೆಗಳಲ್ಲಿಯೂ ಹಿಂದಿನ ಮುದ್ರಣಗಳಲ್ಲಿ, ಪರಿಷ್ಕರಣಗಳಲ್ಲಿ ಕಂಡುಬಂದಿದ್ದ ಮುದ್ರಣದ ದೋಷಗಳನ್ನೆಲ್ಲ ಕಣ್ಣಲ್ಲಿ ಕಣ್ಣಿಟ್ಟು ಸರಿಪಡಿಸಿದೆ. ಒಂದೆರಡು ಕಡೆ ಹೊರತು ಇದಕ್ಕೆ ಪ್ರತ್ಯೇಕ ಸೂಚನೆಯನ್ನೇನೂ ಮಾಡಿಲ್ಲ. (೨) ಅವರ ಹೆಸರಿನಲ್ಲಿ ಪ್ರಕಟವಾಗಿದ್ದು, ಈ ಹಿಂದೆ ವಿದ್ವಾಂಸರಾರೂ ಗಮನಿಸದಿದ್ದ ಕೆಲವು ಹೊಸ ಕವಿತೆಗಳನ್ನು ಗಮನಿಸಿದೆ. ಅಲ್ಲದೆ ಹೆಸರು ಸೂಚಿತವಾಗಿರದಿದ್ದರೂ ಭಾಷೆ ಶೈಲಿಗಳ ದೃಷ್ಟಿಯಿಂದ ಅವರ ರಚನೆಗಳೆಂದು ಹೇಳಬಹುದಾದ ಕೆಲವು ಹೊಸ ಕವಿತೆಗಳನ್ನು ಸಹ ಗುರುತಿಸಲಾಗಿದೆ; ಅವನ್ನು ಸಯುಕ್ತಿಕವಾಗಿ ಸಮರ್ಥಿಸಲಾಗಿದೆ. (೩) ಸಂಕಲಿತವಾಗಿರುವ ಪ್ರತಿಯೊಂದು ಕವಿತೆಯ ಬಗ್ಗೆಯೂ ಪ್ರತ್ಯೇಕವಾಗಿ ಟಿಪ್ಪಣಿಯನ್ನು ಬರೆದಿದೆ ; ಇಲ್ಲಿ ಲೇಖಕರ ಪೀಠಿಕೆಯ ಮಾತು ಸೇರಿಸಿದೆ. ಆಕರ, ಕರ್ತೃತ್ವ, ಛಂದಸ್ಸು ಈ ವಿಚಾರಗಳನ್ನೆಲ್ಲ ಸಂಕ್ಷೇಪವಾಗಿ ಚರ್ಚಿಸಿದೆ. ಈ ಚರ್ಚೆಯಲ್ಲಿ ಕೆಲವು ಹಿಂದಿನ ಉಲ್ಲೇಖಗಳ ತಪ್ಪುಗ್ರಹಿಕೆಗಳನ್ನು ನಿವಾರಿಸಿದೆಯಲ್ಲದೆ, ಅಲ್ಲಲ್ಲಿ ಹೊಸ ಅಂಶಗಳನ್ನು ಗುರುತಿಸಿದೆ.

ಇದಕ್ಕೆ ಮುಂದಿನ ಭಾಗದಲ್ಲಿ, ಎಸ್. ಜಿ. ನರಸಿಂಹಾಚಾರ್ಯರ ಕೃತಿಗಳ ಒಂದು ಸಮಗ್ರ ಕೃತಿನಾಮಸೂಚಿಯನ್ನು ಸಿದ್ಧಮಾಡಿ ಕೊಟ್ಟಿದೆ. ಪ್ರಕಟನಸಂಸ್ಥೆ, ವರ್ಷ ಮುಂತಾದ ವಿವರಗಳನ್ನು ಅದು ಒಳಕೊಂಡಿರುವಂತೆ ನೋಡಿದೆ. ಬಿಟ್ಟುಹೋದ ಉಲ್ಲೇಖಗಳು ಇನ್ನೂ ಇರಬಹುದು, ಇಲ್ಲಿ. ಅನಂತರದಲ್ಲಿ ಎಸ್. ಜಿ. ನ. ಅವರ ಜೀವನ ಸಾಧನೆ ಕುರಿತ ಹಾಗೆ ಪತ್ರಿಕೆಗಳಿಂದ ತಿಳಿದುಬರುವ ಸಮಕಾಲೀನವಾದ ಹೆಚ್ಚಿನ ಮಾಹಿತಿಗಳು, ಅವರ ಕೆಲವು ಕೃತಿಗಳ ವಿಮರ್ಶೆ, ಬಾಷ್ಪಾಂಜಲಿಯ ಪದ್ಯಗಳು ಮತ್ತು ಟಿಪ್ಪಣಿಗಳು ಇವನ್ನು ಚರಿತ್ರವಸ್ತುಕೋಶದ ರೂಪದಲ್ಲಿ ಕಾಲಾನುಕ್ರಮವಾಗಿ ಜೋಡಿಸಿ ಕೊಟ್ಟಿದೆ.

ಇಷ್ಟೆಲ್ಲ ಆಗಿಯೂ ಈ ಕವಿತೆಗಳ ಸಂಕಲನದಲ್ಲಿ ಕೆಲವು ಲೋಪದೋಷಗಳು ಉಳಿದುಕೊಂಡಿವೆ. ಎಸ್. ಜಿ. ನ. ಅವರ ಜೀವನ ಸಾಧನೆಗಳ ಅಧ್ಯಯನ ಕನ್ನಡದ ಪ್ರೌಢವಿದ್ಯಾರ್ಥಿಯೊಬ್ಬನ ಸಂಶೋಧನೆಯ ವಿಷಯವಾದಾಗ ಈ ಲೋಪದೋಷಗಳ ಪರಿಹಾರ ಸಾಧ್ಯವಾಗಬಹುದು. ಅಂತಹ ವಿದ್ಯಾರ್ಥಿ ಎಸ್. ಜಿ. ನ. ಅವರಿಗೆ ದೊರೆ

ಯಲಿ ಎಂದು ನಾನು ಹಾರೈಸುತ್ತೇನೆ. ಈ ಸಂಕಲನದ ಮೂಲಕ ಎಸ್. ಜಿ. ನ. ಅವರಿಗೆ ನನ್ನ ಕೈಯಲ್ಲಾದುದನ್ನು ನಾನು ಮಾಡಿದ್ದೇನೆ. ಸಂಕಲನದ ಸಿದ್ಧತೆಯಲ್ಲಿ ನಾನು ತುಂಬ ಸಂತೋಷಪಟ್ಟಿದ್ದೇನೆ.

ಎಸ್. ಜಿ. ನರಸಿಂಹಾಚಾರ್ಯರ ಸಾಹಿತ್ಯಕೃತಿಗಳ ಬೆಲೆಯನ್ನು ಇಲ್ಲಿ ನಾನು ಪ್ರತ್ಯೇಕವಾಗಿ ಉಗ್ಗಡಿಸಬೇಕಾಗಿಲ್ಲ. ನಮ್ಮ ಕಾಲದ ಸಾಹಿತ್ಯಪಿತಾಮಹರಾಗಿದ್ದ ಡಿ.ವಿ.ಜಿ ಯವರ ನೆನಪುಗಳಿಂದ ಎರಡು ಉಲ್ಲೇಖಗಳನ್ನು ಇಲ್ಲಿ ಉದ್ಧರಿಸಿದರೆ ಸಾಕಾಗುತ್ತದೆ:

> (೧) "ಎಸ್. ಜಿ. ನರಸಿಂಹಾಚಾರ್ಯರ ಗ್ರಂಥಗಳು ಈಗ ಓದುಗರಿಗೆ ದೊರೆಯುತ್ತಿಲ್ಲ. ಅವರ ಬರವಣಿಗೆಯಲ್ಲಿ ಅಚ್ಚಾಗಿರುವಷ್ಟು ಭಾಗವನ್ನು ಸಂಗ್ರಹಮಾಡಿ ಪ್ರಕಟಿಸಿದರೆ ಸುಮಾರು ೩೦೦-೪೦೦ ಪುಟಗಳಷ್ಟಾಗಬಹುದು. ಅಷ್ಟನ್ನಾದರೂ ಪ್ರಕಟಗೊಳಿಸಿದರೆ ಅದು ಒಂದು ಸಾಹಿತ್ಯರತ್ನವೆಂದು ಅಂಗೀಕೃತವಾಗುವುದೆಂದು ನನಗೆ ನಂಬಿಕೆಯುಂಟು."
>
> ('ಜ್ಞಾಪಕ ಚಿತ್ರಶಾಲೆ', ಸಂಪುಟ ೧, ೧೯೮೨, ಪು. ೩೨)

> (೨) "ಎಸ್. ಜಿ. ನರಸಿಂಹಾಚಾರ್ಯರ ಬರೆವಣಿಗೆಯನ್ನೆಲ್ಲ ಸಂಗ್ರಹಮಾಡಿ ಪ್ರಕಟಪಡಿಸುವವರು ಕನ್ನಡ ಲೋಕಕ್ಕೆ ಭಾಷೆಯ ದೃಷ್ಟಿಯಿಂದಲೂ ಸರಸತೆಯ ದೃಷ್ಟಿಯಿಂದಲೂ ಮಹೋಪಕಾರ ಮಾಡುತ್ತಾರೆ. ಗಾತ್ರದಲ್ಲಿ ಅದು ಅನೇಕ ಸಂಪುಟಗಳಾಗುವಷ್ಟು ಹೆಚ್ಚಾಗಿಲ್ಲ. ಆದದ್ದರಿಂದ ಆ ಸಂಕಲನವು ಹೆಚ್ಚು ಶ್ರಮಕಾರಿಯಾಗಲಾರದು. ಆದರೆ, ಅದು ಭಾಷಾತತ್ತ್ವಜ್ಞರೂ ರಸವಿವೇಕವುಳ್ಳವರೂ ಮಾತ್ರವೇ ಚೆನ್ನಾಗಿ ಮಾಡಲಾಗುವ ಕೆಲಸ. ಆ ಕೆಲಸವನ್ನು ಯಾವ ಸರಕಾರವಾದರೂ ಮಾಡುತ್ತದೆಂದು ನನಗೆ ನಿರೀಕ್ಷೆಯಿಲ್ಲ. ಅದು ಸರಕಾರದ ಕೆಲಸವೂ ಅಲ್ಲ. ಅದು ಯಾವುದಾದರೊಂದು ಪ್ರಕಾಶನಸಂಸ್ಥೆಯಿಂದ ವಿದ್ವದ್ರಸಿಕರ ಸಂಪಾದಕತ್ವದಲ್ಲಿ ನಡೆಯಬೇಕಾದ ಕೆಲಸ ದೇಶದ ಯೋಗ ಹೇಗಿದೆಯೋ !"
>
> ('ಜ್ಞಾಪಕ ಚಿತ್ರಶಾಲೆ', ಸಂಪುಟ ೩, ೧೯೭೦, ಪು. ೪೬)

ಡಿ. ವಿ. ಜಿ. ತಮ್ಮ ಜೀವಿತಕಾಲದಲ್ಲಿಯೇ, ನಾನು ಸಿದ್ಧಪಡಿಸಿರುವ ಈ ಸಂಕಲನವನ್ನು ಕಣ್ಣಾರೆ ನೋಡುವಂತಾಗಿದ್ದರೆ, ಎಷ್ಟೋ ಸಂತೋಷಪಡುತ್ತಿದ್ದರೆಂದು ನಾನು ಬಲ್ಲೆ. ಹಾಗೆ ಅವರು ಸಂತೋಷಪಟ್ಟು, ನನ್ನನ್ನು ಪ್ರೀತಿಯಿಂದ ಆಶೀರ್ವದಿಸಿದ್ದರೆ ನನಗೆ ಧನ್ಯತೆಯ ಭಾವವಿರುತ್ತಿದ್ದಿತು. ಈಗ ಆ ಯೋಗ ನನಗಿಲ್ಲ. ಈ ಸಂಕಲವನ್ನು ಅವರಿಗೆ ಪರೋಕ್ಷವಿನಯದ ಸ್ಮಾರಕವಾಗುವಂತೆ ಒಪ್ಪಿಸಿ ತೃಪ್ತಿಪಟ್ಟುಕೊಳ್ಳುತ್ತಿದ್ದೇನೆ.

ಈ ಕೆಲಸದಲ್ಲಿ ನನಗೆ ಸಹಾಯಮಾಡಿದ ಹಿರಿಯರು, ಮಿತ್ರರು ಹಲವರಿದ್ದಾರೆ. ಅವರು ನನಗೆ ತಕ್ಕ ಸಹಾಯಸಂಪತ್ತಿಯನ್ನು ಒದಗಿಸದಿದ್ದರೆ, ಇಷ್ಟುಮಟ್ಟಿಗೆ ಈ ಕೆಲಸ ನೆರವೇರುತ್ತಿರಲಿಲ್ಲ ಎಂದೇ ನಾನು ಹೇಳಬೇಕು.

ಕರ್ಣಾಟಕ ಕಾವ್ಯಕಲಾನಿಧಿಯ ಪ್ರವರ್ತಕರಾಗಿದ್ದ ಎಂ. ಎ. ರಾಮಾನುಜಯ್ಯಂಗಾರ್ಯರ ಸಮೀಪಬಂಧುಗಳಾಗಿರುವ ಎಂ. ಎ. ವೆಂಕಟಾಚಾರ್ಯರೂ ಅವರ ಸೋದರಿ

ಎಂ. ಎ. ಸಿಂಗಮ್ಮನವರೂ ಈ ಕಾರ್ಯವನ್ನು ಆರಂಭದಲ್ಲಿಯೇ ಮೆಚ್ಚಿಕೊಂಡು ಸ್ವಾಗತಿಸಿದರಲ್ಲದೆ, ತಮ್ಮಲ್ಲಿದ್ದ 'ಪ್ರೋಷಿತ ಪ್ರಿಯಸಮಾಗಮ'ದ ಒಂದು ದ್ವಿತೀಯಮುದ್ರಣದ ಪ್ರತಿಯನ್ನು ನನ್ನ ಪರಿಶೀಲನೆಗೆ ಕೊಟ್ಟರು.

ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರ ಮೊಮ್ಮಗ ಆರ್. ರಾಮಸ್ವಾಮಿಯವರು ನೀಡಿದ ಸೂಚನೆ, ಖ್ಯಾತಲೇಖಕಿ ವಿಜಯಾ ಅವರು ನಡೆಸಿದ ಶ್ರದ್ಧಾಪೂರ್ವಕ ಪ್ರಯತ್ನ ಮತ್ತು ಒದಗಿಸಿದ ಮಾಹಿತಿಯ ಮೂಲಕ ಇತ್ತೀಚೆಗೆ ನನಗೆ ಎಸ್. ಜಿ. ನ. ಅವರ ಮನೆಯವರ ಪರಿಚಯಲಾಭವಾಗಿ ಅವರಿಂದಲೂ ಕೆಲವು ಕುಟುಂಬವಿವರಗಳು ತಿಳಿದುವು. ನನ್ನ ಈ ಕಾರ್ಯದಲ್ಲಿ ಎಸ್. ಜಿ. ನ. ಅವರ ಮೊಮ್ಮಗ, ದಿವಂಗತ ಎಸ್. ಜಿ. ನರಸಿಂಹಾಚಾರ್ಯರ ಪತ್ನಿ ಜಾನಕೀದೇವಿಯವರೂ ಅವರ ಚಿರಂಜೀವಿಗಳಾದ ಎಸ್. ಜಿ. ಲೀಲಾವತೀದೇವಿ, ಎಸ್. ಜಿ. ಶ್ರೀಧರ, ಎಸ್. ಜಿ. ಇಂದಿರಾದೇವಿ ಅವರೂ ಅಳಿಯಂದಿರು ಪಿ. ಎನ್. ಶ್ರೀನಿವಾಸ್ ಅವರೂ ನನಗೆ ಅಮಿತವಾಗಿ ಪ್ರೋತ್ಸಾಹ ಸಹಕಾರಗಳನ್ನು ನೀಡಿದ್ದಾರೆ. ಇವರಲ್ಲಿ ಎಸ್. ಜಿ. ನ. ಅವರ ಪ್ರಪೌತ್ರರಾದ ಎಸ್. ಜಿ. ಶ್ರೀಧರ ಅವರ ಸೌಜನ್ಯವೂ ಔದಾರ್ಯವೂ ವಿಶೇಷವಾಗಿ ಉಲ್ಲೇಖಿಸತಕ್ಕವು.

ಎಸ್. ಜಿ. ನ. ಅವರ ಕವಿತೆಗಳ ಸಂಗ್ರಹದಲ್ಲಿ ಡಾ. ಕೆ. ಜಿ. ನಾರಾಯಣಪ್ರಸಾದ್ ಅವರೂ ಜೀವನವೃತ್ತಾಂತದ ಕೆಲವು ವಿವರಗಳ ಸಂಗ್ರಹದಲ್ಲಿ ಹಾ. ತಿ. ಕೃಷ್ಣೇಗೌಡರೂ ನನಗೆ ತುಂಬ ಸಹಾಯಮಾಡಿದ್ದಾರೆ. ನನ್ನ ಅಪೇಕ್ಷೆಯಂತೆ ರಾಜ್ಯದ ಪುರಾಭಿಲೇಖಸಂಸ್ಥೆಯಲ್ಲಿ ಶೋಧಿಸಿ, ಎಸ್. ಜಿ. ನ. ಅವರ ಜನ್ಮದಿನಾಂಕವನ್ನೂ ಹೆಚ್ಚಿನ ವೃತ್ತಿವಿವರಗಳನ್ನೂ ಕೃಷ್ಣೇಗೌಡರು, ಆ ಸಂಸ್ಥೆಯ ಅಧಿಕಾರಿಗಳಾದ ಸಣ್ಣನಂಜೇಗೌಡರ ಮತ್ತು ಬಿ. ರಾಜಪ್ಪನವರ ಸಹಕಾರದಿಂದ ಸಂಗ್ರಹಿಸಿದ್ದಾರೆ.

ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆಯ ಮಾನ್ಯ ಸದಸ್ಯರಾದ ಡಿ. ಆರ್. ವೆಂಕಟರಮಣನ್ ಅವರು ಎಸ್. ಜಿ. ನ. ಅವರ ಬದುಕಿನ ವಿವರಗಳ ಬಗೆಗೆ ಹಲವು ಅಮೂಲ್ಯವೂ ಉಪಯುಕ್ತವೂ ಆದ ಮಾಹಿತಿಗಳನ್ನು ಒದಗಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಸಂಶೋಧನವಿಭಾಗದ ವ್ಯವಸ್ಥಾಪಕರಾಗಿರುವ ಎ. ಅಮರನಾಥ್ ಅವರು ತಮ್ಮ ಸಂಸ್ಥೆಯ ಗ್ರಂಥಭಂಡಾರದಲ್ಲಿ ನಿಕ್ಷಿಪ್ತವಾಗಿದ್ದ ಕೆಲವು ಅಮೂಲ್ಯ ಮಾಹಿತಿಗಳನ್ನು ನನಗಾಗಿ ಒದಗಿಸಿದ್ದಾರೆ. 'ಉತ್ತರರಾಮ ಚರಿತಂ' ನಾಟಕವನ್ನು ಗುರುತಿಸಿ ಪ್ರತಿ ತೆಗೆಸಿ ಕೊಟ್ಟವರು, ಎ. ಅಮರನಾಥ್ ಅವರು. ಹಾಗೆಯೇ ಎಸ್. ಜಿ. ನ. ಅವರ ಪದ್ಯಗಳಿದ್ದ ಒಂದು ಮಕ್ಕಳ ಪಠ್ಯಪುಸ್ತಕವನ್ನೂ ಅವರು ನನ್ನ ಗಮನಕ್ಕೆ ತಂದಿದ್ದಾರೆ. ಎಸ್. ಶಿವಣ್ಣನವರು ಎಸ್. ಜಿ. ನ. ಅವರ ಹೊಸ ಪುಸ್ತಕ 'ಬಾಲಭೂವಿವರಣೆ'ಯನ್ನು ನನ್ನ ಗಮನಕ್ಕೆ ತಂದಿದ್ದಾರೆ ; ಪರಿಶೀಲನೆಗೆ ಒಂದು ಹಳೆಯ ಬಾಲಬೋಧೆಯನ್ನೂ ಒದಗಿಸಿದ್ದಾರೆ. ಡಾ. ಶ್ರೀನಿವಾಸ ಹಾವನೂರರು ತಮ್ಮ ವಿದೇಶಪ್ರವಾಸಗಳಿಂದ ದೊರೆತ ಕೆಲವು ಎಸ್. ಜಿ. ನ. ಸಂಬಂಧವಾದ ಮಾಹಿತಿಗಳನ್ನು ನನಗೆ ಕಳಿಸಿಕೊಟ್ಟಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಇಲಾಖೆಯ ಮುಖ್ಯಸ್ಥರಾದ

ಕೆ. ವಿ. ನಾಗರಾಜ್ ಅವರು ಸಹ ಮಾಹಿತಿಗಳ ಸಂಗ್ರಹದಲ್ಲಿ ನನಗೆ ತಮ್ಮ ಇಲಾಖೆಯ ಪತ್ರಿಕಾಭಂಡಾರದ ಸಹಾಯ ಒದಗಿಸಿದ್ದಾರೆ.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಡಾ. ಎಸ್. ಪಿ. ಪಾಟೀಲರು ಎಸ್. ಜಿ.ನ. ಅವರ ಅಲಭ್ಯವಾಗಿರುವ ಭಾವಚಿತ್ರದ ಸಲುವಾಗಿ ನಿರಂತರವಾಗಿ ಶೋಧನೆಯನ್ನು ಕೈಕೊಂಡು ಪ್ರಯತ್ನ ಕೈಗೂಡದಿದ್ದರೂ ಅಗಾಧವಾಗಿ ಶ್ರಮವಹಿಸಿದ್ದಾರೆ. ಈ ಯತ್ನದಲ್ಲಿ ಡಾ. ವರದರಾಜ ಹುಯಿಲಗೋಳ, ಡಾ. ಶ್ರೀನಿವಾಸ ರಿತ್ತಿ, ಕೆ. ಎಸ್. ದೇಶಪಾಂಡೆ, ಹೇಮಾ ಪಟ್ಟಣಸೆಟ್ಟಿ ಈ ಕೆಲವರ ಶ್ರಮವೂ ಮಿಗಿಲಾದುದು ; ಎಸ್. ಜಿ. ನ. ಅವರ ಮನೆಯವರಲ್ಲಿದ್ದ ಒಂದೇ ಒಂದು ಚಿತ್ರ ದುರ್ದೈವದಿಂದ ದೆಹಲಿಯ ಫೋಟೋಸ್ಟುಡಿಯೋ ಒಂದರಲ್ಲಿ ಗೈರುವಿಲೆಯಾಯಿತೆಂದು ತಿಳಿಯುವುದು.

ಎಸ್. ಜಿ. ರಾಮು, ಆರ್. ಎಲ್. ಅನಂತರಾಮಯ್ಯ, ಡಾ. ಎಂ. ಚಿದಾನಂದ ಮೂರ್ತಿ, ಲಕ್ಷ್ಮಣ ತೆಲಗಾವಿ, ಎಂ. ಎನ್. ವಿ. ಪಂಡಿತಾರಾಧ್ಯ, ಡಾ. ಎಚ್. ಎಸ್. ಸುಜಾತಾ, ಎಂ. ವಿ. ವರದರಾಜನ್, ಎನ್. ಎಸ್. ಕೃಷ್ಣಮಾಚಾರ್ಯ ಈ ಕೆಲವರೂ ನಾನಾವಿಧಗಳಲ್ಲಿ ನನಗೆ ಸಹಾಯ ಮಾಡಿದ್ದಾರೆ.

ಈ ಹಿಂದೆ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನಿರ್ದೇಶಕರಾಗಿದ್ದು, ಈಗ ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಕುಲಪತಿಗಳಾಗಿರುವ ಡಾ. ಹಾ. ಮಾ. ನಾಯಕರೂ ಈಗ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನಿರ್ದೇಶಕರಾಗಿರುವ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರೂ ಈ ಪ್ರಯತ್ನದ ಬಗೆಗೆ ಪ್ರೀತಿಯ, ಪ್ರೋತ್ಸಾಹದ ಮಾತುಗಳನ್ನಾಡಿದ್ದಾರೆ.

ಈ ಸಂಕಲನಗ್ರಂಥವನ್ನು ಪ್ರಕಟನೆಗೆ ಸಂಪಾದಿಸಿ ಸಿದ್ಧಪಡಿಸಿ, ಒಂದೆರಡು ವರ್ಷಗಳೇ ಉರುಳಿ ಹೋದುವು. ನಾನಾಕಾರಣಗಳಿಂದ ಪ್ರಕಟನೆ ತಡೆಗೊಂಡಿತ್ತು. ಒಳ್ಳೆಯದೊಂದು ಕೆಲಸಕ್ಕೆ ಹೀಗೆ ತಡೆಯುಂಟಾಗಿ ನಾನು ಖಿನ್ನನಾದ್ದಾಗ, ಬೆಂಗಳೂರಿನ ಐ. ಬಿ. ಎಚ್. ಪ್ರಕಾಶನದ ಜಿ. ಕೆ. ಅನಂತರಾಮು ಅವರು ನನ್ನಲ್ಲಿ ಧೈರ್ಯ ಭರವಸೆಗಳನ್ನು ತುಂಬಿ, ತಡೆಗೊಂಡಿದ್ದುದು ಒಳ್ಳೆಯದೇ ಆಯಿತು ಎನ್ನುವ ಹಾಗೆ ಈ ಸಂಪಾದಿತ ಕೃತಿ ಹೀಗೆ ಸುಂದರವಾಗಿ, ಶ್ರೀಮಂತಪ್ರಕಟನೆಯಾಗಿ ಹೊರಬರುವಂತೆ ಕೈಗೆತ್ತಿಕೊಂಡು ಮಹೋಪಕಾರವೆಸಗಿದ್ದಾರೆ. ಎಸ್. ಜಿ. ನ. ಅವರ ಇತರ ಸ್ವತಂತ್ರಕೃತಿಗಳೂ ತಮ್ಮ ಪ್ರಕಾಶನಸಂಸ್ಥೆಯಿಂದಲೇ ಹೊರಬರುವಂತೆ ಉದಾರವಾದ ಏರ್ಪಾಡುಗಳನ್ನು ಮಾಡಿದ್ದಾರೆ.

ನನ್ನ ಮೇಲೆ ವಿಶ್ವಾಸವಿಟ್ಟು, ಮೈಸೂರಿನ ಖ್ಯಾತ ಮುದ್ರಣಾಲಯವಾಗಿರುವ ಶಕ್ತಿ ಎಲೆಕ್ಟ್ರಿಕ್ ಪ್ರೆಸ್ ಒಡೆಯರಾದ ರಾ. ವೆಂ. ಶ್ರೀನಿವಾಸ ಮೂರ್ತಿಯವರೂ ಅವರ ಚಿರಂಜೀವಿಗಳಾದ ಆರ್. ಎಸ್. ಮೋಹನ ಮೂರ್ತಿಯವರೂ ಆರ್. ಎಸ್ ಆನಂದ ಮೂರ್ತಿಯವರೂ ಸ್ವಲ್ಪಕಾಲದಲ್ಲಿಯೇ ತುಂಬ ಸೊಗಸಾಗಿ ಗ್ರಂಥವನ್ನು ಮುದ್ರಿಸಿದ್ದಾರೆ.

ಪುಸ್ತಕದ ಕರಡಚ್ಚುಗಳನ್ನು ನೋಡುವುದರಲ್ಲಿ, ನನ್ನ ಮಕ್ಕಳುಂ ಚಿ॥ ಟಿ. ವಿ. ಹರಿಪ್ರಿಯಾ, ಚಿ॥ ಟಿ. ವಿ. ವಿದ್ಯಾಶಂಕರ ನನ್ನೊಂದಿಗೆ ಸಹಕರಿಸಿದ್ದಾರೆ.

ಈ ಎಲ್ಲರ ಪ್ರೋತ್ಸಾಹ, ಸಹಕಾರ, ಸಹಾಯಂಗಳನ್ನು ನಾನು ಹೃತ್ಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇನೆ. ಅವರ ಆದರ, ಅಭಿಮಾನಗಳಿಗೆ ತಲೆಬಾಗುತ್ತೇನೆ.

ಮೈಸೂರು
ದಿನಾಂಕ ೧೮–೧೦–೧೯೮೬

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಪರಿವಿಡಿ

ಅರಿಕೆ ... v
ಎಸ್. ಜಿ. ನರಸಿಂಹಾಚಾರ್ಯರು : ಜೀವನ ಮತ್ತು ಕಾರ್ಯ ... xv

ಕಾವ್ಯಾನುವಾದಗಳು

೧. ಪ್ರೋಷಿತ ಪ್ರಿಯಸಮಾಗಮಂ ... 1
೨. ದಿಲೀಪ ಚರಿತೆ ... 7
೩. ಅಜನೃಪ ಚರಿತೆ ... 58

ಸ್ವತಂತ್ರ ಬಿಡಿಗವಿತೆಗಳು

೧. ಆಕಳು ... 124
೨. 'ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ' ... 124
೩. ಕಾಮದಹನದ ಹಾಡು ... 126
೪. ಕಾಮನ ಬಿಲ್ಲು ... 126
೫. ಕಾಲದ ಬೆಲೆ ... 127
೬. ಕಾವೇರಿ ... 128
೭. ಗೋವಿನ ಚರಿತ್ರೆ/ಗೋವಿನ ಬಾಳು ... 129
೮. ಚಂದ್ರ ... 130
೯. ಚಾಮರಾಜೇಂದ್ರ ಮರಣವಾರ್ತೆ ... 131
೧೦. ನಾಲ್ವಡಿ ಕೃಷ್ಣರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವ ... 133
೧೧. ನೇಗಿಲು ... 134
೧೨. ಬುದ್ಧಿಯು ಬಲವೇ ಬಲ ... 135
೧೩. 'ಭಗವದ್ಗೀತಾರ್ಥಪ್ರತಿಪಾದಕ ಕೀರ್ತನಂ' ಆರಂಭಪದ್ಯ ... 137
೧೪. ಮಳೆಗಾಲ ... 137
೧೫. ಶರಣು ವಿಮಲೆಯ ಚರಣಕೆ ... 138
೧೬. ಶ್ರೀಕೃಷ್ಣರಾಜ ವಿಜಯಂ ... 139
೧೭. ಹೊಗೆಯ ಗಾಡಿ ... 139

ಅನುವಾದಿತ ಬಿಡಿಗವಿತೆಗಳು

೧. ಆರ್ಯಮಹಿಮಾದರ್ಶ ... 140
೨. ಉತ್ತಮರಾಜ್ಯ ... 140
೩. ಕುರುಡ ಹುಡುಗ ... 141
೪. ಕೋಗಿಲೆ ... 142
೫. 'ಚಂಡಮಾರುತ'ದ ಪದ್ಯಗಳು ... 144
೬. ನಕ್ಷತ್ರ ... 145
೭. ಬಿಡುವು ... 145
೮. ಮಕ್ಕಳು ಮಲಗುವ ಹೊತ್ತು ... 146
೯. ಮರಳಿ ಯತ್ನವ ಮಾಡು ... 147
೧೦. ಸಭಾಪರ್ವದ ನಾಂದಿ ಫಲಶ್ರುತಿಗಳು ... 148
೧೧. ಸೂರ್ಯಕಿರಣ ... 148

ಅನುಬಂಧಗಳು

೧. 'ಉತ್ತರರಾಮ ಚರಿತಂ' (ಕನ್ನಡ ಭಾಷಾಂತರ) ... 153
೨. ಕವಿತೆಗಳಿಗೆ ಟಿಪ್ಪಣಿಗಳು ... 184
೩. ಎಸ್. ಜಿ. ನರಸಿಂಹಾಚಾರ್ಯರ ಕೃತಿಗಳು ... 198
೪. ಚರಿತ್ರ, ವಸ್ತುಕೋಶ ... 201

ಎಸ್. ಜಿ. ನರಸಿಂಹಾಚಾರ್ಯರು : ಜೀವನ ಮತ್ತು ಕಾರ್ಯ

೧

ಶ್ರೀಮಾನ್ ಎಸ್. ಜಿ. ನರಸಿಂಹಾಚಾರ್ಯರನ್ನು "ಪಂಡಿತವರ್ಯರಾಗಿ ಸ್ವನಾಮಾ ಖ್ಯಾತರಾಗಿದ್ದ ಪ್ರಾತಃಸ್ಮರಣೀಯ"ರೆಂಬುದಾಗಿ ಬಿ. ವೆಂಕಟಾಚಾರ್ಯರು ತಮ್ಮ ಪ್ರಸಿದ್ಧ ಕಾದಂಬರಿಯಾದ 'ದುರ್ಗೇಶ ನಂದಿನಿ'ಯ ೧೯೧೦ರ ಪರಿಷ್ಕರಣದ ವಿಜ್ಞಾಪನೆ ಯಲ್ಲಿ ನೆನೆದಿದ್ದಾರೆ. ಇಂತಹ ಮಹನೀಯರ ಜೀವನ ಸಾಧನೆಗಳ ವಿವರಗಳನ್ನು ತಿಳಿದು ಕೊಳ್ಳುವುದು ತುಂಬ ಅಪೇಕ್ಷಣೀಯ. ಅಪೇಕ್ಷೆಯೇನೋ ಸಾಧುವಾದ್ದು ; ಪ್ರಯತ್ನ ಮಾತ್ರ ತೊಡಕಿನದು. ಇಂದಿಗೆ ೭೮ ವರ್ಷಗಳ ಹಿಂದೆಯೇ ಎಸ್. ಜಿ. ನ. ಗತಿಸಿ ಹೋದರು ; ಅವರ ಕಾರ್ಯಗಳೂ ಕೃತಿಗಳೂ ತೆರೆಮರೆಗೆ ಸಂದುವು ; ಅವರನ್ನು ಬಲ್ಲ ಹಿರಿಯರು ತೀರ ವಿರಳವಾದರು. ಹೀಗಾಗಿ ಅವರ ಜೀವನದ ಪೂರ್ವವಿವರಗಳನ್ನು ಎಂದರೆ ಬಾಲ್ಯ ವಿದ್ಯಾಭ್ಯಾಸಗಳನ್ನು ತಿಳಿಯಲು ತಕ್ಕ ಸಾಮಗ್ರಿ, ದಾಖಲೆಗಳು ಸರಿಯಾಗಿ ಸಿಕ್ಕುತ್ತಿಲ್ಲ. ದಾಖಲೆಗಳು ಇರಬಹುದಾದರೂ. ಅವನ್ನು ಗಮನಿಸಿ, ಶೋಧಿಸಿ, ಉಪ ಯುಕ್ತವಿವರಗಳನ್ನು ಸಂಗ್ರಹಿಸುವುದು ತುಂಬ ಶ್ರಮಸಾಧ್ಯವಾದ ಕೆಲಸ. ಅದು ಗಂಭೀರ ಸಂಶೋಧನೆಯ ವಿಷಯ. ಈ ವಿಷಯದಲ್ಲಿ ಸಮಕಾಲೀನ ಬರೆಹಗಳು. ಲಭ್ಯ ವಾದ ಕೆಲವು, ಸ್ವಲ್ಪ ಮಟ್ಟಿಗೆ ಬೆಳಕು ಚೆಲ್ಲುವಂತಿವೆಯಾದರೂ, ಇಲ್ಲಿಯೂ ವ್ಯಕ್ತಿವಿವರ ಗಳು, ಸಾಧನೆಯ ವಿವರಗಳು ತೀರ ಕಡಿಮೆಯೇ. ಇದು ಹೀಗಿದ್ದೂ, ಅವರ ವ್ಯಕ್ತಿತ್ವದ ಚಿತ್ರ ಆ ಬರೆಹಗಳಲ್ಲಿ ಸ್ವಲ್ಪಮಟ್ಟಿಗೆ ಮೂಡುವಂತಿರುವುದು ಸಮಾಧಾನದ ಸಂಗತಿ. ಅಂತಹ ಬರೆಹಗಳಲ್ಲಿ ಮ.ಆ. ರಾಮಾನುಜಯ್ಯಂಗಾರ್ಯರು ಬರೆದ ಒಂದು ಬಾಷ್ಪಾಂಜಲಿ ಲೇಖನವೂ ಡಿ.ವಿ. ಗುಂಡಪ್ಪನವರು ನಿರೂಪಿಸಿದ ಎರಡು ಜ್ಞಾಪಕಚಿತ್ರಗಳೂ ಉಲ್ಲೇಖಿಸ ತಕ್ಕವಾಗಿವೆ. ಇವು ತಮ್ಮ ಮಿತಿಯಲ್ಲಿಯೇ ಎಸ್. ಜಿ. ನ. ಅವರ ಕಾರ್ಯ, ಪಾಂಡಿತ್ಯ, ವ್ಯಕ್ತಿತ್ವಗಳನ್ನು ಸಮರ್ಥವಾಗಿ ಕಣ್ಣೆದುರು ಕಟ್ಟಿ ನಿಲ್ಲಿಸುತ್ತವೆ. ಉಳಿದ ಉಲ್ಲೇಖಗಳು ಪ್ರಾಸಂಗಿಕವಾದವು, ಸಾಮಾನ್ಯವಾದವು.

ಎಸ್. ಜಿ. ನರಸಿಂಹಾಚಾರ್ಯರು ರಚಿಸಿದ ಹಲವು ಸ್ವತಂತ್ರ, ಹಾಗೂ ಸಹಕರ್ತೃಕ ಗ್ರಂಥಗಳಲ್ಲಿ, ಅನುವಾದಗಳಲ್ಲಿ ಈಗ ಕೆಲವಷ್ಟೇ, ಕಷ್ಟಪಟ್ಟು ಹುಡುಕಿದರೆ ನೋಡಲು ದೊರೆಯುತ್ತವೆ. ಉಳಿದವು ಅಭುಕ್ತಮೂಲೆಗಳಲ್ಲಿ ಎಲ್ಲೋ ಅಡಗಿ ಕುಳಿತಿರುವಂತಿದೆ ; ನಷ್ಟವಾಗಿ ಹೋಗಿದ್ದರೂ ಆಶ್ಚರ್ಯವಿಲ್ಲ. ಆದರೆ ಅವರು ಸ್ವತಂತ್ರವಾಗಿಯೂ ಸಂಯುಕ್ತವಾಗಿಯೂ ಸಂಪಾದಿಸಿರುವ ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯಗ್ರಂಥಗಳು ಕನ್ನಡ ನಾಡಿನ ಒಂದಲ್ಲ ಒಂದು ಗ್ರಂಥಭಂಡಾರದಲ್ಲಿ ಬಲುಮಟ್ಟಿಗೆ

ನಿಕ್ಷೇಪಗೊಂಡಿದ್ದು, ಪುನರ್ಮುದ್ರಣಗಳಿಗೆ ಅವಕಾಶವಾಗದಿದ್ದರೂ, ನೋಡಲು ದೊರೆಯುತ್ತಿರುವುದು ಒಂದು ನೆಮ್ಮದಿಯ ವಿಷಯ. ಅವರ ಸ್ವತಂತ್ರರಚನೆಗಳಲ್ಲಿ ಅನುವಾದ ಗ್ರಂಥಗಳ ಸ್ಥಿತಿ ಉತ್ತಮ. ಗದ್ಯಗ್ರಂಥಗಳು ಮಾತ್ರ, ಒಂದೆರಡರ ಹೊರತಾಗಿ, ಉಳಿದವು ದೊರೆಯುವುದು ತೀರ ದುರ್ಲಭ. ಈ ಸ್ಥಿತಿಗೆ ಕಾಲಪುರುಷನ ಕೈವಾಡಕ್ಕಿಂತ ಕನ್ನಡಿಗರ ಭಾಷಾಭಿಮಾನದ ಕೊರತೆಯೇ ಪ್ರಬಲವಾದ ಕಾರಣವೆಂದು ಹೇಳಬೇಕಾಗಿದೆ.

ತಮ್ಮ ಕಾಲದಲ್ಲಿ ಎಸ್. ಜಿ. ನ. ಕವಿಗಳೆಂದೂ ಪಂಡಿತರೆಂದೂ ಹೆಸರಾಗಿದ್ದವರು. ಅವರು ಕವಿಗಳಾಗಿ ಹೆಚ್ಚು ಜನಪ್ರಿಯತೆಯನ್ನು ಸಂಪಾದಿಸಿದ್ದರೆನ್ನುವುದು ಈಗ ತಿಳಿದ ವಿಷಯ. ಪ್ರಸ್ತುತ ಸಿದ್ಧಪಡಿಸಿರುವ ಸಂಕಲನ ಅವರ 'ದಿಲೀಪ ಚರಿತೆ','ಅಜನೃಪ ಚರಿತೆ' 'ಪ್ರೋಷಿತ ಪ್ರಿಯಾಸಮಾಗಮಂ' ಈ ಮೂರು ಕಾವ್ಯಾನುವಾದಗ್ರಂಥಗಳನ್ನೂ ೧೭ ಸ್ವತಂತ್ರ ಬಿಡಿಗವಿತೆ ಹಾಡುಗಳನ್ನೂ ೧೧ ಅನುವಾದಿತ ಬಿಡಿಗವಿತೆ ಹಾಡುಗಳನ್ನೂ ಒಳಕೊಂಡಿದೆ. ಅವರು ರಚಿಸಿದ ಬಿಡಿಗವಿತೆಗಳ ಹಾಗೂ ಹಾಡುಗಳ ವಿಚಾರದಲ್ಲಿ ಕರ್ತೃತ್ವ ಸಂಬಂಧವಾದ ಸಮಸ್ಯೆಗಳೂ ಪಾಠಭೇದಗಳ ಸಮಸ್ಯೆಗಳೂ ಜಟಿಲವಾಗಿ ಹೆಣೆದುಕೊಂಡಿವೆ. ಈ ವಿಷಯದಲ್ಲಿ ನಿರ್ಣಯ ತುಂಬ ಕಷ್ಟಕರವಾದುದು. ಮಕ್ಕಳಿಗಾಗಿ ಅವರು ರಚಿಸಿದ ಹಾಗೂ ಭಾಷಾಂತರಿಸಿದ ಹಲವಾರು ಕವಿತೆಗಳಲ್ಲಿ ಆ ಕಾಲದ ರೂಢಿಯಂತೆ ಕರ್ತೃವಾಗಿ ಅವರ ಹೆಸರು ಸಾಮಾನ್ಯವಾಗಿ ಕಂಡುಬರುವುದೇ ಇಲ್ಲ. ವಿರಳವಾಗಿ, ಅಲ್ಲೊಂದು ಇಲ್ಲೊಂದು ಕವಿತೆಯ ಕೊನೆಗೆ ಅವರ ಹೆಸರು ಕಂಡುಬಂದಿದೆ. ಇವುಗಳ ಹೊರತು, ಅವರ ಕಿರಿಯ ಸಮಕಾಲೀನರು ಅವರವು ಎಂದು ಗುರುತಿಸಿರುವವನ್ನು ಹಾಗೆಂದು ಒಪ್ಪಿಕೊಳ್ಳಬೇಕಾಗಿದೆ. ಇವರಿಗೆ ಆಧಾರಗಳೂ ಪ್ರಮಾಣಗಳೂ ಯಾವುವು ಎನ್ನುವುದು ನಿಶ್ಚಯವಿಲ್ಲ. ಆದ್ದರಿಂದ ಅಂತಹ ಕವಿತೆಗಳ ಕರ್ತೃತ್ವ ತಾತ್ಪೂರ್ತಿಕವೇ. ಎಸ್. ಜಿ. ನ. ಅವರ ಕೆಲವು ಕವಿತೆಗಳ ಕರ್ತೃತ್ವವನ್ನು ಇಷ್ಟರಮಟ್ಟಿಗಾದರೂ ಈಚೆಗೆ ಗುರುತಿಸಿದ ಮಹನೀಯರೆಂದರೆ, ಕನ್ನಡ ವಿದ್ವಾಂಸರಾಗಿದ್ದ ಎಚ್. ಚೆನ್ನಕೇಶವ ಅಯ್ಯಂಗಾರ್ಯರು. ಅವರಿಗೆ ಕನ್ನಡಿಗರ ಕೃತಜ್ಞತೆ ಸಲ್ಲುತ್ತದೆ.

ಎಸ್.ಜಿ.ನ. ಕವಿತೆಗಳ ಪಾಠಭೇದಗಳ ಸಮಸ್ಯೆ ಸಹ ಹೀಗೆಯೇ ಜಟಿಲವಾದುದು. ಬಾಲಬೋಧೆಗಳಲ್ಲಿ ಸೇರಿರತಕ್ಕವು, ಮಕ್ಕಳ ಅರ್ಥಸೌಕರ್ಯಕ್ಕೆ ಎಂದು ಬೇರೆಬೇರೆ ಸಂಪಾದನೆಗಳಲ್ಲಿಯೂ ಮುದ್ರಣಗಳಲ್ಲಿಯೂ ಪಾಠಭೇದಗಳಿಗೆ ಒಳಗಾಗಿರುವುದು ಕಾಣುತ್ತದೆ. ಇಂತಹ ಸಂದರ್ಭಗಳಲ್ಲಿ ಪಾಠನಿರ್ಣಯ ತೊಡಕಿನದು. ಕಾಲದ ದೃಷ್ಟಿಯಿಂದ ಹಳೆಯ ಸಂಪಾದನೆ ಮುದ್ರಣಗಳನ್ನು ಸಾಧ್ಯವಿದ್ದಮಟ್ಟಿಗೆ ಆಶ್ರಯಿಸಿ, ಒಂದು ಬಗೆಯ ಪರಿಹಾರವನ್ನು ಇಲ್ಲಿ ಕಂಡುಕೊಂಡಿದೆ. ವಿರಳವಾಗಿ ಪಾಠಭೇದಗಳನ್ನು ಟಿಪ್ಪಣಿಗಳ ಭಾಗದಲ್ಲಿ ಸೂಚಿಸಿದೆ. ನಿಷ್ಕೃಷ್ಟವಾಗಿ ಕರ್ತೃತ್ವ ತಿಳಿದ ಕವಿತೆಗಳಲ್ಲಿ, ವಿರಳವಾಗಿ ಉಳಿದುಕೊಂಡಿರುವ ಮುದ್ರಣದೋಷಗಳನ್ನು ತಿದ್ದಬೇಕಾದುದರ ಹೊರತು, ಬೇರೆ ಸಮಸ್ಯೆಗಳೇನೂ ಇಲ್ಲ. ಈಗ ಕರ್ತೃತ್ವ ತಿಳಿದಿರುವ ಕೆಲವು ಕವಿತೆಗಳಲ್ಲದೆ ಇನ್ನೂ ಇಂತಹ ಎಷ್ಟು ಕವಿತೆಗಳು

ಯಾವ ಪತ್ರಿಕೆಗಳಲ್ಲಿ, ಪತ್ರಗ್ರಂಥಗಳಲ್ಲಿ, ಬೇರೆ ಪುಸ್ತಕಗಳಲ್ಲಿ,ಎಲ್ಲೆಲ್ಲಿ ಅಡಗಿಕೊಂಡಿವೆಯೋ ನಾವು ಗುರುತಿಸಬೇಕಾಗಿದೆ. ಇದಕ್ಕೆ ಸು. ೧೮೮೦-೧೯೧೦ ರ ನಡುವಣ ಹಳೆಯ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಕಣ್ಣಲ್ಲಿ ಕಣ್ಣಿಟ್ಟು ಶೋಧಿಸಬೇಕಾಗುತ್ತದೆ. ಇದು ಹೊಸಗನ್ನಡ ಕವಿತೆಯ ಆರಂಭಕಾಲದ ಚರಿತ್ರೆಯನ್ನು ಬರೆಯುವ ಸಂಶೋಧಕರ, ವಿಮರ್ಶಕರ ಕೆಲಸ; ತಾಳ್ಮೆ ಆಸಕ್ತಿ ಶ್ರಮಗಳ ವಿನಿಯೋಗದಿಂದ ನಡೆಯಬೇಕಾದ, ಗಣಿಯ ಕೆಲಸಗಾರನ ದುಡಿಮೆಯಂತೆ ಕಷ್ಟಸಾಧ್ಯವಾದ ಕೆಲಸ.

೨.

ಎಸ್. ಜಿ. ನರಸಿಂಹಾಚಾರ್ಯರು ೧೧-೯-೧೮೬೨ ರಂದು ಮೈಸೂರು ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಜನ್ಮ ತಳೆದರು. ಅವರ ತಂದೆ ಆಳಸಿಂಗರಾಚಾರ್ಯರು, ತಾಯಿ ಸೀತಮ್ಮನವರು. ಗೌತಮಗೋತ್ರಜರೂ ಪೂಂಜಾಳಂ ಮನೆತನದವರೂ ಆಗಿದ್ದ ಆಳಸಿಂಗರಾಚಾರ್ಯರು ಭಗವದ್ಭಕ್ತರಾಗಿದ್ದು, ಶ್ರೀರಂಗಪಟ್ಟಣದ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಕೈಂಕರ್ಯದಲ್ಲಿದ್ದರು. ಇವರು ವೈದ್ಯವನ್ನು ಬಲ್ಲವರು ; ಸಾಹಿತ್ಯದಲ್ಲಿ ಪಂಡಿತರು ; ಆಗಾಗ್ಗೆ ಸ್ನೇಹಿತರನ್ನು ಸೇರಿಸಿಕೊಂಡು ವನಭೋಜನವನ್ನು ಏರ್ಪಡಿಸಿ, ಅವರನ್ನು ಸಂತೋಷಪಡಿಸುವುದರಲ್ಲಿ ಉತ್ಸಾಹಿಸುತ್ತಿದ್ದ ನಿರ್ಮಲಹೃದಯರು. ಅತಿಥಿಗಳ ಸೇವೆಗೆ ಅವರ ಮನೆಯೊಂದು ಛತ್ರ. ಗೌತಮಗೋತ್ರದವರು ಬೂದಿಹಾಳು ಗ್ರಾಮದಲ್ಲಿದ್ದುದು ೧೬೧೪ ರ ಮೇಲುಕೋಟೆಯ ತಾಮ್ರಶಾಸನವೊಂದರಿಂದ(ಎಕ., iii-i, ೧೫೭) ತಿಳಿಯುವುದಾದರೂ, ಎಸ್. ಜಿ. ನ. ವಂಶದವರ ಸಂಬಂಧವೇನೂ ಇದರಿಂದ ಸ್ಪಷ್ಟಪಡುವುದಿಲ್ಲ.

ಎಸ್. ಜಿ. ನ. ಚಿಕ್ಕವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡರು. ಅನಂತರ ಅವರ ಬಾಲ್ಯದ ವಿವರಗಳೇನೂ ತಿಳಿಯುವುದಿಲ್ಲ. ಬಾಲ್ಯವಿದ್ಯಾಭ್ಯಾಸ ಶ್ರೀರಂಗಪಟ್ಟಣದಲ್ಲಿ ನಡೆದು, ಕಾಲೇಜು ಶಿಕ್ಷಣ ಮೈಸೂರಿನಲ್ಲಿ ನಡೆದಿರಬೇಕೆಂದು ತೋರುತ್ತದೆ. ಆದರೆ ಕಾಲೇಜು ಶಿಕ್ಷಣವನ್ನು ಭಾಗಶಃ ಮುಗಿಸಿ, ಅವರು ಭಾಷಾವಿಭಾಗಗಳ ಮಟ್ಟಿಗೆ ಬಿ. ಎ. ಪದವೀಧರರಾದರು (ಹೀಗಿದ್ದೂ, ಆ ಕಾಲದ ಸಿವಿಲ್ ಲಿಸ್ಟ್‌ನಲ್ಲಿ ಅವರ ಹೆಸರಿನ ಕೊನೆಗೆ ಬಿ. ಎ. ಎಂದೇ ತೋರಿಸಿರುವುದೂ ಉಂಟು). ಆರಂಭದಿಂದಲೇ ಅವರಿಗೆ ಎಂ. ಎ. ರಾಮಾನುಜಯ್ಯಂಗಾರರ ಸ್ನೇಹ ಸಾಹಚರ್ಯಗಳು ದೊರೆತು, ಅವರು ಸಹಪಾಠಿಗಳಾಗಿಯೂ ಇದ್ದಿರಬೇಕೆಂದು ತೋರುತ್ತದೆ. ಮುಂದೆ ಇವರಿಬ್ಬರೂ ಒಗ್ಗೂಡಿ ನಡಸಿದ ಭಾಷೆ ಸಾಹಿತ್ಯಗಳ ಸೇವೆ ಸುವಿದಿತವೇ ಇದೆ. ಇದು ಚಾಮರಾಜೇಂದ್ರ ಒಡೆಯರ (X) ಕಾಲ. ಆಗ ದಿವಾನರು ಸರ್ ಕೆ. ಶೇಷಾದ್ರಿ ಅಯ್ಯರ್‌ಅವರು. ಶಿಕ್ಷಣಕ್ಷೇತ್ರದಲ್ಲಿ ಬಿ.ಎಲ್. ರೈಸ್, ಎಚ್. ಜೆ. ಭಾಭಾ ಅವರಂತಹ ಶಿಕ್ಷಣತಜ್ಞರು ಪ್ರಗತಿಪರಧೋರಣೆಯನ್ನು

ಅನುಸರಿಸಿ ಕನ್ನಡ ಭಾಷೆ ಸಾಹಿತ್ಯಗಳ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದರು. ಇಂತಹ ಪರಿಸರ ಹಿನ್ನೆಲೆಗಳಲ್ಲಿ ಎಸ್. ಜಿ. ನ. ತಮ್ಮ ಶಿಕ್ಷಣವನ್ನು ಪಡೆದುಕೊಂಡರೆಂದೂ ಕನ್ನಡನುಡಿಯ ಸೇವೆಗೆ ದೀಕ್ಷಿತರಾದರೆಂದೂ ಹೇಳಬಹುದು.

ಎಸ್. ಜಿ. ನ. ಅವರದು ಗಣ್ಯ ಬಂಧುಪರಿವಾರ. 'ಕರ್ಣಾಟಕ ಕವಿಚರಿತೆ'ಯ ಕರ್ತೃಗಳಾಗಿ ಸುಪ್ರಸಿದ್ಧರಾಗಿರುವ ಆರ್. ನರಸಿಂಹಾಚಾರ್ಯರು ತಮ್ಮ 'ಭ್ರಾತೃಪುತ್ರ'ರೆ ಎಸ್. ಜಿ. ನ. ಎಂಬುದಾಗಿ ತಿಳಿಸಿದ್ದಾರೆ. ಈ ಬಂಧುತ್ವ ಸ್ಪಷ್ಟವಿಲ್ಲ. ಎಸ್. ಜಿ. ನ. ಅವರಂತೆಯೇ ಸಂಸ್ಕೃತ ಇಂಗ್ಲಿಷ್ ಮೂಲಗಳಿಂದ ಭಾಷಾಂತರಕಾರ್ಯವನ್ನು ಕೈಕೊಂಡು ತಮ್ಮ ಕೆಲವು ಕೃತಿಗಳ ಮೂಲಕ ಕವಿಗಳಾಗಿ ಹೆಸರಾಗಿದ್ದ, 'ಶಾಮಂತಪ್ರಭು ಚರಿತ', 'ಪ್ರಿಂರೋಜ ವಿಜಯ' ಎಂಬ ಜನಪ್ರಿಯ ರಚನೆಗಳ ಮೂಲಕ ಸಾಹಿತಿಗಳ ನಡುವೆ ಗಣ್ಯರಾಗಿದ್ದ ಎಸ್. ಜಿ. ಗೋವಿಂದರಾಜಯ್ಯಂಗಾರ್ಯರು ಎಸ್. ಜಿ. ನ. ಅವರ ತಮ್ಮಂದಿರು. ಗೋವಿಂದರಾಜಯ್ಯಂಗಾರ್ಯರ ಧರ್ಮಪತ್ನಿಯೂ ಎಂ. ಎ. ರಾಮಾನುಜಯ್ಯಂಗಾರ್ಯರ ಧರ್ಮಪತ್ನಿಯೂ ಸೋದರಿಯರು. ಈ ಗೋವಿಂದರಾಜಯ್ಯಂಗಾರ್ಯರ ಪತ್ನೀಮಾತುಲರೇ 'ರಾಜಾ ಮಲಯಸಿಂಹ' ಕೃತಿಕರ್ತರಾದ ಎಂ. ಎ. ಶ್ರೀನಿವಾಸಾಚಾರ್ಯರು; ಭಾವಮೈದುನರೇ ಕನ್ನಡ ಸಾಹಿತ್ಯ ಪರಿಷತ್ತಿನ ಮೇಲ್ಮೆಗಾಗಿ ಶ್ರಮಿಸಿದ ಎಂ. ಎ. ನರಸಿಂಹಾಚಾರ್ಯರು.

ಎಸ್. ಜಿ. ನ. ಅವರ ಗೆಳೆಯರ ಬಳಗವೂ ದೊಡ್ಡದೇ. ಸ್ವಾಮಿ ವಿವೇಕಾನಂದರ ಸಾಕ್ಷಾತ್ ಶಿಷ್ಯರಾಗಿ ಅವರೊಂದಿಗೆ ಕೊಂಚಕಾಲ ದೇಶಸಂಚಾರ ಮಾಡಿದ ಜಿ.ಜಿ. ನರಸಿಂಹಾಚಾರ್ಯರು, ನಾಟಕಶಿರೋಮಣಿ ವರದಾಚಾರ್ಯರು, ಪ್ರಖ್ಯಾತ ಕಾದಂಬರಿಕಾರ ಬಿ. ವೆಂಕಟಾಚಾರ್ಯರು, ಕರ್ಣಾಟಕ ಕಾವ್ಯಮಂಜರಿಯ ಪ್ರವರ್ತಕರಲ್ಲಿ ಒಬ್ಬರಾದ ಎಂ. ಎ. ರಾಮಾನುಜಯ್ಯಂಗಾರ್ಯರು, ಕರ್ಣಾಟಕ ಗ್ರಂಥಮಾಲೆ ಮತ್ತು ವಿದ್ಯಾದಾಯಿನಿ ಪತ್ರಿಕೆಗಳ ಪ್ರವರ್ತಕರಾಗಿಯೂ ಹಿಂದಿನ ಮೈಸೂರು ಸಂಸ್ಥಾನದಲ್ಲಿ ವಿದ್ಯಾಧಿಕಾರಿಗಳಾಗಿಯೂ ಇದ್ದ ಎಂ. ಶಾಮರಾಯರು, 'ಕರ್ಣಾಟಕ ಭಾಷಾವ್ಯಾಕರಣೋಪನ್ಯಾಸ ಮಂಜರಿ' ಕರ್ತೃಗಳಾದ ರಾ. ರಘುನಾಥರಾಯರು ಮುಂತಾದವರ ನಿಕಟಸಂಪರ್ಕವನ್ನು ಎಸ್. ಜಿ. ನ. ಪಡೆದಿದ್ದರು. ಈ ವ್ಯಕ್ತಿಗಳೇ ಅಲ್ಲದೆ, ಅಂದಿನ ಖ್ಯಾತ ಸಾಹಿತಿಗಳಾಗಿದ್ದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿ, ನಂಜನಗೂಡು ಸುಬ್ಬಾಶಾಸ್ತ್ರಿ, ನಂ. ಶ್ರೀಕಂಠ ಶಾಸ್ತ್ರಿ, ನಂ. ಅನಂತನಾರಾಯಣ ಶಾಸ್ತ್ರಿ, ಟಿ. ಆರ್. ಕರಿಬಸವ ಶಾಸ್ತ್ರಿ, ಎನ್. ಆರ್. ಕರಿಬಸವ ಶಾಸ್ತ್ರಿ, ಬಿ. ಮಲ್ಲಪ್ಪ, ಎಂ. ವೆಂಕಟಕೃಷ್ಣಯ್ಯ, ಎಂ. ಎಸ್. ಪುಟ್ಟಣ್ಣ, ಚ. ವಾಸುದೇವಯ್ಯ, ಎಂ. ಎಲ್. ಶ್ರೀಕಂಠೇಶ ಗೌಡ, ಗರಣಿ ಕೃಷ್ಣಾಚಾರ್ಯ, ರಾ. ಹ. ದೇಶಪಾಂಡೆ, ಆಲೂರ ವೆಂಕಟರಾವ್, ಬಾಪು ಸುಬ್ಬರಾವ್, ಎಂ. ಡಿ. ಶ್ರೀನಿವಾಸ ಅಯ್ಯಂಗಾರ್, ಚಾಮರಾಜನಗರದ ಶ್ರೀಕಂಠಶಾಸ್ತ್ರಿ ಮತ್ತು ರಾಮಶಾಸ್ತ್ರಿ, ಮೈಸೂರು

ಸೀತಾರಾಮ ಶಾಸ್ತ್ರಿ ಮೊದಲಾದವರಲ್ಲಿ ಹಲವರ ಸ್ನೇಹ ಸಂಪರ್ಕಗಳು ಅವರಿಗಿದ್ದಂತೆ ತಿಳಿಯಲು ಕೆಲವು ಅನುಕೂಲಸಾಕ್ಷ್ಯಗಳುಂಟು. ಕೆಲವು ನಿದರ್ಶನಗಳನ್ನು ಇಲ್ಲಿ ಕೊಡಬಹುದೆಂದು ತೋರುತ್ತದೆ.

ಶ್ರೀಕಂಠೇಶಗೌಡರು ತಾವು ಸಂಪಾದಿಸುತ್ತಿದ್ದ 'ಸುರಭಿ' ಮಾಸಪತ್ರಿಕೆಗೆ ಎಸ್.ಜಿ.ನ. ಅವರಿಂದ ಪದ್ಯಗಳನ್ನು ಆಗಾಗ ತರಿಸಿಕೊಂಡು ಪ್ರಕಟಿಸಿದ್ದಾರೆ. ಬಾಪು ಸುಬ್ಬರಾಯರು ಎಸ್. ಜಿ. ನ. ಅವರ ಮೂರು ಅನುವಾದಿತಗ್ರಂಥಗಳನ್ನು ತಮ್ಮ ಕರ್ಣಾಟಕ ಗ್ರಂಥಮಾಲೆಯ ಮೂಲಕ ಹೊರತಂದಿದ್ದಾರೆ; ಅಲ್ಲದೆ ತಾವು ಸಂಪಾದಕರಾಗಿದ್ದ 'ವಿದ್ಯಾದಾಯಿನಿ'ಯಲ್ಲಿ ಎಸ್. ಜಿ. ನ. ಅವರ ಲೇಖನಗಳನ್ನೂ ಕವಿತೆಗಳನ್ನೂ ಪ್ರಕಟಿಸಿದ್ದಾರೆ. ಇಷ್ಟು ಮಾತ್ರವಲ್ಲ, ತಾವೇ ಬರೆದುದೂ ಕರ್ಣಾಟಕ ಗ್ರಂಥಮಾಲೆಯ ಪ್ರಥಮ ಪ್ರಕಟನೆಯೂ ಆಗಿರುವ 'ಚಂಡಮಾರುತ' (೧೮೯೨) ದಲ್ಲಿ ಸೇರುವಂತೆ 'ಟೆಂಪೆಸ್ಟ್' ನಾಟಕದಿಂದ ನಾಲ್ಕು ಪದ್ಯಗಳನ್ನು ಎಸ್. ಜಿ. ನ. ಅವರಿಂದ ಭಾಷಾಂತರಮಾಡಿಸಿ ಸೇರಿಸಿಕೊಂಡಿದ್ದಾರೆ. ನಂಜನಗೂಡು ಅನಂತನಾರಾಯಣ ಶಾಸ್ತ್ರಿಗಳ 'ಕರ್ಣಾಟಕ ನಾಗಾನಂದ ನಾಟಕಂ' ಗ್ರಂಥವನ್ನು (೧೮೯೪) ಹಸ್ತಪ್ರತಿಯಲ್ಲಿ ಪರಿಶೀಲಿಸಿ, ಸಲಹೆಗಳನ್ನು ನೀಡಿರುವವರಲ್ಲಿ ಎಸ್. ಜಿ. ನ. ಅವರೂ ಒಬ್ಬರು. ಮೈಸೂರು ಸೀತಾರಾಮ ಶಾಸ್ತ್ರಿಗಳು ತಮ್ಮ 'ಸೂಕ್ತಿಮಂಜರಿ'ಯ (೧೮೯೪, ಪೀಠಿಕೆಯಲ್ಲಿ "ಈ ನನ್ನ ಸೂಕ್ತಿಮಂಜರಿಯನ್ನು ನಿರ್ಮತ್ಸರತೆಯಿಂದ ಆಮೂಲಾಗ್ರವಾಗಿ ನೋಡಿ ದಯವಿಟ್ಟು ಅಲ್ಲಲ್ಲಿ ಕೆಲವು ಸಂಗತಿಗಳನ್ನು ತಿಳಿಸಿದ 'ಕರ್ಣಾಟಕ ಕಾವ್ಯಮಂಜರಿ'ಯೆಡಿಟರಾದ ಮ॥ರಾ॥ ಎಸ್. ಜಿ. ನರಸಿಂಹಾಚಾರ್ಯರೂ ಮೈಸೂರು ಮಹಾರಾಜರ ಕಾಲೇಜು ಮುನಷಿಯವರಾದ ಮ॥ರಾ॥ ಕರಿಬಸವಪ್ಪ ಶಾಸ್ತ್ರಿಗಳೂ....ಮುಂತಾದವರ ವಿಷಯದಲ್ಲಿ ನಾನು ಅತ್ಯಂತ ಕೃತಜ್ಞನಾಗಿರುವೆನು'' ಎಂದು ಬರೆದಿದ್ದಾರೆ. ಮೈಸೂರು ಸರ್ಕಾರದ ವೈದ್ಯಕೀಯ ಸೇವೆಯಲ್ಲಿದ್ದ ಎಂ. ಡಿ. ಶ್ರೀನಿವಾಸಯ್ಯಂಗಾರ್ಯರು ರಚಿಸಿದ 'ವಿಷೂಚಿ (ಕಾಲರಾ)' ಎಂಬ (೧೮೯೪) ಹಾಗೂ 'ಗರ್ಭಿಣೀಶಿಶುಸಂರಕ್ಷಣ' ಎಂಬ (೧೮೯೬) ಕೃತಿಗಳ ಮುದ್ರಣದಲ್ಲಿ ಎಸ್. ಜಿ. ನ. ಅವರು ಅವುಗಳ ಕರಡಚ್ಚುಗಳನ್ನು ಪರಿಶೀಲಿಸಿ ಕೊಟ್ಟಿದ್ದಾರೆ. ಹೀಗೆಯೇ ''ಮೈಸೂರು ಸವಾರ್ ಇಲಾಖಾ ಒಂದನೇ ರಿಜಮೆಂಟ್ ವೆಟರ್‌ನೆರಿ ಸರ್ಜಿಯನ್‌ರಾದ'' ಎನ್. ನರಸಿಂಹೈಯಂಗಾರ್ಯರಿಂದ ರಚಿತವಾದ 'ಪಶುವೈದ್ಯ ಸಂಗ್ರಹ' ಎಂಬ (೧೮೯೫) ಪುಸ್ತಕದ ರಚನೆಯಲ್ಲಿ, ಅದರ ಕರ್ತೃ ತಮ್ಮ ಮಿತ್ರರಾದ ಎಸ್. ಜಿ. ನ. ಅವರ ಅಮೂಲ್ಯವಾದ ಸಲಹೆಗಳನ್ನು ಪಡೆದುಕೊಂಡುದೇ ಅಲ್ಲದೆ ಕರಡಚ್ಚುಗಳನ್ನು ತಿದ್ದುವಲ್ಲಿಯೂ ಸಹಾಯ ಪಡೆದರೆಂದು ತಿಳಿಯುವುದು.

ಬಿ. ಮಲ್ಲಪ್ಪನವರ 'ಶಬ್ದಾದರ್ಶವೆಂಬ ಹೊಸಗನ್ನಡ ವ್ಯಾಕರಣವು' (೧೮೯೭ ; ೧೯೫೧ರಲ್ಲಿ ೨೭ನೆಯ ಮುದ್ರಣ) ಗ್ರಂಥದ ಪೀಠಿಕೆಯಲ್ಲಿ ''ಟೆಕ್ಸ್ಟುಬುಕ್ ಕಮಿಟಿ ಎಂಬ ಸಭೆಯ ಅಧ್ಯಕ್ಷರಾದ ಮ॥ ಭಾಭಾ, ಎಂ.ಎ. ಅವರು ಕೇಳಿಕೊಂಡ ಮೇರೆಗೆ ಆ ಸಭಾ

ಸಾಮಾಜಿಕರಾದ ಬಿ. ಮಲ್ಲಪ್ಪನವರು, ಎಸ್.ಜಿ. ನರಸಿಂಹಾಚಾರ್ಯರು, ಆರ್. ನರಸಿಂಹಾಚಾರ್ಯರು ಈ ಮೂವರೂ ಒಂದು ಉಪಸಭೆ ಸೇರಿ ಪುಸ್ತಕವನ್ನು ತಿದ್ದಿದರು'' ಎಂಬುದಾಗಿ ಹೇಳಿದೆ. ತಮಗೆ ವಯಸ್ಸಿನಲ್ಲಿ ೧೬-೧೭ ವರ್ಷ ಕಿರಿಯರೇ ಆಗಿದ್ದರೂ ಎಸ್. ಜಿ. ನ. ಅವರ ವಿಷಯದಲ್ಲಿ ವಿಶ್ವಾಸ ಗೌರವಗಳನ್ನು ತಳೆದಿದ್ದ ಬಿ. ವೆಂಕಟಾಚಾರ್ಯರು ತಮ್ಮ ಒಂದು ಪುಸ್ತಕ 'ಭರತಖಂಡದ ಪೂರ್ವವೃತ್ತ (೧ನೆಯ ಭಾಗ)' ಎಂಬುದರ (೧೯೦೧) ವಿಜ್ಞಾಪನೆಯ ಭಾಗದಲ್ಲಿ ಹೀಗೆ ಬರೆದಿದ್ದಾರೆ : ''ಈ ಪುಸ್ತಕವನ್ನು ಬರೆವುದಕ್ಕೆ ಹೆಚ್ಚು ಪ್ರೋತ್ಸಾಹಪಡಿಸಿ, ಬರೆದ ಅನಂತರ ಪುನರವಲೋಕನದಿಂದ ಅದನ್ನು ಪರಿಶೋಧಿಸಿ, ನನಗೆ ವಿಶೇಷ ಸಹಾಯವನ್ನು ಮಾಡಿದ ನನ್ನ ಸ್ನೇಹಿತರಾಗಿಯೂ ಹಿತೈಷಿಗಳಾಗಿಯೂ ಇರುವ ಪಂಡಿತಪುಂಗವ ಶ್ರೀ ಎಸ್. ಜಿ. ನರಸಿಂಹಾಚಾರ್ಯರವರಿಗೆ ನಾನು ಬಹಳ ಕೃತಜ್ಞನಾಗಿದ್ದೇನೆ.'' ಅವರ ಇತರ ಪುಸ್ತಕಗಳಲ್ಲಿಯೂ ಪ್ರಕಟಿಸುತ್ತಿದ್ದ ಪತ್ರಿಕೆ 'ಅವಕಾಶ ತೋಷಿಣಿ'ಯಲ್ಲಿಯೂ ಎಸ್. ಜಿ. ನ. ಅವರ ಬಗ್ಗೆ ಏನು ಮಾಹಿತಿ ದೊರೆಯಬಹುದೆಂಬುದನ್ನು ಶೋಧಿಸಬೇಕಾಗಿದೆ. ಅವರ ಕೆಲವು ಕಾದಂಬರಿಗಳಲ್ಲಿಯ ಪದ್ಯಗಳ ಕರ್ತೃತ್ವದಲ್ಲಿ ಎಸ್. ಜಿ. ನ. ಕೈವಾಡವುಂಟೇ ಎನ್ನುವುದು ವಿಚಾರಾರ್ಹ. ಎಸ್. ಟಿ. ರಾಘವಾಚಾರ್ಯರು ತಮ್ಮ 'ಪ್ರಬೋಧಮಂಜರಿ'ಯಲ್ಲಿ (೧೯೦೪) ''ಈ ಗ್ರಂಥದ ತಿದ್ದುಪಾಡಿನ ವಿಷಯದಲ್ಲಿ ಕೆಲವು ಒಳ್ಳೆಯ ಸಂಗತಿಗಳನ್ನು ಸೂಚಿಸಿದುದಕ್ಕಾಗಿ ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಟ್ರಾನ್ಸ್‌ಲೇಟರ್ ಮ॥ರಾ॥ ಎಸ್. ಜಿ. ನರಸಿಂಹಾಚಾರ್ಯರವರಿಗೂ ಬಹಳ ಕೃತಜ್ಞನಾಗಿದ್ದೇನೆ'' ಎಂದು ಹೇಳಿಕೊಂಡಿದ್ದಾರೆ.

ಭಾಷೆ ಸಾಹಿತ್ಯಗಳ ವಿಷಯದಲ್ಲಿ ಎಸ್. ಜಿ. ನ. ಅವರ ಸಲಹೆ ಸೂಚನೆ ವಿಮರ್ಶೆಗಳಿಗೆ ಆ ಕಾಲದ ವಿದ್ವಾಂಸರು ತುಂಬ ಬೆಲೆಕೊಡುತ್ತಿದ್ದರು ಎನ್ನುವುದಕ್ಕೆ ಸಾಕ್ಷ್ಯಗಳಿಗೆ ಕೊರತೆಯಿಲ್ಲ. ಇಲ್ಲಿ ಒಂದು ಸಂದರ್ಭವನ್ನು ನೆನೆಯಬಹುದಾಗಿದೆ :

ರಾ. ರಘುನಾಥರಾಯರು ತಮ್ಮ 'ಕರ್ಣಾಟ ಭಾಷಾವ್ಯಾಕರಣೋಪನ್ಯಾಸಮಂಜರಿ' (೧೮೯೪)ಯ ಹಸ್ತಪ್ರತಿಯನ್ನು ಎಸ್. ಜಿ. ನ. ಮತ್ತು ಮಂ. ಆ. ರಾ. ಅವರಿಗೆ ಪರಿಶೀಲನೆಗೆ ಕೊಟ್ಟಾಗ, ಇಬ್ಬರೂ ತಮ್ಮ ಮೇಲೆ "ಸಂಪೂರ್ಣ ದಯೆವಿಟ್ಟು" ಅದನ್ನು ಆಮೂಲಾಗ್ರವಾಗಿ ಓದಿನೋಡಿ ''ಕೆಲವಭಿಪ್ರಾಯಗಳನ್ನು ಹಿತೈಷಿಗಳ ತೆರದಲ್ಲಿ'' ತಮಗೆ ತಿಳಿಸಿ ಸಹಾಯ ಮಾಡಿರುತ್ತಾರೆಂದೂ ಮ ॥ ಯಸ್. ಜಿ. ನರಸಿಂಹಾಚಾರ್ಯರು, ನೃಪತುಂಗನಿಂದ ರಚಿತವಾದ ಕವಿರಾಜಮಾರ್ಗವೆಂಬ ಗ್ರಂಥದಿಂದ ಕೆಲವು ಪದ್ಯಗಳನ್ನು ''ತಮಗೆ ಕಳುಹಿಸಿಕೊಟ್ಟು ಮ॥ ರೈಸ್ ಸಾಹೇಬರವರು ಹೇಳುವಂತೆ ಕ್ರಿ. ಶ. ಏಳನೆಯ ಶತಮಾನದ ಕೊನೆಯಲ್ಲಿ ಸತ್ತುಹೋದ ಪೂರ್ವದ ಹಳಗನ್ನಡವೆಂಬುದೊಂದು ಭೇದವು ಇತ್ತೆಂದು ಈ ಪದ್ಯಗಳಿಂದ ತಿಳಿದು ಬರುವುದೋ ಇಲ್ಲವೊ ಯೋಚಿಸುವುದು ಉತ್ತಮವೆಂದು'' ಸೂಚಿಸಿರುವರೆಂದೂ ಬರೆದಿರುತ್ತಾರೆ. ಈ ಪದ್ಯಗಳು ಎಂದರೆ, ಈಗಾಗಲೇ ''ವಿದ್ವಾಂಸರಲ್ಲಿ ಚರ್ಚೆಗೆ ವಿಷಯವಾದ ನೆಲಸಿದ ಕಾವ್ಯಂ..." "ಪೊಡವಿಪತಿ ಗೊರವನೆನೆ ....'' "ವಿರಸಂ ಕರಮವು....'' ಎಂಬುವೇ ಆಗಿವೆ. ಇವುಗಳಲ್ಲಿ ಎರಡನೆಯ ಪದ್ಯಕ್ಕೆ

ತಮಗೆ ಸರಿಯಾಗಿ ಅರ್ಥವಾಗಿಲ್ಲವೆಂದೂ, "ಮ ॥ ನರಸಿಂಹಾಚಾರ್ಯರೂ ತಮಗೆ ಪದ್ಯವು ಅರ್ಥವಾಗಿಲ್ಲವೆಂದು ಬರೆದಿರುವರು" ಎಂದೂ ರಾಯರೇ ಮುಂದುವರಿದು ತಿಳಿಸಿದ್ದಾರೆ (ಪೀಠಿಕೆ, ಪು. ೫–೭).

ಎಸ್.ಜಿ.ನ. ಅವರಿಗೆ ಅವರ ಕಾಲದ ಪ್ರಮುಖ ನಟರ, ನಾಟಕಕರ್ತರ ಪರಿಚಯವಿದ್ದಿತು. ಮುಖ್ಯವಾಗಿ ಬಸವಪ್ಪ ಶಾಸ್ತ್ರಿಗಳು, ನಂ. ಸುಬ್ಬಾಶಾಸ್ತ್ರಿಗಳು, ನಂ. ಶ್ರೀಕಂಠ ಶಾಸ್ತ್ರಿಗಳು ಮುಂತಾದವರು ನಾಟಕಕರ್ತರಿದ್ದರೆ, ವರದಾಚಾರ್ಯರಂತಹ ನಟಶ್ರೇಷ್ಠರೂ ಇದ್ದರು. ಎಸ್. ಜಿ. ನ. ನಾಟಕಕಂಪೆನಿಗಾಗಿ 'ಶಾಕುಂತಲ', 'ಚಂದ್ರಹಾಸ', 'ಕಾಮಪಾಲ ಚರಿತ್ರೆ'ಗಳನ್ನು ರಚಿಸಿದ್ದರೆಂಬ ಮಾತು ಇದ್ದರೂ (ಮಂಡ್ಯದ ರಂಗಾಚಾರ್ಯ, ಕನ್ನಡ ರಂಗದ ಆಚಾರ್ಯ, 'ಬಣ್ಣ-ಬೆಳಕು', ಪು.೭)ಇದನ್ನುಸ್ಥಿರಪಡಿಸುವ ಸಾಕ್ಷ್ಯವಾವುದೂ ಇಲ್ಲ. ಕೊನೆಯದು ಎ. ವಿ. ವರದಾಚಾರ್ಯಕೃತವೆಂದೇ ತೋರುತ್ತದೆ (ಎಂ. ಜಿ. ಮರಿರಾವ್, 'ನಾಟಕ ಶಿರೋಮಣಿ ಎ. ವಿ. ವರದಾಚಾರ್ಯ,' ಪು. ೧೬). ವರದಾಚಾರ್ಯರ ನಾಟಕಗಳಿಗೆ ಬಸವಪ್ಪಶಾಸ್ತ್ರಿಗಳೂ ಎಸ್. ಜಿ. ನ. ಅವರೂ ಕಂದಗಳನ್ನೂ ಹಾಡುಗಳನ್ನೂ ರಚಿಸಿ ಕೊಡುತ್ತಿದ್ದರೆಂದೂ, ಗುಲೇಬಕಾವಲಿಯ ರಾಜಕಿರೀಟಿಯೆಂಬ ಪಾತ್ರ ಹಾಡುವ ಉದ್ಯಾನವನದ ಜನಪ್ರಿಯವಾದ ಹಾಡು ಎಸ್. ಜಿ. ನ. ಬರೆದುದೆಂದೂ ಬಿ. ವಿ. ನಾರಾಯಣ ಅಯ್ಯಂಗಾರ್ ಅವರು ವಿಶದವಾಗಿಯೇ ನೆನೆದುಕೊಂಡಿದ್ದಾರೆ (ಎ. ವಿ. ವರದಾಚಾರ್ಯರ ಪರಿಚಯ, 'ನಾಟಕ ಶಿರೋಮಣಿ ಎ. ವಿ. ವರದಾಚಾರ್ಯರು,' ಶತಮಾನೋತ್ಸವ ಸನ್ಮಾನ ಸಮಿತಿ ಪ್ರಕಟನೆ, ೧೯೭೦, ಪು. ೧೭,೨೦). ಇಂತಹ ನೆನಪುಗಳನ್ನು ಡಿ. ವಿ. ಜಿ. ತಮ್ಮ 'ಜ್ಞಾಪಕ ಚಿತ್ರಶಾಲೆ'ಯ ಒಂದು ಬರೆಹದಲ್ಲಿಯೂ(ಭಾಗ ೨, ಪು. ೧೫೧-೫೨) ಸಿ.ಕೆ ವೆಂಕಟರಾಮಯ್ಯನವರು 'ನಾಟಕಶಿರೋಮಣಿ ಶ್ರೀಮಾನ್ ಎ. ವಿ. ವರದಾಚಾರ್ಯರು ಎಂಬ ತಮ್ಮ ಒಂದು ಬರೆಹದಲ್ಲಿಯೂ (ಶತಮಾನೋತ್ಸವಗ್ರಂಥ, ಪು. ೬೪) ನಿವೇದಿಸಿದ್ದಾರೆ.

ಇನ್ನು ಹೊಸಗನ್ನಡದಲ್ಲಿ ಬಾಲಸಾಹಿತ್ಯರಚನೆಗೆ ಆದ್ಯಕೃಷಿಕರಾಗಿ ತಿಳಿದು ಬಂದಿರುವ ಎನ್. ಜಯರಾಯಾಚಾರ್ಯರು, ಎಂ. ರಾಮಶೇಷಶಾಸ್ತ್ರಿಗಳು, ಸೋಸಲೆ ಅಯ್ಯಾಶಾಸ್ತ್ರಿಗಳು ಈ ಕೆಲವರ ಸ್ನೇಹಸಂಪರ್ಕಗಳೂ ಎಸ್. ಜಿ. ನ. ಅವರಿಗಿದ್ದುದು ಸಂಭವನೀಯವೇ. ನಮ್ಮ ಕಾಲದ ಹಿರಿಯ ಸಾಹಿತಿಗಳಾಗಿದ್ದ ಡಿ. ವಿ. ಗುಂಡಪ್ಪನವರಿಗೂ ಇವರ ಪರಿಚಯವಿದ್ದುದು, ಅವರ ನೆನಪಿನ ಚಿತ್ರಗಳ ಮೂಲಕ ನಮಗೆ ತಿಳಿದಿದೆ.

ಎಸ್. ಜಿ. ನರಸಿಂಹಾಚಾರ್ಯರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ, ತಮ್ಮ ೨೫ನೆಯ ವಯಸ್ಸಿನಲ್ಲಿ, ೧೮೮೭ ರ ಏಪ್ರಿಲ್ ೧ ರಂದು ಮೈಸೂರು ಸರ್ಕಾರದ ವಿದ್ಯಾಭ್ಯಾಸ ಇಲಾಖೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಸ್ವಲ್ಪ ಕಾಲ ಶ್ರೀರಂಗಪಟ್ಟಣದಲ್ಲಿ ಉಪಾಧ್ಯಾಯವೃತ್ತಿಯಲ್ಲಿದ್ದುಕೊಂಡು, ಸು. ೧೮೯೦ ರ ವೇಳೆಗೆ ತಮ್ಮ ವೃತ್ತಿಯ ಹಾಗೂ ಕಾರ್ಯದ ಕ್ಷೇತ್ರವನ್ನಾಗಿ ಮೈಸೂರನ್ನು ಹಿಡಿದು, ಅಲ್ಲಿಯೇ ನೆಲೆನಿಂತರು. ಜುಲೈ ೧೮೯೧ ರಲ್ಲಿ, ಅಂದಿನ ಮೈಸೂರು ಮಹಾರಾಜರಾಗಿದ್ದ ಚಾಮರಾಜೇಂದ್ರ ಒಡೆಯರವರ

ವಿದ್ಯಾಪಕ್ಷಪಾತದ ಫಲವಾಗಿ ಮೈಸೂರು ಓರಿಯೆಂಟಲ್ ಲೈಬ್ರರಿ ಪ್ರಾರಂಭವಾಯಿತು. ಈ ಸಂಸ್ಥೆಯ ಮೊದಲನೆಯ ಕ್ಯೂರೆಟರ್ ಆಗಿ ಅಲ್ಲಾಡಿ ಮಹದೇವಶಾಸ್ತ್ರಿ ಬಿ. ಎ. ಅವರು ಜುಲೈ ೧೦, ೧೮೯೧ರಲ್ಲಿ ೧೨೫ರೂ. ಗಳ ಮಾಹೆಯಾನ ತಲಬಿನ ಮೇಲೆ ನೇಮಕ ಗೊಂಡರು. ಇವರೊಂದಿಗೆ ಮೊದಲನೆಯ ಪಂಡಿತರಾಗಿ, ಪ್ರಾಯಶಃ ಸಂಚಾರಿಪಂಡಿತ ರಾಗಿ, ತಿಂಗಳಿಗೆ ೫೦ ರೂ. ತಲಬಿನ ಮೇಲೆ ಎಸ್. ಜಿ. ನರಸಿಂಹಾಚಾರ್ಯರು ನೇಮಕ ವಾದ ಹಾಗೆ ತೋರುತ್ತದೆ. ಹೀಗೆ ಈ ಸಂಸ್ಥೆಯನ್ನು ಸೇರಿ, ಪಂಡಿತರಾಗಿದ್ದವರು ಲೈಬ್ರೇರಿಯನ್ ಹುದ್ದೆಗೆ ಬಡ್ತಿ ಪಡೆದಿರಬೇಕೆಂದು ತಿಳಿಯಲವಕಾಶವಿದೆ. ನಮ್ಮ ಭಾಷೆಯ ಉಪಲಬ್ಧಕಾವ್ಯಗ್ರಂಥಗಳಲ್ಲಿ ಮೊದಲನೆಯದಾದ ಪಂಪಕವಿಯ 'ಆದಿಪುರಾಣ' ವನ್ನು ತಾವೇ ಪರಿಶ್ರಮಪಟ್ಟು ಸಂಪಾದಿಸಿ ೧೯೦೦ ರಲ್ಲಿ ಅದನ್ನು ಈ ಸಂಸ್ಥೆಯ ಪ್ರಪ್ರಥಮ ಕನ್ನಡ ಪ್ರಕಟನೆಯನ್ನಾಗಿ ಹೊರತಂದರು. ಮೈಸೂರು ವಿಶ್ವವಿದ್ಯಾನಿಲಯದ ಖ್ಯಾತಿಯ ಕನ್ನಡ ಗ್ರಂಥಮಾಲೆಗೆ ಇದೇ ನಾಂದಿಯಾಯಿತು ಎಂಬುದನ್ನಿಲ್ಲಿ ನೆನೆಯಬೇಕು. ಈ ದೃಷ್ಟಿಯಿಂದ ಎಸ್. ಜಿ. ನರಸಿಂಹಾಚಾರ್ಯರನ್ನು ಈಗಿನ ಪ್ರಸಾರಾಂಗದ ಪ್ರಕಟನೆಗಳಿಗೆ ಪಿತಾಮಹರೆಂದು ಕರೆಯಬಹುದಾಗಿದೆ. ಕೆಲವು ವರ್ಷಗಳಲ್ಲಿಯೇ, ೧೯೦೪ ರಲ್ಲಿ ಇದೇ ಸಂಸ್ಥೆಯಿಂದ ರುದ್ರಭಟ್ಟನ 'ಜಗನ್ನಾಥವಿಜಯ' ವನ್ನು ಸಹ ಅವರು ಸಂಪಾದಿಸಿ ಹೊರತಂದರು.

ಎಸ್. ಜಿ. ನರಸಿಂಹಾಚಾರ್ಯರು ಸು. ೧೮೯೧ ರಿಂದ ೧೯೦೨ ರ ವರೆಗೆ ಮೈಸೂರು ಗೌರ್ನಮೆಂಟ್ ಓರಿಯೆಂಟಲ್ ಲೈಬ್ರರಿಯಲ್ಲಿ ಲೈಬ್ರೇರಿಯನ್ ಹುದ್ದೆಯಲ್ಲಿದ್ದಾಗ ತಮ್ಮ ಕೆಲವು ಅನುವಾದಿತಗ್ರಂಥಗಳ ಮೂಲಕ ಅನುವಾದಕಾರ್ಯದಲ್ಲಿ ತಮ್ಮ ಪ್ರೌಢಿಮೆಯನ್ನೂ ಕೌಶಲವನ್ನೂ ಪ್ರಕಟಿಸಿದ್ದರು. ಇದು ಸಹಜವಾಗಿಯೇ ಸರ್ಕಾರದ ಹಿರಿಯ ಅಧಿಕಾರಿಗಳ ಗಮನ ಸೆಳೆದು, ಮೇಲಿನ ಹುದ್ದೆಯ ಜೊತೆಗೆ ಆಗಾಗ ಭಾಷಾಂತರ ಕಾರನ ಕೆಲಸವನ್ನು ಸಹ ನೋಡಿಕೊಳ್ಳುವಂತೆ ಅವರನ್ನು ನೇಮಿಸುತ್ತಿದ್ದುದುಂಟು. ಮಾರ್ಚ್ ೧೯೦೧ ರಿಂದ ೧ ತಿಂಗಳು, ೨೩ದಿನಗಳ ಕಾಲ ಆಗಿನ ಸರ್ಕಾರಿ ಕನ್ನಡ ಭಾಷಾಂತರಕಾರರಾಗಿದ್ದ ಎಂ. ಬಿ. ಶ್ರೀನಿವಾಸಯ್ಯಂಗಾರ್ ಎಂ. ಎ. ಅವರ ಸ್ಥಾನದಲ್ಲಿ, ತಾತ್ಕಾಲಿಕವಾಗಿ ಭಾಷಾಂತರಕಾರರಾಗಿ ಎಸ್. ಜಿ. ನ. ಕೆಲಸಮಾಡಿದರು. ೧೯೦೨ ರ ಜನವರಿ ೨೨ ರಿಂದ ೨ ತಿಂಗಳ ಕಾಲ ಓರಿಯೆಂಟಲ್ ಲೈಬ್ರರಿಯ ಕ್ಯೂರೆಟರ್ ಅವರು ರಜೆಯಲ್ಲಿದ್ದಾಗ, ತಮ್ಮ ಕೆಲಸಗಳ ಜೊತೆಗೆ ಕ್ಯೂರೆಟರ್ ಅವರ ಕೆಲಸಗಳನ್ನೂ ಎಸ್. ಜಿ. ನ. ನಿರ್ವಹಿಸಿದರು. ಬಳಿಕ ಏಪ್ರಿಲ್ ೧೯೦೨ ರಲ್ಲಿ ಬೆಂಗಳೂರಿನಲ್ಲಿದ್ದ ಮೈಸೂರು ಸರ್ಕಾರದ ವಿದ್ಯಾಭ್ಯಾಸ ಇಲಾಖೆಯ ಇನ್ಸ್ಪೆಕ್ಟರ್ ಜನರಲ್ ಅವರ ಕಛೇರಿಯಲ್ಲಿ ಕನ್ನಡ ಭಾಷಾಂತರಕಾರರಾಗಿ ಅವರು ನೇಮಕವಾದರು. ಆಗ್ಗೆ ಅವರ ಸಂಬಳ ಮಾಹೆಯಾನಾ ೧೨೦ ರೂ. ೧೨೦-೧೦/೨-೧೫೦ ರೂ. ಗ್ರೇಡಿನ ಮೇಲೆ ಅವರ ನೇಮಕವಾಯಿತು. ಅವರ ಮೊದಲಿನ ಸ್ಥಾನಕ್ಕೆ, ಓರಿಯೆಂಟಲ್ ಲೈಬ್ರರಿಯಲ್ಲಿಯೇ ಎರಡನೆಯ ಪಂಡಿತರಾಗಿದ್ದ ಆರ್. ಶಾಮಶಾಸ್ತ್ರಿ ಬಿ. ಎ. ಅವರು, ತಮಗೆ ಆಗಲೇ ಬರುತ್ತಿದ್ದ ೭೦ ರೂ. ಸಂಬಳದ ಮೇಲೆ ಲೈಬ್ರೇರಿಯನ್ ಎಂದು ನೇಮಕಗೊಂಡರು.

ಡಿಸೆಂಬರ್ ೨೨, ೧೯೦೭ರಲ್ಲಿ, ಭಾನುವಾರದ ರಾತ್ರಿ, ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಯಲ್ಲಿ ಕಾಲುಘಣಿ ವ್ಯಾಧಿಯಿಂದ ಎಸ್. ಜಿ. ನರಸಿಂಹಾಚಾರ್ಯರು ಅಕಾಲಿಕವಾಗಿ ತೀರಿಕೊಂಡರು. ಆ ಅವಧಿಯವರೆಗೆ ಮೈಸೂರು ವಿದ್ಯಾಭ್ಯಾಸ ಇಲಾಖೆಯ ಕನ್ನಡ ಭಾಷಾಂತರಕಾರರಾಗಿ ಅವರು ತಮ್ಮ ಕಾರ್ಯವನ್ನು ನಿರ್ವಹಿಸಿದರು. ಅಕ್ಟೋಬರ್ ೧, ೧೯೦೬ ರಲ್ಲಿ ಅವರಿಗೆ ೫೦ ರೂ.ಗಳ ವಿಶೇಷ ಭತ್ಯ ಸೇರಿ ೧೪೦ರೂ. ಸಂಬಳ ದೊರೆಯುತ್ತಿದ್ದಿತೆಂದೂ ಈ ಸಂಬಳ ಪಡೆಯಲು ೧-೨-೧೯೦೬ ರಲ್ಲಿ ಅವರಿಗೆ ಬಡ್ತಿ ದೊರೆಯಿತೆಂದೂ ಸರ್ಕಾರಿ ದಾಖಲೆಯಿಂದ (೧೯೦೬ರ ಸಿವಿಲ್ ಲಿಸ್ಟ್) ತಿಳಿಯುತ್ತದೆ. ಎಸ್. ಜಿ. ನ. ನಿರ್ವಹಿಸಿದ ಭಾಷಾಂತರಕಾರ ಹುದ್ದೆಯ ಕಾರ್ಯವಿಧಾನವೇನು, ಅಲ್ಲಿ ಅವರು ಕೈಕೊಂಡ ಗಮನಾರ್ಹವಾದ ಭಾಷಾಂತರಕಾರ್ಯಗಳು ಯಾವುವು ಎಂಬುದನ್ನು ನಾವು ಇನ್ನೂ ಶೋಧಿಸಿ ತಿಳಿಯಬೇಕಾಗಿದೆ. ಆದರೆ ಈ ಅವಧಿಯಲ್ಲಿ ಎಂ. ಎ. ರಾಮಾನುಜಯ್ಯಂಗಾರ್ಯರೊಂದಿಗೆ ಕೂಡಿ 'ಕರ್ಣಾಟಕ ಕಾವ್ಯಮಂಜರಿ'ಯ ಮೂಲಕ ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯದ ಗ್ರಂಥಗಳನ್ನು ಸಂಪಾದಿಸಿ, ಕಾಲಕಾಲಕ್ಕೆ ಹೊರತರುವ ಸಾಹಿತ್ಯಸೇವೆ ನಡೆದೇ ಇದ್ದಿತು ಎನ್ನುವುದಂತೂ ನಿಶ್ಚಯ. ಎಸ್.ಜಿ. ನ. ಅವರ ನಿಧನದಿಂದ ತೆರವಾದ ಕನ್ನಡ ಭಾಷಾಂತರಕಾರ ಹುದ್ದೆ ಅನಂತರದಲ್ಲಿ ಎಂ.ಎ. ರಾಮಾನುಜಯ್ಯಂಗಾರ್ಯರಿಗೆ, ಅವರ ಪತ್ನೀಮಾತುಲರಾದ ಎಂ.ಎ. ಶ್ರೀನಿವಾಸಚಾರ್ಯರು, ಚಿ. ವಾಸುದೇವಯ್ಯನವರಲ್ಲಿ ಪ್ರಯತ್ನಿಸಿದ ಹಾಗೂ ವಾಸುದೇವಯ್ಯನವರು ಭಾಭಾ ಸಾಹೇಬರಲ್ಲಿ ಮನವಿಮಾಡಿದ ಫಲವಾಗಿ ದೊರೆಯಿತು ಎಂದು ತಿಳಿಯುವುದು.

ತಮ್ಮ ಕಾಲದ ಹಳೆಯ ಮೈಸೂರು ಸಂಸ್ಥಾನದಲ್ಲಿ ಕನ್ನಡ ಭಾಷೆ ಸಾಹಿತ್ಯಗಳ ಅಭಿವೃದ್ಧಿಗಾಗಿ ಏರ್ಪಟ್ಟ ಸಮಿತಿಗಳಲ್ಲಿಯೂ ಪಠ್ಯನಿಯಾಮಕ ಸಮಿತಿಗಳಲ್ಲಿಯೂ ವಿವಿಧ ಮಟ್ಟದ ಪರೀಕ್ಷಾಮಂಡಲಿಗಳಲ್ಲಿಯೂ ಎಸ್.ಜಿ. ನರಸಿಂಹಾಚಾರ್ಯರು ಸಕ್ರಿಯವಾಗಿ ಪಾಲುಗೊಂಡರು. ಈ ಸಂಬಂಧದ ಸಂಕ್ಷಿಪ್ತ ವರದಿಗಳೂ ವಾರ್ತೆಗಳೂ ತಿಳಿವಳಿಕೆಯ ಸೂಚನೆಗಳೂ 'ವಿದ್ಯಾದಾಯಿನಿ'ಯಂತಹ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಎಸ್. ಜಿ. ನ. ಅವರ ಕಾರ್ಯಚಟುವಟಿಕೆಗಳನ್ನು ತಿಳಿಯಲು ಇಲ್ಲಿ ಕೆಲವು ಉಲ್ಲೇಖಗಳನ್ನು ಸೂಚಿಸಬಹುದಾಗಿದೆ :

ಎಂ. ಶಾಮರಾಯರ ಅಧ್ಯಕ್ಷತೆಯಲ್ಲಿ ೨೨-೧೦-೧೮೯೨ ರಂದು ಸಮಾವೇಶವಾಗಿದ್ದ ಪಠ್ಯನಿಯಾಮಕ ಸಮಿತಿಯ ಒಂದು ಸಭೆ ಇಲ್ಲಿ ಉಲ್ಲೇಖಿಸಬೇಕಾದುದು. ಈ ಸಭೆಯಲ್ಲಿ ಎಂ. ಎಸ್. ಪುಟ್ಟಣ್ಣನವರು, ಎಂ. ಬಿ. ಶ್ರೀನಿವಾಸಯ್ಯಂಗಾರ್ಯರು, ಆರ್. ರಘುನಾಥರಾಯರು, ಎಸ್. ಜಿ. ನರಸಿಂಹಾಚಾರ್ಯರು, ಬಿ. ಮಲ್ಲಪ್ಪನವರು ಸದಸ್ಯರಾಗಿದ್ದರು. ಇಲ್ಲಿ ಕೈಕೊಂಡ ಒಂದು ನಿರ್ಣಯದ ಪ್ರಕಾರ ಅಕ್ಷರಸಂಯೋಜನೆ ಅವ್ಯವಸ್ಥಿತವಾಗಿರುವ ಪದಗಳ ವಿಷಯದಲ್ಲಿ ಒಂದು ಕ್ರಮವನ್ನು ನಿಶ್ಚಯಿಸಲು ೧೮೯೩ ರ ಮೇ ೨೦, ೨೧ ಮತ್ತು ೨೨ ರಂದು ಸೇರಿದ ಉಪಸಮಿತಿಯ ಸಭೆಯಲ್ಲಿಯೂ ಎಸ್. ಜಿ. ನ. ಅವರಿದ್ದರು. ಈ ಸಮಿತಿಯ ಅಧ್ಯಕ್ಷತೆಯನ್ನೂ ಎಂ. ಶಾಮರಾಯರೇ ವಹಿಸಿ

ದ್ದರು. ಎಂ. ಎಸ್. ಪುಟ್ಟಣ್ಣನವರು ಶಿಕ್ಷಣ ಇಲಾಖೆಗೆಂದು 'ಕನ್ನಡ ಒಂದನೆಯ ಪುಸ್ತಕ'ವನ್ನು ೧೮೯೫ರಲ್ಲಿ (೩ನೆಯ ಮುದ್ರಣ ೧೯೦೬) ಸಿದ್ಧಮಾಡಿಕೊಟ್ಟಾಗ, ಎಂ. ಶಾಮರಾಯರು ಮುಂತಾದವರೊಂದಿಗೆ ತಾವೂ ಸದಸ್ಯರಾಗಿದ್ದುಕೊಂಡು ಪಠ್ಯಪುಸ್ತಕ ಸಮಿತಿಯ ಆದೇಶದಂತೆ ಆ ಪುಸ್ತಕವನ್ನು ಪರಿಷ್ಕರಿಸುವಲ್ಲಿ ಎಸ್. ಜಿ. ನ. ನೆರವಾದರು. ೧೯೦೦ ರ ಜನವರಿ ೧೫ರಂದು ಪಠ್ಯನಿಯಾಮಕ ಸಮಿತಿಯ ಸಭೆಯಲ್ಲಿ ಆಯ್ದ ಕಾವ್ಯ ಭಾಗಗಳ 'ಪದ್ಯಸಾರ'ವನ್ನು ಸಂಕಲಿಸುವ ನಿರ್ಧಾರವನ್ನು ಕೈಕೊಳ್ಳಲಾಯಿತು. ಇದರ ಜವಾಬ್ದಾರಿಯನ್ನು ಹೊತ್ತ ಸದಸ್ಯರಲ್ಲಿ, ಈ ಸಂಕಲನದ ಟಿಪ್ಪಣಿಗಳನ್ನು ಎಸ್. ಜಿ. ನ. ಅವರೇ ಬರೆದರೆಂಬುದನ್ನು ಇಲ್ಲಿ ನೆನೆಯಬೇಕು. ಸಂಕಲನಕಾರ್ಯದಲ್ಲಿ ಒದಗಿದ ಇತರ ಸದಸ್ಯರು ಎಂದರೆ, ಎಂ. ಬಿ. ಶ್ರೀನಿವಾಸಯ್ಯಂಗಾರ್ಯರು, ಆರ್. ನರಸಿಂಹಾಚಾರ್ಯರು, ಆರ್.ರಘುನಾಥರಾಯರು ಮತ್ತು ಬಿ. ಮಲ್ಲಪ್ಪನವರು. ಮದ್ರಾಸು ಶಿಕ್ಷಣ ಇಲಾಖೆಗಾಗಿ ಶಾಲಾ ಇನ್ಸ್‌ಪೆಕ್ಟರ್ ಇ. ಮಾರ್ಸ್‌ಡೆನ್ ಬಿ. ಎ. ಅವರ ಜೊತೆಗೂಡಿ ೧೮೯೭ರಲ್ಲಿ 'ಕನ್ನಡ ನಾಲ್ಕನೆಯ ಪುಸ್ತಕ'ವನ್ನೂ ೧೯೦೨ರಲ್ಲಿ 'ಕನ್ನಡ ಆರನೆಯ ಪುಸ್ತಕ'ವನ್ನೂ ಮೆಕ್ ಮಿಲನ್ ಕಂಪೆನಿಗಾಗಿ ಎಸ್. ಜಿ. ನ. ಸ್ವತಃ ರಚಿಸಿದರು.

ಎಸ್. ಜಿ. ನರಸಿಂಹಾಚಾರ್ಯರು, ತಾವು ಮೈಸೂರಿನ ಸರ್ಕಾರಿ ಓರಿಯೆಂಟಲ್ ಲೈಬ್ರರಿಯಲ್ಲಿ ಲೈಬ್ರೇರಿಯನ್ ಆಗಿದ್ದಾಗಲೇ, ಸು. ೧೮೯೨ ರಿಂದ ೧೯೦೨ ರವರೆಗೆ ಮೈಸೂರು ವಿದ್ಯಾಭ್ಯಾಸಇಲಾಖೆಯ ಪಂಡಿತಪರೀಕ್ಷೆ, ದೇಶೀಯ ಪರೀಕ್ಷೆ ಮೊದಲಾದವುಗಳ ಪರೀಕ್ಷಕರಾಗಿ ಕಾರ್ಯ ನಿರ್ವಹಿಸಿದರು. ಶಾಲಾಪರೀಕ್ಷೆಗಳಿಗೆ ಕನ್ನಡ ಪಠ್ಯಪುಸ್ತಕ, ವ್ಯಾಕರಣ, ಉಕ್ತಲೇಖನ, ವಾಕ್ಯರಚನೆ, ಭಾಷಾಂತರ ಇವುಗಳ ಸಂಬಂಧವಾದ ಪ್ರಶ್ನಪತ್ರಿಕೆಗಳನ್ನು ಅವರು ಸಿದ್ಧಪಡಿಸುತ್ತಿದ್ದರು. ವಿದ್ಯಾಇಲಾಖೆಯಲ್ಲಿ ಭಾಷಾಂತರಕಾರರಾಗಿ ನೇಮಕವಾದಮೇಲೆಯೂ ಕೆಲವು ವರ್ಷಗಳು ಅವರು ಪರೀಕ್ಷಕರಾಗಿ ಮುಂದುವರಿದರು. ೧೮೮೭ ರಲ್ಲಿ ಮೈಸೂರಿನಲ್ಲಿ ಸ್ಥಾಪನೆಗೊಂಡ ಕರ್ಣಾಟಕ ಭಾಷೋಜ್ಜೀವಿನೀಪಾಠಶಾಲೆಯು ನಡಸುತ್ತಿದ್ದ ಪಂಡಿತಪರೀಕ್ಷೆಗೆ ೧೮೯೩ರ ಅವಧಿಯಲ್ಲಿ ಎಸ್. ಜಿ. ನ. ಸಹ ಪರೀಕ್ಷಕರಾಗಿದ್ದರೆಂದು ತಿಳಿಯುವುದು. ಇವರೊಂದಿಗೆ ಸಹಪರೀಕ್ಷಕರಾಗಿ ಇದ್ದವರು ಎಂದರೆ, ಪಂಡಿತರತ್ನಂ ಸೀತಾರಾಮಶಾಸ್ತ್ರಿಗಳು, ಅರಮನೆ ವಿದ್ವಾಂಸರಾದ ಜಯರಾಯಾಚಾರ್ಯರು, ಚಾಮರಾಜನಗರದ ರಾಮಶಾಸ್ತ್ರಿಗಳು, ಸದ್ವಿದ್ಯಾಶಾಲಾಧ್ಯಕ್ಷರಾದ ಪೆರಿಸ್ವಾಮಿ ತಿರುಮಲಾಚಾರ್ಯರು, ಆರ್. ನರಸಿಂಹಾಚಾರ್ಯರು, ನಂಜನಗೂಡು ಸುಬ್ಬಾಶಾಸ್ತ್ರಿಗಳು, ಪುಟ್ಟಪರ್ತಿ ಶೇಷಾಚಾರ್ಯರು, ಲಕ್ಷ್ಮೀನರಸಿಂಹ ಶಾಸ್ತ್ರಿಗಳು, ಬಿ. ಮಲ್ಲಪ್ಪನವರು, ವೆಂಕಟರಾಮಾಶಾಸ್ತ್ರಿಗಳು. ಇವರಲ್ಲಿ ಎಲ್ಲರೂ ಬಹುಮಟ್ಟಿಗೆ ವಿದ್ವಾಂಸರಾದ ಗ್ರಂಥಕರ್ತೃಗಳು. ತಮ್ಮ ಕಾಲದಲ್ಲಿ ಮಾತ್ರವಲ್ಲದೆ ಈಗಲೂ ಬೇರೆಬೇರೆ ಕಾರಣಗಳಿಗಾಗಿ ನೆನೆಯತಕ್ಕ ಖ್ಯಾತವ್ಯಕ್ತಿಗಳು. ಇವರೆಲ್ಲ ಎಸ್. ಜಿ. ನ. ಅವರಿಗೆ ಪರಿಚಿತರಾಗಿದ್ದರು ಎಂಬುದು ಪ್ರಸ್ತುತಕ್ಕೆ ಗಮನಿಸಬೇಕಾದ ಸಂಗತಿ.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಕನ್ನಡದ ಅಭಿವೃದ್ಧಿಕಾರ್ಯದಲ್ಲಿ

ಎಸ್. ಜಿ. ನ. ಅವರು ಸಕ್ರಿಯವಾಗಿ ಪಾಲುಗೊಳ್ಳುತ್ತಿದ್ದರೆಂಬುದಕ್ಕೆ ದಾಖಲೆಗಳಿವೆ. ಆ ಸಂಸ್ಥೆ ಪ್ರತಿವರ್ಷ ನಡೆಸುತ್ತಿದ್ದ ವಾರ್ಷಿಕ ಬಹುಮಾನದ ಪರೀಕ್ಷೆಯಲ್ಲಿ ಪರೀಕ್ಷಕರಾಗಿ ಎಸ್. ಜಿ. ನ. ಬಲುಮಟ್ಟಿಗೆ ತಪ್ಪದೆ ಹೋಗಿ ಬರುತ್ತಿದ್ದರು. ಹೀಗೆ ಹೋಗಿ ಬರಲು ಸರ್ಕಾರ ಅವರಿಗೆ ಅನುಮತಿ ನೀಡುತ್ತಿದ್ದಿತು. ಇಂತಹ 'ಇನಾಮಿನ ಪರೀಕ್ಷೆ' ಗೆ ೧೯೦೦ ಮೇ ೨೫ರಿಂದ ಎರಡು ದಿನಗಳ ಕಾಲ, ಓರಿಯೆಂಟಲ್ ಲೈಬ್ರೆರಿಯ ಲೈಬ್ರೇರಿಯನ್ ಆಗಿದ್ದ ಎಸ್ ಜಿ. ನ. ಹೊರಟಾಗ, ಅವರಿಗೆ ಪ್ರಯಾಣಭತ್ಯವನ್ನೂ, ಅವರೊಂದಿಗೆ ಹೊರಟ ಇನ್ನೊಬ್ಬ ಪಂಡಿತರಿಗೆ ೧೫ ರೂ. ಗಳನ್ನೂ ಸರ್ಕಾರ ಮಂಜೂರು ಮಾಡಿತ್ತು. ಜೂನ್ ೧೯೦೦ ರ 'ವಿದ್ಯಾದಾಯಿನಿ' ಯಲ್ಲಿ ವರದಿಯಾಗಿರುವ ಪ್ರಕಾರ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವದ ಸಮಯದಲ್ಲಿ ನಡೆದ ಆ ಕನ್ನಡ ಪರೀಕ್ಷೆಯಲ್ಲಿ ''ಪರೀಕ್ಷ್ಯರುಗಳ ಯೋಗ್ಯತೆಯನ್ನು ನಿರ್ಣಯಿಸುವುದಕ್ಕಾಗಿ'' ಹಾಗೆ ಎಸ್. ಜಿ. ನ. ಅವರು ಹೋಗಿದ್ದಾಗ, ಕನ್ನಡದ ಅಭಿವೃದ್ಧಿಯನ್ನು ಕುರಿತು "ಅತ್ಯಂತೋತ್ತೇಜಕವಾದ ಮತ್ತು ಪ್ರೌಢವಾದ ಒಂದು ಭಾಷಣವನ್ನು ಮಾಡಿ ಸಭಿಕರನ್ನು ಮೆಚ್ಚಿಸಿದರು" ಎಂಬುದಾಗಿ ಸಹ ತಿಳಿಯುವುದು. ೧೯೦೨ ರಲ್ಲಿ ಒಮ್ಮೆ ಹಾಗೆ ಹೋಗಿ ಬಂದುದನ್ನು 'ಸುವಾಸಿನಿ' ಪತ್ರಿಕೆ ವರದಿ ಮಾಡಿದೆ. ೨೩-೫-೧೯೦೩ ರ ಇನ್ನೊಂದು ಭೇಟಿಯನ್ನು ಸರ್ಕಾರದ ವಿದ್ಯಾ ಇಲಾಖೆಯ ವಾರ್ಷಿಕ ವರದಿಯಲ್ಲಿ ಗುರುತಿಸಿದೆ. ೧೯೦೧ರಲ್ಲಿ ಎಸ್. ಜಿ. ನ. ಅವರ ಜೊತೆಯಲ್ಲಿ ತೆರಳಿದ್ದ ಪಂಡಿತ ಪಿ. ರಾಘವಾಚಾರ್ಯರು ಈ ಭೇಟಿಯ ಸಮಯದಲ್ಲಿಯೂ ಎಸ್. ಜಿ. ನ. ಅವರ ಜೊತೆಗಿದ್ದರು. ಇಂತಹ ಪ್ರವಾಸಗಳಿಂದ ಎಸ್.ಜಿ. ನ. ಉತ್ತರ ಕರ್ನಾಟಕದ ಕಡೆಯ ಕನ್ನಡ ಧುರೀಣರಿಗೆ ಕೂಡ ಚೆನ್ನಾಗಿ ಪರಿಚಿತರಾಗಿದ್ದರೆನ್ನಬೇಕು. ಆಲೂರ ವೆಂಕಟರಾಯರ ಪ್ರಯತ್ನದ ಫಲವಾಗಿ ೧೯೦೭ ರಲ್ಲಿ ಧಾರವಾಡದಲ್ಲಿ ನೆರೆದ ಕರ್ಣಾಟಕ ಗ್ರಂಥಕಾರರ ಪ್ರಥಮ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದುದು, ಅವರು ಕವಿಗಳೂ ವಿದ್ವಾಂಸರೂ ಆಗಿ, ವಾಗ್ಮಿಗಳೂ ಉತ್ಕಟ ಭಾಷಾಭಿಮಾನಿಗಳೂ ಆಗಿ ಖ್ಯಾತರಾಗಿದ್ದುದರ ಫಲವೇ ಎಂದು ಹೇಳಬಹುದು. ಆಗ್ಗೆ ಮೈಸೂರು ಸಂಸ್ಥಾನದಿಂದ ಧಾರವಾಡಕ್ಕೆ ತೆರಳಿದ್ದ ಪಂಡಿತರಲ್ಲಿ ಮಾಗಡಿಯ ಕೆ. ರಾಮಸ್ವಾಮಯ್ಯಂಗಾರ್ಯರು, ಕ್ಲೋಸ್‌ಪೇಟೆಯ ಆರ್. ಶ್ರೀನಿವಾಸರಾಯರು ಮುಖ್ಯರು. ಇವರು ಪ್ರಬಂಧಗಳನ್ನು ಬರೆದು ತಂದಿದ್ದರು. ಕೆರೋಡಿ ಸುಬ್ಬರಾಯರು ಉಡುಪಿಯಿಂದಲೂ, ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಮೈಸೂರಿನಿಂದಲೂ, ಎಚ್. ವೆಂಕಟರಾಯರು ಹೊನ್ನಾಡಿಕೆಯಿಂದಲೂ ಪ್ರಬಂಧಗಳನ್ನು ಬರೆದು ಕಳುಹಿದ್ದರು. ಈ ಸಂದರ್ಭದಲ್ಲಿಯೇ ಕನ್ನಡ ಬರೆವಣಿಗೆಯ ಸಂಬಂಧದಲ್ಲಿ ನಿರ್ಣಯ ಕೈಕೊಂಡು, ಅದನ್ನು ನೆರವೇರಿಸುವುದಕ್ಕೆ ಒಂದು ಉಪಸಭೆ ವ್ಯವಸ್ಥಿತವಾಯಿತು. ಈ ಉಪಸಭೆಯಲ್ಲಿ ಶ್ರೀಯುತರಾದ ಎಸ್. ಜಿ. ನರಸಿಂಹಾಚಾರ್ಯ, ನಾರಾಯಣರಾವ್ ಕರಿಗುಂದರಿ, ವಿನಾಯಕರಾವ್ ಜೋಶಿ, ರಾಮಚಂದ್ರರಾವ್ ದೇಶಪಾಂಡೆ, ಕೆ. ರಾಮಸ್ವಾಮಿ ಅಯ್ಯಂಗಾರ್, ಗದಿಗೆಯ್ಯ ಹುಚ್ಚಯ್ಯ ಹೊನ್ನಾಪೂರಮಠ, ರಾಮರಾವ್ ನರಗುಂದಕರ ಇವರು ಸದಸ್ಯರಾಗಿದ್ದರು ಎಂದು ಕರ್ನಾಟಕ ವಿದ್ಯಾವರ್ಧಕ

ಸಂಘದ ೫೦ ವರ್ಷಗಳ ವರದಿಯಲ್ಲಿ (ಪು. ೧೯) ಪ್ರಕಟವಾಗಿದೆಯೆಂದು ತಿಳಿಯುವುದು (೧೯೪೧).

೩

ಎಸ್. ಜಿ. ನರಸಿಂಹಾಚಾರ್ಯರ ಭಾಷಾಸಾಹಿತ್ಯ ಸೇವೆಯನ್ನು ಎಲ್ಲ ಮುಖಗಳಲ್ಲಿಯೂ ವಿವರ ವಿಶದವಾಗಿ ವಿವೇಚಿಸಲು ಇಲ್ಲಿ ಅವಕಾಶವಿಲ್ಲ. ಅವರು ಕೈಕೊಂಡ ಸಾಹಿತ್ಯಕೃಷಿಯನ್ನು ಗ್ರಂಥ ಸಂಪಾದನೆ, ಕಾವ್ಯ ಹಾಗೂ ಗದ್ಯಗ್ರಂಥಗಳ ಭಾಷಾಂತರ ಸಾಮಾನ್ಯ ಓದುಗರಿಗಾಗಿಯೂ ವಿದ್ಯಾಭ್ಯಾಸ ಇಲಾಖೆಗಾಗಿಯೂ ರಚಿಸಿದ ಕವಿತೆ, ಪಾಠ ಮೊದಲಾದವು, ಇತರ ಗದ್ಯಪದ್ಯ ಬರೆಹಗಳು ಮತ್ತು ಭಾಷಣಗಳು ಎಂಬ ವಿಭಾಗಗಳಲ್ಲಿ ಗುರುತಿಸಬಹುದಾಗಿದೆ.

೧. ಗ್ರಂಥ ಸಂಪಾದನೆ : ಗ್ರಂಥ ಸಂಪಾದನೆಯ ಕ್ಷೇತ್ರದಲ್ಲಿ ಎಸ್. ಜಿ. ನರಸಿಂಹಾಚಾರ್ಯರ ಕಾರ್ಯ ವಿಶೇಷವಾಗಿ ಉಲ್ಲೇಖಿಸತಕ್ಕುದಾಗಿದೆ. ಆ ಕಾರ್ಯ ಗುಣ ಗಾತ್ರಗಳಲ್ಲಿಯೂ ಅವಿಸ್ಮರಣೀಯವಾದುದು. ಈ ಸಂಬಂಧದಲ್ಲಿ ಮುಂದೆ ಕೆಲವು ವಿವರಗಳನ್ನು ಪ್ರಸ್ತಾವಿಸಬಹುದು.

ನವೋದಯವೆಂಬ ಭಾಷೋಜ್ಜೀವನದ ಹೊಂಬೆಳಗು ಮೂಡಿ, ಹೊಸಗನ್ನಡದ ದಿಗಂತ ಚಿನ್ನದ ನೀರಿನಲ್ಲಿ ತೊಯ್ಯುವಂತೆ ಮಾಡಿದ ಕಾಲ, ೧೮೫೦-೧೯೫೦ರ ನಡುವಣ ಪೂರ್ವಕಾಲ. ಈ ಕಾಲದಲ್ಲಿ ನಮ್ಮ ನಾಡುನುಡಿಗಳ ಮೇಲ್ಮೆಗೆಂದು ಶ್ರಮಿಸಿದ ಪುಣ್ಯಪುರುಷರಲ್ಲಿ ಎಸ್. ಜಿ. ನರಸಿಂಹಾಚಾರ್-ಎಂ. ಎ. ರಾಮಾನುಜಯ್ಯಂಗಾರ್ ಒಂದು ಖ್ಯಾತಿಯ ಜೋಡಿ. ಇಬ್ಬರೂ ತಮಿಳು ಮನೆತನದ ಶ್ರೀವೈಷ್ಣವ ಪಂಥೀಯರು; ಒಂದೇ ಜಿಲ್ಲೆಯ ಸಾಹಿತಿಗಳು. ಹುಟ್ಟಿದ ವರ್ಷವೂ ಒಂದೇ—೧೮೬೨. ಇಬ್ಬರ ವಿದ್ಯಾಭ್ಯಾಸವೂ ಅವರ ಹುಟ್ಟುಜಿಲ್ಲೆಯಲ್ಲಿ ಹಾಗೂ ಮೈಸೂರು ನಗರದಲ್ಲಿ. ಇಬ್ಬರಿಗೂ ಸಂಸ್ಕೃತ ಕಲಿಸಿದವರು ಒಬ್ಬರೇ ಗುರುಗಳು; ಅವರು ಸದ್ವಿದ್ಯಾಶಾಲೆಯ ಸ್ಥಾಪಕರೂ ತಮ್ಮ ಕಾಲದ ಹಿರಿಯ ವಿದ್ವಾಂಸರೂ ಆಗಿದ್ದ ಪೆರಿಯಸ್ವಾಮಿ ತಿರುಮಲಾಚಾರ್ಯರು. ಇಷ್ಟು ಮಾತ್ರವಲ್ಲದೆ ಇಬ್ಬರೂ ಹಿಂದಿನ ಮೈಸೂರು ಸರ್ಕಾರದ ವಿದ್ಯಾ ಇಲಾಖೆಯಲ್ಲಿಯೂ ಅದರ ಶಾಖೆಯಾದ ಭಾಷಾಂತರ ಇಲಾಖೆಯಲ್ಲಿಯೂ ಕೆಲಸಮಾಡಿದವರು ; ಅಂದಿನ ಶಿಕ್ಷಣ ಸಂಪ್ರದಾಯಕ್ಕೆ ಅನುಗುಣವಾಗಿ ಸಂಸ್ಕೃತ ಕನ್ನಡಗಳಲ್ಲಿಯೂ ಇಂಗ್ಲಿಷ್ ಭಾಷೆಯಲ್ಲಿಯೂ ಸಮದಂಡಿಯಾದ ಪರಿಚಯ ಪ್ರಭುತ್ವಗಳನ್ನು ಸಂಪಾದಿಸಿ ಒಟ್ಟಿಗೆ ಸಾಹಿತ್ಯ ಕೃಷಿಗೆ ತೊಡಗಿದವರು. ಈ ಉಭಯರ ಸ್ನೇಹ ಸಾಹಚರ್ಯಗಳು ಹೆಚ್ಚು ನಿಕಟವಾಗಲು, ಇವಕ್ಕಿಂತ ಹೆಚ್ಚಿನ ಸಾಮ್ಯಗಳು ಇನ್ನೇನು ಬೇಕು ? ಎಫ್. ಕಿಟ್ಟೆಲ್, ಬಿ.ಎಲ್. ರೈಸ್‌ಅವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಹಿಡಿದು ಗ್ರಂಥಸಂಪಾದನೆಯ ಕ್ಷೇತ್ರದಲ್ಲಿ ಮುನ್ನಡೆದ ಈ ಧುರೀಣರು ಪ್ರಾಚೀನ ಕನ್ನಡ ಸಾಹಿತ್ಯದ ಸಂರಕ್ಷಣೆ ಪ್ರಕಟನೆಗಳ ಸಲುವಾಗಿ ಮಾಡಿರುವ ಕೆಲಸ ಅನನ್ಯವಾದುದು, ಅದ್ಭುತವಾದುದು. "ಕನ್ನಡ ಗ್ರಂಥ ಸಂಪಾ

ದನೆಯ ಚರಿತ್ರೆಯಲ್ಲಿ ಮಾಸದ ಪ್ರಕಾಶದಿಂದ ತೊಳಗುತ್ತಿರುವ ಎರಡು ಪ್ರಥಮವರ್ಗದ ತಾರೆಗಳು ಎಂದರೆ ಎಸ್. ಜಿ. ನರಸಿಂಹಾಚಾರ್ಯರು ಮತ್ತು ಎಂ. ಎ. ರಾಮಾನುಜಯ್ಯಂಗಾರ್ಯರು....ಇಂಗ್ಲಿಷಿಗೇ ಪ್ರಶಸ್ತಿ ಇದ್ದ ಆ ಕಾಲದಲ್ಲಿ ಸರ್ಕಾರದ ಪ್ರೋತ್ಸಾಹವಾಗಲಿ ಸಾರ್ವಜನಿಕರ ಉತ್ಸಾಹವಾಗಲಿ ಸಾಕಷ್ಟಿಲ್ಲದಿದ್ದಾಗ ಈ ಇಬ್ಬರು ಮಹಾವಿದ್ವಾಂಸರು ಮಾಡಿದ ಕೆಲಸದ ಮಹತ್ವವನ್ನು ಈಚಿನವರಾದ ನಾವು ಮನಗಾಣಬಹುದಾಗಿದೆ. ಇವರ ಕಾವ್ಯಲಾಲಸೆಯಲ್ಲಿ, ಭಾಷಾಪ್ರೇಮದಲ್ಲಿ ಸ್ವಲ್ಪ ಭಾಗವನ್ನಾದರೂ ನಾವು ಗಳಿಸಿಕೊಂಡರೆ ಕೃತಾರ್ಥರಾಗಬಹುದು" ಎಂಬುದಾಗಿ ಡಿ. ಎಲ್. ನರಸಿಂಹಾಚಾರ್ಯರು ಮೆಚ್ಚುನುಡಿಯಾಡಿರುವುದರಲ್ಲಿ ಅತಿಶಯೋಕ್ತಿಯೇನಿಲ್ಲ.

ಸು. ೧೮೯೦ರಲ್ಲಿ ಪಂಡಿತರಾದ ಆಸೂರಿ ಆನಂದಾಳ್ವಾರರೂ ಕೊಮಾರಸ್ವಾಮಿ ತಿರುಮಲಾಚಾರ್ಯರೂ 'ಆರ್ಯಮತ ಸಂಜೀವಿನಿ' ಎಂಬ ಪತ್ರಿಕೆಯನ್ನು ಮೈಸೂರಿನಿಂದ ಹೊರಡಿಸುತ್ತಿದ್ದರು. ರಾಮಾನುಜಯ್ಯಂಗಾರ್ಯರು ಎಸ್. ಜಿ. ನರಸಿಂಹಾಚಾರ್ಯರ ನೆರವನ್ನು ಪಡೆದು, ಆ ಪತ್ರಿಕೆಯಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಲು ಅವಕಾಶ ಮಾಡಿಕೊಂಡರು. ಆದರೆ ಒಂದೆರಡು ಗ್ರಂಥಗಳು ಬರುವ ವೇಳೆಗೆ ಪತ್ರಿಕೆ ನಿಂತುಹೋಯಿತು. ಆಗ ಈ ಇಬ್ಬರೂ ಸೇರಿ, ೧೮೯೨ ರಲ್ಲಿ 'ಕರ್ಣಾಟಕ ಕಾವ್ಯಮಂಜರಿ' ಎಂಬ ತಮ್ಮದೇ ಮಾಸಪತ್ರಿಕೆಯನ್ನು ಹುಟ್ಟುಹಾಕಿ, ತಮ್ಮ ಪ್ರಯತ್ನಗಳನ್ನು ಮುನ್ನಡಸಿದರು. ಭಾಷಾಭಿವೃದ್ಧಿಕಾರ್ಯದಲ್ಲಿ ಇದೊಂದು ಪುಣ್ಯಮುಹೂರ್ತ. ಈಗಾಗಲೇ ಗಮನಿಸಿರುವಂತೆ ೧೮೯೧ ರಲ್ಲಿ ಆರಂಭಗೊಂಡ ಮೈಸೂರು ಸರ್ಕಾರದ ಓರಿಯೆಂಟಲ್ ಲೈಬ್ರರಿ ಸಂಸ್ಥೆಯಲ್ಲಿ ರೈಸ್ ಮತ್ತು ಅವರ ಸಿಬ್ಬಂದಿಯವರ ಪ್ರಯತ್ನದಿಂದ ಸಂಗ್ರಹಗೊಂಡಿದ್ದ ಹಸ್ತಪ್ರತಿಗಳ ಭಂಡಾರವೂ ತಾವೇ ಕನ್ನಡ ನಾಡಿನ ನಾನಾ ಭಾಗಗಳಲ್ಲಿ ಸಂಚರಿಸಿ ಕಷ್ಟಪಟ್ಟು ಸಂಗ್ರಹಿಸಿ ತರುತ್ತಿದ್ದ ಹಸ್ತಪ್ರತಿಗಳ ರಾಶಿಯೂ ಅವರು ಸದಾ ಕಾರ್ಯತತ್ಪರರಾಗಿರುವಂತೆ ಮಾಡಿದುವೆನ್ನಬೇಕು.

'ಕರ್ಣಾಟಕ ಕಾವ್ಯಮಂಜರಿ' ಪ್ರಾಚೀನ ಮತ್ತು ಮಧ್ಯಕಾಲೀನ ಸಾಹಿತ್ಯಗ್ರಂಥಗಳನ್ನು ಧಾರಾವಾಹಿಯಾಗಿ ಪ್ರಕಟಿಸಿ, ಪ್ರತ್ಯೇಕವಾಗಿ ಪುಸ್ತಕರೂಪದಲ್ಲಿಯೂ ಅವನ್ನು ಸಿದ್ಧಪಡಿಸಲು ತೊಡಗಿದಾಗ ನರಸಿಂಹಾಚಾರ್ಯರಿಗೂ ರಾಮಾನುಜಯ್ಯಂಗಾರ್ಯರಿಗೂ ಕೈ ತುಂಬ ಕೆಲಸ ಬಿದ್ದಿತೆನ್ನಬೇಕು. 'ಗದಾಯುದ್ಧ', 'ಮಲ್ಲಿನಾಥಪುರಾಣ', 'ಲೀಲಾವತೀ ಪ್ರಬಂಧ','ಕರ್ಣಾಟಕ ಪಂಚತಂತ್ರ', 'ಮಿತ್ರವಿಂದಾ ಗೋವಿಂದ', 'ಜಯನೃಪಕಾವ್ಯ' ಈ ಮುಂತಾದ ಗ್ರಂಥಗಳು ಅಲ್ಪಾವಧಿಯಲ್ಲಿಯೇ ಸಂಪಾದಿತವಾಗಿ ಪ್ರಕಟವಾದುದನ್ನು ಗಮನಿಸಿದರೆ ಈ ಮೋಹನೀಯರ ಕಾರ್ಯಕ್ಷಮತೆಯ ಬಗೆಗೆ ನಮಗೆ ಅಪಾರ ಮೆಚ್ಚುಗೆಯುಂಟಾಗುತ್ತದೆ. ಐದಾರು ವರ್ಷಗಳ ಕಾಲ ಹೀಗೆ ಪತ್ರಿಕೆ ಚೆನ್ನಾಗಿ ನಡೆಯಿತಾದರೂ ಅನಿವಾರ್ಯ ಸಂದರ್ಭಗಳೊದಗಿ, ಅದರ ಪ್ರಕಟನೆ ನಿಂತಿತು. ಆದರೆ ಈ ಸಾಹಿತ್ಯ ಸೇವಕರು ಎದೆಗುಂದಲಿಲ್ಲ. ಒಂದೂವರೆ ವರ್ಷದಿಂದೊಳಗೆ 'ಕರ್ಣಾಟಕ ಕಾವ್ಯಕಲಾನಿಧಿ' ಎಂಬ ಹೊಸಪತ್ರಿಕೆಯನ್ನು ಮತ್ತೆ ಆರಂಭಿಸಿದರು. ಇದು ೧೮೯೯ ರಿಂದ ೧೯೧೬ರ ವರೆಗೆ

ಸಾಗಿತು. ನಡುವೆ ಈ ಪತ್ರಿಕೆಯ ಪ್ರಕಟನೆಯಲ್ಲಿಯೂ ಸ್ವಲ್ಪ ಕ್ಲೇಶವುಂಟಾಗಿದ್ದಂತೆ ತೋರುತ್ತದೆ. ಈಯೆರಡು ಪತ್ರಿಕೆಗಳಲ್ಲಿಯೂ ಬೆಳಕುಕಂಡ ಒಟ್ಟು ಸು. ೭೫ ಗ್ರಂಥಗಳಲ್ಲಿ, ಇಬ್ಬರೂ ಕೂಡಿ ೧೫ ವರ್ಷಗಳ ಅವಧಿಯಲ್ಲಿ ಸಂಪಾದಿಸಿದವು ಪ್ರಾಯಶಃ ೪೦ ರ ಸಂಖ್ಯೆ ಮುಟ್ಟಬಹುದೆಂದು ತೋರುತ್ತದೆ. ಎಸ್. ಜಿ. ನ. ಅವರ ನಿಧನದ ಅನಂತರದಲ್ಲಿ ರಾಮಾನುಜಯ್ಯಂಗಾರ್ ಒಬ್ಬರೇ ಈ ಕಾವ್ಯಮಾಲೆಯನ್ನು ಮುನ್ನಡೆಸಿದರು. ಒಟ್ಟು ಪ್ರಕಟನೆಯಲ್ಲಿ ಗದ್ಯ, ಪದ್ಯ, ಚಂಪು, ನಾಟಕ ಹೀಗೆ ವಿವಿಧ ಸಾಹಿತ್ಯ ಪ್ರಕಾರದ ಕೃತಿಗಳಿವೆ ; ಕಾವ್ಯ, ಶಾಸ್ತ್ರ ಹಾಗೂ ಲಕ್ಷಣ ಗ್ರಂಥಗಳಿವೆ. ಈ ಕಾವ್ಯರಾಶಿಯ ಪ್ರಕಟನೆಯಿಂದ ನಾಡಿನ ಉದಾಸೀನರ ಕಣ್ಣು ತೆರೆಯಿತು. ಆಯ್ದುಕೊಂಡ ಕೃತಿಗಳ ವಿಷಯದಲ್ಲಿ ಯಾವುದೇ ಪಕ್ಷಪಾತವನ್ನು, ಜಾತಿಪಂಥಗಳ ಒಲವರವನ್ನು ಈ ಕಾವ್ಯಮಾಲೆಯ ಪ್ರವರ್ತಕರು ತೋರಿಸಲಿಲ್ಲವೆಂಬುದರಿಂದ, ಇವಕ್ಕೆ ಸಾರ್ವಜನಿಕರ ಮೆಚ್ಚುಗೆ ಸುಲಭವಾಗಿ ಸಿಕ್ಕಿತು ; ಅಲ್ಲದೆ ಸ್ವಲ್ಪಕಾಲ ವರ್ಷಾಶನ ರೂಪದಲ್ಲಿ ಸರ್ಕಾರದ ಸಹಾಯಧನವೂ ಶಾಲೆ ಕಾಲೇಜುಗಳ ಒತ್ತಾಸೆಯೂ ದೊರೆತವು. ಸರ್ಕಾರದ ಧನಸಹಾಯ ದೊರೆಯಲು ಕಾರಣ, ಮು. ಆ. ರಾ. ಅವರ ಸೂಚನೆಯಂತೆ, ಎಸ್. ಜಿ. ನ. ಅವರು ಅಂದಿನ ವಿದ್ಯಾಭ್ಯಾಸ ಇಲಾಖೆಯ ಮುಖ್ಯಸ್ಥರಾಗಿದ್ದ ಭಾಭಾ ಅವರಲ್ಲಿ ಮಾಡಿದ ವಿಜ್ಞಾಪನೆಯೇ ಎನ್ನುವುದು ಎಸ್.ಜಿ. ಗೋವಿಂದರಾಜ ಅಯ್ಯಂಗಾರ್ಯರ 'ಶ್ರೀ ರಾಮಾನುಜಸೂರಿಚರಿತಂ' ಜೀವನ ಚರಿತ್ರದಿಂದ ತಿಳಿಯುತ್ತದೆ.

ಈ ಕಾವ್ಯಮಂಜರಿ ಕಾವ್ಯಕಲಾನಿಧಿಗಳ ಪ್ರಕಟನೆಗಳಿಗೆ ಎಸ್. ಜಿ. ನರಸಿಂಹಾಚಾರ್ಯ, ಎಂ.ಎ. ರಾಮಾನುಜಯ್ಯಂಗಾರ್ಯ ಇವರು ಸಂಪಾದಕದ್ವಯರು. ಈ ಇಬ್ಬರಲ್ಲಿ ಎಸ್. ಜಿ. ನ. ಅವರ ಕಾರ್ಯಭಾಗವೇನು, ಎಷ್ಟು ಎಂಬುದು ತಿಳಿಯುವುದಿಲ್ಲ. ಸಾಧ್ಯವಿದ್ದ ಮಟ್ಟಿಗೆ ಪರಿಷ್ಕಾರವಾದ ಸಂಪಾದನವಿಧಾನಗಳನ್ನು ಅನ್ವಯಿಸಿ ಗ್ರಂಥಸಂಪಾದನೆ ಮಾಡುವಲ್ಲಿಯೂ ಕವಿಕಾವ್ಯವಿಚಾರದ ಪೀಠಿಕೆಗಳನ್ನು ಬರೆಯುವುದರಲ್ಲಿಯೂ ಗ್ರಂಥೋಪಯೋಗಿಯಾದ ಟೀಕೆ ಟಿಪ್ಪಣಿಗಳನ್ನು ಸಿದ್ಧಪಡಿಸುವುದರಲ್ಲಿಯೂ ಅವರ ಪಾತ್ರ ಸಾಕಷ್ಟು ಇದ್ದಿರಬೇಕೆಂದು ತೋರುತ್ತದೆ. ಓರಿಯೆಂಟಲ್ ಲೈಬ್ರರಿಯಲ್ಲಿ ಅವರಿಗೆ ಕ್ರಮವಾಗಿ ದೊರೆಯುತ್ತಿದ್ದ ಗ್ರಂಥಸಂಪಾದನೆಯ ಅನುಭವವೂ 'ಕರ್ಣಾಟಕ ಕವಿಚರಿತೆ'ಯ ರಚನೆಯಲ್ಲಿ ಆರ್. ನರಸಿಂಹಾಚಾರ್ಯರೊಂದಿಗೆ ಅವರು ಪಡೆದ ಪರಿಶ್ರಮವೂ ಹೀಗೆ ತಿಳಿಯಲು ಅವಕಾಶಮಾಡಿಕೊಡುತ್ತದೆ. ಅಲ್ಲದೆ 'ಕಾವ್ಯಮಂಜರಿ'ಯ ಕೆಲವು ಪ್ರಕಟನೆಗಳ ಪೀಠಿಕೆಯ ಭಾಗದಲ್ಲಿ ಆಯಾ ಕೃತಿಯ ಪೀಠಿಕೆಯ ಭಾಗವಾದ ಕವಿಕಾವ್ಯವೃತ್ತಾಂತವು ಎಸ್. ಜಿ. ನರಸಿಂಹಾಚಾರ್ ಮತ್ತು ಆರ್. ನರಸಿಂಹಾಚಾರ್ ಅವರು ಸೇರಿ ಬರೆದ 'ಕವಿಕಥಾಮೃತ ಶರಧಿ' ಎಂಬ ಗ್ರಂಥದಿಂದ (ಮುಂದೆ ಇದೇ ಪರಿಷ್ಕೃತಗೊಂಡು 'ಕರ್ಣಾಟಕ ಕವಿಚರಿತೆ' ಎಂಬ ಹೆಸರಿನಿಂದ ಪ್ರಕಟವಾಯಿತೆಂದು ತೋರುತ್ತದೆ) ಸಂಗ್ರಹಿಸಲ್ಪಟ್ಟಿದೆಯೆಂಬ ಸ್ಪಷ್ಟಸೂಚನೆಯೇ ಇರುವುದನ್ನು ಇಲ್ಲಿ ನೆನೆಯಬಹುದಾಗಿದೆ.

ಹೀಗೆ ಈ ಸಂಪಾದಕದ್ವಯರು ಸು. ೧೫ ವರ್ಷಗಳ ಅವಧಿಯೊಳಗೆ ಸು. ೪೦ ಚಿಕ್ಕವೂ ದೊಡ್ಡವೂ ಆದ ಪ್ರಾಚೀನ ಕನ್ನಡ ಸಾಹಿತ್ಯದ ಪ್ರಶಸ್ತಕೃತಿಗಳನ್ನು, ಮೂಲೆ ಮುಡುಕಿನ ಖಾಸಗಿ ಹಸ್ತಪ್ರತಿಭಂಡಾರಗಳಿಂದ ಪ್ರತಿಗಳನ್ನು ಹುಡುಕಿ ತೆಗೆದು, ಆಧಾರ ಪ್ರತಿಯನ್ನು ವಿಚಕ್ಷಣೆಯಿಂದ ನಿರ್ಣಯಿಸಿ, ಪಾಠಸಂಕಲನ ಮಾಡಿ, ಹೊಸಕಾಲದ ಮುದ್ರಣರೀತಿಗೆ ಅನುಗುಣವಾಗಿ ಕವಿಪಾಠವನ್ನು ಎತ್ತಿ ಬರೆದು, ಆಗಾಗ ಪಾಠಭೇದ ಗಳನ್ನೂ ತೋರಿಸಿ, ಅಷ್ಟಿಷ್ಟು ಕವಿಕಾವ್ಯ ವಿಚಾರವಾದ ಪೀಠಿಕೆ, ಟೀಕೆ ಟಿಪ್ಪಣಿಗಳೊಂದಿಗೆ ಹೊರತರುವುದು ಸಾಧ್ಯವಾಗಿರಬೇಕಾದರೆ, ಅವರು ಹಗಲಿರುಳೂ ಎಡೆಬಿಡದೆ ಶ್ರಮಿಸಿರ ಬೇಕೆಂದು ಹೇಳಬೇಕಾಗುತ್ತದೆ. ಈ ಪ್ರಕಟನೆಗಳಲ್ಲಿ ಭಾಷಾಸಾಹಿತ್ಯಗಳ ಸೇವೆಯನ್ನು ಪ್ರಾಮಾಣಿಕವಾಗಿ ಮಾಡುವ ಕಳಕಳಿ ಕಾಣುತ್ತದೆ. ಸ್ಪರ್ಧೆ ಅಸೂಯೆಗಳಿಗೆ ಅವಕಾಶ ಕೊಡದೆ ಸಂತೋಷದಿಂದ ಒಗ್ಗೂಡಿ ದುಡಿಯುವ ಸ್ನೇಹ ಸಾಮರಸ್ಯದ ಒಂದು ಉದಾರ ದೃಷ್ಟಿ ಕಂಡುಬರುತ್ತದೆ. ದಿಟಕ್ಕೆ ಇವರು ಚಿಕ್ಕದೇವರಾಜ ಒಡೆಯರ ಕಾಲದ ಕವಿ ಯಮಳರಾಗಿದ್ದ ತಿರುಮಲಾರ್ಯ–ಚಿಕುಪಾಧ್ಯಾಯರ ಪುನರವತಾರ ; ಅವರ ದೇಶ ಭಾಷೋಜ್ಜೀವನಕಾರ್ಯ ಕನ್ನಡ ಸೇವೆಯ ಪುನಸ್ಸೃಷ್ಟಿ.

ಗ್ರಂಥ ಸಂಪಾದಕರಾಗಿ ಎಸ್. ಜಿ. ನ. ಅವರ ವೈಯಕ್ತಿಕ ಸಾಧನೆಯೂ ಗಣ್ಯ ವಾದ್ದು. ವಾಸ್ತವವಾಗಿ ಮೈಸೂರು ಓರಿಯೆಂಟಲ್ ಲೈಬ್ರರಿಯಲ್ಲಿ ಕನ್ನಡ ಗ್ರಂಥಮಾಲೆ ಯನ್ನು ಪ್ರಾರಂಭಿಸಿದವರು ಎಸ್. ಜಿ. ನ. ಅವರೇ. ಆ ಮೊದಲೇ ಬಿ. ಎಲ್. ರೈಸ್ ಅವರು ಬಿಬ್ಲಿಯೊಥೆಕಾ ಕರ್ನಾಟಿಕಾ ಗ್ರಂಥಮಾಲೆಯನ್ನು ಆರಂಭಿಸಿ (೧೮೮೪), 'ಕವಿ ರಾಜಮಾರ್ಗ' (೧೮೯೮), 'ಪಂಪಭಾರತ' (೧೮೯೮) ಈ ಕೆಲವು ಪುಸ್ತಕಗಳು ಆ ಮಾಲೆ ಯಲ್ಲಿ ಹೊರಬರುವಂತೆ ಮಾಡಿದ್ದರು. ಪ್ರತ್ಯೇಕವಾಗಿ 'ಪಂಪರಾಮಾಯಣ', 'ಕರ್ಣಾಟಕ ಭಾಷಾಭೂಷಣ', 'ಕರ್ಣಾಟಕ ಶಬ್ದಾನುಶಾಸನ'ಗಳನ್ನು, ತಾವು ವಿದ್ಯಾಧಿಕಾರಿಗಳಾಗಿ ಅಧಿಕಾರದಲ್ಲಿದ್ದಾಗ ಪ್ರಕಟಿಸಿದ್ದರು. ಕಿಟ್ಟೆಲ್ ಅವರು ಮಂಗಳೂರಿನ ಬಾಸೆಲ್ ಸಂಸ್ಥೆಯ ಮೂಲಕ 'ಶಬ್ದಮಣಿದರ್ಪಣ' 'ಛಂದೋಂಬುಧಿ'ಗಳನ್ನು ಪ್ರಕಟಿಸಿದ್ದರು. ಈ ಹಿನ್ನೆಲೆ ಮಾರ್ಗದರ್ಶನಗಳು ಅವರ ಕಣ್ಣೆದುರಿಗಿದ್ದುದು ಸಹಜವೇ. ಓರಿಯೆಂಟಲ್ ಲೈಬ್ರರಿಯ ಕನ್ನಡ ಗ್ರಂಥಮಾಲೆಯ ಮೊದಲನೆಯ ಪ್ರಕಟನೆಯಾಗಿ (೧೯೦೦) ಪಂಪಕವಿಯ 'ಆದಿ ಪುರಾಣ'ವೂ ಎರಡನೆಯ ಪ್ರಕಟನೆಯಾಗಿ (೧೯೦೪) ರುದ್ರಭಟ್ಟನ 'ಜಗನ್ನಾಥ ವಿಜಯ'ವೂ ಎಸ್. ಜಿ. ನರಸಿಂಹಾಚಾರ್ಯರಿಂದ ಸಂಪಾದಿತವಾಗಿ ಹೊರಬಂದುವು. ಈ ಪ್ರಕಟನೆಗಳ ವೇಳೆಗೆ ಕನ್ನಡದ ಕೆಲಸಕ್ಕೆ ಎಂದು ಆ ಸಂಸ್ಥೆಯಲ್ಲಿ ನೇಮಕವಾಗಿದ್ದವರು ಬಹುಶಃ ಎಸ್. ಜಿ. ನ. ಒಬ್ಬರೇ ಎಂದು ತೋರುತ್ತದೆ.

ಪಂಪಕವಿಯ 'ಆದಿಪುರಾಣ'ದ ಸಂಪಾದನೆಗೆ ಮುಖ್ಯವಾಗಿ ಒಂದು ಆಧಾರಪ್ರತಿ ಯನ್ನಿಟ್ಟುಕೊಂಡು ಎಸ್. ಜಿ. ನ. ಸಂಪಾದನಕಾರ್ಯವನ್ನು ನಡಸಿದ್ದರೂ, ಅಶುದ್ಧ ವಾದೆಡೆಗಳಲ್ಲಿ ಇತರ ಹಸ್ತಪ್ರತಿಗಳ ಸಹಾಯ ಪಡೆದು ಅಲ್ಲಲ್ಲಿ ವಿರಳವಾಗಿ ಪಾಠಭೇದ ಗಳನ್ನು ಕಾಣಿಸಿದ್ದಾರೆ. ಇಂಗ್ಲಿಷ್ ಕನ್ನಡಗಳಲ್ಲಿ ಕವಿಕಾವ್ಯವಿಚಾರವೂ ಕೃತಿವಿಮರ್ಶೆಯೂ

ಇರುವ ಹಾಗೆ ಉಪೋದ್ಘಾತವನ್ನು ಬರೆದಿದ್ದಾರೆ. ತೌಲನಿಕವಿಮರ್ಶೆಯ ಆರಂಭದ ಹೆಜ್ಜೆಗುರುತುಗಳನ್ನು ಇಲ್ಲಿ ಕಾಣಬಹುದಾಗಿದೆ. ರೈಸ್ ಅವರು ಪುರಾತತ್ತ್ವ ಇಲಾಖೆಯ ತಮ್ಮ ಸಿಬ್ಬಂದಿಯ ಸಹಕಾರದಿಂದ ಪಂಪಕವಿಯ 'ವಿಕ್ರಮಾರ್ಜುನ ವಿಜಯ' ವನ್ನು ಹೊರತಂದ ಮೇಲೆ ಆ ಕವಿಯ 'ಆದಿಪುರಾಣ'ದ ಪ್ರಕಟನೆ ತ್ವರಿತವಾಗಿ ಆಗಬೇಕಾಗಿದ್ದಿತು. ಆ ಕೆಲಸವನ್ನು ಒಂದೆರಡು ವರ್ಷಗಳೊಳಗೆ ಸಮರ್ಥವಾಗಿ ನಿರ್ವಹಿಸಿ, ಕೈಗೂಡಿಸಿದ ಯಶಸ್ಸು ಎಸ್. ಜಿ. ನ. ಅವರದಾಯಿತು.

ರುದ್ರಭಟ್ಟನ 'ಜಗನ್ನಾಥ ವಿಜಯ' ನಾಲ್ಕು ಹಸ್ತಪ್ರತಿಗಳ ಆಧಾರದಿಂದ ಸಂಪಾದಿತವಾಯಿತು. ಇಲ್ಲಿಯೂ ವಿರಳವಾಗಿ ಪಾಠಭೇದಗಳನ್ನು ಕೊಟ್ಟಿದೆ. ಕವಿಕಾವ್ಯವಿಚಾರ ಕೃತಿವಿಮರ್ಶೆಗಳ ಉಪೋದ್ಘಾತವನ್ನೂ ಬರೆಯಲಾಗಿದೆ. ಕವಿಪಾಠ ಪರಿಷ್ಕಾರವಾಗುವಂತೆ ತೃಪ್ತಿಕರವಾದ ರೀತಿಯಲ್ಲಿ ಸಂಪಾದನೆ ಮುದ್ರಣಗಳು ನಡೆದಿವೆ. ಅಲ್ಲಲ್ಲಿ ಕೆಲವು ಕೊರತೆಗಳು ಉಳಿದಿರಬಹುದಾದರೂ, ಒಟ್ಟಿನಲ್ಲಿ ಎಸ್. ಜಿ. ನ. ಅವರ ಪ್ರತಿಭೆ ಪಾಂಡಿತ್ಯಗಳು ಚೆನ್ನಾಗಿ ಕೆಲಸ ಮಾಡಿವೆಯೆನ್ನಬೇಕು. ಅಲ್ಲದೆ ಈ ಗ್ರಂಥದ ಈಚಿನ ಎಲ್ಲ ಪರಿಷ್ಕರಣಗಳಿಗೂ ಇದೇ ಆಧಾರವಾಯಿತೆಂಬುದನ್ನು ನೆನೆಯಬೇಕು. ಮರುಮುದ್ರಣಗಳಲ್ಲಿ, ಪ್ರಥಮ ಪರಿಷ್ಕರಣಕ್ಕೆ ಎಸ್. ಜಿ. ನ. ಅವರು ಬರೆದ ಉಪೋದ್ಘಾತವನ್ನು ಆವರ್ತಿಸಿಯೂ ಇದೆ.

ಮೇಲಿನ ವಿವೇಚನೆಯನ್ನು ಗಮನಿಸಿದರೆ, ಕನ್ನಡದ ಪ್ರಾಚೀನ ಸಾಹಿತ್ಯದ ಪೋಷಕರೆಂದೂ ಗಣ್ಯರಾದ ಕನ್ನಡ ಗ್ರಂಥಸಂಪಾದಕರೆಂದೂ ಎಸ್. ಜಿ. ನ. ಅವರು ನಮ್ಮ ಭಾಷೆಯ ಸಾಹಿತ್ಯಚರಿತ್ರೆಯಲ್ಲಿ ನಿಸ್ಸಂಶಯವಾಗಿ ಹೆಸರಿಸತಕ್ಕವರು ಎನ್ನುವುದು ವಿದಿತವಾಗುತ್ತದೆ. ಅಕಾಲಮರಣದಿಂದಾಗಿ ಅವರು ಕಣ್ಮರೆಯಾಗದೆ ಇನ್ನೂ ಕೆಲಕಾಲ ನಮ್ಮ ಭಾಷಾ ಸಾಹಿತ್ಯಗಳ ಕ್ಷೇತ್ರಗಳಲ್ಲಿ ಶ್ರಮಿಸುವುದು ಸಾಧ್ಯವಾಗಿದ್ದರೆ ಕನ್ನಡದ ಭಾಗ್ಯ ಇನ್ನೂ ಹೆಚ್ಚುತ್ತಿದ್ದಿತು. ಆರ್. ನರಸಿಂಹಾಚಾರ್ಯರೊಂದಿಗೆ ಸಹಲೇಖಕರಾಗಿದ್ದುಕೊಂಡು 'ಕರ್ಣಾಟಕ ಕವಿಚರಿತೆ'ಯ ಸಂಪುಟಗಳಿಗಾಗಿ ಅವರು ದುಡಿಯುವುದು ಸಾಧ್ಯವಾಗಿದ್ದರೆ ಆ ಗ್ರಂಥದ ಗುಣಮೌಲ್ಯ ಉಪಯುಕ್ತತೆಗಳಿಗೆ ಇನ್ನೂ ಹೆಚ್ಚಿನ ಮೆರುಗು ಬರುತ್ತಿದ್ದಿತು. ಆದರೆ ಆ ಪ್ರಾಪ್ತಿಯಿಂದ ನಾವು ವಂಚಿತರಾದೆವು.

೪

ಎಸ್. ಜಿ. ನರಸಿಂಹಾಚಾರ್ಯರು ಆರ್. ನರಸಿಂಹಾಚಾರ್ಯರ ಬಂಧುಗಳು, ಆಪ್ತರು. ಸಾಹಿತ್ಯಸೇವೆಯಲ್ಲಿ ಪರಸ್ಪರರಿಗೆ ನೆರವಾಗುತ್ತಿದ್ದುದು ಸಹಜವೇ. ಈ ನೆರವಿನ ಭಾಗದಲ್ಲಿ ತುಂಬ ಗಣ್ಯವಾದುದು ಎಂದರೆ 'ಕರ್ಣಾಟಕ ಕವಿಚರಿತೆ'ಯ ರಚನೆಯಲ್ಲಿ ಇಬ್ಬರೂ ಕೈಗಳನ್ನು ಕೂಡಿಸಿದುದು. ಈ ಗ್ರಂಥದ ಮೊದಲನೆಯ ಸಂಪುಟ ಈ ಇಬ್ಬರ ಸಹಕರ್ತೃತ್ವದಲ್ಲಿ ೧೯೦೭ ರಲ್ಲಿ ಪ್ರಕಟವಾಯಿತು. ಅದೇ ವರ್ಷ ಎಸ್. ಜಿ. ನ. ತೀರಿಕೊಂಡರು. ಬಳಿಕ ಆರ್. ನರಸಿಂಹಾಚಾರ್ಯರೊಬ್ಬರೇ ಎರಡನೆಯ ಸಂಪುಟವನ್ನು

೧೯೧೯ರಲ್ಲಿಯೂ ಮೂರನೆಯ ಸಂಪುಟವನ್ನು ೧೯೨೯ರಲ್ಲಿಯೂ ಸಿದ್ಧಮಾಡಿ ಪ್ರಕಟಿಸಿದರು. ೧೯೨೪ ರಲ್ಲಿ ಮೊದಲನೆಯ ಸಂಪುಟದ ಎರಡನೆಯ ಮುದ್ರಣವನ್ನೂ ಪರಿಷ್ಕರಿಸಿ ಹೊರತಂದರು.

ಕವಿಚರಿತೆಯ ಮೊದಲನೆಯ ಸಂಪುಟದ ಸಿದ್ಧತೆಯಲ್ಲಿ ಕಾರ್ಯವಿಧಾನವೇನು, ಕಾರ್ಯಭಾಗವೆಷ್ಟು ಎಂಬುದು ನಮಗೆ ತಿಳಿಯದು. ಆರ್. ನರಸಿಂಹಾಚಾರ್ಯರು ಶಾಸನತಜ್ಞರೂ ಸಂಶೋಧಕರೂ ಆಗಿ ನೈಪುಣ್ಯ ಪಡೆದಿದ್ದುದರಿಂದ ಕವಿಯ ಕಾಲದೇಶ ವೃತ್ತಾಂತಗಳನ್ನು ಅವರು ಬರೆದಿರಬಹುದೆಂದೂ ಎಸ್. ಜಿ. ನ. ಅವರು ರಸಜ್ಞರೂ ಕವಿಗಳೂ ಆಗಿ ಪ್ರಸಿದ್ಧರಾಗಿದ್ದುದರಿಂದ ಕೃತಿವಿಮರ್ಶೆಯ ಭಾಗಗಳನ್ನು ಬರೆದಿರಬಹುದೆಂದೂ ಸಾಮಾನ್ಯವಾದ ಒಂದು ಅಭಿಪ್ರಾಯ ಎಂದಿನಿಂದಲೂ ಕವಿಚರಿತೆಯ ಅಭ್ಯಾಸಿಗಳಲ್ಲಿ ಪ್ರಚಲಿತವಿದೆ. 'ಕರ್ಣಾಟಕ ಕಾವ್ಯಮಂಜರಿ'ಯಲ್ಲಿ ೧೯೦೭ ರ ವೇಳೆಗಾಗಲೇ ಹಲವಾರು ಪ್ರಾಚೀನವೂ ಪ್ರಸಿದ್ಧವೂ ಆದ ಪ್ರಾಚೀನ ಕನ್ನಡ ಸಾಹಿತ್ಯಕೃತಿಗಳು ಪ್ರಕಟವಾಗಿದ್ದು ಇವುಗಳ ಸಂಪಾದನಕಾರ್ಯದಲ್ಲಿ ಎಸ್. ಜಿ. ನ. ಅವರ ಪಾತ್ರವಿದ್ದುದು ವಿದಿತವಾಗಿರುವುದರಿಂದ, ಮೈಸೂರಿನ ಓರಿಯೆಂಟಲ್ ಲೈಬ್ರರಿಯಲ್ಲಿ ಪಂಡಿತರಾಗಿ ಈ ವೇಳೆಗೆ ಎರಡು ಹಳಗನ್ನಡ ಗ್ರಂಥಗಳನ್ನೂ ಸಂಪಾದಿಸಿದ್ದುದರಿಂದ, ಕೆಲಕೆಲವು ಗ್ರಂಥಗಳ ಹಾಗೂ ಅವುಗಳ ಕವಿಗಳ ಬಗೆಗೆ ಕವಿಕಾವ್ಯವಿಚಾರದ ಸಣ್ಣ ಟಿಪ್ಪಣಿಗಳನ್ನು ಬರೆದು, ಉದಾಹರಣ ಪದ್ಯಗಳನ್ನು ಆಯ್ದು, ಮೌಲ್ಯನಿರ್ಣಯದ ವಾಕ್ಯಗಳನ್ನೂ ಸೇರಿಸಿ, ಎಲ್ಲವನ್ನೂ ಒಪ್ಪಿಸಿ ಆರ್. ನರಸಿಂಹಾಚಾರ್ಯರಿಗೆ ಸಹಾಯವಾಗಿರುವುದು ಅಸಂಭವವೇನಲ್ಲ. ಆದರೆ ಈ ವಿಷಯದಲ್ಲಿ ಇದು ಹೀಗೆಯೇ ಸರಿ ಎನ್ನುವಂತಿಲ್ಲ.

ಆರ್. ನರಸಿಂಹಾಚಾರ್ಯರು ಕವಿಚರಿತೆಯ ಮೊದಲನೆಯ ಸಂಪುಟದ ಪರಿಷ್ಕೃತ ಮುದ್ರಣವನ್ನು ಹೊರತಂದಾಗ ಅವರ ಸಹಲೇಖಕರಾದ ಎಸ್. ಜಿ. ನರಸಿಂಹಾಚಾರ್ಯರ ಹೆಸರನ್ನು ಕೈಬಿಟ್ಟುದು ಕೆಲಮಟ್ಟಿಗೆ ಆಕ್ಷೇಪಣೆಗೆ ಎಡೆಮಾಡಿತು. ಇದರಿಂದ ಆರ್. ನ. ಅವರು ಸಹಜವಾಗಿಯೇ ನೊಂದುಕೊಂಡರು. ಈ ಆಕ್ಷೇಪಣೆಗೆ ತಮಗೆ ಉಚಿತವೆಂದು ತೋರಿದ ರೀತಿಯಲ್ಲಿ ಪ್ರತ್ಯುತ್ತರವನ್ನು ಬರೆದು, ಕವಿಚರಿತೆಯ ಮೂರನೆಯ ಸಂಪುಟದ ಅವತರಣಿಕೆಯಲ್ಲಿ ಪ್ರಕಟಿಸಿದರು. ತಮ್ಮ ಮೇಲೆ ಹೊರಿಸಿದ ಆರೋಪಣೆಯನ್ನು ನಿರಾಕರಿಸಿ, ತಿದ್ದಿದ ಮುದ್ರಣದಲ್ಲಿ ಹಲವು ಅಂಶಗಳನ್ನು ಬಿಟ್ಟು, ಹಲವು ಹೊಸ ವಿಷಯಗಳನ್ನು ಸೇರಿಸಿ ವ್ಯತ್ಯಾಸಗಳನ್ನು ಮಾಡಿರುವುದರಿಂದ ಈ ಮಾರ್ಪಾಡುಗಳಿಗೆಲ್ಲಾ ತಾವೊಬ್ಬರೇ ಉತ್ತರವಾದಿಯೆಂಬಂಶವನ್ನು ತಿಳಿಸುವುದಕ್ಕಾಗಿ ಎಸ್. ಜಿ. ಸ. ಅವರ ಹೆಸರನ್ನು ಕೈಬಿಟ್ಟೆದೆಯೆಂದು ಬರೆದು ತಮ್ಮನ್ನು ಸಮರ್ಥಿಸಿಕೊಂಡರು. ಅಷ್ಟೇ ಅಲ್ಲದೆ, ಕವಿಚರಿತೆಯ ಎರಡನೆಯ ಸಂಪುಟದ ಅವತರಣಿಕೆಯಲ್ಲಿ ಅವರ ವಿಷಯದಲ್ಲಿ ಕೃತಜ್ಞತೆಯ ಮಾತುಗಳನ್ನು ಬರೆದು ಅವರ ಸಹಾಯವನ್ನು ನೆನೆದಿರುವ ಸಂಗತಿಯನ್ನೂ ಉಲ್ಲೇಖಿಸಿದರು. ಮೊದಲನೆಯ ಸಂಪುಟವನ್ನು ಬರೆದಾಗ ತಮ್ಮ ನಡುವೆ ಕಾರ್ಯಭಾಗವೇನೂ ಏರ್ಪಟ್ಟಿರಲಿಲ್ಲವೆಂಬುದಾಗಿಯೂ ವಿಮರ್ಶಾತ್ಮಕವಾದ ಕೆಲಸವನ್ನು ಇಬ್ಬರೂ ಮಾಡಿರು

ವುದಾಗಿಯೂ ಈ ಕೆಲಸವಲ್ಲಿ ತಮ್ಮ ಭಾಗವೇ ಹೆಚ್ಚು ಎಂಬುದಾಗಿಯೂ ಹೀಗೆ ಹೇಳುವುದರಿಂದ ಎಸ್. ಜಿ. ನ. ಅವರ ವೈದುಷ್ಯಕ್ಕಾಗಲಿ, ಅವರು ಮಾಡಿದ ಸಹಾಯದ ಮಹತ್ತ್ವಕ್ಕಾಗಲಿ ಎಳ್ಳಷ್ಟೂ ಕೊರತೆಯಿಲ್ಲವೆಂಬುದಾಗಿಯೂ ಸ್ಪಷ್ಟಪಡಿಸಿದರು.

ಆರ್. ನರಸಿಂಹಾಚಾರ್ಯರ ವರ್ತನೆ ಸಮರ್ಥನೆಗಳ ಯುಕ್ತಾಯುಕ್ತತೆಯ ವಿಮರ್ಶೆ ಇಲ್ಲಿಗೆ ಪ್ರಸ್ತುತವಲ್ಲ. ಈ ಪ್ರಕರಣವನ್ನು ಇಲ್ಲಿ ಪ್ರಸ್ತಾಪಿಸಿದುದು ಕವಿಚರಿತೆಯ ಸಿದ್ಧತೆಯಲ್ಲಿ ಈ ಇಬ್ಬರು ವಿದ್ವಾಂಸರೂ ಒಗ್ಗೂಡಿ ದುಡಿಯುತ್ತಿದ್ದುದು ಒಂದು ಸಾರ್ವಜನಿಕ ಆಸಕ್ತಿಯ ವಿಷಯವೂ ಆಗಿದ್ದಿತೆಂಬುದನ್ನು ತೋರಿಸುವುದಕ್ಕಾಗಿ ಮಾತ್ರವೇ.

ಆರ್. ನರಸಿಂಹಾಚಾರ್ಯರು ಕವಿಚರಿತೆಯ ಎರಡನೆಯ ಸಂಪುಟದ ಪ್ರಕಟನೆಯಲ್ಲಿ ಎಸ್. ಜಿ. ನ. ಅವರು ತಮಗೆ ಹಿಂದೆ ಸಹಾಯವಾದ ಸಂದರ್ಭವನ್ನು ಹೀಗೆ ನೆನಪುಮಾಡಿಕೊಂಡಿದ್ದಾರೆ: "...ಪ್ರಥಮ ಸಂಪುಟವನ್ನು ಬರೆದಾಗ ನನಗೆ ವಿಶೇಷ ಸಹಾಯಕರಾಗಿದ್ದ ಮ|| ರಾ|| ಎಸ್. ಜಿ. ನರಸಿಂಹಾಚಾರ್ಯರು ಆ ಪುಸ್ತಕವು ಪ್ರಕಟವಾದ ಕೆಲವು ವರ್ಷಗಳಲ್ಲಿಯೇ ವೈಕುಂಠವಾಸಿಯಾದ ಸಂಗತಿ ಎಲ್ಲರಿಗೂ ವಿದಿತವಾಗಿಯೇ ಇದೆ. ಇವರಿಗಿದ್ದ ಕೂಲಂಕಷವಾದ ಕರ್ಣಾಟಕ ಭಾಷಾಪಾಂಡಿತ್ಯವೂ ಮನೋಹರವಾದ ಕವಿತಾ ಮಾರ್ಗವೂ ಇಂಥ ವೈದುಷ್ಯಕ್ಕೆ ಅಲಂಕಾರವಾದ ವಿನಯಸಂಪತ್ತಿಯೂ ಎಲ್ಲರ ಮನಸ್ಸನ್ನೂ ಆಕರ್ಷಿಸುತ್ತಿದ್ದುವು. ಇವರ ಅಕಾಲಮರಣದಿಂದ ಮೈಸೂರುದೇಶಕ್ಕೆ ಮಾತ್ರವೇ ಅಲ್ಲದೆ ಕನ್ನಡ ನಾಡೆಲ್ಲಕ್ಕೂ ವಿಶೇಷ ನಷ್ಟವುಂಟಾಯಿತೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ನನಗಂತೂ ಇವರ ಮರಣದಿಂದ ಬಲದ ಭುಜವೇ ಹೋದ ಹಾಗಾಯಿತು. ಮುಂದಣ ಕೆಲಸವನ್ನು ನಿರ್ವಹಿಸಬೇಕೆಂಬ ಉತ್ಸಾಹವು ತಗ್ಗಿತು..." ಈ ಮಾತುಗಳು ಆರ್. ನರಸಿಂಹಾಚಾರ್ಯರಿಗೆ ಎಸ್. ಜಿ. ನ. ಅವರ ಬಗೆಗಿದ್ದ ಪ್ರೀತ್ಯಾದರಗಳನ್ನು ಎತ್ತಿ ತೋರುತ್ತವೆಯಲ್ಲದೆ, ಅವರ ಸಲಹೆ ಸಹಾಯಗಳನ್ನು ಇವರು ಯಾವಾಗಲೂ ಅಪೇಕ್ಷಿಸುತ್ತಿದ್ದರೆಂಬುದನ್ನೂ ಸ್ಪಷ್ಟಪಡಿಸುತ್ತವೆ.

ಇಲ್ಲಿ ಒಂದು ಕುತೂಹಲದ ಸಂಗತಿಯನ್ನು ಪ್ರಸ್ತಾಪಿಸಬೇಕು. ಎಸ್. ಜಿ. ನರಸಿಂಹಾಚಾರ್ಯರೂ ಆರ್. ನರಸಿಂಹಾಚಾರ್ಯರೂ ಕೂಡಿ 'ಕವಿಕಥಾಮೃತಶರಧಿ' ಎಂಬ ಗ್ರಂಥವನ್ನು ರಚಿಸಿದ್ದರೆಂದು ಅಭಿಪ್ರಾಯವಾಗುವ ಉಲ್ಲೇಖಗಳು ಕರ್ಣಾಟಕ ಕಾವ್ಯಮಂಜರಿಯ ಕೆಲವು ಪ್ರಕಟನೆಗಳ ಕವಿಕಾವ್ಯವಿಚಾರವಿರುವ ಪೀಠಿಕೆಯ ಭಾಗಗಳಲ್ಲಿ ದೊರೆಯುತ್ತವೆ. ನಿದರ್ಶನಕ್ಕೆ ಹೇಳಬೇಕೆಂದರೆ, ನಾಗಚಂದ್ರನ 'ಮಲ್ಲಿನಾಥ ಪುರಾಣ' ದ (೧೮೯೫) ಪೀಠಿಕೆಯ ಭಾಗದ ಅಡಿಟಿಪ್ಪಣಿಯಲ್ಲಿ "ಈ ಪೀಠಿಕೆಯು ಮ|| ರಾ|| ಎಸ್. ಜಿ ನರಸಿಂಹಾಚಾರ್, ಮ|| ರಾ|| ಆರ್. ನರಸಿಂಹಾಚಾರ್ ಎಂ. ಎ. ಇವರುಗಳಿಂದ ವಿರಚಿತವಾದ 'ಕವಿಕಥಾಮೃತ ಶರಧಿ' ಎಂಬ ಗ್ರಂಥದಿಂದ ಸಂಗ್ರಹಿಸಲ್ಪಟ್ಟಿದೆ."–ಎಂಬುದಾಗಿ ಬರೆದಿದೆ. ಇದೇ ರೀತಿಯ ಉಲ್ಲೇಖಗಳನ್ನು ರನ್ನನ 'ಗದಾಯುದ್ಧ'ದ (೧೮೯೫) ಹಾಗೂ ಮಂಗರಸನ 'ಜಯನೃಪಕಾವ್ಯ'ದ (೧೮೯೭) ಪೀಠಿಕೆಯ ಭಾಗಗಳಲ್ಲಿಯೂ ನೋಡ

ಬಹುದಾಗಿದೆ. ಇಂತಹ ಸೂಚನೆಗಳು ಇನ್ನೂ ಕೆಲವು ಪ್ರಕಟನೆಗಳಲ್ಲಿರಬಹುದು. 'ಕವಿ ಕಥಾಮೃತ ಶರಧಿ' ಪ್ರಕಟವಾಗಿದ್ದಿತೇ, ಹಸ್ತಪ್ರತಿರೂಪದಲ್ಲಿದ್ದಿತೇ? ಪ್ರಕಟವಾಗಿದ್ದುದನ್ನು ಸ್ಥಿರಪಡಿಸುವ ಯಾವ ಸಾಕ್ಷ್ಯವೂ ಇಲ್ಲ. ಇನ್ನು ಈ ಹಸ್ತಪ್ರತಿರೂಪದಲ್ಲಿದ್ದ ರಚನೆ ಪರಿಷ್ಕೃತಗೊಂಡು, ಇದೇ 'ಕರ್ಣಾಟಕ ಕವಿಚರಿತೆ' ಎಂದಾಯಿತೇ ? ಆಗಿರಬೇಕು ಎಂದು ತೋರುತ್ತದೆ. ಏಕೆಂದರೆ,ಹರಿಹರನ 'ಪಂಪಾಶತಕ'ದ (೧೮೯೯) ಪೀಠಿಕೆಯ ಭಾಗದಲ್ಲಿ 'ಕರ್ಣಾಟಕ ಕವಿಚರಿತೆ' ಎಂಬುದಾಗಿಯೇ ಹೆಸರಿರುವುದನ್ನು ಕಾಣಬಹುದು. ಮುಂದೆ ಪ್ರಕಟವಾಗಲಿದ್ದ ತಮ್ಮ ಗ್ರಂಥಕ್ಕೆ ಇದೇ ಹೆಸರು ಸೂಕ್ತವಾದುದು ಎಂದು ಅನಂತರದಲ್ಲಿ ಅವರಿಗೆ ತೋರಿ, ಅವರು ಹಿಂದಿನ ಹೆಸರನ್ನು ಮಾರ್ಪಡಿಸಿರಬೇಕು. ಅಲ್ಲದೆ 'ಕರ್ಣಾಟಕ ಕಾವ್ಯಮಂಜರಿ'ಯ ಪೂರ್ವೋಕ್ತ ಗ್ರಂಥಗಳ ಪೀಠಿಕಾಭಾಗದ ಕವಿಕಾವ್ಯವಿಚಾರಗಳ ಹಾಗೂ ಕವಿಚರಿತೆಯಲ್ಲಿಯ ಅವೇ ಗ್ರಂಥಗಳ ಕವಿಕಾವ್ಯವಿಚಾರಗಳ ನಡುವೆ ಅಂತಹ ಹೋಲಿಕೆಗಳೇನೂ ಕಂಡುಬರುವುದಿಲ್ಲವಾದ್ದರಿಂದ, ಕವಿಚರಿತೆಯ ಟಿಪ್ಪಣಿಗಳಲ್ಲಿಯೂ ಯಥೋಚಿತವಾದ ಮಾರ್ಪಾಡುಗಳು ನಡೆದಿವೆಯೆಂದು ತಿಳಿಯಬಹುದು. ೧೬ ನೆಯ ಶ.ದ ಕವಿ ಮಂಗರಸನ 'ಜಯನೃಪಕಾವ್ಯ'ದ ಪೀಠಿಕೆಯ ಕೊನೆಗೆ "ಈ ಕವಿಚರಿತ್ರವು ಮ|| ರಾ|| ಎಸ್. ಜಿ. ನರಸಿಂಹಾಚಾರ್, ಮ|| ರಾ|| ಆರ್. ನರಸಿಂಹಾಚಾರ್ ಎಂ. ಏ., ಇವರುಗಳಿಂದ ವಿರಚಿತವಾದ 'ಕವಿಕಥಾಮೃತ ಶರಧಿ' ಎಂಬ ಗ್ರಂಥದಿಂದ ಸಂಗ್ರಹಿಸಿದೆ" ಎಂದಿರುವುದನ್ನು ಗಮನಿಸಿದರೆ, ಸು. ೧೯೦೦ರಿಂದೊಳಗೇ 'ಕರ್ಣಾಟಕ ಕವಿಚರಿತೆ'ಯ ರಚನೆಯ ಕೆಲಸ ಸಾಕಷ್ಟುಮಟ್ಟಿಗೆ ನಡೆದಿದ್ದಿತೆಂದೂ, ಅದರಲ್ಲಿ ಯಾವುದೋ ಒಂದು ಪ್ರಮಾಣ, ರೀತಿಗಳಲ್ಲಿ ಎಸ್. ಜಿ. ನರಸಿಂಹಾಚಾರ್ಯರ ಕೈವಾಡವೂ ಅಗೋಚರವಾಗಿ ಸೇರಿಕೊಂಡಿದೆಯೆಂದೂ ಭಾವಿಸಬಹುದಾಗಿದೆ. ಹೀಗೆ ಹೇಳಿಯೂ ಆರ್. ನರಸಿಂಹಾಚಾರ್ಯರ ಕಾರ್ಯಭಾಗದ ಹೆಚ್ಚಳವನ್ನು ನಾವು ಧಾರಾಳವಾಗಿ ಒಪ್ಪಿಕೊಳ್ಳುವಲ್ಲಿ ಸಾಕ್ಷ್ಯಗಳ ಕೊರತೆಯೇನಿಲ್ಲ. ಪುರಾತತ್ತ್ವ ಇಲಾಖೆಯ ಮುಖ್ಯಸ್ಥರಾಗಿ ಕೈಕೊಳ್ಳುತ್ತಿದ್ದ ಸಂಚಾರಗಳಲ್ಲಿ ಅವರು ವಿಪುಲವಾಗಿ ಗ್ರಂಥಗಳನ್ನೂ ಸಂಗ್ರಹಿಸಿದ್ದಾರೆ, ಸಂಸ್ಥೆಗಾಗಿ ಪ್ರತಿಮಾಡಿಸಿದ್ದಾರೆ. ತಮ್ಮ ಉದ್ದೇಶಿತಗ್ರಂಥಕ್ಕಾಗಿ ಸಹಜವಾಗಿಯೇ ಕವಿ ಕಾವ್ಯವಿಚಾರದ ಟಿಪ್ಪಣಿಗಳನ್ನು ಮಾಡಿಕೊಳ್ಳುವುದಕ್ಕೆ ಅವರಿಗೆ ಹೆಚ್ಚಿನ ಅನುಕೂಲಗಳಿದ್ದುವು. ತಮ್ಮ ಸಂಪಾದಿತಕೃತಿಯಾದ 'ಕಾವ್ಯಾವಲೋಕನ'ದ (೧೯೦೨) ಉಪೋದ್ಘಾತದಲ್ಲಿ, ತಾವು ಎಸ್. ಜಿ. ನ. ಅವರ ಜೊತೆಗೂಡಿ ಇಂಗ್ಲಿಷ್ ಬಾರದ ಕನ್ನಡ ಜನಕ್ಕಾಗಿ 'ಕರ್ಣಾಟಕ ಕವಿಚರಿತೆ' ಬರೆಯುತ್ತಿರುವ ವಿಚಾರವನ್ನು ತಿಳಿಸಿರುವರಲ್ಲದೆ, ತಮಗೆ 'ಕರ್ಣಾಟಕಭಾಷಾಭೂಷಣ'ದ ಪ್ರಾಚೀನ ವ್ಯಾಖ್ಯಾನವಿರುವ ಎರಡು ಹಸ್ತಪ್ರತಿಗಳಲ್ಲಿ ಒಂದು ಅವರ ಮೂಲಕವಾಗಿಯೇ ದೊರೆಯಿತೆಂಬುದನ್ನೂ ನೆನೆದಿದ್ದಾರೆ.

ಎಸ್. ಜಿ. ನರಸಿಂಹಾಚಾರ್ಯರು ಸಹಕರ್ತೃಗಳಾಗಿ ರಚಿಸಿದ, ಸಂಪಾದಿಸಿದ ಕೆಲವು ಗದ್ಯಗ್ರಂಥಗಳ, ಗದ್ಯಪದ್ಯಸಂಕಲನಗಳ ವಿಚಾರವನ್ನೀಗ ಸ್ವಲ್ಪ ಪರಿಶೀಲಿಸಬಹುದು:

೧. 'ಮಹಾಭಾರತದ ಕಥಾಪ್ರಸಂಗ (ಸಭಾಪರ್ವ)' : ಇದು ಎಸ್. ಜಿ. ನ.

ಅವರು ಮಂ. ಆ. ರಾಮಾನುಜಯ್ಯಂಗಾರ್ಯರೊಡಗೂಡಿ ರಚಿಸಿದ ಗ್ರಂಥ. ಮೂಲ ಭಾರತದ ಸಭಾಪರ್ವದ ಕಥೆಯನ್ನು ಸರಳವೂ ಸಂಕ್ಷಿಪ್ತವೂ ಆಗಿ ಸಾಮಾನ್ಯ ಓದುಗರೂ ಮಕ್ಕಳೂ ತಿಳಿಯುವಂತೆ ೧೦ ಅಧ್ಯಾಯಗಳಲ್ಲಿ ಇಲ್ಲಿ ನಿರೂಪಿಸಲಾಗಿದೆ. ಈ ಗ್ರಂಥದ ದ್ವಿತೀಯ ಮುದ್ರಣ ೧೮೯೨ ರಲ್ಲಿ ಆಯಿತು ; ೨೦೦೦ ಪ್ರತಿಗಳನ್ನು ಮುದ್ರಿಸಲಾಯಿತು.

೨. 'ಕನ್ನಡ ನಾಲ್ಕನೆಯ ಪುಸ್ತಕವು' : ಇದು "ಇ. ಮಾರ್ಸ್‌ಡೆನ್, ಬಿ. ಎ., ಶಾಲಾಇನ್‌ಸ್ಪೆಕ್ಟರ್, ಸೆಂಟ್ರಲ್ ಸರ್ಕಲ್ ಮತ್ತು ಎಸ್. ಜಿ. ನರಸಿಂಹಾಚಾರ್ಯ, ಲೈಬ್ರೇರಿಯನ್, ಗವರ್ನ್‌ಮೆಂಟ್ ಓರಿಯಂಟಲ್ ಲೈಬ್ರೇರಿ, ಮೈಸೂರು ಇವರಿಂದ ರಚಿತವಾದ್ದು." ಪ್ರಸಿದ್ಧ ಮೆಕ್‌ಮಿಲನ್ ಕಂಪೆನಿಗಾಗಿ, ಮಂಗಳೂರಿನ ಬೇಸಲ್ ಮಿಷನ್ ಪ್ರೆಸ್ಸಿನಲ್ಲಿ ಬೆಲೆಬಾಳುವ ಕಾಗದದ ಮೇಲೆ ಅತಿಶಯ ಸುಂದರವಾಗಿ ಮುದ್ರಿತವಾಗಿ ೧೮೯೭ರಲ್ಲಿ ಪ್ರಕಟವಾದ ಈ ಪಠ್ಯಗ್ರಂಥಗಳಲ್ಲಿ ೪೬ ಗದ್ಯಪಾಠಗಳೂ ೧೧ ಪದ್ಯಪಾಠಗಳೂ ಇವೆ. ಈ ಗಟ್ಟಿ ಪಠ್ಯಪುಸ್ತಕವನ್ನು ಆ ಕಾಲಕ್ಕೆ ಓದಿದ ವಿದ್ಯಾರ್ಥಿಗಳೇ ಭಾಗ್ಯಶಾಲಿಗಳೆನ್ನಬೇಕು. ಗದ್ಯಪಾಠಗಳಲ್ಲಿ ಸಿಂಹವು, ತೆಂಗು, ಹುಲಿ, ತೋಳನೂ ಕೊಕ್ಕರೆಯೂ, ಸಿಂಹವೂ ಇಲಿಯೂ ಮೊದಲ್ಗೊಂಡು ಪಾಠಗಳು; ಭಗವತ್ಪ್ರಾರ್ಥನೆ, ಸುಗುಣವೇ ಭೂಷಣ, ವಿದ್ಯೆಯ ಮೇಲ್ಮೆ, ನೀತಿ, ಸಾಯಂಕಾಲ ವರ್ಣನೆ ಇವು ಮೊದಲ್ಗೊಂಡು ಪದ್ಯಪಾಠಗಳು. ಸರಳವೂ ಸರಸವೂ ಆದ ಗದ್ಯಪಾಠಗಳ ಭಾಷಾಶೈಲಿಗಳನ್ನು ಗಮನಿಸಿದರೆ, ಎಸ್. ಜಿ. ನ. ಸ್ವತಃ ಇವನ್ನು ಬರೆದವಾಗಿರಬೇಕು ಎನಿಸುತ್ತದೆ. ಪದ್ಯಗಳು ಬಲುಮಟ್ಟಿಗೆ ಹಳೆಯ ಸಾಹಿತ್ಯದಿಂದ ಎತ್ತಿದವು ; ಆದರೂ ಸುಗುಣವೇ ಭೂಷಣ, ನೀತಿಯ ಕೆಲವು ಪದ್ಯಗಳು ಎಸ್. ಜಿ. ನ. ಸ್ವತಃ ಕಟ್ಟಿದವಾಗಿರಬಹುದು. ಹಾಗೆಂದು ಅವನ್ನು ಈ ಸಂಕಲನ ಗ್ರಂಥದಲ್ಲಿ ಸೇರಿಸಲು ಧೈರ್ಯಮಾಡಿಲ್ಲ.

ಎಸ್. ಜಿ. ನ. 'ಕನ್ನಡ ನಾಲ್ಕನೆಯ ಪುಸ್ತಕದ ಹಸ್ತಕ'ವನ್ನೂ (A Companion to the Canarese Fourth Reader) ಬರೆದಿದ್ದರೆಂದು (೧೯೦೮) ಶ್ರೀನಿವಾಸ ಹಾವನೂರ ಅವರ ಮಾಹಿತಿಸಂಗ್ರಹದಿಂದ ತಿಳಿಯುವುದು.

೩. 'ಕನ್ನಡ ಆರನೆಯ ಪುಸ್ತಕವು' : ಇ. ಮಾರ್ಸ್‌ಡೆನ್ ಜೊತೆಗೆ ಸೇರಿ ಸಂಕಲಿಸಿರುವ ಈ ಪಠ್ಯಪುಸ್ತಕ ಸಹ (೧೯೦೨) ಮೆಕ್‌ಮಿಲನ್ ಕಂಪೆನಿಯ ಪ್ರಕಟನೆಯೇ. ಇಲ್ಲಿ ೧೧೫ ಪುಟಗಳಲ್ಲಿ ಪದ್ಯಗದ್ಯಗಳು ಸಂಕಲಿತಗೊಂಡಿವೆ('ಕನ್ನಡ ಗ್ರಂಥಸೂಚಿ' ಸಂ. ೬, ಪು. ೨೪೧ ; ಎಸ್. ಶಿವಣ್ಣ, 'ಕವಿಚರಿತೆಯ ಅನುಕ್ತ ಕೃತಿಸೂಚಿ', ಪು. ೧೪).

೪. 'ಹಿಂದೂ ದೇಶದ ನಾಗರಿಕ ತಾತ್ಪರ್ಯ ಸಹಿತವಾದ ಟಿಪ್ಪಣಿ' : ಬಾಪು ಸುಬ್ಬರಾವ್ ಅವರ ಸಹಕರ್ತೃತ್ವದೊಂದಿಗೆ ಎಸ್. ಜಿ. ನ. ರಚಿಸಿದ ಈ ಕೃತಿ ೨ ಭಾಗಗಳಲ್ಲಿದ್ದಂತೆ ತೋರುತ್ತದೆ. '೨ನೆಯ ಭಾಗ ; ೭, ೮ ಮತ್ತು ೯ನೆಯ ಅಧ್ಯಾಯಗಳಿಗೆ ತಾತ್ಪರ್ಯ ಸಹಿತವಾದ ಟಿಪ್ಪಣಿ' (೧೯೦೨) ಜಿ. ಟಿ. ಎ. ಮುದ್ರಣಾಲಯ, ಮೈಸೂರು ಇವರಿಂದ ಮುದ್ರಿತವಾಗಿ ಪ್ರಕಟಗೊಂಡಿದೆ.

೫. 'ಬಾಲಭೂವಿವರಣೆ' : ಇದು ಮೂಲತಃ ಎಸ್. ಜಿ. ನ. ಅವರ ರಚನೆ. ಹಸ್ತಪ್ರತಿಯಲ್ಲಿದ್ದ ಈ ಕೃತಿ ಎಚ್. ಜೆ. ಭಾಭಾ ಅವರ ಮೂಲಕ ತಮ್ಮ ಕೈಗೆ ಬಂದಾಗ, ಬಾಪು ಸುಬ್ಬರಾಯರು ಇದನ್ನು ತಮ್ಮ ಮಿತ್ರರ ಸಹಾಯದಿಂದ ಪರಿಷ್ಕರಿಸಿ, ಸಂಯುಕ್ತ ಕರ್ತೃತ್ವದ ಗ್ರಂಥವಾಗಿ ಪ್ರಕಟಿಸಿದ್ದಾರೆ. ಈ ಗ್ರಂಥದಲ್ಲಿ ಶಾಲಾಮಕ್ಕಳ ಅನುಕೂಲಕ್ಕಾಗಿ ೩೦ ಚಿಕ್ಕಚಿಕ್ಕ ವಿಭಾಗಗಳಲ್ಲಿ, ಸರಳವೂ ಸಂಕ್ಷಿಪ್ತವೂ ಆದ ರೀತಿಯಲ್ಲಿ ಭೂವಿವರಣೆಯ ಪಾಠಗಳನ್ನು ಬರೆಯಲಾಗಿದೆ. ಅಲ್ಲಲ್ಲಿ ಚಿತ್ರ, ನಕ್ಷೆ ಹಾಗೂ ಭೂಪಟಗಳನ್ನೂ ಕೊಟ್ಟಿದೆ. ಈ ಪುಸ್ತಕದ ಮೊದಲನೆಯ ಮುದ್ರಣ ೧೯೧೧ರಲ್ಲಿ ಆಯಿತು ; ಹದಿಮೂರನೆಯ ಮುದ್ರಣ (ಬಹುಶಃ 'ಮೂರನೆಯ ಮುದ್ರಣ' ಎಂಬ ಸೂಚನೆಯಲ್ಲಿ ತಪ್ಪಿರಬೇಕು) ೧೯೨೪ರಲ್ಲಿ ಆಯಿತು ; ಹದಿನಾಲ್ಕನೆಯ ಮುದ್ರಣ ೧೯೨೭ರಲ್ಲಿ ಆದಾಗ ೨೫೦೦೦ ಪ್ರತಿಗಳನ್ನು ಮುದ್ರಿಸಲಾಯಿತು. ಪುಸ್ತಕದಲ್ಲಿ ಬಾಪು ಸುಬ್ಬರಾಯರ ಉಪಯುಕ್ತವಾದ ಪೀಠಿಕೆ ಸೇರಿದ್ದು, ಭೂವಿವರಣೆಯನ್ನು ಮಕ್ಕಳಿಗೆ ಕಲಿಸುವ ಉಪಾಧ್ಯಾಯರು ಅನುಸರಿಸಬೇಕಾದ ಕ್ರಮಗಳನ್ನು ಅಲ್ಲಿ ವಿಶದವಾಗಿ ವಿವರಿಸಿದೆ.

೬. ಈ ಮೇಲಿನವು ಗದ್ಯಗ್ರಂಥಗಳು. ಎಸ್. ಜಿ. ನ. ಅವರು ಕನ್ನಡವನ್ನು ಪ್ರೌಢಶಾಲೆಯ ಮಟ್ಟದಲ್ಲಿ ಕಲಿಯತಕ್ಕವರ ಸಲುವಾಗಿ ವಿದ್ಯಾಭ್ಯಾಸ ಇಲಾಖೆಯ ಪಠ್ಯನಿಯಾಮಕ ಸಮಿತಿಯ ಉಪಸಭೆಯ ಸದಸ್ಯರೊಂದಿಗೆ ಕೂಡಿ ಸಂಕಲಿಸಿದ 'ಪದ್ಯಸಾರ–ಪ್ರಥಮಭಾಗ' (೧೯೦೨; ೧೯೧೮), ಒಂದು ಕಾಲದ ಜನಪ್ರಿಯ ಪದ್ಯಸಂಕಲನ ಗ್ರಂಥವಾಗಿ ಪ್ರಚಾರದಲ್ಲಿದ್ದಿತು. ಈ ಸಂಕಲನದ ಕೊನೆಗೆ ವಿಸ್ತಾರವಾದ ಟಿಪ್ಪಣಿಗಳನ್ನು ಬರೆದಿದ್ದು, ಇವನ್ನು ಸ್ವತಃ ಎಸ್. ಜಿ. ನ. ಅವರೇ ಬರೆದಿದ್ದಾರೆ. ಆದ್ದರಿಂದ ಈ 'ಪದ್ಯಸಾರ' ಅವರ ಹೆಸರಿನಲ್ಲಿಯೇ ಪ್ರಸಿದ್ಧವಾಗಿರುವಂತೆ ತೋರುತ್ತದೆ. ಈ ಸಂಕಲನದಲ್ಲಿ ಕನ್ನಡ ಸಾಹಿತ್ಯದ ನಾನಾ ಕಾಲಘಟ್ಟಗಳಿಗೆ ಸೇರಿದ, ವಿವಿಧ ಛಂದಸ್ಸುಗಳ ೪೦ ಕಾವ್ಯಭಾಗಗಳನ್ನು ಛಂದೋನುಗುಣವಾಗಿ ಸಂಕಲಿಸಿಕೊಟ್ಟಿದೆ.

೬

ಎಸ್. ಜಿ. ನರಸಿಂಹಾಚಾರ್ಯರು ಸ್ವತಂತ್ರವಾಗಿ ರಚಿಸಿದ ಹಾಗೂ ಅನುವಾದಿಸಿದ ಗ್ರಂಥಗಳಲ್ಲಿ ಈಗ ನೋಡಲು ದೊರೆಯುತ್ತಿರುವ ಗ್ರಂಥಗಳಿಗಿಂತ ದೊರೆಯದಿರುವ ಗ್ರಂಥಗಳೇ ಹೆಚ್ಚು. ದೊರೆಯುತ್ತಿರುವ ಕೆಲವು ಎಂದರೆ : ೧. 'ಪ್ರೋಷಿತಪ್ರಿಯಸಮಾಗಮಂ' (೧೮೯೩/೧೯೧೧) ; ೨. 'ದಿಲೀಪ ಚರಿತೆ' (೧೮೯೭) ; ೩. 'ಅಲ್ಲಾವುದ್ದೀನ್ ಮತ್ತು ಅದ್ಭುತದೀಪ' (೧೮೯೯) ; ೪. 'ಅಜನೃಪ ಚರಿತೆ' (೧೯೦೧) ; ೫. 'ಉತ್ತರರಾಮಚರಿತಂ' (೧೯೦೦-೦೧); ೬. 'ಭಾರತವೀರಚರಿತೆ' (೨ನೆಯ ಮುದ್ರಣ ೧೯೨೬ ; ೩ನೆಯ ಮುದ್ರಣ ೧೯೩೬). ದೊರೆಯದಿರುವವು ಎಂದರೆ ೧. 'ಗಲಿವರನ ದೇಶಸಂಚಾರ'; ೨. 'ಈಸೋಪನ ನೀತಿಕಥೆಗಳು'; ೩ 'ಗಯ್ಯಾಳಿಯನ್ನು ಸಾಧುಮಾಡುವಿಕೆ'; ೪. 'ಭಾರವಿ' ; ೫. 'ಮುಕುಂದಮಾಲೆ'.

ಮೊದಲು ಎಸ್. ಜಿ. ನ. ಅವರ ಉಪಲಬ್ಧಗ್ರಂಥಗಳ ವಿಚಾರವನ್ನು ಸ್ವಲ್ಪ ಮಟ್ಟಿಗೆ ನೋಡಬಹುದು :

೧. 'ಪ್ರೋಷಿತ ಪ್ರಿಯಸಮಾಗಮಂ' : ಗೋಲ್ಡ್‌ಸ್ಮಿತ್ ಕವಿಯ The Hermit ಎಂಬ ಕವಿತೆಯ ಕಂದಪದ್ಯರೂಪವಾದ ಅನುವಾದ. ಮೂಲವು ೪೦ ಪದ್ಯಗಳಲ್ಲಿ ಅನುವಾದಿತವಾಗಿದ್ದು, ೪೧ ನೆಯದು ಫಲಶ್ರುತಿ ರೀತಿಯದು. ಈ ಕೃತಿ ಮೊದಲು 'ಕರ್ಣಾಟಕ ಗ್ರಂಥಮಾಲೆ'ಯ ಮೂಲಕ ೧೮೯೩ ರಲ್ಲಿ ಪ್ರಕಟವಾಯಿತು ; ಅನಂತರದಲ್ಲಿ ಮೈಸೂರಿನ ಜಿ. ಟಿ. ಎ. ಪ್ರೆಸ್‌ನಲ್ಲಿ ಮುದ್ರಿತವಾಗಿ ೧೯೧೧ ರಲ್ಲಿ ಪ್ರಕಟವಾಗಿದೆ.

೨. 'ದಿಲೀಪ ಚರಿತೆ' : ಕಾಳಿದಾಸನ 'ರಘುವಂಶ'ದ ಮೊದಲ ಮೂರು ಸರ್ಗಗಳ ಕುಸುಮಷಟ್ಪದೀರೂಪವಾದ ಅನುವಾದವಿದು. ಕ್ರಮವಾಗಿ ಇಲ್ಲಿಯ ಮೂರು ಸಂಧಿಗಳಲ್ಲಿ ೮೫, ೭೪, ಮತ್ತು ೭೦ ಪದ್ಯಗಳಿವೆ. ಕರ್ಣಾಟಕ ಗ್ರಂಥಮಾಲೆಯ ೧೩ನೆಯ ಪುಷ್ಪವಾಗಿ ೧೮೯೭ರಲ್ಲಿ ಇದು ಪ್ರಕಟವಾಯಿತು. ಇದೇ ಪತ್ರಿಕೆಯಲ್ಲಿ ಇದು ನವೆಂಬರ್ ೧೮೯೬ ರಿಂದ (೪-೫) ಮುಂದಕ್ಕೆ ಧಾರಾವಾಹಿಯಾಗಿ ಮೊದಲು ಪ್ರಕಟವಾಗಿತ್ತು.

೩. 'ಅಲ್ಲಾವುದ್ದೀನ್ ಮತ್ತು ಅದ್ಭುತ ದೀಪ' : ಇದು 'ಬುಕ್ಸ್ ಫಾರ್ ದಿ ಬಿಯರ್ನ್ಸ್' ಮಾಲೆಯ 'ಸ್ಟೋರಿ ಆಫ್ ಅಲಾಡೀನ್ ಅಂಡ್ ದಿ ವಂಡರ್‌ಫುಲ್ ಲ್ಯಾಂಪ್' ಎಂಬ ಪುಸ್ತಕದ ಕನ್ನಡ ಅನುವಾದ. ೯೦ ಪುಟಗಳ ಈ ಪುಸ್ತಕದಲ್ಲಿ ಕಥಾಭಾಗವು ಸೂಚನೆಯಾಗುವಂತೆ ೪೮ ಚಿತ್ರಗಳನ್ನು ಹಾಕಿದೆ. ಮಕ್ಕಳ ವಾಚನಾಭಿರುಚಿಯನ್ನು ಬೆಳಸಲು ಉದ್ದೇಶಿಸಿ, ಸರಸವೂ ಸುಸ್ಪಷ್ಟವೂ ಆದ ಶೈಲಿಯಲ್ಲಿ ಇದನ್ನು ರಚಿಸಿದೆ. ಮುದ್ರಣ ಮೈಸೂರಿನ ಜಿ. ಟಿ. ಎ. ಪ್ರೆಸ್ಸಿನಲ್ಲಿ ಆಗಿದೆ. ಈ ಪುಸ್ತಕದ ಮರು ಮುದ್ರಣ 'ಅಲ್ಲಾವುದೀನ್' ಎಂಬುದಾಗಿ ನಡೆದಿವೆ (ನನಗೆ ನೋಡಲು ದೊರೆತ ಪುಸ್ತಕದಲ್ಲಿ ಪ್ರಕಟನೆಯ ವರ್ಷವಿಲ್ಲ).

೪. 'ಅಜನೃಪ ಚರಿತೆ' : 'ರಘುವಂಶ'ದ ೪ನೆಯ ಸರ್ಗದ ಉತ್ತರ ಭಾಗದಿಂದ ೭ನೆಯ ಸರ್ಗದ ಕಡೆಯ ವರೆಗೆ ಕಾವ್ಯಭಾಗವು ಇಲ್ಲಿ ಭಾಮಿನೀಷಟ್ಪದಿರೂಪವಾಗಿ ಅನುವಾದಗೊಂಡಿದೆ. ಕ್ರಮವಾಗಿ ಇಲ್ಲಿಯ ಮೂರು ಸಂಧಿಗಳಲ್ಲಿ ೧೨೮, ೭೧, ೯೬ ಪದ್ಯಗಳಿವೆ. ಕರ್ಣಾಟಕ ಗ್ರಂಥಮಾಲೆಯ ೨೫ನೆಯ ಪುಷ್ಪವಾಗಿ ೧೯೦೦ರಲ್ಲಿ ಪ್ರಕಟವಾಯಿತು. ಮಾರ್ಚ್ ೧೮೯೯ ರಿಂದ (೬-೯) ಧಾರಾವಾಹಿಯಾಗಿ ಮೊದಲು ಪತ್ರಿಕೆಯಲ್ಲಿ ಬಂದಿತು.

ಒಂದು ಕಾಲದ ಶಾಲೆಯ ಪಠ್ಯಪುಸ್ತಕಗಳಲ್ಲಿ, ಪದ್ಯಸಂಕಲನಗಳಲ್ಲಿ 'ದಿಲೀಪ ಚರಿತೆ' 'ಅಜನೃಪ ಚರಿತೆ' ಈ ಎರಡುಂ ಕಾವ್ಯಖಂಡಗಳಿಂದ ಕೆಲಕೆಲವು ಪದ್ಯಗಳನ್ನು ಆಯ್ದು ಪಠ್ಯವಾಗಿ ನಿಯಮಿಸುತಿದ್ದ ರೂಢಿಯಿದ್ದಿತು. ಇನ್ನೂ ಹಿಂದೆ ಸಮಗ್ರವಾಗಿಯೇ ಇವು ಪಠ್ಯವಾಗಿ ನಿಯಮಿಸಲ್ಪಟ್ಟಿರುವುದೂ ಉಂಟು. ಮಾಸ್ತಿಯವರು ತಮಗೆ ಇವೆರಡೂ ಈ ರೀತಿಯಲ್ಲಿ ಪಠ್ಯವಾಗಿದ್ದುದನ್ನೂ ತಮ್ಮ ಅಧ್ಯಾಪಕರು ಸಂಸ್ಕೃತಮೂಲಸಹಿತ ಇವನ್ನು ಕಲಿಸಿದುದನ್ನೂ ತಮ್ಮ ಆತ್ಮಚರಿತೆಯಲ್ಲಿ ನೆನೆದುಕೊಂಡಿದ್ದಾರೆ (ಭಾವ, ೧, ಪು. ೫೩-೫೪). ಈ ಎರಡು ಕೃತಿಗಳೂ ಪುನರ್ಮುದ್ರಣ ಕಾಣದಿದ್ದರೂ, ಜನಪ್ರಿಯತೆ

ಗಳಿಸಿದ್ದುದು ಕಾರಣವಾಗಿ, ಈಗಲೂ ಅಲ್ಲಿ ಇಲ್ಲಿ ವಿದ್ಯಾಸಂಸ್ಥೆಗಳ ಗ್ರಂಥಭಂಡಾರಗಳಲ್ಲಿ ನೋಡಲು ದೊರೆಯುತ್ತವೆ.

೫. 'ಉತ್ತರರಾಮ ಚರಿತಂ': 'ಕರ್ಣಾಟಕ ಗ್ರಂಥಮಾಲೆ' ಪತ್ರಿಕೆಯ ಸಂಪುಟ ೮ -ಸಂಚಿಕೆ ೪ (ಅಕ್ಟೋಬರ್ ೧೯೦೦)ರ ಸಂಚಿಕೆಯಿಂದ ಆರಂಭಗೊಂಡು, ೮-೫. ೮-೬, ೮-೭. ೮-೧೧, ೯-೧, ೯-೩ (ಪು. ೧-೪, ೫-೮, ೯-೧೨, ೧೩-೨೦. ೫೭-೬೦, ೨೫-೩೨, ೩೩-೪೦) ಹೀಗೆ ಕ್ರಮವಾಗಿ ಪ್ರಕಟವಾಗಿದೆ. ಈ ಕೃತಿ ತೃತೀಯಾಂಕದ ಆರಂಭ ಭಾಗದ ವರೆಗೆ (ಸೆಪ್ಟೆಂಬರ್ ೧೯೦೧) ಭಾಗಶಃ ಮಾತ್ರ ಪ್ರಕಟವಾಗಿದೆ. ಪ್ರಕಟವಾಗಿರುವಷ್ಟು ಭಾಗ ವೃತ್ತ, ಕಂದ ಮತ್ತು ಗದ್ಯದಲ್ಲಿ ಹಳೆಯ ಸಂಸ್ಕೃತ ನಾಟಕಗಳ ಮೊದಮೊದಲ ಅನುವಾದಗಳ ಹಾಗೆಯೇ ಇರುವುದು ಕಾಣುತ್ತದೆ ಭಾಷೆ ಶೈಲಿಯಲ್ಲಿ ಪ್ರೌಢಿಮೆ ಸರಸತೆಗಳು ಸಮ್ಮಿಶ್ರಗೊಂಡಿದ್ದು, ಗದ್ಯಭಾಗ ವಿಶೇಷವಾಗಿ ಲಲಿತವೂ ಸರಸವೂ ಆಗಿ ಅನುವಾದಿತವಾಗಿದೆ. ಈ ನಾಟಕ ಏಕೆ ಅಪೂರ್ಣವಾಗಿ ಮುಗಿದಿದೆಯೋ ತಿಳಿದಿಲ್ಲ. ಅನಂತರದಲ್ಲಿಯಾದರೂ, ಈ ಕೃತಿ ಪ್ರತ್ಯೇಕವಾಗಿ ಕರ್ಣಾಟಕ ಗ್ರಂಥಮಾಲೆಯ ವತಿಯಿಂದ ಪ್ರಕಟವಾದ ಹಾಗೆ ತೋರುವುದಿಲ್ಲ. ಆದರೆ ಎಸ್. ಜಿ. ನ. ಅವರ ರಚನೆಗಳಲ್ಲಿ ಗಣ್ಯವಾದುದಾಗಿತ್ತು ಎಂಬುದನ್ನು ತಿಳಿಸುವ ಸಮಕಾಲೀನ ಸಾಕ್ಷ್ಯಗಳಿವೆ. 'ಸುವಾಸಿನಿ' ಪತ್ರಿಕೆಯ ಏಪ್ರಿಲ್ ೧೯೦೧ರ ಸಂಚಿಕೆಯಲ್ಲಿ (ಸಂಪುಟ ೧, ಸಂಚಿಕೆ ೧೦; ಪು. ೧೯೨) "ರಾ॥ ಎಸ್.ಜಿ. ನರಸಿಂಹಾಚಾರ್ಯರವರು ಕರ್ಣಾಟಕ ಗ್ರಂಥಮಾಲೆಯಲ್ಲಿ 'ಉತ್ತರರಾಮ ಚರಿತ್ರ' ನಾಟಕವನ್ನು ಕನ್ನಡಿಸಿ ಬರೆಯುತ್ತಿರುವರು" ಎಂದೂ 'ವಿದ್ಯಾದಾಯಿನಿ'ಯ ಜನವರಿ ೧೯೦೮ ರ ಸಂಚಿಕೆಯಲ್ಲಿ (ಭಾಗ ೧೬, ಸಂಚಿಕೆ ೧; ಪು. ೧-೬) "ಅಜನೃಪಚರಿತೆಯೂ, ದಿಲೀಪ ಚರಿತೆಯೂ, ಮುಕುಂದಮಾಲೆಯೂ,ಉತ್ತರರಾಮಚರಿತೆಯೂ,ಭಾರವಿಯೂ ಇರುವಾಗ ಆ ಚಿಂತೆಗೆ ಕಾರಣವೇನೂ ತೋರುವುದಿಲ್ಲ..." ಎಂದೂ ವಿಶೇಷವಾಗಿ ಉಕ್ತವಾಗಿರುವುದನ್ನು ಇಲ್ಲಿ ನೆನೆಯಬಹುದಾಗಿದೆ. ಭವಭೂತಿಯ ಈ ನಾಟಕದ ಅನುವಾದಗಳಲ್ಲಿ ಧೋಂಡೋ ನರಸಿಂಹ ಮುಳಬಾಗಿಲ, ಎಸ್. ಜಿ. ನರಸಿಂಹಾಚಾರ್ ಹಾಗೂ ಬಸವಪ್ಪ ಶಾಸ್ತ್ರಿಗಳ ಅನುವಾದಗಳು ಸಮೀಪಕಾಲದಲ್ಲಿ ಸಿದ್ಧವಾದವು. ಇವುಗಳ ತೌಲನಿಕ ಅಧ್ಯಯನ ಭಾಷಾಂತರಕೌಶಲದ ದೃಷ್ಟಿಯಿಂದ ಅವಶ್ಯವಾಗಿ ಆಗಬೇಕಾದುದು.

೬. 'ಭಾರತವೀರ ಚರಿತೆ' : ಭಾರತ ಇತಿಹಾಸದಲ್ಲಿ ಪ್ರಖ್ಯಾತರಾಗಿರುವ ಒಂಬತ್ತು ಮಂದಿ ವೀರಪುರುಷರ ವೃತ್ತಾಂತಗಳನ್ನು ನಿರರ್ಗಳವೂ ಚೊಕ್ಕವೂ ಆದ ಶೈಲಿಯಲ್ಲಿ ನಿರೂಪಿಸಿರುವ ಒಂದು ಉತ್ಕೃಷ್ಟ ಗದ್ಯಗ್ರಂಥ. ಮೈಸೂರು ಸರ್ಕಾರದ ಸಾರ್ವಜನಿಕ ವಿದ್ಯಾ ಇಲಾಖೆಯ ಮೂಲಕ ಗದ್ಯಪಠ್ಯವಾಗಿ ಹಲವು ವರ್ಷಗಳ ಕಾಲ ಚಾಲ್ತಿಯಲ್ಲಿದ್ದ ಈ ಪುಸ್ತಕ ಈಗಲೂ ಪಠ್ಯವಾಗಲು ಯೋಗ್ಯವಾದ ಮೌಲಿಕ ಗ್ರಂಥವಾಗಿದೆ. ಈ ಗ್ರಂಥದ ೨ ನೆಯ ಮುದ್ರಣ ೧೯೨೬ ರಲ್ಲಿಯೂ ೩ನೆಯದು ೧೯೩೬ ರಲ್ಲಿಯೂ ಪ್ರಕಟವಾಗಿದೆ. ಈ ಪುಸ್ತಕದ ಪಾಠಗಳು ಬಿಡಿಯಾಗಿ ಹಿಂದಿನ ಮಕ್ಕಳ ಪಠ್ಯಪುಸ್ತಕಗಳಲ್ಲಿ ಸೇರಿರುವುದುಂಟು

(ಸು. ೧೯೨೪ ೨೫ ರ 'ಕನ್ನಡ ನಾಲ್ಕನೆಯ ಪುಸ್ತಕ'ದಲ್ಲಿ 'ಪದ್ಮಿನಿ' ಎಂದು ಎರಡು ಪಾಠಗಳಲ್ಲಿ ಸೇರಿವೆ).

ಈಗ ದೊರೆಯುವುದು ಕಷ್ಟಸಾಧ್ಯವಾಗಿರುವ ಕೆಲವು ಗ್ರಂಥಗಳ ಬಗೆಗೆ ಸ್ವಲ್ಪ ಮಟ್ಟಿಗೆ ಪರಿಶೀಲಿಸಬಹುದಾಗಿದೆ.

೧. 'ಗಲಿವರನ ದೇಶಸಂಚಾರ' : 'ಗಲಿವರ್ಸ್ ಟ್ರಾವೆಲ್ಸ್' ಎಂಬ ಇಂಗ್ಲಿಷ್ ಪುಸ್ತಕದಲ್ಲಿಯ ಪ್ರಥಮ ಪ್ರಯಾಣದ ಭಾಗ ಅನುವಾದಿತವಾಗಿರುವ ಕೃತಿಯಿದು. ೭೦ ಪುಟಗಳ ಈ ಪುಸ್ತಕದಲ್ಲಿ ಪ್ರತಿಯೊಂದು ಪುಟದಲ್ಲಿಯೂ ಒಂದೊಂದು ಚಿತ್ರವನ್ನು ಹಾಕಿದೆ. ಮಕ್ಕಳ ವಾಚನಾಭಿರುಚಿಗಾಗಿ ಸರಸಶೈಲಿಯಲ್ಲಿ ರಚಿತವಾಗಿದೆ. ಕರ್ಣಾಟಕ ಗ್ರಂಥಮಾಲೆ ಪ್ರಕಟಿಸಿರುವ ಈ ಪುಸ್ತಕ ಜಿ. ಟಿ. ಎ. ಪ್ರೆಸ್ಸಿನಲ್ಲಿ ಮುದ್ರಿತವಾಗಿದೆ. 'ಸುವಾಸಿನಿ' ಪತ್ರಿಕೆಯಲ್ಲಿ (ಸೆಪ್ಟೆಂಬರ್ ೧೯೦೦ ; ಪುಸ್ತಕ ೧-ಅಂಕ ೩, ಪು. ೪೮) ಇದರ ಕಿರುವಿಮರ್ಶೆಯುಂಟು. ಮೊದಲ ಉಲ್ಲೇಖ ಸಹ ಅಲ್ಲಿಯದೇ (ಆಗಸ್ಟ್ ೧೯೦೦ ; ೧-೨, ಪು. ೧೮). "ಕನ್ನಡ ಭಾಷೆಯಲ್ಲಿ ಈ ಪುಸ್ತಕವನ್ನು ಪ್ರಸಿದ್ಧಪಡಿಸುವುದಕ್ಕೆ ಇದೇ ಮೊದಲು" ಎಂಬುದಾಗಿ ಜಿ. ಟಿ. ಎ. ಜಾಹಿರಾತಿನಲ್ಲಿದೆ (ಕರ್ಣಾಟಕ ಗ್ರಂಥಮಾಲೆ, ೯- ೬, ೮ ; ಡಿ. ೧೯೦೧). ಅಲ್ಲದೆ ಈ ಮೊದಲೇ, ಸುವಾಸಿನಿಯ ವಿಮರ್ಶೆಯಲ್ಲಿ ಸಹ "ಇತ್ತಲಾಗಿನವರೆಗೂ ಕನ್ನಡದಲ್ಲಿ ಇಂತಹ ಪುಸ್ತಕಗಳಿರಲಿಲ್ಲವೆಂಬೀ ಕೊರತೆಯನ್ನು ಹೋಗಗೊಳಿಸ ಪ್ರಯತ್ನಿಸುತ್ತಿರುವ ಗ್ರಂಥಪ್ರಕಾಶಕರಾದ ರಾ. ರಾ । ಎಲ್. ಜಯರಾವ್ ಬಿ. ಎ. ಇವರ ಈ ಉದ್ಯೋಗವು ಸ್ತುತ್ಯವಾಗಿದೆ" ಎಂಬ ಅಂಥ ಮಾತು ಬಂದಿರುವುದು ಗಮನಾರ್ಹವಾಗಿದೆ.

೨. 'ಈಸೋಪನ ನೀತಿಕಥೆಗಳು' : 'ನೀತಿಕಥಾಸಾರ' ಎಂಬುದಾಗಿ ಪ್ರಕಟವಾಗಿರುವಂತೆ ತೋರುವ ಈ ಬಾಲಸಾಹಿತ್ಯದ ಕೃತಿ ಕರ್ಣಾಟಕ ಗ್ರಂಥಮಾಲೆಯ ಡಿಸೆಂಬರ್ ೧೯೦೧ರ ಸಂಚಿಕೆಯ (೯-೬) ಕೊನೆಯ ಜಾಹೀರಾತಿನ ಪ್ರಕಾರ ೨ ಭಾಗಗಳಲ್ಲಿದೆ. ೧೨೦ ಪುಟಗಳ ಈ ಗ್ರಂಥದಲ್ಲಿ, ಪ್ರತಿಪುಟದಲ್ಲಿಯೂ ಚಿತ್ರವುಂಟೆಂದು ತಿಳಿಯುವುದು.

೩. 'ಗಯ್ಯಾಳಿಯನ್ನು ಸಾಧು ಮಾಡುವಿಕೆ' : ಇದು ಷೇಕ್ಸ್‌ಪಿಯರ್ ಕವಿಯ 'ಟೇಮಿಂಗ್ ಆಫ್ ದಿ ಷ್ರೂ'ಎಂಬ ನಾಟಕವನ್ನು ಮಕ್ಕಳಿಗಾಗಿ ಸರಳಗದ್ಯದಲ್ಲಿ ನಿರೂಪಿಸಿದ್ದಿರಬಹುದಾದ ಕಥಾಪುಸ್ತಕವಿರಬಹುದು.

೪. 'ಭಾರವಿ' : ಕಿರಾತಾರ್ಜುನೀಯದ ಕರ್ತೃವಿನ ಚರಿತ್ರೆಯೋ ಆತನ ಕೃತಿಯ ಪರಿಚಯವೋ ಈ ಪುಸ್ತಕದ ವಿಷಯವಾಗಿರಬಹುದು. ಎಂ. ಎ. ರಾಮಾನುಜಯ್ಯಂಗಾರ್ಯರು ತಮ್ಮ ಬಾಷ್ಪಾಂಜಲಿ ಲೇಖನದಲ್ಲಿ (ವಿದ್ಯಾದಾಯಿನಿ, ಜನವರಿ ೧೯೦೮) ಹೇಳಿರುವುದರ ಹೊರತು, ಈ ಕೃತಿಯ ಬಗೆಗೆ ಮತ್ತೇನೂ ತಿಳಿದಿಲ್ಲ.

೫. 'ಮುಕುಂದ ಮಾಲೆ' : ಕುಲಶೇಖರಾಳ್ವಾರರು ರಚಿಸಿ, ಭಕ್ತಿಸಾಹಿತ್ಯದಲ್ಲಿ ತುಂಬ ಜನಪ್ರಿಯತೆ ಗಳಿಸಿರುವ ಈ ಸಂಸ್ಕೃತ ಸಾಹಿತ್ಯಕೃತಿಯನ್ನು ಪ್ರಾಯಶಃ ಪದ್ಯರೂಪದಲ್ಲಿ ಕನ್ನಡಿಸಿದ್ದಿರಬಹುದು. ಇದರ ಉಲ್ಲೇಖವೂ ಪೂರ್ವೋಕ್ತ ಬಾಷ್ಪಾಂಜಲಿ ಲೇಖನದೊಳಗಿನದೇ.

ಈ ಸಂದರ್ಭದಲ್ಲಿಯೇ ಹೇಳಬಹುದಾದ ಮತ್ತೊಂದು ಸಂಗತಿಯೆಂದರೆ, ಎಸ್. ಜಿ. ನ. ಅವರು ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳ (೧೮೪೩-೯೧) ಜೀವನ ಚರಿತ್ರೆಯನ್ನು ಬರೆಯಲು ಉದ್ದೇಶಿಸಿದ್ದರೆಂಬುದು. ಬಿ. ರಾಮರಾವ್ ಸಂಪಾದಕತ್ವದ 'ಸುವಾಸಿನಿ'ಯ ಸೆಪ್ಟಂಬರ್ ೧೯೦೦ ರ ಸಂಚಿಕೆ (ಪುಸ್ತಕ ೧-ಅಂಕ ೩; ಪು. ೪೮) ಈ ಸಂಗತಿಯನ್ನು ಹೀಗೆ ವರದಿ ಮಾಡಿದೆ: "...ಕರ್ಣಾಟಕ ಕಾವ್ಯಕಲಾನಿಧಿಯ ಸಂಪಾದಕ ರಾದ ರಾ. ರಾ. ಎಸ್. ಜಿ. ನರಸಿಂಹಾಚಾರ್ಯರವರು ಪ್ರಸಿದ್ಧಕವಿಶಿರೋಮಣಿಗಳೆಂದು ಕೀರ್ತಿಗೊಂಡು ಕೆಲವು ವರ್ಷಗಳ ಹಿಂದೆ ಗತಿಸಿದ ಬಸವಪ್ಪಶಾಸ್ತ್ರಿಗಳವರ ಜೀವ ಚರಿತ್ರೆ ಯನ್ನು 'ಸುವಾಸಿನಿ'ಗಾಗಿ ಬರೆಯ ಕೈಕೊಂಡಿರುವುದನ್ನೂ ನಮ್ಮ ಪಾಠಕರಿಗೆ ತಿಳಿಸಲಿಕ್ಕೆ ಬಹಳ ಸಂತೋಷಪಡುತ್ತೇವೆ." ಈ ಜೀವನ ಚರಿತ್ರೆಯನ್ನು ಅವರು ಬರೆದರೇ, ಅದು ಪ್ರಕಟವಾಯಿತೇ, ಆ ಮುಂದಿನ ವಿವರಗಳಾವುವೂ ತಿಳಿಯವು. ಈ ಪತ್ರಿಕೆ ಎರಡು ವರ್ಷ ಗಳು ಮಾತ್ರ ಪ್ರಕಟವಾದಂತೆ ತಿಳಿಯುವುದರಿಂದ, ಎಸ್. ಜಿ. ನ. ಈ ಜೀವನ ಚರಿತ್ರೆ ಬರೆದು ಅಲ್ಲಿ ಪ್ರಕಟಿಸಲು ಅವಕಾಶವಾಗಿರಲಾರದೋ ಏನೋ ? ಒಂದು ಪಕ್ಷ ಆ ಜೀವನ ಚರಿತ್ರೆ ಬರೆದು ಪೂರ್ಣಗೊಂಡು ಪ್ರಕಟವಾಗಿದ್ದಿದ್ದರೆ,ಕನ್ನಡದ ಮೊದಲ ಜೀವನ ಚರಿತ್ರೆಯೆಂದು ಈಗ ಪ್ರಸಿದ್ಧವಾಗಿರುವ ಎಂ. ಎಸ್. ಪುಟ್ಟಣ್ಣನವರ 'ಕುಣಿಗಲ ರಾಮ ಶಾಸ್ತ್ರಿಗಳ ಚರಿತ್ರೆ' (೧೯೧೦) ಎರಡನೆಯ ಸ್ಥಾನಕ್ಕೆ ಇಳಿದು, ಕನ್ನಡದ ಪ್ರಥಮ ಜೀವನ ಚರಿತ್ರಕಾರರಾಗುವ ಯೋಗ ಎಸ್. ಜಿ, ನರಸಿಂಹಾಚಾರ್ಯರದಾಗುತ್ತಿತ್ತು.

೭

ಎಸ್. ಜಿ. ನರಸಿಂಹಾಚಾರ್ಯರು ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ತಳೆದ ಅಕ್ಕರೆ ಆಸ್ಥೆಗಳು ಮಕ್ಕಳ ಸಾಹಿತ್ಯದ ಕ್ಷೇತ್ರದಲ್ಲಿ ಅವರನ್ನು ಒಂದು ಉಜ್ಜ್ವಲ ನಕ್ಷತ್ರ ವನ್ನಾಗಿ ಮಾಡಿವೆ. ಅವರು ಕನ್ನಡ ಭಾಷೆಯ ಮಕ್ಕಳ ಸಾಹಿತ್ಯದ ಆದ್ಯಕೃಷಿಕರಲ್ಲಿ ಒಬ್ಬರು, ಗಣ್ಯರು. ಅವರೂ ಮದರಾಸು ಸರ್ಕಾರದ ಶಿಕ್ಷಣ ಇಲಾಖೆಯ ಅಧಿಕಾರಿ ಗಳೊಬ್ಬರೂ ಸೇರಿ ಸ್ಟೆಡ್ ಎಂಬವರು ರಚಿಸಿದ್ದರೆನ್ನಲಾದ ಕೆಲವು ಇಂಗ್ಲಿಷ್ ಪುಸ್ತಕ ಗಳನ್ನು ('Books for the Bairns') ಅನುವಾದಿಸಿದರೆಂದು ತಿಳಿಯುವುದು. ಇವು ಗಳಲ್ಲಿ ಕೆಲವನ್ನು ಇನ್ನೂ ಗುರುತಿಸಬೇಕಾಗಿದೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣದ ವಿದ್ಯಾರ್ಥಿಗಳಿಗಾಗಿ ಸಿದ್ಧಪಡಿಸುತ್ತಿದ್ದ ಕನ್ನಡ ಬಾಲಬೋಧೆಗಳು, ಪದ್ಯ ಸಾರ ಇವುಗಳ ಪಠ್ಯನಿಯಾಮಕಮಂಡಲಿಗಳಲ್ಲಿ ಆ ಕಾಲದ ಇತರ ಗಣ್ಯರೊಂದಿಗೆ ಎಸ್.ಜಿ. ನ. ಸದಸ್ಯರಾಗಿದ್ದುದು ಅವರು ಮಕ್ಕಳಸಾಹಿತ್ಯಪೋಷಣೆಗೆ ಹೆಚ್ಚು ಶ್ರಮಿ ಸಲು ಅವಕಾಶಮಾಡಿತೆನ್ನಬೇಕು. ಈ ಶತಮಾನದ ಮೊದಲ ದಶಕಗಳಲ್ಲಿ, ಅಂದಿನ ಮೈಸೂರು ಸಂಸ್ಥಾನದ ಬಾಲಬೋಧೆಗಳಲ್ಲಿ ಸೇರಿದ್ದ ಹೆಚ್ಚಿನ ಇಂಗ್ಲಿಷ್ ಪದ್ಯಾನುವಾದ ಗಳೆಲ್ಲ ಬಹುಮಟ್ಟಿಗೆ ಎಸ್. ಜಿ. ನ. ಅವರು ಮಾಡಿದವೇ ಎಂಬುದಾಗಿ ಈಚೆಗೆ ವಿದ್ವಾಂ ಸರೂ ವಿಮರ್ಶಕರೂ ಸಾಮಾನ್ಯವಾಗಿ ಊಹಿಸಿದ್ದಾರೆ. ಇದು ಸಂಭವನೀಯವೇ. ಅಲ್ಲದೆ

ಅವರು ಸ್ವತಃ ಸರಳ ಶೈಲಿ ಛಂದಸ್ಸುಗಳಲ್ಲಿ ರಚಿಸಿದ ಸುಂದರಕವಿತೆಗಳೂ ಆ ಬಾಲ ಬೋಧೆಗಳಲ್ಲಿ ಸೇರಿರುವುದನ್ನು ಈಚೆಗೆ ಗುರುತಿಸಲಾಗಿದೆ. ಅಂತಹ ಕವಿತೆಗಳು ಅಲ್ಲಿ ಸೇರುವ ಸಲುವಾಗಿಯೇ ರಚಿತವಾಗಿರುವುದು ಮಾತ್ರವಲ್ಲದೆ, 'ವಿದ್ಯಾದಾಯಿನಿ' ಯಂತಹ ಹಿಂದಿನ ಮಾಸಪತ್ರಿಕೆಗಳಲ್ಲಿ ಮೊದಲು ಪ್ರಕಟವಾಗಿ ಬಳಿಕ ಸಂಕ್ಷಿಪ್ತವೂ ಪರಿಷ್ಕೃತವೂ ಆದ ರೂಪಗಳಲ್ಲಿ ಅವುಗಳನ್ನು ಹೊಕ್ಕಿರುವಂತೆಯೂ ತೋರುವುದು. ಅವರ ಕವಿತೆಗಳು 'ವಿದ್ಯಾದಾಯಿನಿ', 'ಕರ್ಣಾಟಕ ಗ್ರಂಥಮಾಲೆ', 'ಸುರಭಿ' ಈ ಕೆಲವು ಪತ್ರಿಕೆಗಳಲ್ಲಿಯೂ ಆಪ್ತಮಿತ್ರರ ಸಾಹಿತ್ಯಕೃತಿಗಳಲ್ಲಿಯೂ ಸೇರಿಕೊಂಡಿವೆ.

ಎಸ್. ಜಿ. ನ. ಶಾಲಾವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಹಾಗೆ ಕೆಲವು ವಸ್ತುಪಾಠಗಳನ್ನು ಸಹ 'ವಿದ್ಯಾದಾಯಿನಿ'ಯಲ್ಲಿ ಬರೆದಿದ್ದಾರೆ. ಎಲ್ಲವನ್ನೂ ಈಗ ಗುರುತಿಸುವುದು ಕಷ್ಟ; SGNಎಂಬ ಅಂಕಿತದಲ್ಲಿರುವ ಕೆಲವನ್ನು ಸುಲಭವಾಗಿ ಗುರುತಿಸಬಹುದು. ಉದಾ.ಗೆ ೧೯೦೪ ರ ಜುಲೈ, ಸೆಪ್ಟೆಂಬರ್, ಅಕ್ಟೋಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಅವರ ಪಾಠಗಳಿವೆ. ಕವಿತೆಗಳಾಗಲಿ, ಈ ಪಾಠಗಳಾಗಲಿ ಮಕ್ಕಳ ಬುದ್ಧಿಯ ಮಟ್ಟಕ್ಕೆ ಎಟುಕುವಂತಹುವೇ ಆಗಿವೆ.

ಸಂಸ್ಕೃತ ಇಂಗ್ಲಿಷ್ ಭಾಷೆಗಳಲ್ಲಿ ಉತ್ಕೃಷ್ಟ ಕಾವ್ಯಭಾಗಗಳೇನುಂಟೋ ಅವು ಕನ್ನಡ ಭಾಷೆಯ ಜನಸಾಮಾನ್ಯರಿಗೂ ಚಿಕ್ಕಮಕ್ಕಳಿಗೂ ತಿಳಿಯುವಂತಾಗಬೇಕು ಎಂಬ ದೃಷ್ಟಿ ಎಸ್.ಜಿ. ನ. ಅವರದು. ಹೊಸಗನ್ನಡ ಕಾಲದ ತೀರ ಮೊದಲಿನ ಭಾಷಾಂತರಕಾರರಲ್ಲಿ ಅವರದು ದೊಡ್ಡ ಹೆಸರು. ಅವರು ಸರ್ಕಾರದ ಭಾಷಾಂತರ ಇಲಾಖೆಯಲ್ಲಿ ಕನ್ನಡ ಭಾಷಾಂತರಕಾರರಾಗಿ ಸೇವೆ ಸಲ್ಲಿಸುತ್ತಿದ್ದುದರಿಂದ ಈ ಬಗೆಯ ಕೆಲಸ ಅವರಿಗೆ ಸಹಜವಾಗಿಯೇ ಅಪೇಕ್ಷಣೀಯವೂ ಅತ್ಯವಶ್ಯವೂ ಆಗಿ ತೋರಿದ್ದರೆ, ಅದರಲ್ಲಿ ಆಶ್ಚರ್ಯವೇನಿಲ್ಲ. ಈ ಇಲಾಖೆಯಲ್ಲಿದ್ದುಕೊಂಡು ಅವರು ಯಾವ ರೀತಿಯಲ್ಲಿ ಕಛೇರಿಯ ಭಾಷಾಂತರಕಾರ್ಯಗಳನ್ನು ಕೈಗೊಂಡರೋ, ಅವುಗಳ ವಸ್ತು, ಗುಣ, ಗಾತ್ರ, ಪ್ರಯೋಜನಗಳು ಯಾವ ರೀತಿಯವೋ ಇವನ್ನು ಗೊತ್ತುಮಾಡುವುದು ಸಾಧ್ಯವಿದ್ದರೆ, ಅದು ಅವಶ್ಯವಾಗಿ ಆಗಬೇಕಾದ ಕಾರ್ಯ. ಭಾಷಾಂತರವಿಜ್ಞಾನಕ್ಕೆ ಹಾಗೂ ಕನ್ನಡ ಭಾಷಾಂತರ ವಿಧಿವಿಧಾನಗಳ ತಿಳಿವಳಿಕೆಗೆ ಇದರಿಂದ ತುಂಬ ಪ್ರಯೋಜನವಾಗಬಹುದು.

೮

ಎಸ್.ಜಿ. ನರಸಿಂಹಾಚಾರ್ಯರ ವ್ಯಕ್ತಿತ್ವ, ಸಾಧನೆಗಳ ಬಗೆಗೆ ಕೆಲವು ಮಾತುಗಳನ್ನು ಈಗ ಗಮನಿಸಬಹುದು : ಎಸ್. ಜಿ. ನ. ವ್ಯಕ್ತಿಯಾಗಿ ಯಾವ ಸ್ವಭಾವಾತಿಶಯದಿಂದ ಕೂಡಿದ್ದರೋ, ಆಕಾರದಲ್ಲಿ ಹೇಗೆ ಇದ್ದರೋ, ಇವನ್ನು ತಿಳಿಯಲು ನಮಗೆ ತಕ್ಕ ಮಾಹಿತಿಯಿಲ್ಲ. ಅವರ ಜೀವನಚರಿತ್ರೆ ನಮಗೆ ಎಲ್ಲ ವಿವರಗಳಲ್ಲಿಯೂ ಸಮಗ್ರವಾಗಿ ತಿಳಿದಿಲ್ಲ. ಅವರ ಭಾವಚಿತ್ರವೇ ಇನ್ನೂ ದೊರೆತಿಲ್ಲ ; ಹೋಗಲಿ, ಹಸ್ತಾಕ್ಷರವೂ ಲಭ್ಯವಿಲ್ಲ. ''ಆಕಾರದಲ್ಲಿ ದೊಡ್ಡಾಳಲ್ಲ, ಸಾಮಾನ್ಯಗಾತ್ರ. ತೆಳುವೆಂದೇ ಹೇಳಬಹುದು. ನೋಡಿದ

ಕೂಡಲೇ ಥಟ್ಟನೆ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಬಲ್ಲ ರೂಪಪ್ರಭಾವ ಅವರಿಗಿರಲಿಲ್ಲ''-ಎಂಬುದಾಗಿ ಡಿ. ವಿ. ಜಿ. ನೆನಪುಮಾಡಿಕೊಂಡಿದ್ದಾರೆ. ಬೆಂಗಳೂರಿನಲ್ಲಿದ್ದಾಗ, ಅವರು ಬಳೆಪೇಟೆ ನರಸಿಂಹಸ್ವಾಮಿಯ ಗುಡಿಯಿಂದ ಪೂರ್ವಕ್ಕೆ ಹೊರಟು ಈಗಿನ ಮೈಸೂರು ಬ್ಯಾಂಕಿನ ಪಕ್ಕದಲ್ಲಿ ದೊಡ್ಡಪೇಟೆಯನ್ನು ಸೇರುವ ಹಾಸ್ಪಿಟಲ್ ಲೇನ್ ಎಂಬ ಬೀದಿಯ ಉತ್ತರಪಾರ್ಶ್ವಶ್ರೇಣಿಯ ನಡುವೆ ಒಂದು ಮನೆಯಲ್ಲಿದ್ದರು ಎಂಬುದಾಗಿ ಅವರೇ ನೆನಪಿಸಿಕೊಂಡಿದ್ದಾರೆ.

ಎಸ್. ಜಿ. ನ. ಅವರ ಕೌಟುಂಬಿಕ ವಿವರಗಳು ಅಷ್ಟು ಸ್ಪಷ್ಟವಿಲ್ಲ. ಅವರನ್ನು ಹತ್ತಿರದಿಂದ ಬಲ್ಲವರು ಈಗ ತೀರ ದುರ್ಲಭ. ಎಸ್. ಜಿ. ನ. ಅವರ ತಮ್ಮಂದಿರೂ ಗ್ರಂಥಕರ್ತರೂ ಆಗಿದ್ದ ಎಸ್. ಜಿ. ಗೋವಿಂದರಾಜಯ್ಯಂಗಾರ್ಯರು ೧೯೪೬ ರವರೆಗೆ ಬದುಕಿದ್ದರು ; ಆ ಮೊದಲು ಅವರಲ್ಲಿ ವಿಚಾರಮಾಡಿದ್ದರೆ ಎಷ್ಟೋ ಉಪಯುಕ್ತ ಸಂಗತಿಗಳು ಅವರಿಂದ ದೊರೆಯುವ ಸಾಧ್ಯತೆಯಿತ್ತು. ಈಗ ಕಾಲ ಮಿಂಚಿತು. ಬಾಲ್ಯದಲ್ಲಿಯೇ ತಂದೆ ತೀರಿಕೊಂಡ ಮೇಲೆ ಮಕ್ಕಳು ತಾಯಿ ಸೀತಮ್ಮನವರ ಆರೈಕೆಯಲ್ಲಿ ಬೆಳೆದರೆಂದೂ ಆಕೆ ಆಯುರ್ವೇದದ ಔಷಧಿ ತಯಾರಿಕೆಯಲ್ಲಿ ಕಣ್ಣು ಕಳೆದುಕೊಂಡು ಕುರುಡಾಗಿದ್ದರೂ ಅಡಿಗೆ ಮಾಡುವುದು, ಎಲೆ ಹಚ್ಚುವುದು ಮುಂತಾದ ಕೆಲಸಗಳಲ್ಲಿ ಚಟುವಟಿಕೆಯಿಂದಲೇ ಇದ್ದರೆಂದು ಡಿ. ವಿ. ಜಿ. ಬರೆದಿದ್ದಾರೆ. ಅಲ್ಲದೆ, ಎಸ್. ಜಿ. ನ. ಅವರ ಸಂತತಿಯವರು ಒದಗಿಸಿದ ಕೆಲವು ವಿವರಗಳು ಈ ರೀತಿಯಾಗಿವೆ : ಎಸ್. ಜಿ. ನ ಅವರ ಪತ್ನಿ ಸಿಂಗಮ್ಮನವರು. ಈ ದಂಪತಿಗಳಿಗೆ ಎಸ್.ಜಿ. ರಂಗಸ್ವಾಮಿ ಅಯ್ಯಂಗಾರ್ಯ ಮತ್ತು ಎಸ್. ಜಿ. ಅಳಸಿಂಗರಾಚಾರ್ಯ ಇವರು ಮಕ್ಕಳು. (ಸಿಂಗಮ್ಮನವರ ನಿಧನದ ತರುವಾಯ ಎಸ್. ಜಿ. ನ. ಮರುಮದುವೆಯಾದರು. ಈ ಸಂಬಂಧದ ವಿವರಗಳು ಸರಿಯಾಗಿ ತಿಳಿಯದು ; ಅವರಿಗೆ ಮಕ್ಕಳಿದ್ದಂತೆ ತೋರುವುದಿಲ್ಲ.) ಎಸ್. ಜಿ. ನ. ಅವರು ನಿಧನರಾದ ನಂತರ, ಅವರ ಎರಡನೆಯ ಮಗ ಅಳಸಿಂಗರಾಚಾರ್ಯರು ಪ್ಲೇಗ್‌ವ್ಯಾಧಿಗೆ ತುತ್ತಾಗಿ, ತಮ್ಮ ೧೨ನೆಯ ವರ್ಷ ವಯಸ್ಸಿನ ಬಾಲ್ಯದಲ್ಲಿಯೇ ತೀರಿಕೊಂಡರು. ಅವರ ಉಪಚಾರದಲ್ಲಿ ತೊಡಗಿದ್ದ ಅಣ್ಣ ರಂಗಸ್ವಾಮಿ ಅಯ್ಯಂಗಾರ್ಯರಿಗೂ ಪ್ಲೇಗ್‌ಸೋಂಕು ತಗುಲಿ ೨೮-೧೦-೧೯೧೧ರಲ್ಲಿ, ತಮ್ಮ ೨೮ನೆಯ ವರ್ಷ ವಯಸ್ಸಿನಲ್ಲಿ ತಾವೇ ತೀರಿಕೊಂಡರು. ಆ ವೇಳೆಗೆ ಅವರಿಗೆ ೧೯೦೭ರಲ್ಲಿ ಪತ್ನಿ ಅಲಮೇಲಮ್ಮನವರಲ್ಲಿ(೧೮೯೩-೧೯೫೫) ಹುಟ್ಟಿದ ಮೂರು ವರ್ಷದ ಮಗನಿದ್ದನು. ಆ ಮಗನಿಗೂ ಎಸ್. ಜಿ. ನರಸಿಂಹಾಚಾರ್ ಎಂಬುದಾಗಿ ತಾತನ ಹೆಸರನ್ನೇ ಇಡಲಾಯಿತು. ಇವರ ಪತ್ನಿ ಜಾನಕೀದೇವಿ; ಮಕ್ಕಳು ಎಸ್. ಜಿ. ಲೀಲಾವತೀದೇವಿ, ಎಸ್. ಜಿ. ಶ್ರೀಧರ (ಪತ್ನಿ ಚಂಪಾ). ಎಸ್. ಜಿ. ಇಂದಿರಾದೇವಿ (ಪತಿ ಪಿ. ಎನ್. ಶ್ರೀನಿವಾಸ್). ರಂಗಸ್ವಾಮಿ ಅಯ್ಯಂಗಾರ್ಯರ ಮಗ ಎಸ್. ಜಿ. ನರಸಿಂಹಾಚಾರ್ಯರು ತಮ್ಮ ೬೬ನೆಯ ವಯಸ್ಸಿನಲ್ಲಿ ೧೪-೫-೧೯೭೩ ರಲ್ಲಿ ತೀರಿಕೊಂಡಮೇಲೆ ಅವರ ಪತ್ನಿ ಜಾನಕಿದೇವಿಯವರೆ ಈಗ ಈ ಕುಟುಂಬವರ್ಗದಲ್ಲಿ ಹಿರಿಯರಾಗಿದ್ದಾರೆ.

ಎಸ್.ಜಿ. ನರಸಿಂಹಾಚಾರ್ಯರ ಮಗ ರಂಗಸ್ವಾಮಿ ಅಯ್ಯಂಗಾರ್ಯರು ಬಿ.ಎ. ಪದವೀ

ಧರರಾಗಿದ್ದು, ಸೆಕ್ರೆಟೇರಿಯಟ್‌ನಲ್ಲಿ ಉದ್ಯೋಗದಲ್ಲಿದ್ದರೆಂದೂ ತಂದೆಯಂತೆಯೇ ಸೌಮ್ಯಸ್ವಭಾವದವರೂ ಸರಸಕಾವ್ಯಪ್ರಿಯರೂ ಆಗಿದ್ದರೆಂದೂ ಡಿ. ವಿ. ಜಿ. ನೆನಪು ಮಾಡಿಕೊಂಡಿದ್ದಾರೆ ; ಮೊಮ್ಮಗ ಎಸ್. ಜಿ. ನರಸಿಂಹಾಚಾರ್ಯರು ಜೈವಿಕ ರಸಾಯನ ಶಾಸ್ತ್ರದ ಎಂ.ಎಸ್‌ಸಿ. ಪದವೀಧರರಾಗಿದ್ದು, ಸರ್ಕಾರದ ಕೃಷಿಇಲಾಖೆಯಲ್ಲಿ ಉದ್ಯೋಗದಲ್ಲಿದ್ದರು. ಅವರೂ ತಮ್ಮ ತಾತನವರಂತೆಯೇ ಗ್ರಂಥಕರ್ತರಾಗಿದ್ದು, ಕೆಲವು ವಿಜ್ಞಾನ ಗ್ರಂಥಗಳನ್ನು ರಚಿಸಿದ್ದಾರೆ. ಈ ಮನೆತನದವರಿಗೆ ಶ್ರೀರಂಗಪಟ್ಟಣ ನಿತ್ಯವಾಸದ ಸ್ಥಳವಾಗಿದ್ದುದರಿಂದಲೂ ಇವರ ಪೂರ್ವಿಕರು ಗೋವಿಂದರಾಜ ಒಡೆಯರ್ ಎಂಬವರಾಗಿದ್ದುದರಿಂದಲೂ ಇವರ ಹೆಸರಿನ ಹಿಂದೆ 'ಶ್ರೀರಂಗಪಟ್ಟಣ ಗೋವಿಂದರಾಜ' ಎಂದು ಸೇರಿದ್ದಿರಬೇಕೆಂದು ತೋರುತ್ತದೆ (ಮಂಡಯಂ ಶ್ರೀವೈಷ್ಣವ ಸಮುದಾಯದ ಚರಿತ್ರೆ ಮತ್ತು ವಂಶಪರಂಪರೆ ಕುರಿತ ಇಂಗ್ಲಿಷ್‌ಗ್ರಂಥ, ಬೆಂಗಳೂರು, ೧೯೮೧).

ಎಸ್. ಜಿ. ನರಸಿಂಹಾಚಾರ್ಯರು (೧೮೬೨-೧೯೦೭) ಹೊಸಗನ್ನಡ ಸಾಹಿತ್ಯದ ಪ್ರವರ್ತಕಾಗ್ರಣಿಗಳಲ್ಲಿ ಒಬ್ಬರಾಗಿದ್ದು, ಭಾಷಾಸಾಹಿತ್ಯಗಳ ಸೇವೆಯನ್ನು ಅವಿಶ್ರಾಂತವಾಗಿ ಕೈಕೊಂಡರು. ಅವರು ತಮ್ಮ ಪೂರ್ವವಯಸ್ಸಿನಲ್ಲಿಯೇ ಮೃತರಾಗದೆ ಇನ್ನೂ ಅಷ್ಟು ಕಾಲ ಕನ್ನಡ ಭಾಷೆ ಸಾಹಿತ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆ ನಮ್ಮ ನುಡಿಗೆ ಇನ್ನೂ ಮಿಗಿಲಾಗಿ ಪೋಷಣೆ ದೊರೆಯುತ್ತಿದ್ದುದು ನಿಶ್ಚಯ. ಇದನ್ನು ಆ ಕಾಲದಲ್ಲಿ, ಅವರ ನಿಧನಕ್ಕೆ ಬಾಷ್ಪಾಂಜಲಿ ಸಲ್ಲಿಸಿದವರೆಲ್ಲ ಗುರುತಿಸಿದ್ದಾರೆ. ದೊಡ್ಡ ಕವಿಗಳೆಂದೂ ಘನವಿದ್ವಾಂಸರೆಂದೂ ಆ ಕಾಲದಲ್ಲಿ ಎಸ್. ಜಿ. ನ. ಪ್ರಖ್ಯಾತರಾಗಿದ್ದುದಷ್ಟೇ ಅಲ್ಲ, ಅಗ್ರಪಂಕ್ತಿಯಲ್ಲಿದ್ದರು. ಅವರಲ್ಲಿ ಸಾಹಿತ್ಯಪ್ರೇಮದೊಂದಿಗೆ ಸರಿಸಾಟಿಯಾಗಿ ಉದಾತ್ತವಾದ ಧಾರ್ಮಿಕದೃಷ್ಟಿಯೂ ಆಧ್ಯಾತ್ಮಿಕವಾದ ತೃಷೆಯೂ ಇದ್ದಿತೆನ್ನುವುದಕ್ಕೆ ತಕ್ಕ ಆಧಾರಗಳಿವೆ. ಅವರು ತಮ್ಮ ಮಿತ್ರರಾದ ಜಿ. ಜಿ. ನರಸಿಂಹಾಚಾರ್ಯರೊಂದಿಗೆ ಆಗ್ಗೆ ಚಾಮರಾಜಪೇಟೆಯ ಮೊದಲನೆಯ ರಸ್ತೆಯಲ್ಲಿದ್ದ ಶ್ರೀರಾಮಕೃಷ್ಣಾಶ್ರಮಕ್ಕೆ ವಾರಕ್ಕೆ ಎರಡು ಮೂರು ಸಲವಾದರೂ ಹೋಗಿಬರುತ್ತಿದ್ದರು ಎಂಬುದಾಗಿ ಡಿ. ವಿ. ಜಿ. ತಿಳಿಸಿದ್ದಾರೆ. ಅವರ ಕೆಲವು ಬಂಧುಗಳಿಗೆ ರಾಮಕೃಷ್ಣಾಶ್ರಮದ ನಿಕಟಸಂಬಂಧವೇ ಇದ್ದಿತು. ಆಶ್ರಮದ ಸಂನ್ಯಾಸಿಗಳಾದ ಶ್ರೀವಾಸಾನಂದರು, ಎಸ್. ಜಿ. ನ. ಅವರ ಸೋದರ ಎಸ್.ಜಿ. ಗೋವಿಂದರಾಜಯ್ಯಂಗಾರ್ಯರ ಪೂರ್ವಾಶ್ರಮದ ಭಾವಮೈದುನರು. ಶ್ರೀವಾಸಾನಂದರ ಕೋರಿಕೆಯಂತೆ ಗೋವಿಂದರಾಜಯ್ಯಂಗಾರ್ಯರು ಬಂಗಾಳಿಯನ್ನು ಅಭ್ಯಸಿಸಿ, ರಾಮಕೃಷ್ಣರ ಸಾಕ್ಷಾಚ್ಛಿಷ್ಯರಾದ ಮಹೇಂದ್ರಗುಪ್ತರ 'ಶ್ರೀ ರಾಮಕೃಷ್ಣ ವಚನಾಮೃತ'ದ ಸಂಕ್ಷೇಪವಾದ ಕನ್ನಡ ಆವೃತ್ತಿಯನ್ನು ಎರಡು ಸಂಪುಟಗಳಲ್ಲಿ ಸಿದ್ಧಪಡಿಸಿಕೊಟ್ಟರು. ಇವಕ್ಕೆಲ್ಲ ಬಹುಶಃ ಎಸ್. ಜಿ. ನ. ಅವರ ಜೀವನದೃಷ್ಟಿ, ಪ್ರೇರಣೆ ಪ್ರಭಾವಗಳು ಸಾಕಷ್ಟುಮಟ್ಟಿಗೆ ಕಾರಣವಾಗಿರಬಹುದೆಂದು ಊಹಿಸಬಹುದು.

ಎಸ್. ಜಿ. ನ. ಅವರ ಕವಿತೆಗಳು ಲಲಿತವಾಗಿಯೂ ಸರಸವಾಗಿಯೂ ಇವೆ. ಈ ಗುಣಗಳು ಅವರ ಕವಿತೆಗಳಲ್ಲಿ ಹೇಗೆ ಹೊಮ್ಮಿ ತೋರುತ್ತಿವೆ ಎನ್ನುವುದನ್ನು

ತಿಳಿಯಬೇಕಾದರೆ ಅವರ ಸಮಕಾಲೀನರ ಕವಿತೆಗಳೊಂದಿಗೆ ಅವನ್ನು ಹೋಲಿಸಿ ನೋಡಿದರೆ ಸುಲಭವಾಗಿ ತಿಳಿದುಹೋಗುತ್ತದೆ. ಮಕ್ಕಳಿಗಾಗಿ ಅವರು ಸಿದ್ಧಪಡಿಸಿದ ನಾನಾ ವಿಧದ ಗದ್ಯಪದ್ಯಗಳು ವಸ್ತುಪಾಠಗಳು ಚೊಕ್ಕವಾಗಿಯೂ ಆಕರ್ಷಕವಾಗಿಯೂ ಇದ್ದುವು. ಈಗಲೂ ಅವು ವಾಚನೀಯಂಗಳೇ. ಅವರ ಸ್ವತಂತ್ರ ಹಾಗೂ ಅನುವಾದಗ್ರಂಥಗಳಲ್ಲಿ ಎಲ್ಲಿಯೂ ಅನಾವಶ್ಯಕವಾಗಿ ಪಾಂಡಿತ್ಯವನ್ನು ಮೆರೆಯುವ ಪ್ರಯತ್ನ ಕಂಡುಬರುವುದಿಲ್ಲ. ಅವರು ಕನ್ನಡ ಭಾಷೆಯ ದೇಶ್ಯಶಬ್ದಗಳಿಗೆ, ವ್ಯಾಕರಣಶುದ್ಧವಾದ, ಸಹಜವಾದ ಕನ್ನಡ ಶೈಲಿಯ ವಾಕ್ಯರಚನೆಗೆ ಮೇಲ್ಮೆಯನ್ನು ತಂದುಕೊಟ್ಟು ಕನ್ನಡದ ಇಂಪು ಸೊಂಪುಗಳು ಎದ್ದುತೋರುವ। ಹಾಗೆ ಬರೆಯುತ್ತಿದ್ದರು. ಭಾಷೆ ಶೈಲಿಗಳ ಈ ಸಹಜತೆ ನಿರರ್ಗಳತೆಗಳಿಂದಾಗಿ ಅವರ ಬರವಣಿಗೆಯಲ್ಲಿ ಒಂದು ತೆರನ ಪ್ರಾಸಾದಿಕತೆಯನ್ನು ಕಾಣಬಹುದಾಗಿದ್ದಿತು. ಈ ಅನನ್ಯಗುಣವಿಶೇಷದಿಂದಾಗಿಯೇ ಅಂದಿನ ಮಾಸಪತ್ರಿಕೆಗಳು ಅವರಿಂದ ಕವಿತೆಗಳನ್ನು ಬೇಡಿ ಪಡೆಯುತ್ತಿದ್ದುವು. ಗ್ರಂಥಕರ್ತರು ತಮ್ಮ ಕಥೆ ಕಾದಂಬರಿಗಳಿಗೆ ಸಂದರ್ಭೋಚಿತವಾಗಿ ಪದ್ಯಗಳನ್ನು ಅವರಿಂದ ಬರೆಯಿಸಿ ಸೇರಿಸಿಕೊಳ್ಳುತ್ತಿದ್ದರು. ನಟರೂ ನಾಟಕಕಾರರೂ ಗೀತಗಳನ್ನು ಬರೆಯಿಸಿಕೊಳ್ಳುತ್ತಿದ್ದರು. ಪ್ರಕಾಶನಸಂಸ್ಥೆಗಳು ಅವರ ಬರಹಗಳನ್ನು ಸಂತೋಷದಿಂದ ಪ್ರಕಟಿಸುತ್ತಿದ್ದುವು. ಪಠ್ಯನಿಯಾಮಕ ಮಂಡಲಿಗಳು ಸಿದ್ಧಪಡಿಸುತ್ತಿದ್ದ ಪಠ್ಯಗಳಲ್ಲಿ ಹೊಸಗನ್ನಡ ಕವಿತೆಗಳ ರಚನೆ, ಆಯ್ಕೆ. ಪರಿಷ್ಕರಣಗಳಿಗೆ ಎಸ್.ಜಿ. ನ. ಅವರ ಸಹಾಯವನ್ನು ಪಡೆಯುವುದು ತುಂಬ ಸಾಮಾನ್ಯವಾಗಿತ್ತು. ಅವರ ಕವಿತ್ವಶಕ್ತಿ, ರಸೈಕದೃಷ್ಟಿಯ ವಿಮರ್ಶನಶಕ್ತಿಗಳಲ್ಲಿ ಅಂದಿನ ವಿದ್ಯಾಧಿಕಾರಿಗಳಿಗೆ, ಹಿರಿಯ ಸಾಹಿತಿಗಳಿಗೆ ತುಂಬ ವಿಶ್ವಾಸಗೌರವಗಳಿದ್ದುದೇ ಇದರ ಕಾರಣವೆನ್ನಬಹುದು. ಆ ಕಾಲದ ವಿಮರ್ಶಕರು ಎಸ್. ಜಿ. ನ. ಅವರ ಈ ಗುಣಗಳನ್ನು ವಿಶೇಷವಾಗಿ ಕೊಂಡಾಡಿದ್ದಾರೆ.

ಎಸ್. ಜಿ ನ. ಅವರ ತಮ್ಮಂದಿರು ಎಸ್. ಜಿ. ಗೋವಿಂದರಾಜ ಅಯ್ಯಂಗಾರ್ಯರು ತಮ್ಮ 'ಶ್ರೀರಾಮಾನುಜಸೂರಿ ಚರಿತಂ' ಎಂಬ ಚಂಪುವಿನಲ್ಲಿ ಅವರನ್ನು "ಕುಶಾಗ್ರಮತಿಯುಂ ಕರ್ಣಾಟಗದ್ಯಪದ್ಯನಿರ್ಮಾಣಧುರೀಣನುಂ ಸರಸಕವಿತಾರಸಾಸ್ವಾದಲೋಲುಪನುಂ" ಎಂದು ಗುರುತಿಸಿದ್ದಾರೆ. ಎಸ್. ಜಿ. ನ. ತಮ್ಮ ಗೆಳೆಯರ ಕೃತಿಗಳನ್ನು ಸಾದ್ಯಂತ ಪರಿಶೀಲಿಸಿ ಪರಿಷ್ಕರಿಸಿರುವುದರ, ಸಾಂದರ್ಭಿಕ ಸಲಹೆಗಳನ್ನು ನೀಡಿರುವುದರ, ಕರಡಚ್ಚುಗಳನ್ನು ಇತರರಿಗಾಗಿ ತಿದ್ದಿರುವುದರ ಹಲವು ಸಾಕ್ಷ್ಯಗಳಿವೆ. ಆ ಕಾಲಕ್ಕೆ ಅವರು ಕನ್ನಡ ಭಾಷಾಸಾಹಿತ್ಯಗಳ ಅಗ್ರಗಣ್ಯ ವಿದ್ವಾಂಸರಲ್ಲಿ, ಕವಿಗಳಲ್ಲಿ ಖ್ಯಾತರಾಗಿದ್ದುದು ಸುವಿದಿತ. ನಟಶ್ರೇಷ್ಠರಾದ ವರದಾಚಾರ್ಯರು ಅಭಿನಯಿಸುತ್ತಿದ್ದ ನಾಟಕಗಳಲ್ಲಿಯ ಪದ್ಯಗಳಲ್ಲಿ ಎಸ್. ಜಿ. ನ. ಅವರ ಕೈವಾಡವಿರುತ್ತಿದ್ದಿತೆಂದೂ ಅವರಿಗಾಗಿ ಇವರು ಕೆಲವು ಕಂದಪದ್ಯಗಳನ್ನೂ ಹಾಡುಗಳನ್ನೂ ರಚಿಸಿದರೆಂದೂ ಡಿ. ವಿ. ಜಿ. ತಿಳಿಸಿರುವರಾದರೂ ಇದನ್ನು ಈಗಿನ ಮಟ್ಟಿಗೆ ಪ್ರಮಾಣಿಸಿ ತಿಳಿಯಲು. ಹೆಚ್ಚಿನ ಶೋಧನೆ ಬೇಕಾಗಿದೆ.

ಎಸ್. ಜಿ. ನ. ಅವರು ಸ್ವತಃ ಕವಿಯಾಗಿದ್ದು, ಒಳ್ಳೆಯ ಕವಿಮನೋಧರ್ಮವಿದ್ದವರಾದುದರಿಂದ, ಅವರ ವಿಮರ್ಶೆಯಲ್ಲಿ ತಕ್ಕ ಹದ, ಹೃದಯಂಗಮತೆ ಗೋಚರಿಸುವುದು ಸಹಜವೇ. ಅವರ ಕಥಾಗದ್ಯದಲ್ಲಿಯೂ ಅಷ್ಟೇ. ಅವರು ಆರ್. ನರಸಿಂಹಾಚಾರ್ಯರ ಜೊತೆಗೂಡಿ ಆರಂಭಿಸಿದ್ದ 'ಕರ್ಣಾಟಕ ಕವಿಚರಿತೆ'ಯ ಯೋಜನೆಗೆ ಅವರ ಸಹಾಯ ಪೂರ್ಣವಾಗಿ ದೊರೆತಿದ್ದರೆ, ಕೃತಿಯ ಉಪಯುಕ್ತತೆ ಇನ್ನೂ ಹೆಚ್ಚಾಗುತ್ತಿದ್ದಿತೆಂಬುದರಲ್ಲಿ ಸಂಶಯವಿಲ್ಲ. ಆದರೆ ಅಲ್ಲಿಯವರೆಗೆ ವಿಧಿ ಅವರನ್ನು ಉಳಿಸದೆ ಹೋದುದು ನಮ್ಮ ದುರ್ದೈವ. ಆದರೆ ಎಂ. ಎ. ರಾಮಾನುಜಯ್ಯಂಗಾರ್ಯರೊಂದಿಗೆ ಶ್ರಮಿಸಿ, ಪ್ರಾಚೀನ ಕಾವ್ಯಸಂಪತ್ತನ್ನು ಅಳಿಯಗೊಡದೆ ಕಾಯ್ದುಕೊಳ್ಳುವ ದಿಕ್ಕಿನಲ್ಲಿ ಅವರಿಂದಾಗಿರುವ ಸೇವೆ ಸಾಮಾನ್ಯವಾದುದೇನಲ್ಲ. ಇದಕ್ಕಾಗಿ ಅವರು ಬಹುವಾಗಿ ಶ್ರಮಪಟ್ಟಿರಬೇಕು. ಸು. ೧೪ ವರ್ಷಗಳ ಅವಧಿಯಲ್ಲಿ, ಈ ಇಬ್ಬರೂ ಜೊತೆಗೂಡಿ ಸಂಪಾದಿಸಿ ಪ್ರಕಟಿಸಿದ ಗ್ರಂಥಗಳು ಸು. ೪೦ ಎಂದರೆ, ಇವರ ಕಾರ್ಯಕ್ಷಮತೆಯನ್ನೂ ಕಾರ್ಯವಿಧಾನವನ್ನೂ ನಾವು ಅರ್ಥಮಾಡಿಕೊಳ್ಳಬಹುದು. ಇದರ ನಡುವೆಯೇ ಅವರು ಓರಿಯೆಂಟಲ್ ಲೈಬ್ರರಿಯಲ್ಲಿ ಕೆಲಸಮಾಡುತ್ತ, ಸಂಪಾದಿಸಿದ ಪ್ರೌಢಗ್ರಂಥಗಳೂ ಇವೆ. ಸ್ವತಂತ್ರವಾಗಿಯೂ ಸಹಕರ್ತೃವಾಗಿಯೂ ರಚಿಸಿದ, ಅನುವಾದಿಸಿದ, ಪರಿಷ್ಕರಿಸಿದ ಇನ್ನೆಷ್ಟೋ ಗ್ರಂಥಗಳೂ ಇವೆ. ಭಾಷಾಂತರಕಾರರಾಗಿ ಕಛೇರಿಯ ಕೆಲಸಗಳಲ್ಲಿ ಅವರ ಕೆಲಸ, ಸಾಧನೆಗಳು ಏನೆಂದು ಈಗ ನಮಗೆ ಸ್ವಲ್ಪವೂ ತಿಳಿಯದು. ಆ ಕಾಲದ ಹಳೆಯ ದಾಖಲೆಗಳಿಂದ ಏನಾದರೂ ಹೊರಡುವಂತಿದ್ದರೆ ಅವನ್ನು ಅವಶ್ಯವಾಗಿ ಶೋಧಿಸಬೇಕು. ಒಂದು ಅಲ್ಪಾಯುಷ್ಯದ ಜೀವಿತ ಕಾಲದಲ್ಲಿ ಈ ಪ್ರಮಾಣದ ಕೆಲಸವನ್ನು ಕೈಗೂಡಿಸಬೇಕಾದರೆ ಅದೊಂದು ಮಹಾಚೇತನವೇ ಆಗಿರಬೇಕು.

ಎಸ್. ಜಿ. ನ. ಅವರ ಭಾಷಾಪ್ರೇಮ ಉಜ್ಜ್ವಲವಾದುದು, ಸ್ಫೂರ್ತಿದಾಯಕವಾದುದು. ಕನ್ನಡ ಭಾಷೆಯ ಸ್ಥಿತಿಗತಿಗಳನ್ನೂ ಅಭ್ಯುದಯವನ್ನೂ ಕುರಿತು ಅವರು ಧಾರವಾಡದ ಕರ್ನಾಟಕ ಗ್ರಂಥಕರ್ತರ ಪ್ರಥಮ ಸಮ್ಮೇಳನದಲ್ಲಿ ವ್ಯಕ್ತಮಾಡಿದ ಅಭಿಪ್ರಾಯಗಳು ಈಗಲೂ ಮನನಮಾಡಲು, ಅನುಷ್ಠಾನಕ್ಕೆ ತರಲು ಯೋಗ್ಯವಾಗಿವೆ. ಅವರು ಕನ್ನಡದ ಮುನ್ನಡೆಗಾಗಿ ಕಂಡ ಕನಸುಗಳಿಗೆ ಆ ಉಪನ್ಯಾಸ ಕನ್ನಡಿ ಹಿಡಿದಿದೆ. ಆಗಾಗ ಅವರು ಬೇರೆ ಬೇರೆ ಸ್ಥಳಗಳಲ್ಲಿಯೂ ಕನ್ನಡದ ಏಳಿಗೆಯನ್ನು ಕುರಿತು ಉಪನ್ಯಾಸಗಳನ್ನು ಮಾಡುತ್ತಿದ್ದಿರಬೇಕು. ಅವುಗಳ ವರದಿಗಳು ಇಂದು ಸರಿಯಾಗಿ ಸಿಕ್ಕುತ್ತಿಲ್ಲ. ಎಷ್ಟೋ ದಾಖಲೆಯಾಗದೆಯೂ ಹೋಗಿರಬಹುದು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಒಂದು ವಾರ್ಷಿಕಸಭೆಯಲ್ಲಿ ಅವರು ಮಾಡಿದ ಉಪನ್ಯಾಸವೊಂದರ ವರದಿ 'ವಿದ್ಯಾದಾಯಿನಿ' ಪತ್ರಿಕೆಯ ೧೯೦೧ರ ಜೂನ್ ಸಂಚಿಕೆಯಲ್ಲಿ ಸಂಕ್ಷಿಪ್ತವಾಗಿ ಬಂದಿದೆ. ಇದನ್ನು ಪರಿಶೀಲಿಸಿದರೆ (ಅನುಬಂಧ ನೋಡಿ), ಎಸ್. ಜಿ. ನ. ಅವರು ಕನ್ನಡದ ಬೆಳೆವಣಿಗೆ ಯಾವ ಯಾವ ಮುಖಗಳಲ್ಲಿ ಆಗಬೇಕೆಂಬುದಾಗಿ ಬಯಸಿದ್ದರೆಂಬುದರ ಸುಳಿವು ಸ್ವಲ್ಪ ಸಿಕ್ಕುತ್ತದೆ. ಧಾರವಾಡದಲ್ಲಿಯೂ ಕನ್ನಡ ಪಂಡಿತಪರೀಕ್ಷೆಯ

ವ್ಯವಸ್ಥೆಯಾಗಬೇಕು, ಮೈಸೂರಿನವರು ತೆಲುಗು ತಮಿಳು ಬಂಗಾಳಿ ಗ್ರಂಥಗಳನ್ನು ಕನ್ನಡಿಸುತ್ತಿರುವಂತೆ ಧಾರವಾಡದವರು ಮರಾಟಿ ಗುಜರಾತಿ ಉರ್ದು ಗ್ರಂಥಗಳನ್ನು ಕನ್ನಡಿಸಲು ತೊಡಗಬೇಕು, ಜನಪದಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಲು ಉಪಾಧ್ಯಾಯರು ಪ್ರಯತ್ನಿಸಬೇಕು, ಪ್ರಾಚೀನ ಮತ್ತು ಆಧುನಿಕ ಸಾಹಿತಿಗಳ ಜೀವನಚರಿತ್ರೆಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟಿಸಬೇಕು, ಕನ್ನಡವನ್ನು ಊರ್ಜಿತಸ್ಥಿತಿಗೆ ತರಲು ವೀರಶೈವರು ಹೆಚ್ಚು ಕಾರ್ಯಪ್ರವೃತ್ತರಾಗಬೇಕು—ಎಂದು ಮುಂತಾಗಿ ಅವರು ಇಲ್ಲಿ ಸೂಚಿಸಿದ್ದಾರೆ. ಭಾಷೆಯ ಕೊರತೆಗಳನ್ನು ಮನಗಂಡು, ಅವುಗಳಿಗೆ ನಿವಾರಣೋಪಾಯಗಳನ್ನು ಅವರು ಕ್ರಾಂತದರ್ಶಿಗಳಾಗಿ ಯೋಚಿಸಿದ್ದಾರೆನ್ನಬೇಕು.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ನಡೆದ ಕರ್ನಾಟಕ ಗ್ರಂಥಕರ್ತರ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾಗಿ ಎಸ್. ಜಿ. ನ. ಅವರು ನೀಡಿದ ಉಪನ್ಯಾಸ ಅನೇಕದೃಷ್ಟಿಗಳಿಂದ ಗಮನಾರ್ಹವಾದುದು (ನೋಡಿ : ಕನ್ನಡ ನಂದಿಗನ್ನಡಿ, ೧-೮, ಜೂನ್ ೧೯೦೭; ಕಸ್ತೂರಿ, ೨೭-೫, ಜನವರಿ ೧೯೮೩). ಕನ್ನಡ ಭಾಷೆಯ ಪ್ರಾಚೀನತೆ, ಸಾಹಿತ್ಯದ ವ್ಯಾಪ್ತಿ, ಹಿರಿಮೆ, ಹೊಸಗನ್ನಡದ ಅರುಣೋದಯ ಮುಂತಾದ ಶೈಕ್ಷಣಿಕವಿಷಯಗಳ ನಿರೂಪಣೆಗಿಂತ ಹೆಚ್ಚಾಗಿ, ಇಲ್ಲಿ ಬೇರೆಬೇರೆ ಭಾಷಾಪ್ರಾಂತಗಳಲ್ಲಿ ಕನ್ನಡ ಜನ ಹಂಚಿಹೋಗಿರುವುದು, ಪ್ರಚಲಿತವಾದ ಭಾಷೆ ವಿವಿಧವಾಗಿ ರೂಢಿಯಲ್ಲಿರುವುದು, ವ್ಯಾವಹಾರಿಕ ಭಾಷೆ-ಗ್ರಾಂಥಿಕ ಭಾಷೆಗಳ ಸಂಬಂಧ ಪ್ರಯೋಗಸಾಧ್ಯತೆಗಳು, ಪಾರಿಭಾಷಿಕ ಶಬ್ದಗಳ ಬಳಕೆ, ಕನ್ನಡ ಗ್ರಂಥಕರ್ತರ ಸ್ಥಾನಮಾನಗಳು, ಕರ್ನಾಟಕ ವಿಶ್ವವಿದ್ಯಾನಿಲಯದ ಸ್ಥಾಪನೆ ಈ ಮೊದಲಾದ ಪ್ರಚಲಿತವಿಷಯಗಳ ಬಗೆಗೆ, ಆ ಸಂಬಂಧದ ಸಮಸ್ಯೆಗಳ ಬಗೆಗೆ ಪ್ರಸ್ತಾವಿಸಿರುವುದು ಕಾಣುತ್ತದೆ. ಪ್ರಾಚೀನಗ್ರಂಥಗಳ ಸಂಗ್ರಹ ಮತ್ತು ಮುದ್ರಣ, ಜನಪದಸಾಹಿತ್ಯ ಸಂರಕ್ಷಣೆ, ಪ್ರಾಚೀನ ಗ್ರಂಥಕರ್ತರ ಚರಿತ್ರೆಗಳ ರಚನೆ, ಆಧುನಿಕ ಗ್ರಂಥಗಳಲ್ಲಿ ಅಕ್ಷರಸಂಯೋಜನೆಯ ನಿರ್ಣಯ, ಸಾಮಾನ್ಯ ಹಾಗೂ ಪಾರಿಭಾಷಿಕ ಪದಗಳ ಸಂಗ್ರಹ, ಹೊಸದಾಗಿ ಗ್ರಂಥಗಳ ನಿರ್ಮಾಣ ಮತ್ತು ಮುದ್ರಣ, ಗ್ರಂಥಕರ್ತರಿಗೆ ಪ್ರೋತ್ಸಾಹ, ಕನ್ನಡಿಗರಲ್ಲಿ ಭಾಷಾಭಿಮಾನವನ್ನು ಹೆಚ್ಚಿಸುವುದು, ಕನ್ನಡನಾಡಿನ ಭಾಷಾಪ್ರದೇಶಗಳು ಒಗ್ಗೂಡುವುದರ ಸಾಧ್ಯತೆ ಇವನ್ನೆಲ್ಲ ಎತ್ತಿಕೊಂಡು ಒಂದೊಂದಾಗಿ ವಿಚಾರಮಾಡಿದ್ದಾರೆ. ಪ್ರಾಂತೀಯಭೇದಗಳಲ್ಲಿ ಏಕರೂಪತೆಯ ಸಾಧನೆ, ಜನಪದ ಸಾಹಿತ್ಯ ಸಂರಕ್ಷಣೆ, ಕನ್ನಡಕ್ಕೆ ವಿಸ್ತಾರವಾದ ಶಬ್ದಕೋಶವೊಂದರ ರಚನೆಯ ಅಗತ್ಯ-ಇವೆಲ್ಲ ಅವರು ಕಂಡ ಕನಸುಗಳೇ. 'ಕನ್ನಡ ಮಾತು ತಲೆಯೆತ್ತುವ ಬಗೆ' ಹೇಗೆ ಎಂಬುದಾಗಿ ಚಿಂತಿಸಿ, ಬಿ. ಎಂ. ಶ್ರೀಕಂಠಯ್ಯನವರು ಧಾರವಾಡದ ವಿದ್ಯಾವರ್ಧಕಸಂಘದ ಡಿಸೆಂಬರ್ ೧೯೧೧ರ ವಾರ್ಷಿಕಸಭೆಯಲ್ಲಿ ಮಾಡಿದ ಉಪನ್ಯಾಸ ಇಂತಹ ಹಿನ್ನೆಲೆಯಲ್ಲಿ ಹುಟ್ಟಿಬಂದುದು ಸಹಜವೇ ಆಗಿದೆ. ಎಸ್. ಜಿ. ನ. ತಮ್ಮ ಉಪನ್ಯಾಸದ ಕೊನೆಗೆ, ಮೂರಾವರ್ತಿ ''ಸಿರಿಗನ್ನಡಂ ಗೆಲ್ಗೆ''ಎಂಬುದಾಗಿ ಜಯಘೋಷ ಮಾಡುವಂತೆ ನೆರೆದ ಸಭಾಸದರನ್ನು ಪ್ರಾರ್ಥಿಸಿದರಂತೆ. ಈ ಘೋಷಣೆಯನ್ನು ಮೊದಲ ಸಲ ಕನ್ನಡಕ್ಕೆ ಕೊಟ್ಟ ಪುಣ್ಯವಂತರು

ಯಾರೇ ಇರಲಿ, ಇದು ಒಂದು ಜೀವಸಾರವಾದ, ಪ್ರಾಣಧಾತುವಾದ ಘೋಷವಾಕ್ಯ ವಾಗಿ ಇಂದಿಗೂ ನಮ್ಮ ಭಾಷೆಯನ್ನು ಮುನ್ನಡೆಸುತ್ತಿದೆ, ಭಾಷಾಸೇವಕರಲ್ಲಿ ಸ್ಫೂರ್ತಿ ಉತ್ಸಾಹಗಳ ಚಿಲುಮೆಯನ್ನು ಚಿಮ್ಮಿಸುತ್ತಿದೆ.

ಮುಕ್ಕಾಲು ಶತಮಾನದ ಹಿಂದೆಯೇ ಡಿ. ವಿ. ಜಿ. ತಮ್ಮ ಒಂದು ಬರೆಹವನ್ನು ಎಸ್. ಜಿ. ನ. ಅವರಿಗೆ ತೋರಿಸಿ, ಅವರ ಸಲಹೆಯನ್ನು ಕೇಳಿದಾಗ, ಅದರಲ್ಲಿಯ 'ಆಧುನಿಕ' ಎಂಬ ಸಂಸ್ಕೃತಶಬ್ದವನ್ನು ಗಮನಿಸಿ, ಆ ಶಬ್ದಕ್ಕಿಂತ 'ಈಚೀಚಿನ' ಎಂಬ ಕನ್ನಡ ಮಾತನ್ನೇ ಬಳಸಿದರಾಗದೇ ಎಂಬುದಾಗಿ ಎಸ್. ಜಿ. ನ., ಡಿ. ವಿ. ಜಿ. ಅವರನ್ನು ಪ್ರಶ್ನಿಸಿದರಂತೆ. ಬೆಳೆಯಬೇಕಾದ ಕನ್ನಡ ಭಾಷೆ ಹೇಗಿರಬೇಕು ಎಂಬ ಅರಿವು ಅವರಿಗೆ ನಿಚ್ಚಳವಾಗಿದ್ದಿತೆಂದು ಇದರಿಂದ ನಮಗೆ ಮನವರಿಕೆಯಾಗುತ್ತದೆ. ಅವರನ್ನು ಭಾಷಾ ಪೋಷಕರು, ಭಾಷಾಸಹಾಯಕರು ಎಂಬುದಾಗಿ ವಿಮರ್ಶಕರು ಕರೆದಿರುವುದು ಈ ದೃಷ್ಟಿ ಯಿಂದ ಅನ್ವರ್ಥವಾದುದು ಎನ್ನಬೇಕು.

ಎಸ್. ಜಿ. ನ. ಅವರು ತಮ್ಮ ಸೌಜನ್ಯ ಮೈತ್ರಿಗಳಿಂದ ಮಿತ್ರಗೋಷ್ಠಿಯಲ್ಲಿ ಎಲ್ಲ ರಿಗೂ ಬೇಕಾದವರಾಗಿದ್ದರು. ಕಾವ್ಯಲಕ್ಷಣ, ಕವಿಕಥೆ, ದೇಶದ ಚರಿತ್ರೆ, ಮತತತ್ತ್ವ, ಸಮಾಜಶುದ್ಧಿ ಮುಂತಾದವನ್ನು ಕುರಿತು ಚರ್ಚಿಸುತ್ತಿದ್ದರು. ಸಂಭಾಷಣೆಯಲ್ಲಿ ಸರಸರೂ ಕುಶಲಿಗಳೂ ಆಗಿದ್ದರು ಎಂದು ತಿಳಿಯುವುದು. ಪ್ರಾಣಿದಯೆ, ಕಷ್ಟಸಹಿಷ್ಣುತೆ, ರಾಜ ಭಕ್ತಿ ಅವರಲ್ಲಿ ಸಹಜವಾಗಿದ್ದುವು. ಕಾಲದ ಸದ್ವಿನಿಯೋಗದ ವಿಷಯದಲ್ಲಿ ಅವರಲ್ಲಿ ತುಂಬ ಎಚ್ಚರವಿದ್ದಿತು. ಕೀಳುವಿನೋದಗಳಲ್ಲಿ, ದ್ಯೂತ ಮದ್ಯಪಾನಗಳಲ್ಲಿ ಕಾಲವನ್ನು ಕಳೆಯದೆ, ದೊಡ್ಡ ವಿಷಯಕ್ಕೆ ಮನಸ್ಸು ಮಾಡುವ ಅಭ್ಯಾಸವನ್ನು ಚಿಕ್ಕಂದಿನಿಂದಲೇ ರೂಢಿಸಿಕೊಳ್ಳಬೇಕು. ತೆರೆದಿಟ್ಟ ಪುಸ್ತಕದಂತಿರುವ ಪ್ರಕೃತಿಯ ವೈಭವವನ್ನು ನೋಡಿ ನಲಿಯಲೂ ವಿಶ್ಲೇಷಿಸಲೂ ಪ್ರಯತ್ನಿಸಬೇಕು. ಇದು ಕಷ್ಟವಾದರೆ ಮಿತ್ರಗೋಷ್ಠಿಯಲ್ಲಿ ವನಭೋಜನಾದಿಗಳಲ್ಲಿ ಸಂತೋಷಪಟ್ಟರೂ ಸಾಕು—ಎಂಬುದಾಗಿ ಅವರು ಹೇಳುತ್ತಿದ್ದ ರೆಂದು ಡಿ. ವಿ. ಜಿ. ಅವರೊಂದಿಗಿನ ಒಂದು ಸಂಭಾಷಣೆಯನ್ನು ನೆನಪುಮಾಡಿಕೊಂಡಿ ದ್ದಾರೆ. ಇವನ್ನೆಲ್ಲ ಪುಷ್ಟೀಕರಿಸುವ ಸಾಕ್ಷ್ಯಗಳು ಅವರ ಕೆಲವು ಕವಿತೆಗಳಲ್ಲಿಯೇ ಹುದುಗಿವೆ. 'ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ', 'ಕಾಲದ ಬೆಲೆ', 'ಗೋವಿನ ಚರಿತ್ರೆ', 'ಚಾಮರಾಜೇಂದ್ರ ಮರಣವಾರ್ತೆ', 'ನಾಲ್ವಡಿ ಕೃಷ್ಣರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವ', 'ಬಿಡುವು' ಇಂತಹ ಕೆಲವೇ ಕವಿತೆಗಳನ್ನು ಗಮನಿಸಿದರೂ ಎಸ್. ಜಿ. ನ. ಅವರ ಮನೋಧರ್ಮದ ಲಹರಿ ನಮಗೆ ತಿಳಿಯುತ್ತದೆ. ಎಸ್. ಜಿ. ನ. ಸಂಪ್ರದಾಯ-ಆಧುನಿಕತೆ, ಸರಸತೆ-ಪಾಂಡಿತ್ಯ, ವಿಜ್ಞಾನ-ಸಾಹಿತ್ಯಗಳನ್ನು ಮೈಗೂಡಿಸಿ ಕೊಂಡಿದ್ದ ಪುಣ್ಯಶಾಲಿಗಳು ; ಹೊಸಗನ್ನಡ ಸಾಹಿತ್ಯದ ಕಣ್ಮಣಿಗಳು.

Lives of great men all remind us
We can make our lives sublime,
And, departing, leave behind us
Footprints on the sands of time.

H. W. Longfellow :
A Psalm of Life

ಅನಿಬರುಮಾತ್ಮಜೀವಿತಮನುತ್ತಮಮೆಂದೆನಿಸಲ್ಕಮಕ್ಕುಮೀ
ತೆನಂಬಿನ ಪೋದ ಪಿಂಬಡಿನೊಳೊಡ್ಡುವ ಕಾಲಮೆನಿಪ್ಪ ಸೈಕತಾ
ವನಿಯೊಳಗೊತ್ತಿ ಪಜ್ಜೆಗುರುಪಂ ನೆಲೆಗೆಯ್ಯಲುಮಕ್ಕುಮೆಂಬಿದಂ
ನೆನೆಯಿಪುದಲ್ತೆ ಪುಣ್ಯಚರಿತಂ ಭುವನಸ್ತುತಮಾರ್ಯವರ್ಯರಾ ॥

ಅನುವಾದ : ಎಸ್. ಜಿ. ನರಸಿಂಹಾಚಾರ್ಯ



THE
Karnataka Granthamala
SERIES
No. 13.
DILIPA CHARITE.

ದಿಲೀಪ ಚರಿತೆ.



THE
Karnataka Granthamala Series
No. 25.

ಅಜನೃಪ ಚರಿತ.

ಯಸ್. ಜಿ. ನರಸಿಂಹಾಚಾರ್ಯರಿಂದ
ವಿರಚಿತವಾದುದು.



[Reprint from Karnataka Granthamala.]
GOLDSMITH'S
THE HERMIT
(IN KANNADA VERSE)

ಪ್ರೋಷಿತ
ಪ್ರಿಯಸಮಾಗಮ

BY
S. G. NARASIMHACHAR

MYSORE
THE G.T.A. PRESS
1911

ಪ್ರೋಷಿತ ಪ್ರಿಯಸಮಾಗಮಂ

ಕರುಣಾಳೊ ವನವಾಸೀ
ತಿರುಗೈ ಯುಮಿ ತಿರಿವೆನೊರ್ವನೆನ್ನಂ ಕೊಂಡಾ
ಕಿರಣದೆ ಬನಮಂ ಬೆಳಗುತೆ
ಪರಹಿತಕೆನೆ ಮಿರುಪ ಸೊಡರ ಬಳಿಗೊಡವೋಗೈ ೧

ಆರುಮೊಡನಿಲ್ಲವಕ್ಕಟ
ದಾರಿಯನರಿಯೆಂ ಬಳಲ್ದು ಮೆಲ್ಲನದೆನಿತಂ
ದೂರಮನೈದುವೆನನಿತುಮ
ಪಾರಮೆನಿಪ್ಪಡವಿ ಬಳೆವ ತೆರದಿಂ ತೋರ್ಕುಂ ೨

ಎನೆ ಮುನಿ ನುಡಿಗುಂ ಮಾಣೆಲೆ
ತನಯಾ ಕಳ್ತಲೆಯುಪಾಯಕರಮೈದದಿರ್ಕೈ
ಮಿನುಗುವ ಟಿಕ್ಕಿನ ಸೊಡರದು
ಕೊನೆಗಾಣಿಸಲೆಂದು ನಿನ್ನನಿಂತೆಳೆದೊಯ್ಗುಂ ೩

ಮನೆಯಿಲ್ಲದಲೆವ ಜನಕದೆ
ಮನೆಯುದರ ಕವಾಟಮಾಗಳುಂ ತೆರೆದಿರ್ಕುಂ
ಎನಗಿರ್ಪ ವಸ್ತು ಕಡುಕಿರಿ
ದೆನಿಸಿದೊಡಂ ಪ್ರೀತಿಯಿಂದಮಾನದನೀವೆಂ ೪

ಆದರಿಂದೆ ತಿರುಗು, ರಾತ್ರಿಯ
ನದರೊಳ್ಕಳೆ ನನ್ನ ಕುಟಿಯೊಳಿರ್ಪುದನೆನ್ನೊಳ್
ಪುದುವೆನೆ ಕೊಳ್ ಪಣ್ಣುಣಿಸಂ
ಮೊದೆವಾಸಂ ನಿದ್ರೆಯಂ ಮದೀಯಾಶಿಷಮಂ ೫

ಮನವೊಸೆದಂತಿರೆ ತಪ್ಪಲ
ಬನದೊಳ್ಸಂಚರಿಪ ಮೃಗಮನೆಂದುಂ ಕೊಲ್ಲೆಂ
ಎನಗೆ ದಯೆದೋರ್ಪ ಜಗದೀ
ಶನೊಳಾಂ ಕಲ್ತವರೊಳಿಂತು ಕರುಣಮನಾಂಪೆಂ ೬

ಗಿರಿತಟವನದಿಂ ತರ್ಪೆಂ
ಪರಿಪೂತಂ ಪಾಪದೂರಮೆನಿಪೊಳ್ಳುಣಿಸಂ
ಪರಿಪಕ್ವಫಲದೆ ಕಂದದೆ
ತುರುಗಿದ ಕರಡಿಗೆಯನಮಳಜಲಮಂ ಝರದಿಂ ೭

ತಿರುಗದರಿಂದಲೆ ಚಿತ್ತದ
ಮರುಕಮನುಳಿಯಿಹದ ಚಿಂತೆಯೇ ದೋಷಕರಂ
ನರನಿಲ್ಲಿ ಬಯಸುವುದೆ ಕಡು
ಕಿರಿದಾ ಕಿರಿದುಮನನಲ್ಪಕಾಲಂ ಬಯಸಂ ೮

ಎನೆ ನುಡಿದ ಮುನಿಯ ನುಡಿ ಮಂ
ಜಿನ ಪನಿ ಪನಿವಂತೆ ಮೆಲ್ಲನೊಳವುಗೆ ಕಿವಿಯಂ
ವಿನಮಿತಶಿರನಾ ಪಾಂಥಂ
ಮುನಿಪನ ಬೆಂಬಳಿಯೊಳವನ ಕುಟಿಗೊಡವೋದಂ ೯

ದೂರದೊಳಾರುಂ ಕಾಣದ
ಹೇರಡವಿಯೊಳಿರ್ಕುಮೊಂದೆ ಕುಟಿಯದು ನೆರೆಯಾ
ಊರ ಬಡವರ್ಗೆ ಗೇಹಂ
ದಾರಿಯನರಿಯದೆ ತೊಳಲ್ವ ಪಥಿಕರ ಶರಣಂ ೧೦

ಕಳದಂತೆ ಕಾಪಿಡಲ್ತ
ನ್ನೊಳಗೊಂದುಂ ವಸ್ತುವಿಲ್ಲಮೆನಿಪಾ ಕುಟಿಯಂ
ತೊಲಗಿಸಿ ಬಾಗಿಲ್ದಟ್ಟಿಯ
ನೊಳಪೊಕ್ಕರ್ ಸಾಧುವೃತ್ತರಿರ್ವರುಮಾಗಳ್ ೧೧

ಕೆಲಸಂಗಳನುಳಿದು ಜನಂ
ನಿಲಯಕೆ ವಿಶ್ರಾಂತಿಗೆಂದು ಬರ್ಪಿರುಳೊಳವಂ
ಜ್ವಲಿಯಿಸುತೆ ಹಸಂತಿಕೆಯಂ
ನಲವಡಿಸಿದನತಿಥಿಯಂ ವಿಷಣ್ಣನನಾಗಳ್ ೧೨

ಪಳಮನುಣಲಿಕ್ಕಿದಂ ನಗೆ
ಕೆಳೆಗೊಳೆ ಸವಿನೋಡೆನುತ್ತುಮಡಿಗಡಿಗೊರೆದಂ
ಪಳೆಯ ಕತೆಗಳನೆ ಪೇಳುತೆ
ಕಳೆದಂ ನಿಡುವೊಳ್ತನಾ ಕಥಾಗಮನಿಪುಣಂ ೧೩

ನಲವಂ ತಾನುಂ ತಳೆದಂ
ತೆಳವೆಕ್ಕೆಸಗುಗುಮನೇಕ ವಿಧಚೇಷ್ಟೆಗಳಂ
ಉಲಿಗುಂ ಝಿಲ್ಲಿಗಳೋಲೆಯೊಳ್
ಜ್ವಲಿಕುಂ ಚಟಚಟನೆ ಪುಳ್ಳಿಗಳ್ಪಾರುತ್ತುಂ ೧೪

ಇನಿತರೊಳೊಂದುಂ ಪಾಂಥನ
ಮನದಳಲಂ ಕಳೆದು ನಲವನೆಸಗಿದುದಿಲ್ಲಂ
ಘನಶೋಕಭರದೊಳಾತನ
ಕೊನೆಗಣ್ಣಿಂದಶ್ರುಧಾರೆ ಸುರಿದತ್ತಾಗಳ್ ೧೫

ಅಂತುರ್ಬುವಳಲನೀಕ್ಷಿಸಿ
ಚಿಂತಿಸಿ ಬಗೆಗರಗಿ ಮುನಿಪನವನಂ ಕೇಳ್ಗುಂ
ಎಂತೆಲೆ ಚಿಂತಾಕುಲ ನಿನ
ಗೆಂತೆತ್ತಣಿನಾಯ್ತು ಬಗೆಯೊಳಿನಿತುಂ ದುಗುಡಂ ? ೧೬

ಕರುಮಾಡದಿಂದೆ ತೊಲಗಿಸೆ
ಮರುಕದೆ ಬಗೆಗೊಳ್ಳದಿಲ್ಲಿ ತಿರಿವೆಯೊ ಮಿತ್ರರ್
ನೆರೆ ವಿಮುಖರಾಗಲಳ್ವೆಯೊ
ತರುಣೀಜನವೊಲಿಯದಿರ್ದೊಡೇಂ ಶೋಕಿಪೆಯೋ ? ೧೭

ಸಿರಿಗಳ್ವೆಯಪ್ಪೊಡಕ್ಕಟ
ಸಿರಿಯಿಂ ದೊರೆಕೊಳ್ವ ಸೌಖ್ಯಮಲ್ಪಂ ಕ್ಷಯಿಕುಂ
ದೊರೆಕೊಳ್ವೀಯಲ್ಪಮುಮಂ
ಪಿರಿದೆಂದೆನೆ ಬಗೆವರಲ್ಪತರರದರಿಂದಂ ೧೮

ಪರಿಕಿಸೆ ಕೆಳೆತನಮಾವುದೊ
ಪುರುಳಿಲ್ಲದ ಮಾತು ಮರವೆಗೊಳಿಪ ಕುಮಂತ್ರಂ
ಸಿರಿಯುಂ ಜಸಮುಂ ಬಿಡದನು
ಸರಿಪ ನೆಳಲ್ ಶೋಕಬೀಜಮುಂಡುಗಿದ ಪದದೊಳ್ ೧೯

ಒಲವ್ಪಂ ಬರಿನುಡಿ ಕೆಳೆಯಿಂ
ದೆ ಲಘುತರಂ ಸತಿಯರೀಗಡಿನ ಪರಿಹಾಸಂ
ನೆಲದೊಳದೆತ್ತಂ ದೊರೆಯದು
ಪಲವೇಂ ? ದೊರೆದಂದು ದೊರೆಗುಮೆಣೆವಕ್ಕಿಗಳೊಳ್ ೨೦

ಎಲೆ ಮರುಳೆ ಲಜ್ಜೆಯಾಗದೊ
ತೊಲಗಿಸು ನಿನ್ನಳಲನೊದೆದು ಕಳೆ ಪೆಂಡಿರನೆಂ
ದುಲಿಯೆ ಮುನಿ ಪಥಿಕವದನದೆ
ತಲೆದೋರಿದ ಕೆಂಪು ವಿರಹಮಂ ಸೂಚಿಸುಗುಂ ೨೧

ಪಿರಿದುಂ ವಿಸ್ಮಯದಿಂ ಮುನಿ
ನಿರುಕಿಸಿದಂ ನವನವೋನ್ಮಿಷತ್ಸುಭಗತೆಯುಂ
ಅರುಣೋದಯದಾಕಾಶದ
ಸಿರಿವೊಲ್ಪೊಳೆದಪುದನಂತೆ ಮೆಯ್ಗರೆದಪುದಂ ೨೨

ಮುರಿದಿಟ್ಟಿಯೊರ್ವರ್ಗೆ ಮೇಣು
ಬ್ಬರಿಪೆರ್ದೆಯುಮುದೊರ್ಮೆ ಮನದ ಭಯಮಂ ತಾಂ ಬಿ
ತ್ತರಿಸೆ ಸೊಬಗಾಂತ ಪಾಂಥಂ
ತರುಣಿಯ ಕಡುಚೆಲ್ವುವೆತ್ತ ರೂಪಂ ಮೆರೆಗುಂ ೨೩

ಬಳಿಕೊರೆಗುಂ ಕ್ಷಮಿಸೈ ಧೃ
ಷ್ಟಿಳನಶರಣೆಯುಂ ಜಗತ್ಪಿತಂಗಂ ನಿನಗಂ
ನಿಳಯಮೆನಿಪ್ಪೀಯಾಶ್ರಮ
ದೊಳವೊಕ್ಕನುವಳಿಯಲಿಂತು ಪೊಲೆಗೆಲಸಿದಳಂ ೨೪

ಕರುಣಿಂದಳೆ ಕನ್ಯಕೆಯೊಳ್
ಪಿರಿದಪ್ಪನುರಾಗದಿಂ ತೊಳಲ್ವಳೊಳೆತ್ತಂ
ಅರಸಿದೊಡಂ ಸುಖಮೊಂದದೆ
ನಿರಾಶೆಯೊಳ್ಕುಡಿ ಬಟ್ಟೆನಡೆವಳೊಳೆನ್ನೊಳ್ ೨೫

ಸಿಂಧುವ ತೀರದೊಳೆಮ್ಮಯ
ತಂದೆವಿರಿರ್ದರ್ ಮಹಾಧನಾಢ್ಯರ್ ಪ್ರಭುಗಳ್
ತಂದೆಗಳ ಬಸಿರೊಳೊರ್ವಳೆ
ಬಂದುದರಿಂದೆನ್ನದಾದುದಾ ಸಿರಿಯನಿತುಂ ೨೬

ನಡೆಪಿದ ತಂದೆಯಿವೆನ್ನಂ
ಪಡೆಯಲ್ವೆಂದರ್ ಪಲಂಬರವರೊಳ್ಕೆಲರಾಂ
ಪಡೆಯದ ಚೆಲ್ವಂ ಪೊಗಳ್ದರ್
ಬಿಡದೊಲ್ದರ್ ಪಲವರರೆಬರೊಲ್ದುವೊಲಿರ್ದರ್ ೨೭

ಪಿರಿದುಂ ಧನಮಿತ್ತೆನ್ನಂ
ವರಿಸಲ್ಕೆನೆ ಗಳಿಗೆಗೊರ್ವರ್ಕೈದಿದರವರೊಳ್
ತರುಣಂ ಬರ್ಕುಮದೊರ್ವಂ
ಶಿರಮಂ ಬಾಗಿಸುಗುಮೊಲ್ದುಮೆರೆಯದೆ ನಿಲ್ಕುಂ ೨೮

ಸಿರಿಯುಂ ಪ್ರಭುತೆಯುಮಿಲ್ಲದೆ
ಬರಿದಂ ಬೆಳ್ಳುಡೆಯನಾಂತನಾದೊಡಮವನೊಳ್
ನೆರೆದತ್ತರಿವುಂ ತಕ್ಕುಮ
ವೆರಡಂ ಸರ್ವಸ್ವಮೆಂದು ನಾಂ ಬಗೆದಿರ್ದೆಂ ೨೯

ಉಪವನದೆಡೆಗಳೊಳವನೆ
ನ್ನ ಪಕ್ಕದೊಳಗೊಲ್ಮೆವಾಡುಪಾಡುವ ಪದದೊಳ್
ಉಪವನದೆಲರಾತನ ಸು
ಯ್ಯ ಪರಿಮಳಂಬಡೆಗುಮಡವಿ ನುಣ್ಗೊರಲಿಂಪಂ ೩೦

ರವಿಯುದಯದಲರ್ವ ಸುಮಮುಂ
ಪ್ರವಿಮಳಮೆನೆ ಗಗನದಿಂದೆ ಸೂಸುವ ಹಿಮಮುಂ
ಅವನ ಹೃದಯಕ್ಕೆ ದೊರೆಯೆನಿ
ಸುವನಿತು ವಿಮಲತೆಯನೆಂದುಮೇಂ ತೋರುಗುಮೇ ೩೧

ಹಿಮಮುಂ ತರುವೊಳ್ ವಿಕಸಿಪ
ಸುಮಮುಂ ಚಿರಶೋಭಿಯಾಗವವರಂತವನೊಳ್
ಸುಮನಿಸಿದುದು ಸೊಬಗೆನ್ನೊಳ್
ಸಮನಿಸಿತವರೊಂದು ಚಂಚಲತೆಯೆಂಬ ಗುಣಂ ೩೨

ಅರಿದುಮವಂ ಕಣ್ಸೋಲ್ವಾದ
ನುರುಗರ್ವದೆ ಬೀಗಿಯಕಟ ಪಲವುಂ ಪರಿಯಿಂ
ಮಱುಗಿಸಿದೆಂ ಮೇಣಾತನ
ಮಱುಕದೊಳಿರ್ದೆಗರಗದ್ಯೆದೆ ನಲವಾಂತಿರ್ದೆಂ ೩೩

ಕಡುನೊಂದು ತನ್ನ ಗರ್ವದ
ಬಿಡುನುಡಿಯಿಂ ತೊರೆದು ನನ್ನನವನೊರ್ವನೆ ಕಾ
ಡೆಡೆಗೆ ನಡೆದಾರುಮಡಿಯಿಡ
ದೆಡೆಯೊಳ್ತನ್ನೊಡಲನಕಟ ನೀಗಿದನಕ್ಕುಂ ೩೪

ಎನತೆ ಅಳಲಿನತೆ ದೋಷಂ
ತನುವಿರ್ಪಿನಮಿದರ ಕೃಪೆಯಿಂ ನಾನುಣ್ಬೆಂ
ಮನದಿನಿಯನೊಡಲ ನೀಗಿದ
ವನದೆಡೆಯಿಂ ಪೊರ್ದಿ ನೀಗಿದಪೆನೀ ತನುವಂ ೩೫

ಪರಿಜನಮನುಳಿದುಮುಳಿಪಂ
ತೊರೆದುಂ ಪೈಗರೆದುಮಲ್ಲಿ ನೀಗುವೆನೊಡಲಂ
ಪೆರತೇಂ ಮದರ್ಥಮವನಂ
ತಿರೆಗೈದಂ ನಾಂ ತದರ್ಥಮಂತುಟೆ ಗೈವೆಂ ೩೬

ಅಂತಾಗದಿರ್ಕೆನುತ್ತುಂ
ಕಾಂತೆಯ ನುಣ್ಗೊರಲನಪ್ಪಿದಂ ಮುನಿ ಸತಿಯುಂ
ಅಂತನುಚಿತಮಂ ಗೈದವ
ನಂ ತಿಟ್ಟಲ್ ತಿರುಗಿ ಕಂಡಳಿನಿಯನನವನಂ ೩೭

ತಿರುಗು ಮನಃಪ್ರಿಯೆ ಮನ್ನೀ
ತ್ರ್ರಸಾಯನೆ ನಿರುಕಿಸೆಲಗೆ ನಿನ್ನವನಂ ಮುಂ
ಪಿರಿದಿರ್ದನನಿನ್ನೆವರಂ
ಮರಳ್ದುಂ ನಿನ್ನೊಲ್ಮೆಗಿಂದು ಸಂದನನೆನ್ನಂ ೩೮

ಎನ್ನಯ ಸರ್ವಸ್ವಮೆ ಎಲೆ
ಎನ್ನಯ ಜೀವಿತಮೆ ಪಿರಿಯದೆಂದುಂ ನಿಲ್ವಂ
ತೆನ್ನೆರ್ದೆಯೊಳ್ ತಳ್ಕೈಸುತೆ
ನಿನ್ನಂ ನಾಂ ದುಃಖಮೆಲ್ಲಮಂ ಮರೆದಪ್ಪೆಂ ೩೯

ಇನ್ನೀ ಗಳಿಗೆಯೆ ಮೊದಲಿನೆ
ಮುನ್ನೆಂದುಂ ಪಿರಿಯದೊಲ್ದು ನಾಮೊಡವಾಳ್ವಂ
ನಿನ್ನೆರ್ದೆಯನೊಡೆವ ಸುಯ್ಗಳ್
ನಿನ್ನಯ ಮನದನ್ನನೆರ್ದೆಯುಮಂ ಭೇದಿಸುಗುಂ ೪೦

ಇಂತಿರಲಾ ಗೋಲ್ಡ್‌ಸ್ಮಿತ್ ಕವಿ
ಮುಂತೊರೆದಿರ್ದೊಂದು ಕಿರಿಯ ಕೃತಿಗಿದು ನೆಳಲಿಂ
ಬಂತಿರೆ ರಚಿಸಿದೆನೀ ಕೃತಿ
ಸಂತಸಮಂ ಕುಡುವುದಕ್ಕೆ ಕನ್ನಡಿಗರ್ಗಂ ೪೧

ದಿಲೀಪ ಚರಿತೆ

ಮೊದಲನೆಯ ಸಂಧಿ

ಕೋವಿದವ್ರಜಕೆ ಸಂ
ಭಾವನೀಯನೆನಿಪ್ಪ
ವೈವಸ್ವತಾಖ್ಯಮನುವವನೀಶರ
ಆವಳಿಗೆ ಮೊದಲಾದ
ನಾ ವಿಶ್ರುತಪ್ರಣವ
ಮೇ ವೇದಗಳಿಗೆ ಮೊದಲಾದ ತೆರದಿ ೧

ಅವನ ಶುದ್ಧಾನ್ವಯದೊ
ಳವತರಿಸಿ ಶುದ್ಧತರ
ನಿವನೆನಿಸಿದನು ದಿಲೀಪಾವನಿಪನು
ಛವಿವಡೆದ ಸವಿಗಡಲ
ಕುವರನಾ ಹಿವಕರಂ
ಧವಳತರನೆಂದೆನಿಸಿ ಸಂದ ತೆರದಿ ೨

ಆಗಲಿತಾದೆದೆಯಿಂದ
ಮಿಗೆ ಬಳೆದ ಹೆಗಲಿಂದ
ಮಿಗುವ ತೋಳಿಂದ ನಿಡಿಯೊಡಲಿನಿಂದ
ಸೊಗಯಿಸಿದನಾತ್ಮಕ
ರ್ಮಗಳನೆಲ್ಲವ ಗ್ರೈವ
ಬಗೆಯೊಳೊಡಲಾಂತ ನೃಪಧರ್ಮದಂತೆ ೩

ಮೇರುವಂತುಳಿದವರ
ಸಾರವಂ ಮೀರಿರ್ಪ
ಸಾರಮಂ ತಳೆದುಳಿದವರ ತೇಜಮಂ
ಬಾರಿಸುವ ತೇಜಮಂ
ಬೀರಿಯುನ್ನತಿವೆತ್ತು
ಧಾರಿಣಿಯನಾತನಾಕ್ರಮಿಸಿ ನಿಂದಂ ೪

ಒಡಲಿಗಿದು ತಕ್ಕುದೆನೆ
ಪಡೆದನುರೆ ಜಾಣನಾ
ಪಡೆದ ಜಾಣ್ಮೆಗೆಣೆಯೆನಿಸುವೋದುವಡೆದಂ
ಪಡೆದೋದಿಗುಚಿತವೆನೆ
ಪಿಡಿವನೊಳ್ಗಜ್ಜವಂ
ಪಿಡಿದ ಕಜ್ಜಕೆ ತಕ್ಕ ಫಲವ ಪಡೆದಂ ೫

ಎಂತು ರನ್ನಗಳಿಂದ
ಕಾಂತವೆಂದೆನಿಸಿ ಜಲ
ಜಂತುಗಳಿನಬ್ಧಿ ಭೀಕರವೆನಿಪುದು
ಅಂತು ಪರಿಜನಕವಂ
ಕಾಂತಗುಣದಿಂ ಸೇವ್ಯ
ನಂತಧೃಷ್ಯನುಮವಂ ಭೀಮಗುಣದಿ ೬

ಮನುವ ದಿನವಿಡಿದೀಗ
ಳಿನ ವಳೆಗಮೆಡೆಯಾಡಿ
ಕುನಿದ ಮಾರ್ಗದಿ ಗೆರೆಯನಿತನರಸನ
ಜನವಗಲದೈದಿದುದು
ಸುನಿಯಂತ್ರವೆಸಪ ತೇ
ರಿನ ಗಾಲಿಗಳ ನೇಮಿಗಳ ಪರಿಯಲಿ ೭

ಜನರೇಳ್ಗೆಯನೆ ಪಡೆವ
ಮನದಿಂದೆ ತೆರಿಗೆಯನು
ಜನರಿಂದ ಕೊಂಡನಾ ಜನಪಾಲನು
ಕೊನೆಗೆ ಸಾಸಿರ್ಮಡಿಯು
ನನುಗೊಳಿಸಿ ಕುಡಲೆಂದು
ದಿನನಾಥನುದಕವಂ ಕೊಳ್ವ ತೆರದಿ ೮

ಕೊಡೆಯಂತೆ ಪಡೆಯುಮಾ
ಪೊಡವಿಯೊಡೆಯಂಗೊಂದು
ತೊಡವಾದುದಖಿಳಶಾಸ್ತ್ರಂಗಳಲ್ಲಿ

ತೊಡರರಿಯದರಿವುಮಾ
ಪಿಡಿದೇರಿಸಿದ ಬಿಲ್ಲು
ಮೊಡನಾತನರ್ಥಸಾಧನವಾದುವು ೯

ಮರಸುತ್ತೆ ಮಂತ್ರಮಂ
ಮರಸುತಾಕಾರಮಂ
ಮರಸುತಿಂಗಿತವನಪನೆಸಪೆಸಕವಂ
ಅರಿಯಲಪ್ಪುದು ಫಲದಿ
ನರಿವಂತೆ ಫಲದಿನಾ
ದೊರೆವೆತ್ತ ಪೂರ್ವಸಂಚಿತ ಪುಣ್ಯವಂ ೧೦

ಭೀತನಲ್ಲದೆ ತನ್ನ
ನಾತನೋವಿದನಂತು
ಟಾತುರನುಮಲ್ಲದಿತ್ತನು ಟಾಗವ
ಪ್ರೀತಿಗೆದೆಗುಡದರ್ಥ
ಜಾತವನು ಗಳಿಸಿದನು
ಸೋತು ಸಿಲುಕದೆ ಸುಖವ ಸೇವಿಸಿದನಂ ೧೧

ತಿಳಿದೊಡಂ ಮೌನಮಂ
ಬಲವಿರ್ದೊಡಂ ಕ್ಷಮೆಯ
ನೆಳಸಿ ಕೊಟ್ಟುಂ ಸ್ತೋತ್ರವಿಮುಖತೆಯನಂ
ತಳೆಯಲೊಡಮೀ ಗುಣಾ
ವಳಿಯೆಲ್ಲವೊಡವುಟ್ಟಿ
ಬಳೆದುವೆನೆ ಕೆಳೆಗೊಂಡುವಾ ನೃಪನೊಳು ೧೨

ಬಲಿದ ವಿಷಯಾವಳಿಗೆ
ಸಿಲುಕದಿರ್ದುದರಿಂದ
ಕಲೆಗಳನಿತಂ ಕಲ್ತು ಬಾಣ್ಮೆಯಿಂದ
ನಲವಿಂದ ಧರ್ಮದೊಳು
ನೆಲೆಗೊಂಡ ಕತದಿಂದ
ನೆಲಸಿತವನೊಳಂ ಜರೆಯನುಳಿದ ಮುಪ್ಪು ೧೩

ನೀತಿಯಂ ಕಲಿಸುತಂ
ಭೀತಿಯಂ ಕಳೆಯುತಂ
ಪ್ರೀತಿಯಿಂ ಪೊರೆದುದರಿನವನು ಜನರ್ಗೆ
ತಾತನೆನಿಸಿದನವರ
ತಾತಂದಿರವರ್ಗೆ ಪೆ
ತ್ತಾತಂಗಳಲ್ಲದಿನ್ನೇನಪ್ಪರು ೧೪

ನಾಡ ಸುಸ್ಥಿತಿಗಾಗಿ
ಕೇಡಿಗರನಿಕ್ಕಿದಂ
ನಾಡೆ ಸುತರಂ ಪಡೆಯೆ ಮಂದುವೆನಿಂದಂ
ನಾಡೆರೆಯನರ್ಥದೊಡ
ಗೂಡಿದಾ ಕಾಮಮೊಡ
ನಾಡಿಯಾಂಯ್ತಾ ಮನೀಷಿಯ ಧರ್ಮಕೆ ೧೫

ಕರೆದನಿಳೆಯಂ ಯಜ್ಞ
ವಿರಚನೆಗೆ ನೃಪವರಂ
ಸುರಪನುಂ ಬೆಳೆಗಾಗಿ ಮಳೆಗರೆದನುಂ
ಸುರಪತಿಯ ಸಿರಿಯಿಂದ
ನರಪನಿಳೆಯಂ ನೃಪನ
ಸಿರಿಯಿಂದ ಸುರಪನುಂ ದಿವಮ ಪೊರೆದಂ ೧೬

ಧರೆಯನೀ ಪರಿ ಪೊರೆವ
ನರಪಯಶಮುಂ ಮತ್ತಿ
ನರಸರನುಕರಿಸರೆನಲವನಿಳೆಯೊಳು
ಪರರ ವಸ್ತುವ ಕಳ್ವ
ತೆರನುಳಿದು ಚೌರ್ಯಮಪ
ಹರಿಸಿದುದು ತನ್ನ ಹೆಸರಕ್ಕರವನು ೧೭

ಇಷ್ಟನೆಂದೆನಿಸದೊಡ
ಮಿಷ್ಟನಹನರಸಂಗೆ
ಶಿಷ್ಟನೌಷಧಮೆಂತು ರೋಗಿಗಂತು

ಇಷ್ಟನೆಂ(ದೆ)ನಿಸಿದೊಡ
ಮಿಷ್ಟನಾಗಂ ಪ್ರಭುಗೆ
ದುಷ್ಟನುರಗಂ ಕೊಂಡ ಬೆರಲಿನಂತೆ ೧೮

ಅವನನಂಬುರುಹಸಂ
ಭವನಾ ಮಹಾಭೂತ
ನಿವಹದಿಂ ಸೃಷ್ಟಿಸಿದನಲ್ಲದಿರಲು
ಅವನೀಶನುದ್ಧ್ಯಗುಣ
ನಿವಹಮೆಲ್ಲಮುಮಿಂತು
ಸವನಿಸಲು ನೆರೆವವೇಃ ಪರರರ್ಥವ ೧೯

ಕಡಲ ತಡಿಯೇ ಕೋಟೆ
ಕಡಲು ಹೇರಗಳೆನಿಸೆ
ಪೊಡವಿಯೆಲ್ಲವನೊಂದೆ ಪೊಳಲಿನಂತೆ
ಪೊಡವಿಪತಿ ಸಲಹಿದನು
ಬಡರಾಯರುಳಿದವರು
ಪಡೆವರೇ ಪೊರೆವರೇ ನೆಲನನಿಂತು ೨೦

ಮಗಧಭೂಪಾಲಕನ
ಮಗಳು ದಾಕ್ಷಿಣ್ಯದಿಂ
ನೆಗಳ್ದ ಸುದಕ್ಷಿಣಾದೇವಿವೆಸರ
ಮೃಗವಿಲೋಚನೆ ಭೂಪ
ತಿಗೆ ಪತ್ನಿಯೆನಿಸಿದಳಂ
ನೆಗಳ್ದಧ್ವರವನೊಲ್ದ ದಕ್ಷಿಣೆವೊಲು ೨೧

ಅರಮನೆಯೊಳಗೆ ಹಲಬ
ರರಸಿತಿಯರಿರ್ದೊಡಂ
ಸ್ಥಿರಮತಿ ಸುದಕ್ಷಿಣಾದೇವಿಯಿಂದ
ಎರವಿಲ್ಲದೊಂದಿರ್ಪ
ಸಿರಿಯಿಂದಮಾ ನೃಪತಿ
ಯರಸಿವಂತನೆನುತ್ತೆ ತನ್ನನರಿದಂ ೨೨

ತನಗೆ ದೊರೆಯೆನಿಸಿದಾ
ಮನದನ್ನಳುದರದಲಿ
ತನಯರುದಿಸುವರೆಂಬ ಬಯಕೆಯಿಂದ
ದಿನಗಳನು ನೂಕಿದನು
ಮನದ ಬಯಕೆಯು ಬಳ್ಳಿ
ನನೆವೋಗಿ ಫಲಿಸದುರೆ ಬರಡಾಗಲು ೨೩

ಸುತಸಂಪದವನೀವ
ವ್ರತಗಳನು ವಿರಚಿಸುವ
ಮತಿಯಿಂದ ತನ್ನ ಭುಜದಿಂದವಿಳಿಸಿ
ಕ್ಷಿತಿಭರವನತಿಸೂಕ್ಷ್ಮ
ಮತಿವಡೆದ ನಿಜಸಚಿವ
ತತಿಯೊಳಗೆ ಧರಣಿಪತಿ ನಿರಿಸಿ ಬಳಿಕ ೨೪

ಕಿರುಳರಂ ಪಡೆಯೆ ಭೂ
ವರನುಮವನರಸಿಯುಂ
ಪರಮೇಷ್ಠಿಯಂ ಪೂಜೆಗೈದು ತಮ್ಮ
ಗುರುಗಳೆನಿಸಿದ ವಸಿ
ಷ್ಠರ ತಪೋವನದೆಡೆಗೆ
ತೆರಳಲಾ ದಂಪತಿಗಳನುವಾದರು ೨೫

ಕಾರ ಮುಗಿಲೊಂದನೊಲಿ
ದೇರಿದವು ಸೆಳೆಮಿಂಚು
ಮೈರಾವತಮುಮೆನಿಸಿ ದಂಪತಿಗಳು
ಏರಿದರು ಸಾಂದ್ರಗಂ
ಭೀರರವದಿಂ ಮೆರೆವ
ತೇರನೊಂದನು ಪಯಣದುಜ್ಜುಗದಲಿ ೨೬

ಸೇನೆಯೊಡವೋದೊಡೆ
ತ್ತಾನುಮಪ್ಪುದು ಪೀಡೆ
ಮೌನಿಜನಕೆನುತೆ ಕೆಲವಂದಿಯೊಡನೆ

ಆ ನೃಪತಿ ನಡೆದೊಡಂ
ಸೇನೆಯೊಡನಿರ್ದಂತೆ
ತಾನೊಪ್ಪಿದನು ರಾಜತೇಜದಿಂದ ೨೭

ಇನಿಸಿನಿಸು ತರುಶಿರವ
ತೊನೆಯಿಸುತುಮಂರೆವಿರಿದ
ನನೆಗಳ ಪರಾಗವನು ಕೆದರಿ ಸಾಲಾ
ವನಿಜನಿರ್ಯ್ಯಾಸಗಳ
ತನಿಗಂಪನಾಂತೆಲರು
ಜನಪರನು ಸೇವಿಸಿತು ಮಾರ್ಗದಲ್ಲಿ ೨೮

ಗಾಲಿಗಳ ಬಲ್ಲುಲಿಯು
ನಾಲಿಸುತ ನಿಡುಗೊರಲ
ಮೇಲಕ್ಕೆ ನೀಡುತುಂ ಸೋಗೆನವಿಲು
ಸೀಳಿ ಷಡ್ಜವನೆರಡು
ಪೋಳುಗ್ಗೈದಂತುಲಿಯೆ
ಕೇಳುತುಂ ಸಾರ್ದರಾ ದಂಪತಿಗಳು ೨೯

ದಾರಿಯಿಂದಿನಿಸಗಲಿ
ತೇರೊಳಗೆ ಕಣ್ಣಿಟ್ಟು
ಸಾರೆ ನಿಂದೆರಲೆಗಳ ಕಣ್ಗಳಲ್ಲಿ
ಓರೊರ್ವರಕ್ಷಿಗಳಿ
ಗೋರಗೆಯನೀಕ್ಷಿಸುತೆ
ಸಾರಿದರು ಮಾರ್ಗದೊಳು ದಂಪತಿಗಳು ೩೦

ಪಿಡಿಗೋಲುಂಗಳನುಳಿದ
ನಡೆದೋರಣಗಳಂತೆ
ಜಡೆದಮಾರ್ಗದಿ ಪೋಪ ಸಾರಸಗಳ
ಕಡುಮೆಲ್ಲುಲಿಗಳವರ
ಕೊಡಕೆಯನು ಪುಗೆ ಮೇಗೆ
ನಡೆ ನೋಡುತುಂ ಮುಂದೆ ಪೋದರವರು ೩೧

ಅನುಕೂಲವಾಗಿ ಸುಳಿ
ವನಿಲನಿರುಪಿದೊಡವರ
ಮನದಿಷ್ಟಸಿದ್ಧಿಯನು ತಳೆರ್ದರವರು
ಜನಪತಿಯ ಶೀಸಕಮುಂ
ಮಿನಿಯಳಳಕಾವಳಿಯುಂ
ಮನುಗೆಡವು ತುರಗೋತ್ಥರಜದಿನೆನಿಸಿ ೩೨

ಸರಸಿಯೊಳು ಕಿರುದೆರೆಯು
ತುರುಗಲೊಳು ತಂಪಾದ
ಸರಸಿರುಹಸಂಕುಲದ ಸವಿಗಂಪನು
ಪರಿಮಳದಿ ತಮ್ಮ ಸು
ಯ್ಯೊರೆಯೆನಿಸುವದನವರು
ಹರಿಸದಲಿ ಸೇವಿಸುತೆ ಸಾರೆ ಮುಂದೆ ೩೩

ನಟ್ಟ ಯೂಪಂಗಳಿಂ
ದಿಟ್ಟಣಿಪ ತಮ್ಮ ಮುಂ
ಬಿಟ್ಟ ಹಳ್ಳಿಗಳಿಂದ ಯಜ್ವರೈದಿ
ಕೊಟ್ಟರ್ಘ್ಯದೊಡನೆ ಬಳಿ
ಯಿಟ್ಟ ಪರಕೆಯ ತಳೆದು
ಬಟ್ಟೆಯೊಳು ಸಾರಿದರು ಸಂತಸದಲಿ ೩೪

ತಳೆದು ಬೆಣ್ಣೆಯ ಹರವಿ
ಗಳನು ಮಾರ್ಗದಿ ಬಂದ
ಕೆಲದ ಹಳ್ಳಿಗಳ ಮುದುಗೋವರಿಂದ
ತಿಳಿಯುತ್ತೆ ಪಕ್ಕದೊಳು
ಬೆಳೆದಿರ್ದ ಕಾಡ ಮರ
ಗಳ ಹೆಸರನಲ್ಲಿಂದ ಮುಂದೆ ಪಥದಿ ೩೫

ಪರಿಶುದ್ಧವೇಷದಿಂ
ದರಸಿಯುಂ ನರಪನುಂ
ತೆರಳುತೊಪ್ಪಿದರೊಂದು ಕಾಂತಿಯಾಂತು

ತುರುಗಿದ ಹಿಮಂ ಕಳೆಯೆ
ಸುರಭಿಯೊಳು ಚಿತ್ರೆಯುಂ
ಪರಿಪೂರ್ಣಚಂದ್ರನುಂ ಕೂಡಿದಂತೆ ೩೬

ಇನಿಯಳಾಲೋಕಿಸುವೊ
ಡಿನಿದೆನಿಪ ವಸ್ತುವನು
ಮನಸಿಜಾಕಾರನೊಲ್ದಾಯ್ದು ತೋರಿ
ಮನದನ್ನಳಿಗೆ ಮುದವ
ನನುಗೊಳಿಸುತಾ ಮಾರ್ಗ
ವನಿತುವನು ದಾಟಿದೊಡಮರಿದನಿಲ್ಲ ೩೭

ಪೊಡವಿಯರಸೀ ತೆರದಿ
ಮಡದಿಯೊಡನಾ ಹಾದಿ
ಯೊಡೆಯು ಕಳೆದಾ ತಪೋಧನನ ಬನಕೆ
ಪಡುನೇಸರೊಳಗೈದಿ
ನಡೆತಂದನಶ್ವಗಳುಂ
ನಡೆನಡೆದು ನೆರೆ ಬಾಡಿ ಬಸವಳಿದಿರೆ ೩೮

ಕೆಲಬಲದ ಹಳುವದೊಳು
ತೊಳತೊಳಲಿ ಕುಶಗಳನು
ಫಲಗಳನು ಸಮಿಂಧೆಗಳನಾಂತು ಬಂದು
ತಲೆಗರೆದ ವಹ್ನಿಯಿದಿ
ರ್ಗೊಳೆ ಬನವ ಪುಗುವ ಮುನಿ
ಕುಲವನವಲೋಕಿಸಿದನವನೀಶನು ೩೯

ಒಲವರದಿ ನೀವಾರ
ಗಳ ಹಿಡಿಯನಿತ್ತು ಮು
ಕ್ಕಳಿನಲ್ಕೆ ಕಾಪಿಟ್ಟ ಹುಲ್ಲೆವಿಂಡು
ಎಲೆವನೆಯ ಬಾಗಿಲೊಳು
ನೆಲೆ ನಿಂದುದನು ನೋಡು
ತೊಳಪೊಕ್ಕನಾಶ್ರಮವನಿಳೆಯರಸನುಂ ೪೦

ಪ್ರೀತಿಯಿಂ ಮುನಿಕನ್ಯೆ
ಪಾತೆಗಂಬುವನೆರೆಯೆ
ಲಾತುರದಿ ಪಕ್ಕಿಗಳು ಪಾರಿ ಬಂದು
ಭೀತಿಯೆಳ್ಳನಿತಿಲ್ಲ
ದಾ ತೋಯಮಂ ಕುಡಿವ
ರೀತಿಯನು ನೋಡಿದನು ನಾಡೆರೆಯನು ೪೧

ಬಿಸಿಲಿಳಿಯಲೊಡನೆ ಪುಂ
ಜಿಸಿದ ನೀವಾರಗಳ
ಹಸರದಿಂ ಕಂಗೊಳಿಸುವಂಗಳದಲಿ
ಒಸೆದು ಮೆಲ್ಕನು ಮಾಡು
ತೆಸೆದಿರ್ದ ಹುಲ್ಲೆಗಳ
ವಿಸರವನು ಧರಣಿಪತಿ ನಿರುಕಿಸಿದನು ೪೨

ಉರಿವ ವಹ್ನಿಗಳಿಂದ
ಹೊರಹೊಮ್ಮಿಯಾಹುತಿಯ
ಪರಿಮಳವ ತಳೆದ ಹೊಗೆ ಮರುತನಿಂದ
ಮುರಿವೋಗಿ ಬನದೆಡೆಗೆ
ತೆರಳಿ ಬರ್ಪತಿಥಿಗಳ
ಪರಿಪೂತವೆಂದೆನಿಸಿ ಸಂದುದಂದು ೪೩

ವಾರುವಂಗಳ ನಿಲಿಸೆ
ಸಾರಥಿಗೆ ಬೆಸನಿತ್ತು
ನೀರೆಯನು ತೇರಿಂದಲಿಳಿಸಿ ಬಳಿಕ
ತೇರಿಂದ ತಾನಿಳಿದು
ಭೂರಮಣನೊಲವಿಂದ
ಸಾರಿದನು ರಾಣಿಯೊಡನಾಶ್ರಮವನು ೪೪

ಸತಿಯೊಡನೆ ಬಂದ ಭೂ
ಪತಿಯನೀಕ್ಷಿಸಿ ವಿನಿ
ರ್ಜಿತವಿಷಯರಪ್ಪ ಮುನಿವರ್ಯರೈದಿ

ಅತಿಶಯಾದರದಿ ಸ
ತ್ಕೃತಿಗಳನು ಮಾಡಿದರು
ಕೃತಮತಿಗೆ ಪೂಜ್ಯಂಗೆ ನಯವಿದಂಗೆ ೪೫

ತೆರಳಿ ಮುಂಪಕೆ ನಡೆದು
ವರ ಸಾಂಧ್ಯಕರ್ಮವನು
ವಿರಚಿಸಿ ಸುಖಾಸನದಿ ಪತ್ನಿಯೊಡನೆ
ಬೆರಸಾತ್ಮಸತಿಯೊಡನೆ
ಮೆರೆವಗ್ನಿಯಂತಿರ್ದ
ಗುರುವೆಡೆಗೆ ನಡೆತಂದು ದಂಪತಿಗಳು ೪೬

ಗುರುವ ಮೇಣ್ಗುರುಸತಿಯ
ಚರಣಂಗಳನು ಪಿಡಿದು
ಪರಮಭಕ್ತಿಯೊಳಿರದೆ ಪೊಡಮಟ್ಟರು
ಗುರುಗಳುಂ ಪ್ರೀತಿಯಿಂ
ಪರಸಿ ನಲ್ವರಕೆಯನು
ಹರಿಸವನು ಹೊಮ್ಮಿಸಿದರವರೆದೆಯೊಳು ೪೭

ಬಳಿಕತಿಥಿಸತ್ಕಾರ
ಗಳನೆಸಗಿ ಪಥಖೇದ
ವಳಿವಂತೆ ಮಾಡಿ ಋಷಿ ರಾಜಋಷಿಯಂ
ಎಳನಗೆಯ ಮೊಗದಿಂದ
ವೆಲೆ ನೃಪತಿ ನಿನ್ನ ಭೂ
ತಳದಿ ಕುಶಲವೆಯೆಂದು ಬೆಸಗೊಂಡನು ೪೮

ಕೇಳಲೊಡನೆದ್ದು ಭೂ
ಪಾಲಕನು ರಿಪುಮದನ
ಕಾಲಕಂಠನು ವಚನವಿದರೆರೆಯನು
ಹೇಳಿದನು ಸಕಲಮುನಿ
ಪಾಲಂಗಥರ್ವವಿ
ದ್ಯಾಲಯಂಗುಚಿತವಚನಂಗಳಿಂದ ೪೯

ಸಂಗಳಿಸಿದತ್ತು ಸ
ಪ್ತಾಂಗದೊಳಗೆಲ್ಲಿಯುಂ
ಪಿಂಗದಿಹ ಕುಶಲಸಂತತಿಯೆನ್ನೊಳು
ಪೊಂಗಿ ಬರುವಖಿಳವಿಪ
ದಂಗಳನು ನಿಮ್ಮಡಿಯೆ
ಭಂಗಿಸುತ ಕಾಪಿಡುವ ಕತದಿನೀಗ ೫೦

ಶೂರನಹ ವೈರಿಯನು
ದೂರದೊಳೆ ತಾರಿಸುವ
ಸಾರವಹ ನಿಮ್ಮ ಮಂತ್ರಗಳ ಕಂಡು
ಸಾರೆಯಿಹ ವೈರಿಯನೆ
ಗೋರುಮೀ ಕೂರಂಬು
ಸಾರವಳಿದಿಹುದಿಂತು ನಾಣ್ಚಿದಂತೆ ೫೧

ಕಾಲಕಾಲಕೆ ನೀವು
ಪೇಳುವೀ ಕಾರಣದಿ
ಕಾಲಕಾಲಕೆ ಮಳೆಗಳಿಳೆಗೆ ಸುರಿದು
ಶಾಲಿ ಮೊದಲಾದುವನು
ಪಾಲಿಸುವ ಕತದಿಂದ
ಕಾಲಿಡದು ಬರವೆಂಬುದೀ ನಾಡೊಳು ೫೨

ಈತಿಯಿಲ್ಲದೆ ಮೃತ್ಯು
ಭೀತಿಯಿಲ್ಲದೆ ಕಿರಿದುಂ
ಮಾತಂಕವಿಲ್ಲದೀ ಪ್ರಜೆಗಳಿರುವ
ಈ ತೆರದ ಸಿರಿಗೆ ಜೀ
ವಾತುವಾದುದು ನಿಮ್ಮ
ಪೂತವಹ ಬ್ರಹ್ಮವರ್ಚಸವೆಂಬುದು ೫೩

ಪರಮೇಷ್ಠಿಸುತರಾಗಿ
ಗುರುವಾಗಿ ನೀವಿಂತು
ಪರಿಪಾಲನವಗೈಯುತಿರಲೆನ್ನನುಂ

ಸಿರಿಯೊಸೆದಂ ನೆಲೆನಿಲ್ವು
ದರಿದೆ ವಿಪದಗಳನಿತು
ಪರಿಹಾರವಾಗುವುದಿದೇನು ಹಿರಿದೆ ೫೪

ಪೆರತೇನೊ ತಮ್ಮ ಸೊಸೆ
ದೊರೆಯುಪ್ಪ ಪುತ್ರನನು
ಹೆರದಿರಲು ನೋವಾಂತ ನನ್ನ ಮನಕೆ
ಕುರುವಗಳನೊಳಕೊಂಡ
ಧರಣಿ ರನ್ನಗಳ ಮಳೆ
ಗರೆದೊಡಂ ಸಂತಸವನೀಯದೀಗ ೫೫

ನಾನೀವುದೇ ಪಿಂಡ
ದಾನಕ್ಕೆ ಕಡೆಯೆನುತೆ
ಮಾನಸದಿ ಮರುಗುತ್ತೆ ಪಿತರರಕಟಾ
ನಾನೀವುದನು ತಣಿವ
ನಾನಂವಿನಮುಣ್ಣದಿನಿ
ತಾನುಮುದನಿರದೆ ಸಂಗ್ರಹಿಸುತಿಹರು ೫೬

ಪಲವಾಡಲೇನು ನಾಂ
ಕಳಿದ ಬಳಿಕಂ ತಮಗೆ
ಜಲತರ್ಪಣವು ದೊರೆಯದೆನುತಕ್ಕಟಾ
ಅಳಲಂತ್ತೆ ಬಿಸುಸುಯ್ಯ
ಬಳಗದಲಿ ನಸುಗಾದ
ಜಲವ ಕೊಳ್ವಂತಾಯ್ತು ಪಿತೃದೇವರು ೫೭

ವಿರಚಿಸಿದ ಯಜ್ಞದಿಂ
ಪರಿಪೂತನಾದೊಡಂ
ಕಿರುಳರನು ಪಡೆಯದಾಂ ಕಾಂತಿಗೆಟ್ಟು
ತರಣಿಯಿಂದೊಂದು ಕಡೆ
ಯಿರುಳಿಂದದೊಂದು ಕಡೆ
ಬೆರೆದ ಲೋಕಾಲೋಕದಂತಾದೆನಂ ೫೮

ಪರಲೋಕಸುಖವೊಂದೆ
ದೊರೆವುದಿಳೆಯೊಳು ಗೈದ
ವರತಪದ ದಾನಗಳ ಪುಣ್ಯದಿಂದ
ಪರಿಶುದ್ಧ ವಂಶದೊಳು
ದೊರೆದ ಸಂತತಿಯಿಹದ
ಪರದ ಸೌಖ್ಯಕೆ ತಾನು ನೆಲೆಯುಪ್ಪುದು ೫೯

ಮುಂತೆ ನೀರೆರೆದು ಸುತ
ನಂತೆ ಪೊರೆದಾಶ್ರಮೋ
ಪಾಂತವೆಳಗಿಡು ಬಂಜೆಯಾದ ತೆರದಿ
ಸಂತತಿಯ ಪಡೆಯದಾ
ನಿಂತಿರೆಯುಂಮಕಟ ನಿ
ಶ್ಚಿಂತರಾಗಿರುವರೇ ತಂದೆ ನೀವು ೬೦

ಕೊಳದೊಳೋಲಾಡಲ
ವ್ವಳಿಪ ಗಜಪತಿಗೆ ಸಂ
ಚಳನಕೆಡೆಗುಡದ ಬಾಳ್ಗೆಂಬದಂತೆ
ಅಲುಗಲೆಡೆಗುಡದೆ ಕೋ
ಟಲೆಗೊಳಿಸಿ ಸುಡುವುದೆ
ನ್ನೊಳಗನಕಟಕಟ ಪಿತೃಋಣವೆಂಬುಂದುಂ ೬೧

ಇಂದೊದಗಿದೀ ದುಃಖ
ದಿಂದ ನನ್ನನು ಹೊರೆದು
ಮುಂದೆ ನಾನೆಸಗುವುದ ಬೆಸಸು ತಂದೆ
ಎಂದುಮಿಕ್ಷ್ವಾಕುನೃಪ
ರೊಂದದಿಹ ಸಂಪದವ
ತಂದು ಕೊಡಿವುವು ನಿಮ್ಮಡಿಗಳಲ್ತೆ ೬೨

ಎನುತೊರೆದ ಜನಪತಿಯಂ
ಮನದ ಮರುಕಕೆ ಮರುಗಿ
ಮುನಿಪತಿಯುಂ ಕಣ್ಮುಚ್ಚಿ ಮೌನದೊಳಗೆ

ಇನಿಸು ಹೊತ್ತಿರುವೆಡೆಯೊ
ಳನುಕರಿಸಿದನು ವಿಹಂಗ
ಳಿನಿಸುಮಲುಗದೆ ನಿಂದ ಮಡುವಿನಿರವ ೬೩

ಭೂನಾಥನಂದರದೊಳಂ
ಸೂನು ಜನಿಸದುದಕ್ಕೆ
ದೇನು ಕಾರಣವೆನುತ ಬಗೆದು ನೋಡಿ
ಜ್ಞಾನದೃಷ್ಟಿಯೊಳರಿತು
ತಾನದರ ವಿವರವನು
ಸಾನುಕಂಪದಿ ನೃಪತಿಗೊರೆದನಿಂತು ೬೪

ಅರಸ ನೀನೊಮ್ಮೆ ಸುರ
ಪರಿವೃಢನ ಬಳಿಗೈದಿ
ಮರಳುವಂದಾ ಪಥದಿ ಕಲ್ಪಕುಜದ
ಹಿರಿದಪ್ಪ ನೆಳಲಿನೊಳಂ
ಸುರಧೇನುವಿದ್ದುದದ
ನರಿದುಮೆಲೆ ಧರ್ಮಜ್ಞತಿಲಕ ನೀನು ೬೫

ಅರಸಿತಿಯ ಕಾಣುವಾ
ತುರದಿಂದಲಾ ಪಶುವ
ಚರಣಕೆರಗದೆಯುವಳ ಬಲವಾರದೆ
ಪರಿಚರ್ಯೆಯಿಂದ ಸ
ತ್ಕರಿಸದುದ್ಧತನಂತೆ
ಮರೆದೆಯಾಕೆಯನದರಿನಾಕೆ ಮುಳಿದು ೬೬

ಎಲೆ ನನ್ನನಿಂತು ನೀ
ನಿಳಿಕೆಗೈದರಮನೆಗೆ
ತಳರ್ವೆಯದರಿಂದ ನೀಂ ಮುಂದೆ ನನ್ನ
ಕುಲದೊಳುದಿಸಿದ ಹಯನ
ನೋಲಿಸಿದಲ್ಲದೆ ನಿನ್ನ
ಕುಲವಧುಗೆ ಸುತರಾಗರೆನುತ ಶಪಿಸೆ ೬೭

ಸುರನದಿಯೊಳೋಲಾಡಿ
ಹರಿಸದಲಿ ಬೊಬ್ಬಿಟ್ಟ
ಸುರಕರಿಯ ಘೀಂಕಾರರಭಸದಿಂದ
ತುರುವ ಶಾಪಾಕ್ಷರವ
ನರಿದೆಯಿಲ್ಲರಸ ನೀ
ನರಿಯನೊಡನಿರ್ದ ಸಾರಥಿಯುಮದನು ೧೮

ಸುರಧೇನುವನು ನೀನು
ಮರೆದುದೇ ತಡೆಯಾಯ್ತು
ನರಪಾಲ ನಿನ್ನಿಷ್ಟಸಂಸಿದ್ಧಿಗೆ
ಹಿರಿಯರಿಗೆ ಪೂಜ್ಯರಿಗೆ
ಶಿರವ ಬಾಗಿಸದಿರಲು
ಸಿರಿಗದುವೆ ತಡೆಯಹುದು ಚೋದ್ಯವೇನು ೧೯

ಈಗಳ್ ಪ್ರಚೇತಸನು
ಭೋಗಿಲೋಕದಿ ಗೈವ
ಯಾಗಕ್ಕೆ ಸಾಲ್ವನಿತು ಹವಿಯ ಕೊಡಲು
ಪೋಗಿಹುದು ಸುರಭಿಯಾ
ನಾಗಗಳೆ ದೂತರೆನೆ
ಬಾಗಿಲನು ಕಾದಿರ್ಪ ಪಾತಾಳಕೆ ೨೦

ಆದರಿಂದ ತತ್ಕುಲದೊ
ಳುದಿಸಿರ್ಪ ನಂದಿನಿಯ
ನೊದವಿರ್ದ ಭಕ್ತಿಯಲಿ ಶುದ್ಧನಾಗಿ
ಸುದತಿಯೊಡನುಪಚರಿಸು
ಮುದದಿಂದ ನಿನಗೆ ಬೇ
ಳ್ಪುದನೀವೆಡೆಯೊಳಿವಳೆ ಕಾಮಧೇನು ೨೧

ಎನುತ ಮುನಿ ನುಡಿದ ನುಡಿ
ಕೊನೆಗೈದುವದಕೆ ಮುಂ
ಮುನಿಪತಿಯ ಹವಿಗೆ ಸಾಧನವೆನಿಸುವ

ಅನವದ್ಯಮೆನಿಪ ನಂ
ದಿನಿಯಾಗಳೈದಿದುದು
ವನದತ್ತಣಿಂದಾಶ್ರಮದ ಮಧ್ಯಕೆ ೭೨

ತಳಿರ ಬಣ್ಣದ ಮೆಯ್ಯ
ತಳೆದು ಪೊಗದೊಳು ಮುರಿದ
ಬಿಳಿಯ ಮುತ್ತಿಯನಾಂತ ಹೋಮಧೇನು
ಎಳೆವೆರೆಯ ಪಡೆದು ಕಂ
ಗೊಳಿಪ ಸಂಜೆಯ ಸೊಬಗ
ನಿಳಿಸಿಯಾಶ್ರಮದೊಳಗೆ ಬರುತಿರ್ದುದು ೭೩

ಕರುವನೀಕ್ಷಿಸುತೆ ಕ
ಟ್ಟೆರಕದೊಳು ಕೆಚ್ಚಲೊಳ
ಗೊರೆತ ನಸುಬಿಸುಪಾಂತ ಹಾಲ ಹೊನಲ
ಪರಿಪೂತವಾಗಿರ್ದ
ಹೊರಳಿಯೊಳಗಾಶ್ರಮದ
ಧರಣಿಯನು ಸಿಂಪಿಸುತ ಬಂದುದಾಗ ೭೪

ವರತೀರ್ಥಜಲದಿಂದೆ
ಪರಿಶುದ್ಧಿಗೈವಂತೆ
ಚರಣಹತಿಯೊಳಗೆದ್ದ ಧೂಳಿಯಿಂದ
ಅರಸನೊಡಲನು ಹಿರಿದು
ಪರಿಪೂತವನೆ ಮಾಡಿ
ತೆರಳಿ ಬಂದುದು ಮೌನಿತಿಲಕನೆಡೆಗೆ ೭೫

ಅಂತು ನಡೆತಂದ ಹಸು
ವಂ ತಪೋನಿಧಿ ಕಂಡು
ಮುಂತಣದೊಳರಿದದರ ಶುಭಫಲವನು
ಮುಂತೇನು ನೃಪನೆಳಸಿ
ದಂತೆ ಫಲಿಸಿತ್ತೆನುತೆ
ಸಂತಸದಿ ನರಪತಿಯೊಳೊರೆದನಿಂತು ೭೬

ಹೆಸರಕ್ಕರವನು ಕೀ
ರ್ತಿಸಲೊಡನೆ ಕಲ್ಯಾಣಿ
ಯೊಸೆದೆಮ್ಮ ಬಳಿಗೆ ನಡೆತಂದ ಕತದಿ
ವಸುಧಾಧಿನಾಥ ನೀಂ
ಬಿಸುಡು ಮನದಳಲನಿ
ನ್ನು ಸಮೀಪವಾದುದಿಷ್ಟಾರ್ಥಸಿದ್ಧಿ ೭೭

ಕಂದಮೂಲಂಗಳನು
ತಿಂದು ತೃಪ್ತಿಯ ಪಡೆದು
ನಂದಿನಿಯ ಬೆನ್ನ ಬಿಡದಿರ್ದು ನೀನು
ಸಂದೋದನಭ್ಯಾಸ
ದಿಂದವೋಲಗಿಸುವೊಂ
ದಂದದೊಳಗೋಲಗಿಸು ಭಕ್ತಿಯಿಂದ ೭೮

ಇವಳು ನಡೆದೊಡೆ ನೀನು
ಮಿವಳೊಡನೆ ನಡೆ ಮತ್ತ
ಮಿವಳು ನಿಂದೊಡೆ ನೀನುಮೊಡನೆ ನಿಲ್ಲು
ಇವಳಂ ಕುಳಿತೊಡೆ ನೀನು
ಮಿವಳೊಡನೆ ಕುಳಿತುಕೊ
ಳ್ಳಿವಳು ಕುಡಿದೊಡೆ ನೀನು ಕುಡಿ ಜಲವನು ೭೯

ಅರಸಿತಿಯುಮತಿಭಕ್ತಿ
ವೆರಸು ನಂದಿನಿಯನುಪ
ಚರಿಸುತಾಶ್ರಮದ ಕಡೆಗಡಿಯ ವರೆಗೆ
ತೆರಳಲಿವಳೊಡನೆ ಪೊ
ಳ್ತರೆ ಮತ್ತೆ ಸಂಜೆಯೊಳಂ
ಮರಳಿ ಬರುವವಳನಿವಳಿದಿರುಗೊಳಲಿ ೮೦

ಸುರಭಿ ನಿನಗೊಲಿವನ್ನೆ
ವರೆಗಮುಪಚರಿಸುತಿರು
ಪರಿಹಾರವಕ್ಕಖಿಲ ವಿಘ್ನಸಮಿತಿ

ವರದ ಬಲದಿಂದ ಪು
ತ್ರರನು ಪಡೆದೆಲ್ಲರಿಗೆ
ಗರುವನೆನೆ ಸಂದು ಮೆರೆ ತಂದೆಯಂತೆ ೮೧

ಗುರುವಿಂತು ನುಡಿದುದನು
ಶಿರದೊಳಗೆ ಧರಿಸಿ ತ
ನ್ನರಸಿವೆರಸವರಡಿಗೆ ಶಿರವ ಬಾಗಿ
ಹರಿಸದಿಂದವರೊರೆದ
ತೆರದೊಳಗೆ ವರ್ತಿಸುವ
ತರಿಸಲವನೆಸಗಿದನು ನರಪಾಲನು ೮೨

ಇರುಳಾದುದನು ಕಂಡು
ಸರಸಿಜಾಸನಸುತನು
ವರ ತಪೋನಿಧಿಯಮಲಸತ್ಯವಚನು
ಸಿರಿಗೆರೆಯನೆನಿಸಿರ್ದ
ನರಪಾಲವರ್ಯನನು
ಕುರಿತು ಸುಖನಿದ್ರೆಗನುಮತಿಯನಿತ್ತ ೮೩

ತಪದ ಮಾಹಾತ್ಮ್ಯೆಯಿಂ
ದುಪಚರಿಸಲಾರ್ತೊಡಂ
ನೃಪತಿಯನು ವ್ರತನಿಯಮದೊಳಗೆ ನಿಲಿಸಿ
ತಪಸಿಗಳಿಗುಚಿತವೆಂದೆ
ನಿಪ ದರ್ಭಶಯನದೊಳ
ಗೆ ಪವಡಿಸೆ ಬೆಸನನಿತ್ತನು ಮುನಿಪನು ೮೪

ಕುಲಪತಿಗಳೊರೆದ ತರ
ಗೆಲೆಯು ಮನೆಯೊಳು ನರಪ
ಲಲನೆಯುಂ ನೃಪತಿಯುಂ ಕುಶಶಯನದಿ
ಕಳೆದು ರಾತ್ರಿಯನು ವಟು
ಗಳ ವೇದಘೋಷದಿಂ
ಬೆಳಗಾದುದೆನುತಮುಪ್ಪವಡಿಸಿದರು ೮೫

ಎರಡನೆಯ ಸಂಧಿ

ಮರುವಗಲ್ ನರಪಸತಿ.
ಮರಲಿಂದ ಗಂಧದಿಂ
ಸುರಭಿಯಂ ಸಿಂಗರಿಸಿ ಕರುವನೂಣಿಸಿ
ಮರಕೆ ಬಿಗಿದದನು ಬಳಿ
ಕರಸನಾ ನಂದಿನಿಯ
ತೆರಳಿಸಿದನಡವಿಯೊಳು ಮೇಪುಗೊಳಲು ೧

ಹದಿಬದೆಯರಿಗೆ ಮೊತ್ತ
ಮೊದಲೆನಿಪ ನೃಪಪತ್ನಿ
ಯದರ ಗೊರಸಿಂದೆಳ್ದ ಪೂತರಜದಿ
ಪುದಿದ ಮಾರ್ಗದಿ ಶ್ರುತಿಯ
ಪದವಿಯೊಳು ನಡೆಗೊಳ್ವ
ಸದಮಲಸ್ಮೃತಿಯಂತೆ ಬೆಂಗೊಂಡಳಂ ೨

ಕರುಣಾಳು ಭೂಮಿಂಪತಿ
ಯರಸಿಯಂ ಪಿಂತಿರುಗ
ಲೊರೆದಮಲಯಶದಿಂದೆ ರಮ್ಯನಾಗಿ
ಶರಧಿ ನಾಲ್ಕುಂ ಪಯೋ
ಧರಗಳೆನೆ ಗೋರೂಪ
ಧರೆಯಪ್ಪ ಧರೆಯೆನಲ್ ಪಶುವ ಪೊರೆದಂ ೩

ವ್ರತಕಾಗಿ ಪಶುಗಾವ
ಕತದಿಂದಮನುಯಾಯಿ
ತತಿಯನಾಶ್ರಮದೆಡೆಗೆ ಮಗುಳವೇಳ್ದಂ
ಕ್ಷಿತಿಪತಿಗೆ ಪ್ರೈಗಾವ
ರಿತರರೇತಕೆ ಮನುವ
ಸುತರ್ಗವರ ತೋಳ್ವಲಮೆ ರಕ್ಷೆಯಲ್ತೆ ೪

ಸವಿವಡೆದ ಮೊಳೆವುಲ್ಲ
ಕವಳಮೀಯುತಮೊಡಲೊ
ಳವಿದಿರ್ದ ನೊಳವಿಂಡನಟ್ಟಿ ಕಳೆದು

ನವೆಯಿಂಗೆ ತಂರಿಸುಂತುಂ
ಕವಿಲೆಯಂ ಸಂತಯಿಸು
ತವನಿಪತಿ ಬಳಿಸಂದನೋಲಗಿಸುತ ೫

ಧೇನು ನಿಂದೊಡೆ ನಿಂದು
ಧೇನು ನಡೆದೊಡೆ ನಡೆದು
ಧೇನು ಕುಳಿತೊಡೆ ತಾನುಮೊಡನೆ ಕುಳಿತು
ಧೇನು ಜಲವನು ಕುಡಿಯೆ
ತಾನುದಕಮಂ ಕುಡಿದು
ಧೇನುವಿನ ನೆಳಲಂತೆ ನಡೆದನವನು ೬

ಅರಸಗುರುಹೆಲ್ಲವನು
ತೊರೆದೊಡಂ ತಾನೀತ
ನರಸೆಂದು ಪಿಸುಣಾಡುವೊಂದು ಕಳೆಯಿಂ
ಮೆರೆದನಾ ಭೂಮಿಪತಿ
ಹೊರಗೆ ಮದಲೇಖೆಯುಳಿ
ದುರು ಗೂಢಮದವಾಂತ ದಂತಿಯಂತೆ ೭

ವನಲತೆಯು ಕುಡಿಯಿಂದ
ಲನುವಾಗಿ ಮುಡಿಗಟ್ಟಿ
ಧನುವನೇರಿಸಿ ತಾಳ್ದು ಮುನಿಯ ಪಶುವ
ಅನುಸರಿಪ ನೆವದಿಂದ
ಬನದೊಳಗೆ ತೊಳಲಿದನು
ವನದುಷ್ಟ ಸತ್ವಗಳ ದಂಡಿಪವೊಲು ೮

ಪರಿಜನವನುಳಿದೊಡಂ
ವರುಣಂಗೆ ದೊರೆಯುಪ್ಪ
ನರಪಾಲನಿದೆ ಬಂದನಿದೆ ಬಂದನು
ನಿರುಕಿಸೆನುತುಂ ಕೆಲದ
ಮರಗಳಿದೆ ನುಡಿವುವೆನೆ
ಕೊರಲ ಸರವೆತ್ತಿದುದು ವಿಹಗಸಮಿತಿ ೯

ಜ್ವಲನನೆಂತಂತೆ ಕ
ಣ್ಗೊಳಿಸುತ್ತುಂ ತೆಮ್ಮ ತ
ಣ್ಣೆಳಲೊಳಗೆ ನಡೆವ ನರಪತಿಯು ಮೇಲೆ
ಎಲರೊಳಲೆವೆಳಲತೆಗ
ಳಲರ ಮಳೆ ಸೂಸಿದವು
ಲಲನೆಯರು ಲಾಜವನು ಸುರಿವ ತೆರದಿ ೧೦

ಬಿಲ್ಲನಾಂತೊಡಮಿವಂ
ಮೆಲ್ಲೆರ್ದೆಯನೆಂಬುದಂ
ಸೊಲ್ಲಿಪಂತೆದೆಗಿಡದೆ ನೃಪನ ವಪುವಂ
ಫುಲ್ಲನಯನದೆ ನೋಡಿ
ಹುಲ್ಲೆಗಳು ಕಣ್ಗಳಿಗೆ
ಸಲ್ಲಿಸಿತು ಸಾಫಲ್ಯಸಂಪದವನು ೧೧

ಎಳಲತೆಯ ಮಂಟಪದಿ
ಕುಳಿತು ವನದೇವಿಯರೆ
ಸಲೆ ಪಾಡುವರೊ ನೃಪನ ಯಶವನೆನಲು
ಎಲರಲೆಪಕಿರದೆ ಮೆ
ಲ್ಲುಲಿಗೈವ ಕೀಚಕದ
ಕೊಳಲ ಸವಿಯುಲಿಯನವನಾಲಿಸಿದನು ೧೨

ತಳೆಯನಾನದೆ ಬಿಸಿಲ
ರ್ಝಳದಿಂದೆ ಕಂದಿ ನೃಪ
ತಿಳಕನಿರೆ ಕಿರುಗಾಳಿ ಭಕ್ತಿಯಿಂದ
ಕೆಲದ ಗಿರಿನದಿಯಿಂದ
ಕುಳಿರ್ವ ಸೀರ್ಪನಿಯಾಂತು
ಮಲರ ಕಂಪನು ತಂದು ಸೇವಿಸಿದುದು ೧೩

ನೆಲದೊಡೆಯನಡವಿಯೊಳು
ತೊಳಲುತಿರೆ ದವವಹ್ನಿ
ಮಳೆಯಿಲ್ಲದಿರ್ದೊಡಂ ನಂದಿತಂದು

ಫಲಪುಷ್ಪಗಳ ಬೆಳಸು
ಹುಲುಸಾಯ್ತು ಒಡಮಿಗವ
ನುಳುಹಿದುದು ಬಲ್ಲಿತಹ ಜಂತುವಲ್ಲಿ ೧೪

ತಿರುಗಿ ದೆಸೆದೆಸೆಗಳನು
ಪರಿಶುದ್ಧವನು ಗೈದು
ಮರಳಿ ನಿಲಯಕೆ ಸಂಜೆಯೊಳು ಮಗುಳುತೆ
ಪರಿದತ್ತು ಕೆಂದಳಿರ
ತುರುಗಲಂದವನಾಂತ
ತುರುವುಮಾ ಭಾಸ್ಕರನ ಕಳೆಯುಮಾಗ ೧೫

ಪಿತೃಗಳಿಗೆ ದೇವಪ್ರ
ತತಿಗತಿಥಿವರ್ಗಕುಪ
ಕೃತಿಯನೆಸಗಲ್ಕಿರ್ದ ಹಸುವಿನೊಡನೆ
ಕ್ಷಿತಿಪನಿರೆ ವಿಧಿಯೊಡನೆ
ಯುತಮಾದ ಶ್ರದ್ಧೆಯಂ
ತತಿಮನೋಹರಮಾಯ್ತು ನೋಳ್ಪ ಜನಕೆ ೧೬

ಕೆಸರ ಬೆಂಚೆಯಿನೇಳ್ವ
ಪಸಿಯ ಕಾಳ್ಪಂದಿಯನು
ವಸಿಪ ಮರವನು ಸಾರ್ವ ಸೋಗೆಗಳನು
ಒಸೆದು ಮೃಗತತಿಯಿರ್ಪ
ಹಸಲೆಗಳ ಹುಲ್ಲಿಂದ
ಹಸುರಾದ ಬನವನೀಕ್ಷಿಸುತೆ ನಡೆದಂ ೧೭

ಹಿರಿಯ ಕೆಚ್ಚಲ ಹೊರೆಗೆ
ತುರುವುಮಾ ಹೇರೊಡಲ
ಹೊರಗೆ ಭೂಪಾಲಕನುಮೊಯ್ಯೊಯ್ಯನೆ
ಬರುವೆಡೆಯೊಳಾಶ್ರಮದ
ನೆರೆಯ ಬೀದಿಯನು ಸಿಂ
ಗರಿಸಿದರು ತಮ್ಮ ಮೆಲ್ನಡೆಗಳಿಂದ ೧೮

ತುರುವೊಡನೆ ಕಾಡಿಂದೆ
ಮರಳಿ ಬರುತಿರ್ದ ಭೂ
ವರನನರಸಿತಿಯೆಮೆಯನಿಕ್ಕದಿದಿರ್ದು
ಹಿರಿದು ಹಸಿವಾಂತಂತೆ
ಮೆರೆವೆರಡು ಕಣ್ಗಳಿಂ
ಬರೆ ಸೆಳೆದು ಕುಡಿವಳೆನೆ ನಿರುಕಿಸಿದಳು ೧೯

ಬಳಿಕಿದಿರುಮೆಂದು ನೃಪ
ಲಲನೆ ಮುಂಗಡೆಯೊಳಂ
ನೆಲದೆರೆಯನುಂ ತನ್ನ ಬೆಂಬಳಿಯೊಳಂ
ನಿಲಲು ನಡುನಿಂದ ಪಶು
ಸಲೆಯಿರುಳ ಪಗಲ ನಡು
ನೆಲೆಗೊಂಡ ಸಂಜೆಯೆನೆ ರಂಜಿಸಿದುದು ೨೦

ಬಲಮೆಂದು ನಂದಿನಿಗೆ
ತಲೆವಾಗಿ ನೃಪಪತ್ನಿ
ತಳೆದ ಬಟ್ಟಲೊಳಿರ್ದ ಸೇಸೆಯಿಂದ
ಎಳಸಿದುದನೀವ ಬಾ
ಗಿಲವೊಲಿರ್ದಮಳ್ಕೋಡು
ಗಳ ಮಧ್ಯದೇಶವನು ಪೂಜಿಸಿದಳಂ ೨೦

ಕರುವನುಣಿಸುವ ತವಕ
ಮಿರೆಯುಮಾ ಸುರಭಿ ಭೂ
ವರರ ಮಾಡಿದ ಸೇವೆಗೊಂಡುದಕ್ಕೆ
ಹರಿಸವಾಂತರು ಪೂಜ್ಯ
ರೆರಕವೇ ಭಕ್ತರ್ಗೆ
ದೊರೆವ ಸತ್ಫಲಗಳನು ನುಡಿವುದಲ್ತೆ ೨೨

ಗುರುವ ಮೇಣ್ಗುರುಸತಿಯ
ಚರಣಯುಗಳಕೆ ಮಣಿದು
ನೆರಪಿ ಸಂಧ್ಯಾಸವನ ಕರ್ಮಗಳನಂ

ಕರೆದೆಡೆಯೊಳಗೆ ಕೞಿತ
ಸುರಭಿಯನು ಪೊರ್ದಿದನು
ನರಪಾಲನರಿಭೂಮಿಪತಿಕಾಲನು ೨೩

ಕೆಲದೊಳಗೆ ದೀಪವಂ
ಬಲಿಯುಮಂ ತಂದಿಟ್ಟು
ಲಲನೆವೆರಸಾ ಪಯನಸುಪಚರಿಸುತ
ಮಲಗೆ ಪಶು ತಾನುಮೊಡ
ಮಲಗಿದನು ಮುಂಬಗಲಿ
ನೊಳು ಸುರಭಿಯೇಳೆ ತಾನೊಡನೆದ್ದನು ೨೪

ಸಂತತಿಯ ಪಡೆಯೆ ಭೂ
ಕಾಂತನನುದಿನಮುಮಿಂ
ತಿಂತು ನಂದಿನಿಯನುಪಚಾರದಿಂದ
ಸಂತಯಿಪ ನೋಂಪಿಯಂ
ನೋಂತೇಕವಿಂಶತಿದಿ
ನಂ ತನ್ನ ಸತಿಯೊಡನೆ ಸೇವೆಗೈದಂ ೨೫

ಬಳಿಕೊಂದು ದಿವಸದೊಳು
ಭಳಿಸಲ್ವ ನೃಪನ ಮನ
ದಳವನೀಕ್ಷಿಸಲೆಂದು ಮುನಿಯ ಧೇನು
ತಳರ್ದು ಗಂಗೆಯ ತಡಿಯ
ಬಳಿಯೊಳೆಳವುಲ್ಲಿಂದ
ಹೊಳೆವ ಹಿಮಗಿರಿಗುಹೆಯ ಬಳಿಗೈದಿತು ೨೬

ಈ ತುರುಗೆ ದುಷ್ಟಮೃಗ
ಜಾತದಿಂದೇನೊಂದು
ಭೀತಿಯಿಲ್ಲೆಂದೆಣಿಸಿ ನೆಲದೆರೆಯನು
ಆ ತುಹಿನಗಿರಿಯ ಶೋ
ಭಾತಿಶಯಕೊಲಿದಿರಲು
ಘಾತುಕದ ಹರಿ ತುರುವ ಪಿಡಿದುದಂದು ೨೭

ಪಿಡಿಯ ಭೇಯೆಂದು ಗೋ
ಳಿಡುವ ಹಸುವಿನ ಕೂಗು
ಪಡಿನುಡಿಯ ಕುಡುವ ಗವಿಯುಲಿಯ ಕೂಡೆ
ನಿಡಿದಾಗಿ ಪಗ್ಗದಿಂ
ಪಿಡಿದೆಳೆವ ತೆರದಿಂದ
ಪಿಡಿದೆಳೆದುದಾ ನೃಪನ ನೇತ್ರಯುಗವ ೨೮

ಗಿರಿಯೊಳಗೆ ಚೆಂಗಾವಿ
ವರಲಿಂದ ರಂಜಿಸುವ
ಧರೆಯೊಳಗೆ ಪೂತೆಸೆವ ಲೋಧ್ರದಂತೆ
ಅರುಣತೆಯನೆಡೆಗೊಂಡ
ತುರುವನಪ್ಪಿರ್ದ ಕೇ
ಸರಿಯನಾ ಭೂಮಿಪತಿ ಕಂಡು ಕೂಡೆ ೨೯

ಕೊಲಲೆಂದು ಭರದೆ ಬ
ತ್ತಳಿಕೆಯೊಡೆಯಿಂದ ಗರಿ
ಯಲಗನುಗಿಯಲ್ಕೆನುತೆ ನೀಡೆ ತನ್ನ
ಬಲಗೈಯ ಬೆರಲು(ಗು)ರ
ಹೊಳಹು ಹಿಳುಕನು ಬಳಸೆ
ನೆಲಸಿದುದು ಕೈ ಚಿತ್ರಿಸಿದ ತೆರದೊಳು ೩೦

ಚಲಿಸದಿರೆ ನಿಜಬಾಹು
ಬಳಿಯೊಳಿರ್ದಪರಾಧಿ
ಗಳಿವೆಸಗಲಾರದತಿಕೋಪದಿಂದ
ಒಳಗೆ ಬೆಂದನು ನೃಪತಿ
ಸಲೆ ಮಂತ್ರದೌಷಧದ
ಬಲದಿಂದ ಸೆರೆವಿಡ್ಡ ಪಾವಿನಂತೆ ೩೧

ತುರುವನುರೆ ಪೀಡಿಸಿಯು
ಮಿರದೆ ಸಿಂಗಂ ಭೂಮಿ
ಪರಿಬೃಢನ ಚಿತ್ತಮಾಶ್ಚರ್ಯದಿಂದ

ಬೆಳಗಾಗುವಂದದೊಳು
ಪುರುಷವಚನದೊಳಿಂತು
ಸೊರಹಿದಂದು ಮನುವಂಶಕೇತುಗಂದು ೩೨

ಇರು ನೃಪತಿ ನೀನೇಕೆ
ಬರಿದೆ ಬಳಲುವೆ ನಿನ್ನ
ಸರಲನೆಚ್ಚೊಡವೇನು ನೂಕದಿಲ್ಲಿ
ಕಿರುಗಿಡುವನಲುಗಿಸುವ
ಮರುತನೆಡೆಯಾಟವೇಂ
ಗಿರಿವರವ ದೂಟಾಡಿಸಲು ಬಲ್ಲುದೆ ೩೩

ಹರಗಿರಿಗೆ ದೊರೆಯೆನಿಸಿ
ಮೆರೆವ ವೃಷಭನ ಬೆಂಗೆ
ಬರುವಂದು ಗಿರಿಶನಡಿಗುರುಹನಾನು
ಧರಿಸುವೆನು ಶಿವನ ಕಿಂ
ಕರನು ಕುಂಭನ ಸಖನು
ಧರೆಯರಿಯೆ ಕುಂಭೋದರನು ಪೆಸರೊಳು ೩೪

ಈ ದೇವದಾರುವನು
ಮಾದೇವನೊಲುಮೆಯೊಳ
ಗಾದರಿಸಿ ಸುತನಂತೆ ಭಾವಿಸಿಹನು
ಈ ದೇವದಾರುವಾ
ಸ್ವಾದಿಸಿರ್ಪುದು ಪಾರ್ವ
ತೀದೇವಿ ಪೊಂಗೊಡದೊಳೆರೆದ ಪಯುವ ೩೫

ಆನೆ ಮದದಿಂದೊಮ್ಮೆ
ತೀನೆಯನು ಕಳೆಯಲ್ಕೆ
ತಾನೊರಸೆ ಸಿಗುರೆದ್ದುದಿದರೊಡಲೊಳು
ದಾನವರ ಹತಿಯಿಂದ
ಸೇನಾನಿ ನೊಂದಂತೆ
ಮೇನಕಾತ್ಮಜೆಯದಕೆ ಶೋಕಿಸಿದಳಂ ೩೬

ಅದು ಮೊದಲು ಮದಗಜಗ
ಳಿದರ ಬಳಿ ಸುಳಿಯದವೊ
ಲೊದವಿಸಲು ಭೀತಿಯನು ಸಿಂಹತನುವ
ಪಡೆದೆನಗೆ ಕೈಕೊಳಿಸಿ
ಕಂಧರದೊಳಗಿಲ್ಲಿರಿಸಿ
ಯೊದವಿದುದನುಣಲು ಬೆಸಸಿದನು ಗಿರಿಶಂ ೩೭

ಪಸಿದೆನಗೆ ಪಾರಣೆಯ
ವಸರಕ್ಕೆ ದೊರೆದುದೀ
ಹಸು ಪಸಿದ ರಾಹುವಿನ ಬಾಯ್ಗೆ ದೊರೆತ
ಸಸಿಯಮೃತರಸದವೋ
ಲೊಸೆದು ನಾನಿದನುಂಡು
ಪಸಿವನಿಂಗಿಸಿ ಮುಂದೆ ತೃಪ್ತಿವಡೆವೆಂ ೩೮

ಅದು ಕಾರಣದೆ ಲಜ್ಜೆ
ಗೆದೆಗುಡದೆ ನೃಪ ತೆರಳು
ವುದು ಗುರುವ ಭಕ್ತಿಯನು ಮೆರೆದೆ ನೀನು
ಪದವಿಲ್ಲೊಳೋವಲಾ
ಗದ ವಸ್ತುವನು ನೀಗ
ಲದು ಕೊರತೆಯಲ್ಲ ಬಿಲ್ಲಾಳಿಗರಸಾ ೩೯

ಎನುತೊರೆದ ಕಂಠೀರ
ವನ ನುಡಿಯನಾಲಿಸುತೆ
ಮನಸಿಜಾರಿಯ ಮೈಮೆಯಿಂದ ತನಗೆ
ಇನಿತು ಬಲವಿಳಿದಾದು
ದೆನುತರಿದು ತನ್ನೊಳಗೆ
ತನಗೆ ಮೊಳೆತವಮತಿಯನುಡಿದು ಕಳೆದಂ ೪೦

ತನ್ನೆಸುಗೆಗೆ ಮೊದಲ
ಬನ್ನಮೆನೆ ಕೈಯುಡುಗಿ
ಮುನ್ನಮಿಂದ್ರಂ ಕರದ ವಜ್ರದೊಡನೆ

ಬಾನ್ನವಿರನಿದಿರಿನೊಳು
ಬನ್ನವುಂ ಪಡೆದಂತೆ
ಪನ್ನತಿಕೆಗೆಟ್ಟು ಹರಿಗೊರೆದನಿಂತು ೪೧

ಮೃಗರಾಜ ತೋಳ್ವಲದ
ಬಿಗುಂಹಡಗಿದೆನ್ನ ನುಡಿ
ನಗೆಗೆ ಪಕ್ಕಾದೊಡಂ ನಿನಗೊರೆವೆನು
ಜಗದ ಜೀವಿಗಳೆದೆಯೊ
ಳೊಗೆವೆಲ್ಲ ಭಾವಗಳ
ಬಗೆಯು ನೀನರಿದಿರುವೆಯಾದ ಕತದಿಂ ೪೨

ಪರಿಪೂಜ್ಯಮೀ ಚರಾ
ಚರಗಳನು ಸೃಷ್ಟಿಸುವ
ಪರಿಪಾಲಿಸುವ ಕೊಲ್ವ ದೈವಮೆನಗೆ
ಗುರುವರರ ಧನಕಿದಕೆ
ದೊರೆಯುದವೊಲಾಪದವು
ಪರಿರಕ್ಷಿಪುದುಮೆನಗೆ ಹರಿಬವಹುದು ೪೩

ಎಲೆ ಮೃಗಾಧಿಪ ನಿನಗೆ
ತಲೆವಾಗಿ ಬೇಡುವೆನು
ಸಲಿಸು ನನ್ನೊಡಲ ನಿನ್ನಾಹಾರಕೆ
ಎಳಗರುವನೀಕ್ಷಿಸಲು
ಕಳವಳಿಸುವೀ ಪಶುವ
ಕಳುಹಿಕೊಡು ಸಂಜೆ ಸನ್ನಿಹಿತವಾಯ್ತು ೪೪

ಎಂದು ನರಪತಿ ವಿನಯ
ದಿಂದೊರೆಯೆ ಕೇಳ್ದು ಗಿರಿ
ಕಂದರದೊಳಡಗಿರ್ದ ಕತ್ತಲೆಯುನಂ
ಕೊಂದಿಡುವವೀ ಪಲ್ಗ
ಳಿಂದೊಗೆವ ಬೆಳಗಿನ
ಲ್ಕಿಂದುಜೂಟನ ಭೃತ್ಯನೊರೆದನಿಂತು ೪೫

ಪೊಡವಿಯೆಲ್ಲವನೊಂದೆ
ಕೊಡೆಯ ನೆಳಲೊಳು ಪಾಲಿ
ಪೊಡೆತನವನುಣ್ಮುವೀ ಜವ್ವನವನು
ಬೆಡಗುವಡೆದೀಯೊಡಲ
ಕಡುಕಿರಿದಕಿದಕಾಗಿ
ಬಿಡುವ ನೀಂ ಗಾಂಪನೆಂದಾನರಿವೆನು ೪೬

ಕರುಣೆಯಂ ಮೆರೆವೊಡೀ
ತುರುವನೊಂದನೆ ನೀನು
ಪೊರೆವೆ ನಿನ್ನೊಡಲನೆನಗಿತ್ತು ಬಳಿಕ
ನರಪ ನೀಂ ಜೀವಿಸಿರೆ
ಪೊರೆವೆ ತಂದೆಯ ತೆರದಿ
ಧರಣಿಯನು ಬಾಧೆಯೆಡೆಗೊಳ್ಳದಂತೆ ೪೭

ಪಸುವೊಂದರಳಿವಿಂದೆ.
ಕಿಸುಗಣ್ಣ ವಾ ಮುನಿಯ
ಮುಸಪ ಮುನಿಸಿಗೆ ನೀನು ಬೆದರಲೇಕೆ
ಒಸೆದು ಕೊಡುವಾಲ್ಗರೆವ
ಪಸುವ ಕೋಟಿಯನಿತ್ತು
ಮುಸುಳಿಸಲ್ಕಹುದವನ ಕೋಪದುರಿಯ ೪೮

ಅದರಿಂದೆ ರಕ್ಷಿಸೈ
ಸೊದೆಗೆಣೆಯ ಸುಖಗಳನು
ಪಡೆದುಂಬ ಬಲ್ಪಾಂತೆ ನಿನ್ನೊಡಲನು
ತ್ರಿದಶಪತಿ ನೃಪತಿಗಳ
ಪದವಿಗಾವಂತರವೊ
ತ್ರಿದಿವದೊಳಮಿಳೆಯೊಳಂ ನಿಂದುದೈಸೆ ೪೯

ಹರಿಯಿಂತು ನುಡಿದುಳಿದ
ತರುವಾಯವಾ ನುಡಿಯ
ನಿರದೆ ಗಿರಿ ನರಪತಿಗೆ ನುಡಿವ ತೆರದಿ

ಗುರುಗಹ್ವರಂಗಳಿಂ
ಹೊರಹೊಮ್ಮಿ ದೆಸೆಗೆ ಬೊ
ಬ್ಬಿರಿದುವಾಗಳೆ ನೆಗೆದ ಮಾರ್ದನಿಗಳು ೫೦

ಹರಿಯ ತಕ್ಕೆಯೊಳಂಜಿ
ಕೊರಗಿದಕ್ಷಿಗಳಿಂದ
ನಿರುಕಿಸುವ ತುರುವಿನೊಳು ಮರುಕವಾಂತು
ಕರುಣಾಳು ನೃಪತಿ ಶಂ
ಕರಕಿಂಕರಂಗೆ ತಾಂ
ಮರಳಿಯೀಪರಿಯಿಂದೆ ಬಿನ್ನವಿಸಿದಂ ೫೧

ಕ್ಷತದಿಂದೆ ರಕ್ಷಿಸುವ
ಕತದಿಂದೆ ನೆಲದೆ ರಂ
ಜಿತವಾಯ್ತು ಸತ್ಕ್ಷತ್ರಿಯಾಭಿಖ್ಯೆಯುಂ
ಕ್ಷಿತಿಯಿಂದಮೇನು ನಿಂ
ದಿತಜೀವದಿಂದೇನು
ಕ್ಷಿತಿಯೊಳಾಂ ವಿಪರೀತವೃತ್ತಿಯಾಗೆ ೫೨

ಬೇರೆ ಪಯಗಳನಿತ್ತು
ವಾರಿಸಲದೆಂತಹುದು
ಮಾರಿಸಿಯ ಮೀರಿರ್ಪ ಕೋಪದುರಿಯಂ
ಬೇರೇನು ದೇವಪಶು
ಗೋರಗೆಯೆನಿಪ್ಪಿವಳ
ನಾ ರುದ್ರತೇಜದಿಂ ಪಿಡಿದೆ ನೀನು ೫೩

ನಿನ್ನಣಸಿಗಂ ಮುನಿಯ
ಜನ್ನಕ್ಕವೆಂಡರಾಗ
ದನ್ನೆಗಂ ನನ್ನೊಡಲನೀಗಳಿತ್ತು
ನಿನ್ನ ಕೈಯಿಂದಿವಳ
ಮುನ್ನವೇ ಬದುಕಿಪುದು
ನನ್ನ ಧರ್ಮದೆ ಗೈವ ಕಾರ್ಯವಹುದು ೫೪

ದೇವದಾರುವನಿಂತು
ಕಾವ ನೀನರಿದಪ್ಪೆ
ಸೇವಕರ ಕೃತ್ಯಗಳ ಹುರುಳನೆಲ್ಲ
ಕಾವ ವಸ್ತುವ ಕಳೆದು
ನೋವನಾನದೆ ಪೋಗಿ
ಸಾವಿಯಿದಿರೊಳಗಾಳು ನಿಲಲಪ್ಪುದೆ ೫೫

ನಿನಗೆ ನೋವನು ಗೈವ
ಮನವಿಲ್ಲದಿರೆ ಪೊರೆವು
ದನುಕಂಪೆಯಿಂದೆನ್ನ ಜಸಮೆಯ್ಯನಂ
ಕೊನೆಗಳಿದು ಪೋಗುವಡ
ಗಿನ ಮುದ್ದೆಯೊಡಲಲ್ಲಿ
ಜನಿಸದಕ್ಕರು ನನ್ನ ತೆರದ ಜನಕೆ ೫೬

ಮಾತನಾಡುವದೆ ಮೊದ
ಲೋತ ಕೆಳೆಗೆಂದೆಂಬ
ರಾ ತೆರದ ನಂಟೆಮಗೆ ಸಂಗಳಿಸಿತಂ
ಭೂತಪತಿಭೃತ್ಯ ನೀಂ
ಪ್ರೀತಿಯಿಂ ಪೊರೆವುದೆ
ಲ್ಲಾ ತೆರದೆ ನೀಡುವುದುಂ ಬೇಡುವುದನು ೫೭

ಅಂತಾಗಲೆಂದು ಪಶು
ವಂ ತೊರೆದ ಸಿಂಗಕ್ಕೆ
ನಂತೇಶನಸ್ತ್ರಗಳನುಳಿದು ತನ್ನ
ಕಾಂತವಪುವಂ ಮಾಂಸ
ವಾಂತುದಂ ಬಲಿಗೊಟ್ಟು
ಸಂತೃಪ್ತಿವಡಿಸಲ್ಕೆ ಬಯಸಿ ನಿಂದಂ ೫೮

ನೆರೆ ಭಯಂಕರವಪ್ಪ
ಹರಿನಿಪಾತವ ಪಾರ್ದು
ಕೊರಲ ಬಾಗಿಸಿ ನಿಂದ ಧರಣಿಪತಿಯ

ಶಿರದೊಳಗೆ ಸುರಯುವತಿ
ಕರಮುಕ್ತಮಪ್ಪ ಕ
ಮ್ಮರಲ ಸರಿಮಳೆ ಸುರಿದುದಚ್ಚರಿಯೆನೆ ೫೯

ಏಳು ವತ್ಸನೆ ಧರೆಯಿ
ನೇಳೆಂಬ ಸವಿಗೂಡಿ
ದಾಳಾಪಮಂ ಕೇಳುತೆಳ್ದು ನಿಂದು
ಆಲೋಕಿಸಿದನು ಸವಿ
ಪಾಲ ಸುರಿಸುತೆ ತಾಯ
ಪೋಲಲ್ಲಿ ನಿಂದಿರ್ದ ನಂದಿನಿಯನು ೬೦

ಹರಿಯನೀಕ್ಷಿಸದೆ ಕಡು
ಬೆರಗಾದ ನರಪತಿಗೆ
ಸುರಭಿಯಿಂತೊರೆದುದಾಂ ನಿನ್ನ ಬಗೆಯ
ಅರಿಯಲಿಂತೆಸಗಿದೆನು
ನರಪ ಕಾಲನುಮೆನಗೆ
ಮುರುಕನೆನೆ ಮತ್ತಿನವರೇಗೈವರು ೬೧

ಗುರುವಲ್ಲಿ ಭಕ್ತಿಯಂ
ಕರುಣೆಯಂ ನನ್ನಲ್ಲಿ
ಮೆರೆದ ನಿನಗೊಲಿದೆ ನಾಂ ಬೇಡು ವರವ
ಬರಿಯ ಪಾಲನು ಕರೆವ
ತುರುವೆಂದು ಬಗೆಯದಿರು
ಸುರಭಿಯಾಂ ಕಾಮದುಘೆಯೆಂದು ತಿಳಿಯೈ ೬೨

ತುರುವಿಂತು ನುಡಿಯಲೊಡೆ
ಮರಸನತಿಭಕ್ತಿಯಿಂ
ಕರಕಮಲಮಂ ಮುಗಿದು ತನ್ನರಸಿಯೊಳ್
ಸ್ಥಿರಕೀರ್ತಿಯಂ ವಂಶ
ಪರಿಪಾಲಕನುಮಪ್ಪ
ತರುಣನಂ ಕರುಣಿಸುವುದೆಂದೆರಗಿದಂ ೬೩

ಅಂತಾಗಲೆಂದು ವರ
ಸಂತಾನಕೆಳಪ ಭೂ
ಕಾಂತಂಗೆ ದಯೆಗೈದು ತನ್ನ ಪಾಲಂ
ಸಂತೋಷದಿಂ ಕರೆದು
ಮುಂತೆ ದಳಪುಟದೊಳಗೆ
ನೀಂ ತೀವಿ ಸೇವಿಸುವುದೆಂದೊರೆದುದಂ ೬೪

ಕರುವೂಡಿ ಮಿಕ್ಕುದಂ
ಗುರುಹೋಮವಿಧಿಗಿತ್ತು
ತರುವಾಯೊಳುಳಿದ ಸವಿಪಾಲಿನೊಳಗೆ
ಇರದೆ ಷಷ್ಠಾಂಶವಂ
ಗುರುವನುಜ್ಞೆಯೊಳೊಂದಿ
ಧರೆಯ ಷಷ್ಠಾಂಶವೆನೆ ಸೇವಿಸುವೆನು ೬೫

ಎಂದು ನುಡಿದಾ ಭೂಪ
ವೃಂದಾರಕನ ನುಡಿಗೆ
ನಂದಿನೀಧೇನು ನಲವಾಂತು ನೃಪನಿಂ
ಒಂದುವೆರೆದಲ್ಲಿಂದ
ಪಿಂದಿರುಗಿ ಸುಖದಿಂದೆ
ಬಂದು ಪೊಕ್ಕುದು ಮುನಿಯ ದಿವ್ಯವನವ ೬೬

ಸುರಭಿಯೊಸೆದುದನವನಿ
ಪರಿವೃಢನ ಮೊಗರಾಗ
ಮರಿಪಿದೊಡೆಮಾ ಮುನಿಗೆ ತತ್ಕಥೆಯನು
ಅರಿಪಿ ಸಾಂಗಂ ಬಳಿಕ
ಮರಿಪಿದಂ ನಿಜಸತಿಗೆ
ಪರಿಫುಲ್ಲಸರಸಿಜೋಪಮ ನೇತ್ರೆಗೆ ೬೭

ಕರುವೂಡಿ ಬಳಿಕಮು
ಧ್ವರಕಿತ್ತು ಮಿಕ್ಕ ತ
ತ್ಸುರಭಿಯುಧಸ್ಯಮಂ ನಲವಿನಿಂದ

ಗುರುವನಂಜ್ಞೆಯು ಪಡೆದುಂ
ನರಪನೀಂಟಿದನಮಲ
ತರಯಶಮನಂಗವಿಸಿ ಕುಡಿವ ತೆರದಿ ೬೮

ನೋಂಪಿಯುಂ ನೋಂತ ಬಳಿ
ಕಂ ಪಾರಣೆಯ ಗೈದ
ದಂಪತಿಗೆ ಸ್ವಸ್ತ್ಯಯನಮಂ ವಾಚಿಸಿ
ಇಂ ಪುರಕೆ ತೆರಳಿ ಸುತ
ಸಂಪದವನೊಂದಿಮೆನು
ತಂ ಪರಸಿ ಮುನಿವರನು ಬೀಳ್ಕೊಟ್ಟನು ೬೯

ಬಲವಂದು ವಹ್ನಿಯುಂ
ಬಲವಂದರುಂಧತಿಯು
ಲಲನೆಯೊನೆ ಸಂದಿರ್ಪ ಮುನಿವರನನು
ಬಲವಂದು ನಂದಿನಿಯು
ನಿಳೆಯರಸನೊಲವಿಂದ
ತಳರ್ದನರಸಿತಿವೆರಸು ನಿಜನಗರಿಗೆ ೭೦

ಕಿವಿಗೆ ಸವಿ ಕವಿವಂತೆ
ರವಗೈವ ತೇರಿನೊಳ
ಗವನಿಪತಿ ಯುವತಿಯೊಡವೆರೆದು ಕುಳಿತಂ
ಸವನಿಸವು ಕಷ್ಟಗಳ
ನಿವಹಮೀಯೆಡೆಯೊಳಿನೆ
ಸವನಾದ ಬೀದಿಯೊಳು ಸಾರ್ತಂದನು ೭೧

ಬಿಡದೆ ಮಾಡಿದ ವ್ರತದಿ
ಬಡವಾಗಿ ನಡೆತರ್ಪ
ಪೊಡವಿಯೊಡೆಯನ ಮೆಯ್ಯ ಬೆಡಗನಂದು
ಬಿಡುಗಣ್ಣ ಕುಡಿತೆಯಿಂ
ಕುಡಿಕುಡಿದು ತೃಪ್ತಿಯುಂ
ಪಡೆದುದಿಲ್ಲಾ ನಾಡ ಮಂದಿಯೆಲ್ಲ ೭೨

ಪುರಜನದ ಸತ್ಕೃತಿಯ
ಹರಿಸದಿಂ ಕೈಕೊಂಡು
ನಿರಿಸಿರ್ದ ಕೇತುತತಿಯಿಂದ ಮೆರೆವ
ಪುರವನೊಳಪೊಕ್ಕು ಭೂ
ಭರವ ಭುಜದೊಳು ತಳೆದ
ನುರಗೇಂದ್ರಬಾಹುವಮರೇಂದ್ರವಿಭವಂ ೭೩

ಅಂಬರವದೆಂತು ಶಶಿ
ಬಿಂಬದಿಂ ರಂಜಿಸುವು
ದಂಬರಾಪಗೆಯೆಂತು ಶೈವಕಳೆಯಿಂ
ತುಂಬಿ ರಂಜಿಪುದಂತೆ
ಕಂಬುಕಂಠಿಯ ಗರ್ಭ
ವಿಂಬಾಯ್ತು ಗುರುವಿತ್ತ ವರದ ಬಲದಿ ೭೪

ಮೂರನೆಯ ಸಂಧಿ

ಇದುವೆ ಮನದನ್ನನಿ
ಷ್ಟದ ಸಿದ್ಧಿ ಕೆಳದಿಯರ
ಪದೆದು ನೋಡುವ ಕಣ್ಣ ಬೆಳದಿಂಗಳು
ಇದುವೆಯಿಕ್ಷ್ವಾಕುವಂ
ಶದ ಸಂತತಿಯ ಮೊತ್ತ
ಮೊದಲೆನೆ ಸುದಕ್ಷಿಣೆಯ ಬಸಿರೆಸೆದುದು ೧

ಬಡವಾದ ಮೆಯ್ಯಲ್ಲಿ
ತೊಡವನೊಂದೆರಡಾಂತು
ಕಡುವೆಳ್ಪುವಡೆದಿರ್ದ ನೊಸಲಿನಿಂದ
ಬೆಡಗಾಂತಳೊಂದೆರಡ
ನುಡುವನಾಂತಿಂದುವನು
ಪಡೆದ ಮುನ್ನೇಸರಿನ ರಾತ್ರಿಯಂತೆ ೨

ಅರಸನೇಕಾಂತದೊಳ
ಗರಸಿತಿಯ ಮೃತ್ಸುರಭಿ
ವೆರೆದ ಮೊಗವಂ ಸವಿದು ತಣಿದನಿಲ್ಲ

ಉರಿವ ಬೇಸಗೆ ತೊಲಗೆ
ಸುರಿವ ಮಳೆಯಲಿ ನೆನೆದ
ಕಿರುಬೆಂಚೆಯನು ಸವಿವ ದಂತಿಯಂತೆ ೩

ಸುರಪನಾ ಸ್ವರ್ಗಮಂ
ಪೊರೆವಂತೆ ಭೂಮಿಯಂ
ಪೊರೆವನಾಕೆಯು ಬಸಿರ ಶಿಶುವೆಂಬುದಂ
ಅರಿಪುವವೊಲುಳಿದ ರಸ
ಕೆರಗದಾಕೆಯ ಚಿತ್ತ
ಮೆರಗಿದುದು ಮಣ್ಗೆ ಮುಂಬಯಕೆಯೊಳಗೆ ೪

ಮಡದಿ ಬಯಸುವುದನೆ
ನ್ನೊಡನುಸಿರೆ ನಾಚುವಳು
ನುಡಿಯಿರಾವುದನವಳು ಬಯಸುತಿಹಳು
ನುಡಿಯಿರೆಂದೆನುತಾಕೆ
ಯೊಡನಾಡಿಗಳನು ನೃಪ
ನಡಿಗಡಿಗೆ ಬೆಸಗೊಳ್ವನೊಲವಿನಿಂದ ೫

ಎಳವಸಿರಿನೊಳು ರಾಣಿ
ಯೆಳಸಿದುದನೆಲ್ಲವನು
ತಳುವಿಲ್ಲದಾ ನೃಪನು ತಂದಿತ್ತನು
ತಳೆದು ಧನುವನು ನೃಪತಿ
ತಳದೊರ್ಡಾ ನಾಕದೆಡೆ
ಯೊಳಮುವನು ಪಡೆಯಲರಿದೆನಿಪುದುಂಟೆ ೬

ಬಸಿರು ಬಲಿತಂತಂತೆ
ಪೊಸತೊಂದು ಸೊಬಗಿನಿಂ
ದೆಸೆದಳರಸಿತಿ ತುಂಬಿದೊಡಲಿನಿಂದ
ಬಿಸುಟು ತರಗೆಲೆಗಳನು
ಮಿಸುಪ ನವಕಿಸಲಯದಿ
ನೆಸೆವ ಪೊಸಲತೆಯಂತೆ ಕಾಂತಿಯಾಂತು ೭

ಕಡವರವನೊಳಕೊಂಡ
ಪೊಡವಿಯೋ ಗರ್ಭದೊಳು
ಕಿಡಿಯನಡಗಿಸಿಕೊಂಡ ಶಮಿಯೊ ಮೇಣು
ಪೊಡೆಯೊಳಗೆ ತೀರ್ಥಮಂ
ಮಡಗಿದ ಸರಸ್ವತಿಯೊ
ನುಡಿಯೆನಲು ನೃಪಪತ್ನಿ ರಾಜಿಸಿದಳು ೮

ಇನಿಯೊಳೊಂದೊಲ್ಮೆಗಂ
ತನತೊಂದು ಪೆರ್ಮೆಗಂ
ಘನಬಾಹುಬಲದಿಂದ ಪಡೆದ ಸಿರಿಗಂ
ಜನಿಸಿದಾನಂದಕ್ಕೆ
ಮನುರೂಪಮೆನೆ ಪುಂಸ
ವನಮನರಸೆಸಗಿದನು ವಿಭವದಿಂದ ೯

ಹರಿದಧಿಪರಂಶದಿಂ
ದೊರೆಕೊಂಡ ಗರ್ಭಗುರು
ಭರದಿಂದಮೊಯ್ಯನಾಸನದಿನೆದ್ದು
ಪರಿಚರ್ಯೆಗೈವಲ್ಲಿ
ಹಿರಿದು ಬಳಲಿಕೆವಡೆವ
ತರಳಾಕ್ಷಿಯಂ ನೋಡಿ ನಲಿದನವನು ೧೦

ಹಸುಳೆಗಳ ವೈದ್ಯದೊಳು
ಹೆಸರಂಪಡೆದಿರ್ದ ವೈ
ದ್ಯಸಮೂಹಮೊಲಿದು ಪಾಲಿಸೆ ಗರ್ಭವ
ಪ್ರಸವಕಾಲದೊಳವಳ
ನೊಸೆದು ಮುಗಿಲೊಂದಿದಾ
ಗಸಮನೆಂತಂತೆ ನೋಡಿದನು ನೃಪನು ೧೧

ಬಳಿಕ ಪಂಚಗ್ರಹಂ
ಗಳುಮಸ್ತಮಿಸದುಚ್ಚ
ದೊಳಗಿರ್ದು ಶುಭವ ಸೂಚಿಪ ಸಮಯದಿ

ಎಳೆಯನಂ ಪೆತ್ತಳಾ
ನಳಿನಮುಖಿ ಶಚಿಸದೃಶೆ
ಸಲೆ ಶಕ್ತಿ ಪೆರುವಂತೆ ಸಂಪದವನು ೧೨

ದೆಸೆಗಳೊಸೆದುವು ಮೆಲ್ಲ
ನೆಸಗಿದುದು ತಂಗಾಳಿ
ಮಸಗಿ ಬಲವಂದು ಹವಿಗೊಂಡುದಗ್ನಿ
ಉಸಿರಿದುವು ಮುಂದೆ ಸಂ
ಧಿಸುವ ಶುಭಗಳನು ಭಾ
ವಿಸಲಿನ್ನರುದಯವೇ ಜಗಕೆ ಶುಭದ ೧೩

ಹಾಸಿಗೆಯೊಳೆಸೆದಿರ್ದ
ಕೂಸಿನೊಡಲಿನ ಬೆಳಗು
ಸೂಸಿ ಸುತ್ತಲುಮಿರ್ದ ದೀವಿಗೆಗಳ
ಭಾಸುರತೆಯನು ಮರಸಿ
ಮಾಸಿಸಲು ಬಣ್ಣದೊಳು
ಪೂಸಿರ್ದ ಸೊಡರುಗಳ ಪೋಲ್ತಿರ್ದವು ೧೪

ಮಗನಾದನೆಂದು ಸೊದೆ
ಯುಗುವ ನುಡಿ ನುಡಿದವನಿ
ಗೊಗುಮಿಗೆಯ ನಲವಿಂದ ಕೊಡುವೆಡೆಯೊಳು
ಮೃಗಲಕ್ಷ್ಮನೆಣೆಯು ಸ
ತ್ತಿಗೆಯುಮಾ ಚಮರರುಹ
ಯುಗಳವೆಂಬಿವೆ ನಿಂದುವರಸನಲ್ಲಿ ೧೫

ಎಲರಲುಗದವಸರದಿ
ನೆಲೆನಿಂದ ತಾವರೆಗೆ
ಕೆಳೆಯೆಂಬ ಕಣ್ಗಳಿಂ ಸುತವದನವ
ನಲಿನಲಿದು ಕುಡಿಕುಡಿವ
ನೆಲೆದೆರೆಯನಾನಂದ
ನೆಲೆವೆರ್ಚಿತಿಂದುಗಂಡಬುದಿಯಂತೆ ೧೬

ಆ ತಪೋವನದಿಂದ
ವೈತಂದು ಮುನಿವರಂ
ಜಾತಕರ್ಮವನೆಸಗೆ ಕಳೆಯುನಣುಗಂ
ಆತುಕೊಂಡನು ಗಣೆಯ
ನೂತನದ ರನ್ನವಣಿ
ಯಾತುಕೊಳ್ವಂತೆ ಸಾಣೆಯೊಳೆಂದವ ೧೭

ಕಿವಿಗೆ ಸೊದೆವಳೆಗರೆವ
ಸವಿಯುಲಿಯ ಶುಭತೂರ್ಯ
ರವಮುಮೊಲವಾಂತಿರ್ದ ಬೆಲೆವೆಣ್ಗಳ
ಸವಿವೆಕ್ಕಣಮುಮಲ್ಲಿ
ಸವನಿಸಿದನಿತೆಯಲ್ಲ
ಸವನಿಸಿತು ವಾಸವನ ಭವನದೊಳಗಂ ೧೮

ಧರಣಿಯುಂ ಧರ್ಮದಿಂ
ಪೊರೆವಾ ನೃಪಾಲಂಗೆ
ಸೆರೆವಿಡುವೊಡಾರುಮಲ್ಲಿಲ್ಲದಿರಲು
ವರಸುತನ ಪಡೆದು ಪಿತ
ರರ ಋಣವೆನಿಪ್ಪೊಂದು
ಸೆರೆಯಿಂದ ತನ್ನನೇ ಬಿಡಿಸಿಕೊಂಡಂ ೧೯

ಎಂತು ಶಾಸ್ತ್ರಾಂಬುನಿಧಿ
ಗಂತವನು ಕಾಂಬನಿವ
ನಂತು ಕಾಂಬನು ರಣದಿ ರಿಪುಗಂತವಂ
ಇಂತೆಂದು ತಿಳಿದು ಭೂ
ಕಾಂತನಾ ಪುತ್ರಂಗೆ
ಸಂತಸದಿ ರಘುವೆಂಬ ಪೆಸರಿಟ್ಟನಂ ೨೦

ತಂದೆಯೊಲುಮೆಗಳಿಂದ
ನಂದನನ ಮೆಯ್ಯೊಳಗೆ
ಸಂದುದವಯವಶೋಭೆ ದಿನದಿನದೊಳಂ

ಮಂದಯಿಪ ರವಿಯ ಕದಿ
ರ್ಗೊಂದಳಿಗಳಿಂದ ಬಾ
ಲೇಂದುವಿನ ಮೆಯ್ಗೆ ಕಳೆಯೇರುವಂತೆ ೨೧

ಗಿರಿಶನುಂ ಗಿರಿಜೆಯುಂ
ಶರಜನ್ಮನಿಂದ ಮೇಣ್
ಸುರಪನುಂ ಶಚಿಯುಂ ಜಯಂತನಿಂದ
ಮೆರೆವಂತೆ ನರಪತಿಯು
ಮರಸಿತಿಯುಮಣುಗನಿಂ
ಮೆರೆದು ಕೈಕೊಂಡರಿವರವರ್ಗೆಣೆಯನು ೨೨

ಗೆಳೆವಕ್ಕಿಗಳೊಳೊಲವು
ಬಲಿವವೋಲೊಬ್ಬೊಬ್ಬ
ರೊಳಗೆ ಬಲಿದಾ ದಂಪತಿಗಳ ಕೂರ್ಮೆ
ಎಳೆಯನೊಳು ಪಸುಗೆಯನು
ತಳೆದಿರ್ದೊಡಂ ಕುಂದಿ
ಗೊಳಗಾಗದೋರಂತೆ ನೆಲೆವೆರ್ಚಿತು ೨೩

ನುಡಿಯ ಕಲ್ತನು ದಾದಿ
ನುಡಿದ ನುಡಿಗಳ ಕೇಳಿ
ನಡೆಗಲ್ತನವಳ ಕೈವೆರಲ ಪಿಡಿದು
ಪೊಡೆಮಡಲು ಕಲಿಸಿದೊಡೆ
ಪೊಡೆಮಡುಂವುದನು ಕಲಿತು
ಪಡೆದನಣುಗನು ತಂದೆಗಾನಂದವ ೨೪

ಸೋಕಿದೆಡೆಯೊಳಗಮೃತ
ದೋಕುಳಿಯ ಸುರಿವನೆಂ
ಬಾ ಕುವರನಂ ತನ್ನ ತೊಡೆಯೊಳಿರಿಸಿ
ಆಕುಂಚಿತಾಕ್ಷಿಯಿಂ
ಭೂಕಾಂತನರ್ಭಕನ
ಸೋಕಿನಿಂದೊಗೆದ ತನಿಸೊಗವನುಂಡ ೨೫

ಎಂತಜಂ ವಿಷ್ಣುವಿಂ
ದಂ ತನ್ನ ಸೃಷ್ಟಿಯೇ
ಸಂತತಂ ಸ್ಥಿರವೆಂದು ಬಗೆದನಂತು
ಇಂತಪ್ಪ ತನಯನಿಂ
ದಂ ತನ್ನ ವಂಶವೇ
ಸಂತತಂ ಸ್ಥಿರವೆಂದು ನೃಪನರಿದನು ೨೬

ಎಳೆಯನಿಗೆ ಚೌಳಮಂ
ಗಳಮಾಗೆ ಮಂತ್ರಿಗಳ
ಚಳಕಾಕಪಕ್ಷರಪ್ಪಣುಗರೊಡನೆ
ಕಲಿತು ಲಿಪಿಯನು ಶಾಸ್ತ್ರ
ಗಳ ಕಲಿತನವನು ತೊರೆ
ಗಳ ಮುಖದಿ ಜಲನಿಧಿಯ ಪುಗುವ ತೆರದಿ ೨೭

ಬಳಿಕಲುಪನಯನವನು
ಬೆಳಸಿದರು ಕುವರನಿಗೆ
ಕಲಿಸಿದರು ಪಂಡಿತರು ವಿದ್ಯೆಗಳನು
ಕಲಿಸಿದೋದುಗಳೆಲ್ಲ
ಫಲಿಸಿತವನೊಳು ಪಾತ್ರ
ದೊಳು ಕಣಾ ಫಲಿಸುವವು ಕ್ರಿಯೆಗಳೆಲ್ಲ ೨೮

ಚತುರರ್ಣವೋಪಮದ
ವಿತತ ಶಾಸ್ತ್ರಂಗಳನು
ಮತಿಬಲದಿ ದಾಂಟಿದನು ನೃಪತನಯನು
ಗತಿವೇಗದಿಂದ ಮಾ
ರುತನನಿಳಿಸುವ ತುರಗ
ತತಿಯಿಂದ ರವಿ ದೆಸೆಯ ದಾಂಟುವಂತೆ ೨೯

ರುರುಚರ್ಮಮಂ ತಳೆದಂ
ಗುರುವಿಂದೆ ಮಂತ್ರಾಸ್ತ್ರ
ದರಿವ ಕೈಕೊಂಡನಾ ನೃಪತನಯನು

ಗುರುವೇಕನೃಪನೆಂಬ
ಬಿರುದೊಂದನೊಂದಿದನೆ
ವರಧನುರ್ಧರನೆಂಬ ಹೆಸರುವಡೆದಂ ೩೦

ಕರಂ ಕೊಬ್ಬಿ ಮೈಗೂಡಿ
ಬಿರುಗೂಳಿಯಪ್ಪಂತೆ
ಮರಿಯಾನೆ ಬಲಿತು ಗಜವೆನಿಸುವಂತೆ
ಹರಯದಿಂದೆಳವೆಯಂ
ಮುರಿದು ಗಾಂಭೀರ್ಯದಿಂ
ಪರಿವಡೆದ ತನುವಿಂದೆ ಮನವಿಡಿದನು ೩೧

ಬಳಿಕ ಗೋದಾನವಿಧಿ
ಬಳಿದ ಸಮನಂತರದೆ
ಬೆಳಗಿದವು ವೈವಾಹಮಂಗಳಗಳು
ಬಳಸಿ ನಿಂದಿರ್ದ ವಧು
ಗಳಂ ಹೊಳೆದರಿಂದುವಿನ
ಬಳಸಿನಲಿ ಕಂಗೊಳಿಪ ಮೀಂಗಳಂತೆ ೩೨

ನೊಗದಂದವಾಯ್ತು ತೋಳ್
ಬಿಗಿವಡೆದುದೊಡಲಿದೆಯಂ
ಮಂಗಲವಾದುದು ಕೊರಲುಮುಬ್ಬೆದ್ದುದು
ಸೊಗಸಿಂದೆ ತಂದೆಯಿಂ
ಮಿಗಿಲೆನಿಸಿಯುಂ ತನ್ನ
ನೆಗಳ್ವ ವಿನಯದಿ ಕಿರಿಯನೆನಿಸಿ ಮೆರೆದಂ ೩೩

ನರಪನದನೀಕ್ಷಿಸುತೆ
ಚಿರಕಾಲದಿಂ ಹೊತ್ತ
ಗುರುಧರಾಭಾರವನು ಕಳೆಯಲೆಳಸಿ
ನೆರೆವಿನೀತಂ ಗುಣದೊ
ಳರಿವಿನೊಳಮಿವನೆನುತೆ
ನಿರಿಸಿದನಂ ಯುವರಾಜ ಪದವಿಯೊಳಗೆ ೩೪

ತೊರೆದಾದಿನೃಪತಿಯನಂ
ತರುಣಯುವರಾಜನನಂ
ವರಿಸಲೆಳಸಿದಳು ಸಿರಿ ಗುಣಕೆ ಸೋತು
ತೊರೆದು ಕಮಲವನು ಬಾ
ಯ್ದೆರೆವ ನಳಿನದ ನವ್ಯ
ಪರಿಮಳಕೆ ಬಗೆಸೋತು ಮುಗ್ಧೆವಂತೆ ೩೫

ಮರುತನಿಂದಗ್ನಿಯುಂ
ಶರವದಿಂ ಸೂರ್ಯನುಂ
ಪರಿವರ್ಧಿಸುವ ಮದದಿ ವನ್ಯಗಜಮುಂ
ಪರರಿಗತ್ಯಂತ ದು
ರ್ಧರವಪ್ಪ ತೆರದಿ ದು
ರ್ಧರನಾದನಾತ್ಮಜನಿನಾ ನರಪನು ೩೬

ಬಿಡುಗಣ್ಣರೊಡೆಯನಿಗೆ
ಪಡಿಯೆನಿಸೆ ತಡೆಯಾದ
ಕಡೆಯ ಯಾಗವನೊಂದನೆಸಗಲೆಳಸಿ
ತೊಡಗಿ ಮಖವನು ಕುದುರೆ
ಯೊಡಲ ರಕ್ಷೆಗೆ ಧನುವ
ಪಿಡಿದಣುಗನೊಡನೆ ಕಳುಹಿದನರಸರಂ ೩೭

ಎಳಸಿದೊಂದಂದದೊಳು
ತೊಳಲಲೆನೆ ಬಿಟ್ಟ ಮಂ
ಜುಳತುರಗವನು ಕಾವ ಭಟರ ಮುಂದೆ
ಬಲವೈರಿ ಮಾಯದಲಿ
ತಲೆಗರೆದು ಕಳ್ದುಕೊಂ
ಡೆಲರ ಮಾರ್ಗದೊಳಮರಪುರಿಗೆ ಸರಿದಂ ೩೮

ತುರಗವನು ಕಾಣದುರೆ
ಬೆರಗಾಗಿ ದುಃಖದೊಳು
ಮರುಗಿ ಮುಂಗಾಣದಿರೆ ನೃಪನ ದಳವು

ಪರಿತಂದುದಾಯೆಡೆಗೆ
ವರತಪೋಧನರಪ್ಪ
ಗುರುವಸಿಷ್ಠರ ಕಾಮಧೇನುವಾಗ ೩೯

ಬಂದ ಮುನಿಧೇನುವಿನ
ಸಂದ ಮೂತ್ರಾಂಬುವಿನ
ಬಿಂದುವಿಂ ಕಣ್ದೊಳೆಯಲೊಡನೆ ನೃಪನ
ನಂದನನ ಕಣ್ಬೊಲಕೆ
ಬಂದುದಿಂದ್ರಿಯಂಮಾರ್ಗ
ಕೆಂದುಮೆಂಡೆವಡದ ನವಭಾವವೆಲ್ಲ ೪೦

ಒಡನೆ ಕಂಡನು ಮೂಡ
ಣೆಡೆಯಲ್ಲಿ ಬಿಡಂಗಣ್ಣ
ರೊಡೆಯನಾ ಕುದುರೆಯನು ಬಿಗಿದು ರಥಕೆ
ಅಡಿಗಡಿಗೆ ಸಾರಥಿಯುಂ
ಜಡಿದಂ ನಡೆಯಿಸುತಿರಲು
ಸಡಗರದಿ ಬಾನೆಡೆಯೊಳುಯ್ವ ತೆರನ ೪೧

ಮಿಂಸುಕದೆವೆಂಗಳ ಕಣ್ಣ
ಹಸರದಿಂದೆಂತಂತೆ
ಹಸುರ ಕುದುರೆಗಳಿಂದಮಿಂದ್ರನೆನಂತೆ
ವಸುಧೇಶನರಿಯುಂತಾ
ಗಸವ ಮುಟ್ಟುವ ರವದಿ
ಬೆಸಸುವಂತಿಂದ್ರಂಗೆ ನುಡಿದನಿಂತು ೪೨

ಯಾಗದೊಳು ನೀಂ ಹವಿ
ರ್ಭಾಗವನು ಮೊದಲೊಳೇ
ಭೋಗಿಸುವೆಯೆಂದೊರೆವರರಿವ ಜನರು
ಆಗಳುಂ ನನ್ನ ಪಿತೃ
ಯಾಗದೀಕ್ಷಿತನವನ
ಯಾಗಕ್ಕೆ ನೀನೆ ತಡೆಯಾಗಲಹುದೆ ೪೩

ಮೂಲೋಕಕರಸೆನಿಸಿ
ಪಾಲಿಸುವ ನೀನೆ ದು
ಶ್ಶೀಲರನು ಶಿಕ್ಷಿಸುವ ಪರಿಯ ತೋರೆದು
ಮೇಲೆನಿಪ ಧರ್ಮಕವ
ಹೇಳನವನೆಸಗಿದೊಡೆ
ಹಾಳಹುದು ಸತ್ಕರ್ಮವವನಿಯಲ್ಲಿ ೪೪

ಆದರಿಂದ ಮುಖಕಾರ್ಯ
ಕೊದಗುವೀ ಶುಭಕರದ
ಕುದುರೆಯನು ಬಿಟ್ಟು ಕಳುಹಮರಪಾಲ
ಸದುಹೃದಯರುರಿರೆ ಮಲಿನ
ಹೃದಯರಪ್ಪರ ನಡೆವ
ಪದವಿಯೊಳಗಡಿಯಿಡಲು ಬಯಸರಲ್ತೆ ೪೫

ಎಂದೊರೆದ ಭೂಪಾಲ
ನಂದನನ ನುಡಿಗೆ ಸಂ
ಕ್ರಂದನನು ವಿಸ್ಮಯವನಾಂತು ರಥವ
ಹಿಂದಿರುಗಿಸಿದನು ಬಳಿ
ಕಂದನಾ ಭೂಪತಿಯಂ
ನಂದನನೊಳುತ್ತರವನೀ ತೆರದೊಳು ೪೬

ಅಹುದಹುದು ನಿನ್ನ ನುಡಿ
ವಿಹಿತವೆಲೆ ನೃಪತನಯ
ಸಹಜವೆನಗೆನ್ನ ಯಶವನು ಹೊರೆವುದಂ
ಮಹಿಯೊಳಗೆ ಹರಹಿದೀ
ಬಹಳಯಶವನು ಯಜ್ಞ
ಮಹದಿ ನಿನ್ನಯ ತಂದೆ ಮರಸಲಿಹನು ೪೭

ಹರಿಯೊಬ್ಬನೇ ತಾನು
ಪುರುಷೋತ್ತಮನದೆಂತು
ಹರನೊಬ್ಬನೆಂತು ತಾಂ ಮುಕ್ಕಣ್ಣನು

ಪುರುಹೂತನೊಬ್ಬನಾ
ಪರಿಯೊಳಂ ಶತಕ್ರತುವು
ದೊರೆಯದೀ ಪೆಸರುಳಿದ ಸುರನರರಿಗೆ ೪೮

ಅದು ಕಾರಣದಿ ನಿಮ್ಮ
ಕುದುರೆಯುನು ಕಪಿಲನಂ
ದದಿ ನಾನುಮೀಗಳಿಂತಪಹರಿಸಿದೆಂ
ಇದನಂ ಬಿಡಿಸುವ ಬಯಂಕೆ
ಗೆದೆಗೊಟ್ಟು ಸಗರಜರ
ಪದವಿಯೊಳು ಕಾಲಿಡಲು ಬಯಸಬೇಡ ೪೯

ಎನಲು ಗಹಗಹಿಸಿ ನ
ಕ್ಕನು ನರಪನಂದನನು
ಮನಗೆಡದೆ ಸುರಪತಿಯೊಳೊರೆದನಿಂತು
ನಿನಗೆ ತರಿಸಲವಿಂತು
ಜನಿಸಿದೊಡೆ ಸರಲ ತೊಡು
ಮೊನೆಯೊಳೆನ್ನನು ಗೆಲ್ಲದೇಂ ಧನ್ಯನೇ ೫೦

ಎಂದು ನುಡಿದೊಡನೆ ಶರ
ಸಂಧಾನವಂ ಮಾಡಿ
ಬಾಂದಳದಿ ಲಕ್ಷ್ಯವಂ ಕಟ್ಟಿ ಪಿಂತೆ
ಇಂದುಶೇಖರನಂ ನಿಂ
ದಂದದೊಳಗಾತನುಂ
ನಿಂದನಾಲೀಢಪದದಿಂದಲಾಗ ೫೧

ನಿಂದು ವಿಂಸುನಿಯಂ ಪುಣುಂ
ಬಿಂದೆಚ್ಚೊಡದರಿಂದ
ನೊಂದು ಸಂಕ್ರಂದನಂ ಕೆರಳಿ ಸರಲ
ತಂದು ಹೊಡಿದನಬ್ದ
ವೃಂದದೊಳು ಪಲವಣ್ಣ
ದಿಂದೊಗೆದು ಕಿಡುವ ನಿಜಕಾರ್ಮುಕದಲಿ ೫೨

ರಕ್ಕಸರ ರಕುತವನು
ನಕ್ಕುತಿರ್ದಾ ಸರಲು
ಹೊಕ್ಕು ನೃಪನಗಲಿತಾದೆದೆಯೆಡೆಯೆನಂ
ಒಕ್ಕ ರುಧಿರಾಂಬುವನು
ನೆಕ್ಕಿದುದು ಕುಡಿದರಿಯು
ದಕ್ಕರಿಂ ಸೋರೆವಂತೆ ನರರುಧಿರವ ೫೩

ಕೆರಳಿ ನಿಜನಾಮದ
ಕ್ಕರದ ಸರಲುಗಳಿಂದ
ಲಿರಿದನರಸನು ಶಚಿಯ ಪತ್ರಲತೆಯಾ
ಕುರುಹಾಂತು ಸಂರಕರಿಯು
ಶಿರವಣೆದು ಬಿರಿಸಾದ
ಬೆರಲಾಂತು ಮೆರೆವಮರಪತಿಯ ಭುಜವ ೫೪

ಇರದೊಡನೆ ನವಿಲ ಗರಿ
ವೆರೆದಲಗನೆಚ್ಚು ಕ
ತ್ತರಿಸಿದನಂ ಸುರಪತಿಯ ಹಳವಿಗೆಯನಂ
ಸುರರ ಸಿರಿಯೆನು ಪಿಡಿದು
ತುರುಬುಗೊಯ್ದಂತಾಗೆ
ಸುರರರಸು ಕೋಪದೊಳಗುರಿದೆದ್ದನಂ ೫೫

ಬಳಿಕಮಾ ಸಿದ್ಧರುಂ
ಕಲಿಗಳುಂ ನೋಡೆ ಕುಂ
ಡಲಿಯುವೊಲ್ ಕ್ರೂರವಹ ಗರಿಯಲಗನಂ
ನೆಲದಿ ಗಗನಕೆ ಗಗನ
ತಲದಿ ನೆಲಕೆಚ್ಚುವರುಂ
ಗೆಲಲೊಬ್ಬರೊಬ್ಬರನು ಘಾತಿಸಿದರು ೫೬

ಸರಲ ಸರಿವಳೆಗರೆವ
ನರಪತಿಯು ತೇಜಕ್ಕೆ
ತರಹರಿಸಲಾರ್ತನಿಲ್ಲಮರರರಸು

ಕರೆವ ಮಳೆಯೊಡನಂಗುಳ್ವ
ಬಿರುಸಿಡಿಲ ಬೆಂಕಿಯುನಂ
ತರಹರಿಸಲಾರದಂಬುದದ ತೆರದಿ ೫೭

ಕಡಪದಲಿ ಬೊಬ್ಬಿಡುವ
ಕಡಲಂತೆ ಮೊರೆವ ಹರಿ
ಪಿಡಿದ ಬಿಲ್ಲಿನ ಬಿಗಿದ ಹೆದೆಯು ಹುರಿಯು
ಕುಡುವೆರೆಯು ಸರಲೊಳಿ
ಕ್ಕಡಿಗಡಿದನಾಗಳಾ
ಪೊಡವಿಯರಸಿನ ತನಯುನಣ್ಮಿನಿಂದ ೫೮

ಬಿಟ್ಟನಾ ಚಾಪಮಂ
ತೊಟ್ಟನತಿಕೋಪಮಂ
ಹಿಂಟ್ಟುಗುಂಟ್ಟುವೆನರಿಯುನೆನುತಿಂದ್ರನು
ಬೆಟ್ಟಗಳ ಗರಿಗಳನಂ
ಹುಟ್ಟುಗಿಡೆ ಕಡಿದಿಡುವ
ಕಟ್ಟುಗ್ರದಸ್ತ್ರಕ್ಕೆ ಕೈಯಿಟ್ಟನಂ ೫೯

ತೂಗಿ ಹೊಡೆದಾ ಸರಲು
ತಾಗಿತೆದೆಯುನು ನೃಪನ
ಬಾಗಿಸಿದುದಿಳೆಗೆ ಬಲದಶ್ರುವೊಡನೆ
ಆಗಳೇ ಬೇನೆಯುನಂ
ನೀಗಿದನು ಸೈನಿಕರ
ರಾಗರಸದೊಡನವನು ಮೊರೆದೆದ್ದನಂ ೬೦

ಆ ವಿಧದ ಹತಿಯೊಳಂ
ನೋವನಾನದೆ ಶತ್ರು
ಭಾವವನೆ ಮನದೊಳಗೆ ಬಲಿದು ನಿಂದ
ಭೂವರನ ಶೌರ್ಯಕ್ಕೆ
ದೇವಪತಿ ಮೆಚ್ಚಿದನ
ದಾವೆಡೆಯೊಳಂ ಗುಣವೆ ಪೂಜ್ಯವಲ್ತೆ ೬೧

ಗಿರಿಗಳನಂ ಕಡಿದು ಕ
ತ್ತರಿಸುವೀ ವಜ್ರವನು
ತರಹರಿಪ ಕಲಿಯುಂಟೆ ನೀನುಳಿಯಲು
ಅರಸ ನಾಂ ಮೆಚ್ಚಿದೆನು
ತುರಗವಿದು ಹೊರಗಾಗೆ
ವರವ ಬೇಡೆನುತಿಂದ್ರನೊರೆದನಂದು ೬೨

ಹೊನ್ನ ಹಿಳುಕಿನ ಬೆಳಗು
ತನ್ನ ಬೆರಲನು ಬೆಳಸಂ
ವನ್ನಮರೆಯುಗಿದಂಬನಂತೆ ನಿಲಿಸಿ
ಮನ್ನಣೆಯನೋಲಗಿಸು
ವಿನ್ನುಡಿಯನುಸಿರಿದವೃ
ತಾನ್ನರೆರೆಯನೊಳಿಂತು ನುಡಿದನವನು ೬೩

ತುರಗವನು ಬಿಡೆನೆಂಬ
ತರಿಸಲವೆ ನಿನಗಾಗೆ
ನಿರುತಮಧ್ವರದೀಕ್ಷನೆನಿಸಿದೆನ್ನ
ಗುರುಗೆ ನೀಂ ಕರುಣಿಪುದಂ
ಪರಮ ವಿಧಿವಿಹಿತವೆನೆ
ವಿರಚಿಸಿದ ಯಾಗಫಲವೆನಿತೆನಿತನಂ ೬೪

ದೇವೇಶ ಕರುಣಿಸುವು
ದೀ ವಾರ್ತೆಯನಂ ನಿನ್ನ
ಸೇವಕರೆ ಮದ್ಗುರುಗೆ ತಿಳಿಪುವಂತೆ
ಪಾವಕಾಕ್ಷಾಂಶದಿಂ
ತೀವಿರ್ಪ ನೃಪನೆಡೆಗೆ
ನಾವು ಮರೆದುಂ ಸಾರಲಮ್ಮೆವೆನಲು ೬೫

ಏಗೊಂಡನಾ ನುಡಿಯ
ನಾಗಳೇ ಮಾತಲಿಯ
ಪೋಗೆ ಬೆಸಸಿದನರಸನೆಡೆಗಿಂದ್ರನಂ

ಯಾಗಪಶುವನು ನೀಗಿ
ಬಾಗಿ ತಲೆಯನು ಪಿತೃವ
ಯಾಗಭವನಕೆ ಬಂದನರಗುವರನು ೬೬

ಮೊದಲೆ ಮಾತಲಿಯಿಂದ
ಕದನದೊಳು ಸಂತನೆಸಗಿ
ದದಟಂಗಳ ಕೇಳಿ ನಲವಾಂತ ನೃಪನು
ಉದಿರ್ವ ಹರ್ಷಾಶ್ರುವಿಂ
ಪುದಿದ ಕರತಳದಿಂದ
ಪದೆದು ತಡವಿದನಣುಗನೊಡಲೇರನು ೬೭

ಇಂತಾ ದಿಲೀಪ ಭೂ
ಕಾಂತನೊಲವಿಂ ಸಪ್ತ
ತಂತುಗಳ ಶತಕಕೊಂದೂನವೆನಿಸೆ
ಮುಂತೆ ಸಗ್ಗಕೆ ತಳರ
ಲಿಂತು ಸೋಪಾನಗಳ
ಸಂತತಿಯ ಸಮೆದನೆನೆ ವಿರಚಿಸಿದನು ೬೮

ಬಳಿಕಿಳೆಯ ಸಂಪದವ
ನಳಿದಂ ತಂದೆಯ ತೆರದಿ
ಪಳುವವಂ ಸತಿವೆರಸು ಪೋಗಲೆಳಸಿ
ಕುಳತಿಳಕನಹ ಸುತಂ
ಗೊಲುಮೆಯಲಿ ನೀಡಿದನು
ಬೆಳುಗೊಡೆಯುನರಸಂಗುರುಹಿನ ಸಿರಿಯನು ೬೯

ಗುರುವಿತ್ತ ರಾಜ್ಯದೈ
ಸಿರಿಯಿಂದ ರಘುನೃಪಂ
ಸುರುಚಿರಶ್ರೀಯಾಂತು ರಂಜಿಸಿದನು
ತರಣಿ ಸಂಜೆಯೊಳಿತ್ತ
ಕಿರಣದೈಸಿರಿಯಿಂದ
ಮಿರುಮಿರುಪ ಪಾವಕನ ವೈಸಿರಿವೊಲು ೭೦

ಅಜನೃಪ ಚರಿತೆ

ಸಿರಿಯನರ್ಪಿಸಿ ತನ್ನ ಪಕ್ಕದಿ
ಶಿರವ ಬಾಗಿಸಿ ನಿಂದ ರಘುಭೂ
ವರನ ತಲೆಯೊಳು ಕರವನಿಟ್ಟಾ ಕೌತ್ಸಮುನಿವರನು
ವರತನೂಜನ ಪಡೆಯೆನುತ ನ
ಲ್ವರಕೆಯನು ದಯೆಗೆಯ್ದು ತನ್ನಯ
ಗುರುವಿನಾಶ್ರಮದತ್ತ ಸರಿದನು ಪರಮಹರ್ಷದಲಿ ೧

ಇತ್ತ ರಘುನೃಪನರಸಿ ಗರ್ಭವ
ಹೊತ್ತಳಜನಾಮದ ಮುಹೂರ್ತದಿ
ಹೆತ್ತಳಾ ಕುವರಂಗೆ ಸವನಹ ಕುವರನನು ಬಳಿಕ
ತತ್ತನೂಜಂಗಜನ ನಾಮದ
ಪತ್ತುಗೆಯೊಳಜನೆಂಬ ಹೆಸರನೆ
ಬಿತ್ತರಿಸಿದನು ರಘುನೃಪಾಲನು ಬಹಳವಿಭವದಲಿ ೨

ತಂದೆಯುಜ್ಜ್ವಳವಪ್ಪ ರೂಪವೆ
ತಂದೆಯತಿಶಯವಪ್ಪ ಬೀರವೆ
ತಂದೆಯೊಂದುನ್ನತಿಯೆ ತನಗಳವಡಲು ನಂದನನು
ತಂದೆಯಿಂದೊಂದಿನಿಸು ಬೇರೆಂ
ಬಂದಕೆಡೆಯನು ಕುಡದೆ ಹೆಜ್ಜೊಡ
ರಿಂದ ಹೊತ್ತಿದ ದೀಪದಂದದಿ ಕಾಂತಿಯಾಂತೆಸೆದ ೩

ಓದುಗಳನೋದಿದನು ಶಾಸ್ತ್ರದ
ಹಾದಿಯೊಳು ಗುರುಜನದ ಬಳಿಯೊಳ್
ಕೋದು ಕೊರ್ವಿತು ಕೂಡೆ ಯೌವನಕಾಂತಿ ಕಾಯದಲಿ
ಶ್ರೀದಯಿತೆ ಕಣ್ಸೋತೊಡಂ ಬಗೆ
ಗಾದು ತನ್ನಯ ಗುರುವನುಜ್ಜ್ಞೆಯಂ
ಕಾದಂ ಕನ್ನಿಕೆಯಂತೆ ಹಾರೈಸಿದಳು ಹಸೆನಿಲಲು ೪

ಇತ್ತಲಿಂತಿರಲತ್ತ ಭೋಜನೃ
ಪೋತ್ರಮನು ತನಗನುಜೆಯೆನಿಸಿದ
ಮತ್ತಕಾಶಿನಿಯಿಂದುಮಂತಿಗೆ ವಿವಾಹಮಂಗಳವ
ಬಿತ್ತರಿಪ ಬಗೆಯಿಂದವೋಲೆಯಂ
ನಿತ್ತು ಚರರನು ರಘುನೃಪಾಲಕ
ನತ್ತ ಕಳುಹಿದನಜಕುಮಾರನನೊಡನೆ ಕರೆತರಲು ೫

ತನ್ನೆಡೆಗೆ ಚರರೈದಿ ನೀಡಿದ
ಬಿನ್ನವತ್ತಳೆಯುನು ವಿಲೋಕಿಸಿ
ಮನ್ನಣೆಯ ಕೊಳುಕೊಡೆಗೆ ತಕ್ಕವನಿವನು ಮೇಣಜನಂ
ಕನ್ನೆಯನು ಕೈವಿಡಿವ ಹರಯದ
ಬಿನ್ನಣಿಗನೆಂದರಿದು ಸೇನೆಯು
ಸನ್ನಣದಿ ಕಳುಹಿದನು ಸುತನನು ರಘುನೃಪಾಲಕನು ೬

ದಾರಿಯೊಳಗಲ್ಲಲ್ಲಿ ನಿಲಿಸಿ
ದೋರಣದ ಗೂಡಾರದೊಳು ಪರಿ
ಚಾರರೆಸಗಿದ ನವ್ಯರಾಜಹೋಪಚಾರದಲಿ
ಊರುಗರು ತಂದೊಪ್ಪಿಸಿದ ನವ
ಸಾರಫಲದುಲುಪೆಯೊಳು ಪಥಸಂ
ಚಾರವೇ ನಂದನವಿಹಾರವದೆನಿಸಿತಾತಂಗೆ ೭

ಹಲವು ಪಯಣವನಂತು ನಡೆದಾ
ಬಳಿಕ ಬಳಲಿದ ದಳವ ಧೂಳೀ
ಮಲಿನಕೇತುವನೊಲಿದು ನಿಲಿಸಿದನಜಕುಮಾರಕನು
ತಳಿತಳೆದು ಸೀರ್ಪನಿಯುನೊಯ್ಯನೆ
ಸುಳಿಸುಳಿದು ಕರಜಗಳ ತಲೆಗಳ
ನಲುಗಿಸುವ ತಂಬೆಲರನಟ್ಟುವ ನರ್ಮದೆಯ ತಟದಿ ೮

ಹೊಳೆಯ ಮೇಗಡೆ ಮಂಡಳಿಸಿ ಸುಳಿ
ವಳಿಯು ಬಳಗವೆ ತಿಳಿಪೆ ಕರಿ ತೊರೆ
ಗಿಳಿದ ಬಳಿಯನು ನೋಡುವಾ ದಳಕಚ್ಚರಿಯುನೆಸಗಿ

ಜಳಕನಾ ನರ್ಮದೆಯ ಮಡುವೊಳು
ತಲೆಯನೆತ್ತಿತು ಧೌತದಾನಾ
ಮಳದ ಗಂಡಸ್ಥಳದ ಮದಕರಿಕಳಭವಿದಿರಿನಲಿ ೯

ಕೋಡಿನಿಂದೀಡಿರಿಯೆ ಧಾತುಗ
ಳೊಡಿದೆಳಗೆಂಪುದಕದೊಳಗೋ
ಲಾಡುವಂದೋಡಿದೊಡಮಾ ಕರಿ ಋಕ್ಷವದ್ಗಿರಿಯ
ಕೋಡಿನೊಳಗೀಡಿರಿದುದನು ಪಿಸು
ಣಾಡಿದುದು ನೆರೆ ನೀಳ್ದ ನೀಲದ
ರೂಢಿಸಿದ ರೇಖೆಗಳ ರಾಜಿಯು ಮುರಿದ ಕೋಡುಗಳು ೧೦

ಸಿಂಬಿಸುತ್ತುತ ಸೊಂಡಲನು ನೆರೆ
ಲಂಬಿಸುತ ಬಳಿಕೊಡನೆ ಘೀಳಿ
ಟ್ಟಂಬರವ ಬಿರಿಯಿಸುತ ತಟಿನಿಯ ತಟವನೀಕ್ಷಿಸುತ
ಬಾಂಬರೆಗವೊಗೆದಡರ್ವ ತೆರೆಗಳ
ಬಂಬಲನು ಹೊಡೆದಪ್ಪಳಿಸುತೊ
ತ್ತಂಬದಿಂ ಬಾಳ್ಗಂಬವನು ಕೀಳ್ವಂತೆ ರಭಾಡಿಸುತ ೧೧

ಶೈಲಕೋರಗೆಯೆನಿಸುವಾ ಶುಂ
ಡಾಲಪತಿಯೊರ್ವೊದಲೆ ತೆರೆಗಳ
ಮಾಲೆಯನು ತನ್ನದಿಯ ತಡಿಗೋಡಿಸಿದುದಾ ಬಳಿಕ
ಘೀಳಿಡುತ ಮೆಯ್ಯೊಳಗೆ ಸಂಕಲೆ
ಸಾಲಿನಂದದಿ ಕೀಲಿಸಿದ ಶೈ
ವಾಲಗಳ ಜಾಲಗಳ ಸೆಳೆಯುತ ಕೂಲಕ್ಕೈದಿದುದು ೧೨

ನೀರೊಳದ್ದಿಯದೊಂದು ಚಣವಿನಿ
ಸಾರಿದಾ ಮದವಾರಣದ ದು
ರ್ವಾರವಹ ಮದವಾರಿಧಾರಾಪೂರವಜನ್ನೃಪನ
ಚಾರುಚತುರಂಗದ ಮತಂಗಜ
ವಾರದಾಲೋಕನದಿ ಭೋರೆನೆ
ವೇರೆವರಿದುಕ್ಕಿದುದು ಮತ್ತೆಯುಮದರ ಕದಪಿನಲಿ ೧೩

ಏಳಿಲೆಯ ಬಾಳಿಗಳ ಪರಿಮಳ
ದೇಳಿಗೆಯ ಮದಜಲದ ಸೊವಡಿಗೆ
ತಾಳಲಾರದೆ ನೃಪಕುಮಾರನ ಸೇನೆಯಾನೆಗಳು
ಮೇಲಣಾಧೋರಣರ ಕೈದುವ
ಕೋಳಿಗಂಜದೆ ಮೊಗಮುರಿದು ಬನ
ದೋಳಿಯಲಿ ಘೀಳಿಡುತ ಹರಿದೋಡಿದುವು ವಹಿಲದಲಿ ೧೪

ಓಡಿದುವು ಕುದುರೆಗಳು ಬೆನ್ನೊಳು
ಹೂಡಿ ಕಟ್ಟಿದ ನೊಗವನಿರದೀ
ಡಾಡಿದುವು ತೇರಚ್ಚುಗಳು ಮುರಿವಡೆದು ಪುಡಿವೋಗೆ
ಗಾಡಿಕಾತಿಯರುಳಿವ ಕಾಣದೆ
ಬಾಡಿ ಬೀರರು ಬಾಯ ತೆರೆದರು
ಪಾಡಳಿದು ಪರಿದೋಡಿತಿಂತಾ ಸೇನೆ ದೆಸೆದೆಸೆಗೆ ೧೫

ಆ ತೆರದಿ ಸೇನೆಯೊಳು ಬಿತ್ತುತ
ಭೀತಿಯನು ಸಾರ್ತರುವ ಕರಿಯನು
ಘಾತಿಸಲೆ ಬಯಸಿದೊಡಮದು ನೃಪನೀತಿಯಲ್ಲೆಂದು
ಕ್ಷಾತ್ರತಳೀಶನು ಮೊನೆಮುರಿದ ಕಣೆ
ಯಾತು ಬಿಲ್ಲೊಳು ಹೂಡಿ ಮೆಲ್ಲನೆ
ಭೀತಿವಡಿಸಲೆನುತ್ತೆ ಕುಂಭಸ್ಥಳವ ಗುರಿಯೆಚ್ಚ ೧೬

ಇಸಲೊಡನೆ ಕರಿ ತನ್ನ ರೂಪನು
ಬಿಸುಟು ಕಳೆದುದು ರಾಯದಳ ಬೆ
ಕ್ಕಸವಡೆದು ನಡೆನೋಡೆ ಹೊಳೆಹೊಳೆಹೊಳೆವ ಕಾಂತಿಗಳ
ವಿಸರಗಳ ನಡುವೆಡೆಯೊಳಗೆ ರಂ
ಜಿಸುವ ಮಂಜುಳಕಾಯಕಾಂತಿಯ
ಹೊಸಪರಿಯ ಗಂದರನ ರೂಪವ ಪಡೆದು ರಾಜಿಸಿತು ೧೭

ಬಳಿಕ ಗಂದರನಾತ್ಮಮಹಿಮಾ
ಬಳದಿ ತರಿಸಿ ಸುರಾವನೀಜದ
ಮಲರನಜಭೂಪತಿಯ ಮಣಿಮಕುಟದೊಳು ಮಳೆಗರೆದು

ಜಲಜಲಿಪ ಸುಲಿಪಲ್ಲ ಬಿಂಬ
ಲ್ವೆಳಗಿನೊಳು ಗಳದೆಡೆಯ ಮುಕ್ತಾ
ಫಳದ ಮಾಲೆಯ ಹೊಳೆಹ ಹೊಮ್ಮಿಸಿ ನೃಪತಿಗಿಂತೆಂದ ೧೮

ಹಿಂದೆ ಕೊರ್ವಿದ ಗರ್ವದಿಂದಾ
ನೊಂದು ದಿವಸ ಮತಂಗಮುನಿಪತಿ
ಯಿಂದ ಶಾಪವ ಪೆತ್ತು ಕೊಂಡಾನೆಯ ಶರೀರವನು
ತಂದುಕೊಂಡೆನು ನಾನು ನೆಗಳ್ದಾ
ಗಂದರರ ಪರಿಬೃಢನ ಹೃದಯಾ
ನಂದನನು ನನಗಾ ಪ್ರಿಯಂವದನೆಂಬುದಭಿಧಾನ ೧೯

ಪಡೆದ ಶಾಪಕೆ ನಡುನಡುಗಿ ಮುನಿ
ಯಡಿಗೆರಗಿ ಬೇಡಿದೆನು ಮುನಿಪತಿ
ಕಡೆಗೆ ಕೋಪವ ಬಿಸುಟು ಕೃಪೆಯನು ತಳೆದನೆನ್ನೊಳಗೆ
ಸುಡುವ ಬಿಸಿಲಿನ ಬೇಗೆಯೊಳು ಮೇ
ಣಡಸಿ ಚುಚ್ಚುವ ಕಿಚ್ಚಿನೊಳು ಜಳ
ಕಡಸುವುದು ಬಿಸುಪದಕೆ ತಂಪೇ ಸಹಜಗುಣವಲ್ತೇ ೨೦

ಅಂತು ಕರುಣಿಸಿ ಮುನಿಪನೆನ್ನೊಡ
ನಿಂತೊರೆದನೆಲೆ ಗಂದರನೆ ರಘು
ಸಂತತಿಗೆ ತಲೆದೊಡವೆನಿಸುವಜನೃಪನ ನಿಡುಸರಲ
ಮುಂತಣುಕ್ಕಿನ ಬಾಯ ದಾರೆಯೊ
ಳಾಂತುಕೊಂಡೊಡೆ ಗಾಯವನು ನೀ
ನಾಂತುಕೊಂಡಪೆ ನಿನ್ನ ಪಿಂತಣ ಮುನ್ನಣೆಯ ಪದವ ೨೧

ಅಂದು ಮೊದಲಾನಿಂದುವರಮೆನ
ಗೆಂದು ನಿನ್ನಯ ದರ್ಶನದ ಸೈ
ಪಿಂದ ಸೊಗವಾದಪುದೆನುತ ಹಾರೈಸಿ ಹಾರ್ದಿರಲು
ಇಂದು ನಿನ್ನಿಂದೆನ್ನ ದಂದುಗ
ಬೆಂದುಹೋದುದು ನಿನಗೆ ನಲವಿಂ
ದಿಂದೆ ಸತ್ಕೃತಿಗೈದು ನಾಂ ಚರಿತಾರ್ಥನಾಗುವೆನು ೨೨

ಆದ ಕತದಿಂ ಸಖನೆ ಕೈಕೊಳ್
ಕೈದನೀ ಸಮ್ಮೋಹನಾಸ್ತ್ರವ
ನಾದರದಿ ತಿಳಿಯಿದನು ತುಡುವಿಳಿಯಿಸುವ ಮಂತ್ರಗಳ
ಕೈದನಿದನೆಚ್ಚೊಡೆ ವಿರೋಧಿಯ
ಬಾಧೆ ತೋರದು ವಿಜಯಲಕ್ಷ್ಮಿಯೆ
ಸಾದರದೆ ಸಾರ್ತಂದು ನಿನ್ನಯ ತೋಳನಪ್ಪುವಳು ೨೩

ಕೊಡಬೇಡೈ ಲಜ್ಜೆಯೊಳು ಕೈ
ಮಾಡಿ ನನ್ನನು ಕೊಂದೊಡೇನೈ
ಮಾಡಿದೈ ನೀನಿಂದು ನನಗತುಳೋಪಕಾರವನು
ಬೇಡುವೆನು ನಾನಿದನು ನೀಂ ಕೃಪೆ
ಮಾಡಿ ನಾನೊಪ್ಪಿಸುವ ಕಾಣ್ಕೆಯು
ಬೇಡವೆನ್ನದೆ ಕೊಂಡು ನನ್ನನು ಧನ್ಯನೆಂದೆನಿಸು ೨೪

ಎನುತ ಬೇಡುವ ಗಂದರನ ನಂಡಿ
ಗನುಮತಿಸಿ ನರ್ಮದೆಯ ನಿರ್ಮಳ
ವೆನಿಪ ತೀರ್ಥವನಾಚಮಿಸಿ ಬಡಗಣ ಮೊಗದೆ ನಿಂದು
ಮನುಜಪತಿಸುತನಾ ಪ್ರಿಯಂವದ
ನನುವಿನಿಂದುಪದೇಶಿಸಿದ ಭೂ
ವಿನುತಮಂತ್ರವನಾಂತುಕೊಂಡನು ಶುದ್ಧಚಿತ್ತದಲಿ ೨೫

ಇಂತು ದೈವನಿಯೋಗದಿಂ ಕೆಳೆ
ಯಾಂತರವದಿರು ಗಂದರನು ಬಲು
ಸಂತಸದಿ ತೆರಳಿದನು ಬಳಿಕಾ ಚೈತ್ರರಥದೆಡೆಗೆ
ಮುಂತೆ ತೆರಳಿದನಿತ್ತ ರಘುಭೂ
ಕಾಂತನಣುಗನು ಭೋಜಭೂಮೀ
ಕಾಂತಪಾಲಿತಮಹಿತಮಂಜುಳಮಗಧಮಂಡಲಕೆ ೨೬

ಊರ ಸನಿಯವನಜನೃಪಾಲನು
ಸಾರಿಮಂದುದನರಿದು ಮನದೊಳು
ಮಿಾರಿದಾನಂದದೊಳು ಮಗಧಾವನಿಪನಿದಿರ್ವಂದ

ಭೂರಿಕಲೆಗಳನಖಿಳದಿಶೆಯೊಳು
ಬೀರುವಾ ಚಂದ್ರಮನನೀಕ್ಷಿಸಿ
ಮೀರಿ ತೆರೆಮಸಗುವ ಮಹಾರ್ಣವದೊಂದು ಬೆಡಗಿನಲಿ ೨೭

ಬಂದು ನಲವಿಂದಜನ ಮುಂಗಡೆ
ನಿಂದು ಮನ್ನಣೆಗೈದು ತಾನೇ
ಮುಂದೆ ನಡೆಯುತೆ ರಾಜಧಾನಿಗೆ ನೃಪನ ಕರೆದುಯ್ದು
ಹಿಂದೆ ಪರುಠವಿಸಿರ್ದ ಮಂಜುಳ
ಮಂದಿರಕೆ ನಡೆತಂದನಲ್ಲಿಯು
ಮಂದಿಯುಜನೇ ರಾಜನೆನುತ ವಿಭಾವಿಸುವ ತೆರದಿ ೨೮

ಬರವ ಕಂಡರಮನೆಯ ಮುಂಗಡೆ
ನೆರೆದ ಪುರುಷರು ಕರವ ಮುಗಿದರು
ನರಪನಾನೆಯನಿಳಿದು ಮಂಗಳಕಳಶಯುಗಳದಲಿ
ಮೆರೆವ ಮೂಡಣ ಬಾಗಿಲಲಿ ಮಂ
ದಿರವ ಹೊಕ್ಕನು ಬಾಲ್ಯವೋಡಲು
ಹರಯದಲಿ ತನುವಿನಲಿ ಮದನನು ನೆಲಸುವಂದದಲಿ ೨೯

ವರಿಸಲೆಂದೈತಂದ ಪಲಪಲ
ರರಸುವಕ್ಕಳೊಳಾವನನು ಪೂ
ಸರವ ಕೊರಲೊಳಗಿಳುಹಿ ಪೊರೆವಳೊ ತರುಣಿಯೆಂದೆನುತ
ಮರುಗುವಜನೃಪನಲ್ಲಿ ಕೋಪದಿ
ಹುರುಡಿಸುತ ಮೆಯ್ಮರಸಿ ನಿದ್ರಾ
ತರುಣಿ ನಿಡುವೊತ್ತಾಗೆ ನಯನವನೊಯ್ಯನಪ್ಪಿದಳು ೩೦

ಕಿವಿಯ ಪಚ್ಚವು ಬಲಿದ ಭುಜದೊಳ
ಗವ್ರಕುತಿರೆ ಮೆಲ್ವೊ(ದ)ಕೆ ಮೆಯ್ಯೊಳ
ಗವಿದ ಗಂದದ ತಿಗುರನಳಿಸಿರೆ ನಿದ್ರಿಸುವ ನೃಪನ
ಕಿವಿಯೊಳಗೆ ಸವಿ ಸೂಸುವಂದದಿ
ಸವಯಸದ ಸೂತಜರು ಸವಿಯಂ
ಪ್ಪವಡಪಾಡನು ಪಾಡಿದರು ಮುನ್ನೇಸರಿನೊಳಾಗ ೩೧

ಇರುಳು ಕಳಿದುದು ದೇವ ಸಜ್ಜೆಯ
ತೊರೆದು ನೀನುಪ್ಪವಡಿಸವನೀ
ಭರವನಂಬುಜಭವನು ನಿಮ್ಮಿಬ್ಬರೊಳು ಹಂಚಿದನು
ಸರಿಹಸುಗೆಯಲಿ ನಿನ್ನ ಗುರುವಾ
ಸೆರಗಿನಲಿ ಧರಿಸಿದನು ನೀನೀ
ಸೆರಗಿನೊಳು ಹೆಗಲಿತ್ತು ತಾಳುವುದುಳಿದ ಭಾರವನು ೩೨

ನಿದ್ದೆಯೊಳು ವೈಮರೆದು ನೀನಿರೆ
ಹೊದ್ದಿದಗಲಿಕೆಯಿಂದ ಸಿರಿ ಮುನಿ
ಸೆದ್ದು ನಿಶೆಯೊಳಗಾವನನು ನೋಡುತ್ತೆ ಮನದಳಲ
ತಿದ್ದುತಿರ್ದಳೊ ಚಂದ್ರನವನಿದೆ
ಹೊದ್ದಿ ಪಡುವಲನಲ್ಲಿ ಮೊಬ್ಬಿನೊ
ಳದ್ದಿ ಬೀಳ್ಕೊಡುತಿಹನು ನಿನ್ನಯ ಮೊಗದ ವೈಸಿರಿಯ ೩೩

ಎರಡು ವಸ್ತುಗಳೊಂದೆ ಸಮಯದೊ
ಳರಳಿ ಕಣ್ಗೆಸೆದಿನಿಸಿಯೋರೊಂ
ದರೊಳು ಸಮತೆಯನಾಂತು ಕೈಸೆರೆಗೊಳಲಿ ಪೊಸಸಿರಿಯ
ಕಿರುನಗೆಯು ಸಿರಿವೆರೆದ ನಿನ್ನಯ
ತರಳತಾರಕವೆನಿಪ ಲೋಚನ
ಸರಸಿಜಮುಮಾ ಭ್ರಮರಮುದರದಿ ಚರಿಪ ಸರಸಿಜಮುಂ ೩೪

ಅರಸ ನಿನ್ನಯ ಸುಯ್ಯ ಸಾಜದ
ಪರಿಮಳವನನ್ಯರ ಗುಣಂಗಳ
ನೆರವಿನೊಳು ಕೈಕೊಳಲು ಬಯಸಿದ ತೆರದಿ ತಂಗಾಳಿ
ಮರಗಳೊಳು ತೊಟ್ಟುಡಿದ ಹೂಗಳ
ಹೊರಳಿಗಳನಪ್ಪುವುದು ಮುಂಬಗ
ಲರುಣಕಿರಣದೊಳಲರ್ದ ತಾವರೆಗಳನು ತಳ್ಕಿಪುದು ೩೫

ಕೆಂದಳಿರ ದೊಂದುಳಿಯ ಮಾಣಿಕ
ದಂದದೆಳಗೆಂಪಾಂತ ಪುಟದೊಳು
ಸಂದು ಮುತ್ತಿನ ತಕ್ಕಿಯೆನಿಸುವ ಮಂಜಿನುರುಳಿಗಳು

ಬಂದಿವಿಡಿವುವು ಬಗೆಯನುದಿಸುವ
ಮಂದಹಸನದಿ ಚೆಂದುಟಿಯೊಳಿರೆ
ಪೊಂದಿ ಸುಂದರಮಾದ ನಿನ್ನಯ ದಂತಕಾಂತಿವೊಲು ೩೬

ತರಣಿಯಡಿಯಿಡಲೊಡರಿಸದ ಮು
ನ್ನರುಣನೈತಂದಂಬರದೊಳಿಡಿ
ಕಿರಿದ ಕತ್ತಲೆಯೆಲ್ಲವನು ಕೊತ್ತಿದನು ನಿಮಿಷದಲಿ
ಅರಿವಿಮರ್ದನ ನೀನು ಸಮರದ
ಹರಿಬದೊಳು ಮುಂಗಡೆಯೊಳೈದುತೆ
ಗುರುಗೆ ಪಗೆಯನು ಕೊಲ್ವ ಪಾಡನು ಮಾಣಿಸುವ ತೆರದಿ ೩೭

ಶೊಂಕುತೆರಡುಂ ಪಕ್ಕಗಳನಿದೆ
ತೂಂಕಡನು ನೂಂಕುತ್ತೆ ಕುಕಿಲುವ
ಸಂಕಲೆಯು ಸರಪಳಿಯು ಸೆಳೆಯುಂತಲೆದ್ದು ವಾನೆಗಳು
ಪಂಕಜಾಪ್ತನ ಕುಂಕುಮಾಂಶುವ
ಸೋಂಕಿನೊಳು ಸೊಗಸಾಗೆ ದಂತಗ
ಳಂಕುರಂಗಳು ಗೈರಿಕದ ಗಿರಿತಟವನೊಡೆದಂತೆ ೩೮

ಓಸರಿಸಿದುವು ನಿದ್ದೆಯನು ಪಟ
ವಾಸದೆಡೆಯೊಳು ಬಿಗಿದು ಕಟ್ಟಿದ
ಭಾಸುರವನಾಯುಜದ ತುಂಗತುರಂಗಸಂಘಗಳು
ಸೂಸುಸುಯ್ಲಿನ ಬಾಷ್ಪಭರದೊಳಂ
ಮಾಸಿಸುತ ಮುಂಗಡೆಯೊಳುಣಲೆನೆ
ರಾಸಿಯೊಟ್ಟಿದ ಸಾರಸೈಂಧವಶಕಲಸಂಕುಲವ ೩೯

ಕಂದಿ ಸುರ್ಕಿರೆ ಕುಸುಮಮವೆಡೆಯೆಡೆ
ಸಂದು ಸವನಿಸಿತರಲ ಸರದೊಳೆ
ಗಂದಗೆಟ್ಟುಡುಗಿದುವು ಸೋಡರಿನ ಕಿರಣಲಹರಿಗಳು
ಮುಂದೆ ಪಾಡುವ ಬಣ್ಣವಾಡಿನ
ಬಂದವನು ತಾನೊಡನೆ ಸವಿಯುಲಿ
ಯಿಂದಮಿದೆ ಪಂಜರದ ಪಂಡಿತವಕ್ಕಿ ಪಾಡುವುದು ೪೦

ಎಂದು ಸವಿನುಡಿಯಿಂದ ಪಾಡುವ
ವಂದಿಪುತ್ರರ ಹಾಡು ಮೆಲ್ಲನೆ
ಬಂದು ಕಿವಿಯನು ಜಕ್ಕುಲಿಸಲುಪ್ಪವಡಿಸಿದನವನು
ಸಂದಣಿಸಿದಂಚೆಗಳ ಸವಿಯುಲಿ
ಯಿಂದ ಗಂಗೆಯ ಮಣಲ ಮೆಲ್ಲಾ
ಸಿಂದಮುಪ್ಪವಡಿಸುವ ಮಂಜುಳ ಸುಪ್ರತೀಕವೆನೆ ೪೧

ಬಳಿಕ ಶಾಸ್ತ್ರದ ಹೇಳಿಕೆಯ ಕ
ಟ್ಟಳೆಯ ದಿನಮುಖದುಚಿತವಿಧಿಗಳ
ಸಲಿಸಿ ಪೊಸಪಸದನದ ಪಂಡಿತರಿಟ್ಟ ಸಿಂಗರದಿ
ಬೆಳಗಿ ಮಂಗಳಭೂಷಣಗಳೊಳು
ತೊಳಗಿ ಹೊಕ್ಕನು ರಾಜಪುತ್ರರ
ಬಳಗದಿಂ ಬೆಡಗಾದ ಮದುವೆಯ ಮಹಿತಮಂಟಪವ ೪೨

ಅಲ್ಲಿ ಸಾಲ್ಗೊಳಿಸಿರ್ದ ಮಂಚಗ
ಳಲ್ಲಿ ಬಿತ್ತರಿಸಿದ ಸುಖಾಸನ
ದಲ್ಲಿ ಮಂಡಿಸಿ ಪುಷ್ಪಕದೊಳೆಸೆವಮರರಂದವನು
ಚೆಲ್ಲೆ ಬಡಿದೋಡಿಸುವ ಸೊಬಗಿನ
ಭುಲ್ಲವಣೆಯುಲಿ ಮೆರೆವ ಧರಣೀ
ವಲ್ಲಭರ ಹಂತಿಯನು ನೋಡಿದನಜನೃಪಾಲಕನು ೪೩

ಪುರುಷಭಿಕ್ಷವ ಬೇಡಿದೈಸರ
ನರಸಿಯುಳಲಿಗೆ ಮರುಗಿ ಗಿರಿಶನೆ
ಕರುಣಿಸಿದನೋ ಮತ್ತೆ ಮದನಂಗೊಡಲನೆಂಬಂತೆ
ಮೆರೆವ ಕಮನೀಯಾಂಗದಜನೃಪ
ವರನ ಪುಗಿಲೊಳಗರಸುಮಕ್ಕಳು
ತೊರೆದರೊರ್ಮೊದಲಿಂದುಮತಿಯನು ವರಿಸುವಾಸೆಯನು ೪೪

ಬಳಿಕಮಂಜನಾ ಭೋಜಭೂಪತಿ
ಯೊಲಿದು ತೋರಿದ ರತ್ನಮಂಚದ
ತಳವನಡರ್ದನು ಕನಕಸೋಪಾನಗಳ ಮಾರ್ಗದಲಿ

ಶಿಲೆಗಳೊಳಗಡಿಯಿಡುತ ತುಂಗಾ
ಚಲದ ಶಿಖರಸ್ಥಳಿಗೆ ಮೆಲ್ಲನೆ
ತಳರ್ವ ಕಂಠೀರವಕಿಶೋರದ ನಡೆಯ ಬೆಡಗಿನಲಿ ೪೫

ಪರಿಪರಿಯ ಬಣ್ಣಗಳ ಬೆಡಗಿನ
ಸಿರಿಯ ಮೆಲ್ವಾಸುಗಳ ಕಾಂತಿಯು
ಹರಹುಗಳ ಮಂಚದೊಳು ಮಂಡಿಸಿದಜನೃಪಾಲಕನು
ತೆರೆದ ಸಾಸಿರಗಣ್ಣ ಹೀಲಿಯ
ಬೆರಕೆವಣ್ಣದ ನುಣ್ಗದಿರ ಸಿಂ
ಗರದ ನವಿಲಿನ ಬೆನ್ನನೇರಿದ ಕಂದನವೊಲೆಸೆದ ೪೬

ನಿರುಕಿಸುವೊಡರಿದೆಂಬ ಹೊಳಹನು
ಸೆರೆವಿಡಿದ ಸಿರಿಮಡದಿ ಪಲಸಾ
ಸಿರದ ಲೆಕ್ಕದಿ ತಾನೆ ತನ್ನನು ಹಸುಗೆಗೈದಲ್ಲಿ
ನೆರೆದ ನರಪತಿಸುತರ ಮಧ್ಯದಿ
ಮಿರಮಿರನೆ ಮಿರುಗಿದಳು ಮುಗಿಲಿನ
ನೆರವಿಯೊಳು ಮಿರಮಿರನೆ ಮಿಂಚುವ ಮಿಂಚಿನಂದದಲಿ ೪೭

ತುಂಗಪೀಠದೊಳೊಪ್ಪಿ ಪಸದನ
ಸಿಂಗರದೊಳೆಸೆವರಸುಮಕ್ಕಳ
ಪಂಗಡದ ಮಧ್ಯದೊಳಗಜನೃಪನೊರ್ವನೇ ಜನದ
ಕಂಗೆ ಮಂದನು ಕಾಂತಿಲಹರಿಯು
ಸಂಗದಲಿ ಕಲ್ಪಾವನೀಜದ
ಜಂಗುಳಿಯ ಮಧ್ಯದಲಿ ಮಿರುಗುವ ಪಾರಿಜಾತವೆನೆ ೪೮

ಕುಸುಮಕುಲದಿಂ ರಂಜಿಸುವ ತರು
ವಿಸರವನು ಬಿಸುಟಳಿಗಳೊರ್ಮೆಯೆಂ
ಮಸಗಿ ಮದಜಲವುಗುವ ಕಾಡಾನೆಯ ಕಪೋಲದಲಿ
ಮುಸುರುವಂದದಿ ಬಿಸುಟು ನೃಪಸುತ
ವಿಸರವನು ಜನನಯನಸಂತತಿ
ಮುಸುರಿ ಮುತ್ತಿತು ರಘುನೃಪಾಲಕುಮಾರನಂಗದಲಿ ೪೯

ಬಳಿಕಲಲ್ಲಿಯ ನೃಪರ ವಂಶಾ
ವಳಿಯನರಿದಾ ವಂದಿಪುತ್ರರ
ಬಳಗ ಹೊಗಳಿತು ಸೋಮಸೂರ್ಯಾನ್ವಯದ ರಾಜರನಂ
ಬಳಿಕಲಗುರುವ ಧೂಪಧೂಮದ
ಬಳಗವೊಯ್ಯನೆ ಹರಹಿ ನೀಡಿದ
ಹಳವಿಗೆಯ ತಲೆಗಳನು ದಾಂಟಿತು ಹೊಮ್ಮಿ ಹೊಡಕರಿಸಿ ೫೦

ಭೋರೆನುತಲಬ್ಬರಿಪ ಶಂಖದ
ಚಾರುನಿನದದೊಳೊಂದಿ ದಶದಿ
ಗ್ವಾರವನು ತೀವಿದುದು ಮಂಗಳವಾದ್ಯದಬ್ಬರಣೆ
ಊರ ಸುತ್ತಣ ತೋಂಟದೊಳು ಮದ
ವೇರಿ ಸುಳಿವ ಮಯೂರಯೂಥಕೆ
ಚಾರುನರ್ತನಲೀಲೆಗಳ ಕೈಕೊಳಿಸಿ ಕೊನರಿಸುತ ೫೧

ಮಂಗಳಾನಕ ಮೊಳಗುತಿರೆ ಹೊಸ
ಹೊಂಗೆಲಸದಂದಣದಿ ಮದುವೆಯ
ಸಿಂಗರದೊಳೆಸೆವಿಂದುಮತಿ ಮುಂಡಿಸುತ ಪೊರಮಟ್ಟು
ಅಂಗನೆಯರೊಡವರಲು ಮದುವೆಯ
ರಂಗದೆಡೆಯನು ಹೊಕ್ಕು ಮಂಚದ
ಸಿಂಗರದ ಕೇರಿಯೊಳು ವರನನು ವರಿಸಲೈದಿದಳು ೫೨

ಸರಸಿಜಾಸನಸೃಷ್ಟಿವಿದ್ಯಾ
ಪರಿಣತಿಯೆ ಪೆಣ್ಬರಿಜುವಡೆದಂ
ತಿರೆ ವಿರಾಜಿಸುವಿಂದುಮತಿಯ ಶರೀರವಲ್ಲಿಯಲಿ
ತುರುಗಿ ಕವಿದುವು ನೇತ್ರಗಳು ಸಾ
ಸಿರದ ಲೆಕ್ಕದಿ ರಾಜಪುತ್ರರು
ತೊರೆದ ಹೃದಯದ ಬರಿಯ ಮೆಯ್ಯಿಂದಿರ್ದರಾಸನದಿ ೫೩

ಲಲನೆಯನು ಕಂಡೊಡನೆ ಭೂಮಿಪ
ತಿಲಕರೆದೆಯೊಳು ಮೊಳೆತು ಮೆಯ್ವಡೆ
ದೊಲವೆ ಮುಂದಟ್ಟುವುದೊ ಕಾಂತೆಗೆ ದೂತಿಯರನೆನಲು

ಬಲಿತಂಪೊಡನೆ ವಿಲಾಸವಿಭ್ರಮಂ
ಲಲಿತಚೇಷ್ಟೆಗಳವನಿರುಹಸಂ
ಕುಲದೊಳೊಯ್ಯನೆ ತಲೆಯನೆತ್ತುವ ಕಿಸಲಯದ ತೆರದಿ ೫೪

ಅರಸುಗುವರನದೊರ್ವನೆರಡುಂ
ಕರದಿ ನಾಳವ ಮುಚ್ಚಿ ಪಿಡಿದಂ
ಬುರುಹದಳದಿಂದಟ್ಟಿ ಸೋವುತೆ ತೀವುವಳಿಗಳನು
ಸುರಿವ ಬಂಡಿನ ದೂಳಿ ಪೊಡೆಯೊಳು
ತುರುಗಿ ಪರಿವೇಷವನು ಬಿಗಿದಂ
ತಿರೆ ವಿಲಾಸದಿ ತಿರುಹುತಿರ್ದನು ತಾವರೆಯ ಮರಲ ೫೫

ಇರದದೊರ್ವ ವಿಲಾಸಿ ಭುಜದಿಂ
ದುರುಳ್ದ ಮಂಜುಳರತ್ನಕಾಂತಿ
ಚ್ಛುರಿತಹೇಮಾಂಗದದ ತಲೆಯೊಳು ತೊಡರಿ ಕೀಲಿಸಿದ
ತರಲಮುಕ್ತಾಲಂಬಸರವನು
ಬೆರಲ ತುದಿಯಿಂದೇರೆ ನೂಂಕುತ
ಕೊರಲ ಕೊಂಕಿನ ಸೊಬಗಿನಲಿ ಸಾವಗಿಸುತೆಸೆದಿರ್ದ ೫೬

ಒಂದಿನಿಸು ಕಣ್ಗಳನು ಪಿಂದೆಗೆ
ದೊಂದಿನಿಸು ಕೊಂಕಿಸಿದ ಕಾಲ್ಬೆರ
ಲಿಂದ ತುಳ್ಕುವ ಕೇಸುಗುರ ಕೆಂಬೆಳಗು ಪೀಠದಲಿ
ಒಂದಿನಿಸು ಕೊಂಕಾಗಿ ಕವಿದಿರೆ
ಕೆಂದಳಿರನಣಕಿಸುವ ಕುಡುವೆರ
ಲಿಂದ ವಿಲಿಖಿಸುತಿರ್ದನೊರ್ವನು ವಿಷ್ಟರಾಗ್ರದಲಿ ೫೭

ಮೀರಿ ನಿಮಿರ್ದಿರೆ ಮುಯ್ಯುಬ್ಬ ಪೀಠದೊ
ಳೂರಿ ತನ್ನಯ ವಾಮಭುಜವನು
ಹಾರ ತೊನೆಯೆ ಶರೀರವನು ನಸುಮುರಿದು ವಾಮದಲಿ
ಚಾರುಪೀಠದೊಳಿರ್ದ ರಾಜಕು
ಮಾರನೊಳು ಸಂಭಾಷಣವ್ಯಾ
ಪಾರಪರನಾಗಿರ್ದನೊರ್ವ ನರೇಂದ್ರನಾತ್ಮಜನು ೫೮

ಪದಪುಗಾತಿಯ ಪಸದನದ ಬಿನ
ದದೊಳು ಕಿವಿದೊಡವಾಗುವಾ ಸಂ
ಪದಕೆ ನೋಂತೆಳಗೇದಗೆಯ ಪೊಂದಳವನುಗುರಿನಲಿ
ಸುದತಿಯರ ಮೆಲ್ಲೊಡಲನೊಲವಿನ
ಪುದುವಿನೊಳು ಸೀಳ್ವಂದದಲಿ ಸೀ
ಳಿದನದೊರ್ವ ನೃಪಾಲಪುತ್ರನು ಬಲಿದ ಮೋಹದಲಿ ೫೯

ಕೋಕನದದೆಳಗೆಂಪುವಣ್ಣವ
ನೋಕರಿಸಿ ರೇಖಾಧ್ವಜಂಗಳ
ಶ್ರೀಕರದ ಕುರುಹಾಂತ ತಳದೊಳು ರನ್ನದುಂಗುರದಿ
ನೂಕಿ ನೆಗೆತಹ ಬೆರಕೆವೆಳಗಿನ
ಸೋಕಿನಲಿ ಸೊಬಗಾಂತ ದಾಳವ
ನೌಕಿ ಚಿಮ್ಮುವ ಲೀಲೆಯೊಳು ಮತ್ತೊರ್ವನೊಪ್ಪಿದನು ೬೦

ಓರೆವೋಗದೆ ರನ್ನಮುಗುಂಡವು
ನೇರಿತಾಗಿಯೆ ನೆಲಸಿ ನಿಂದೊಡ
ಮೋರೆವೋಯ್ತೆಂದೆನುತದೊರ್ವನು ರನ್ನದುಂಗುರದ
ಚಾರುತರಮಣಿಗಣದ ಕಾಂತಿಯ
ಪೂರಮಂಗುಲಿಯಿರುಬಿನಲಿ ಕೈ
ಮೀರೆ ಮಿರುಗುವ ಕರವನರ್ಪಿಸಿದನು ಕಿರೀಟದಲಿ ೬೧

ಇಂತು ನರಪತಿಸುತರು ತಂತ
ಮ್ಮಂತರಂಗವನರುಹುತಿರೆ ನೃಪ
ಸಂತತಿಯ ಚರಿತೆಗಳನೆಲ್ಲವನರಿದ ಪಡಿಯರಿತಿ
ಮುಂತೆ ಮಗಧೇಶ್ವರನ ಬಳಿಗಾ
ಕಾಂತೆಯನು ಕೈಗೊಟ್ಟು ಕರೆದು
ಯ್ದಿಂತು ಬಿನ್ನವಿಸಿದಳು ಬಿನ್ನಣವಾತಿನೆಸಕದಲಿ ೬೨

ಮರೆಹುಗುವ ಬಡವರಿಗೆ ತಾನೇ
ಶರಣನೆನಿಸುವಗಾಧಸತ್ತ್ವದ
ಗರುವನೀತನು ಮಗಧನಾಥನು ಮಂದಿಯನು ಹೊರೆವ

ಬಿರುದಿನಾತನು ವೈರಿವರ್ಗವ
ನುರುಹಿ ಸುಟ್ಟುದರಿಂದ ಪಡೆದನು
ಪುರುಳನೊಳಕೊಂಡಾ ಪರಂತಪನೆಂಬ ನಾಮವನು ೬೩

ಇರಲಿ ಸಾಸಿರಲೆಕ್ಕದಲಿ ಭೂ
ವರವೆಸರನಾಂತವರು ಧರಣಿಗೆ
ದೊರೆದುದಿವನಿಂದಲ್ತೆ ರಾಜನ್ವತಿಯೆನಿಪ ಪೆಸರು
ಗರಗಳುಂ ತಾರೆಗಳುಮಿಡಿದಂ
ಬರವ ತುಂಬಿದೊಡೇನೊ ಚಂದ್ರನ
ಕಿರಣವಲ್ಲವೆ ರಾತ್ರಿಯನು ಬೆಳ್ವಕ್ಕವೆನಿಸುವುದುಂ ೬೪

ಅರಸನಿವನನುದಿನದಿ ಬೇಳ್ವ
ಧ್ವರದಿ ನೀಡುವ ಹವಿಯ ಸವಿಯುಲಂ
ಕರೆತರಿಸಿ ಸುರರರಸನನು ಕ್ರತುನಿಲಯದಲಿ ನಿಲಿಸಿ
ದೊರೆಕೊಳಿಸುವನು ಶಚಿಗೆ ಶಶಿಪಾಂ
ಡುರಕಪೋಲದ ಸಿಂಗರವನಾ
ಸುರತರುವಿನರಲುಂಗಳ ವಿರಹದ ಕುರುಳ ಕೂಟದಲಿ ೬೫

ಏಣಲೋಚನೆಯಿಂವನ ಪಟ್ಟದ
ರಾಣಿಯುಪ್ಪೊಡಿವಂಗೆ ನಿನ್ನೀ
ಪಾಣಿಪಲ್ಲವವನು ಸಮರ್ಪಿಸಿ ಕುಸುಮಪುರವರದ
ಶ್ರೇಣಿಯುಪ್ಪರಿಕೆಯ ಗವಾಕ್ಷದ
ಜಾಣೆಯರ ಕಣ್ಗಳಿಗೆ ನೀಂ ಕ
ಲ್ಯಾಣವನು ಕೈಕೊಳಿಸಿ ಕೂಡಿಸು ಸಫಲತೆಯ ಸಿರಿಯ ೬೬

ಎಂದೆನುತ ಪಡಿಯರಿತಿ ನುಡಿದೊಡ
ನಿಂದುಮುಖಿ ನೃಪತಿಯನು ಕಡೆಗ
ಣ್ಣಿಂದ ನೋಡುತ ಕೊರಲ ನವ್ಯಮಧೂಕಮಾಲಿಕೆಯಂ
ಒಂದಿನಿಸು ತೊನೆಯಿಸುತ ಭಾವದೊ
ಳೊಂದುಮೆರೆಯದ ಮೌನಮುದ್ರೆಯಂ
ವಂದನೆಯನೋಲಗಿಸಿ ಮುಂದಕೆ ಗುಜ್ಜುಮೆಟ್ಟಿದಳಂ ೬೭

ಮಡದಿಯಾ ಪರಿ ನಡೆಯೆ ಕಂಬಿಯು
ಪಡಿಯರಿತಿ ನಡೆತಂದು ಕಾಂತೆಯ
ನೊಡನೆ ಕರೆದೈದಿದಳು ನೃಪನೆಡೆಯಿಂದ ನೃಪನೆಡೆಗೆ
ಜಡರುಹದ ಬಳಿಯಿಂದ ಜಡರುಹ
ದೆಡೆಗೆ ಮಾನಸರಾಜಹಂಸಿಯು
ನೊಡನೆ ಕೊಂಡುಯ್ವನಿಲಜನಿತತರಂಗಮಾಲೆವೊಲು ೭೮

ತಂಗಿ ನೋಡೀ ತುಂಗಬಾಹುವ
ನಂಗನೃಪನಿವನಂಗವಟ್ಟಿದ
ಭಂಗಿಗಮರಾಂಗನೆಯರೇ ಕಣ್ಸೋತು ಕಾಡಿದರು
ಅಂಗವರಿದವರಿಂದ ತುಂಗ ಮಂ
ತಂಗಜಂಗಳನೊಲಿಸಬಲ್ಲನಿ
ಮಂಗೆ ಸುರಪುಂಗವನ ಸಂಪದವಿಲ್ಲಿ ಸಲ್ಲುವುದು ೭೯

ಇವನು ವೈರಿನೃಪಾಲವೀರರ
ಯುವತಿಯರ ಕುಚಕುಂಭದೆಡೆಯೊಳ
ಗವಿರತಂ ಕವಿತಂದು ಸುರಿವವರಂಬಕಾಂಬುಗಳ
ಪ್ಲವದೊಳೀ ಸವನಿಸಿದನೊಲವಿಂ
ಪ್ರವಿಮಳಾತುಳಮೌಕ್ತಿಕಂಗಳ
ನಿವಹಗಳ ನೂಲಿಂದ ಕೋಯದ ನವ್ಯಮಾಲೆಗಳ ೮೦

ಒಂದು ತಾಣದೊಳೊರ್ವೆಯುಂ ತಾ
ಮೊಂದುವೆರೆದಿರರೆಂಬ ಮಾತಿಗೆ
ಸಂದ ಸರಸತಿ ಸಿರಿಗಳಿವನೊಳಗೊಂದುವೆರೆದಿಹರು
ಸಂದ ಕಾಂತಿಯೊಳೊಂದಿ ಪುಸಿಯೊಳ
ಗೊಂದದೊಳ್ನುಡಿವಡೆದ ನೀನೇ
ಸುಂದರೀಮಣಿ ತಕ್ಕಳವರೊಡನೊಂದುಗೂಡುವೊಡೆ ೮೧

ಎಂದ ನುಡಿಯನು ಕೇಳಿ ನೃಪಸುತ
ನಿಂದ ನಯನವ ಸೆಳೆದು ಮೆಲ್ಲನೆ
ಮುಂದೆ ನಡೆಯೆಂದಾ ಸುನಂದೆಗೆ ಬೆಸಸಿದಳು ಕೂಡೆ

ಸುಂದರನು ತಾನಲ್ಲದಿಲ್ಲವ
ನಂದವರಿದವಳಲ್ಲದಿಲ್ಲವ
ಳೆಂದೊಡೇಂ ಮೆಚ್ಚಿದಳೆ ಲೋಕವೆ ಭಿನ್ನರುಚಿಯಲ್ತೆ ೭೨

ಬಳಿಕಲಾ ಪ್ರತಿಹಾರಿ ತೋರಿದ
ಳಳವಿಗಳಿದದಟಿಂದ ಶಾತ್ರವ
ಕುಳಕೆ ದುಸ್ಸಹನಾಗಿ ತನ್ನನು ನೋಡುವರ ಕಣ್ಗೆ
ಕುಳಿರ್ವ ಕಪ್ಪುರವುಡಿಯನೊಪ್ಪಿಸು
ವಿಳೆಯರಸನನು ಕಳೆಯ ಬಳಗದಿ
ತಳತಳಿಸಿ ಮೆಯ್ವಡೆವ ತಿಂಗಳನೆಳಸಿ ತೋರ್ಪಂತೆ ೭೩

ಇವನವಂತೀಶ್ವರನು ನಿಡುದೋ
ಳವನು ಹೇರುರದವನು ತೆಳ್ನಡು
ಮವನು ಮುಂಗಡೆ ಸಂಗಳಿಸುವನು ಕಣ್ಗೆ ಕೌತುಕವ
ರವಿಯನಂದಾ ವಿಶ್ವಕರ್ಮನು
ಜವದೆ ತಿರುಗುವ ಸಾಣೆವಾಯೊಳು
ಸವೆಯೆ ಕೀಸುವ ಪದದೊಳುದಯಂಬಡೆದ ಪಾಂಗಿನಲಿ ೭೪

ವಿಜಯಯಾತ್ರೆಯೊಳೀತನುಗ್ರ
ಧ್ವಜಿನಿಯಗ್ರದ ತುಂಗತುರಗ
ವ್ರಜದ ಖರಖುರಜಾತಘಾತದೊಳೊಗೆದು ಮಿಂಗೆ ನೆಗೆದ
ರಜದ ರಜನಿಯೊಳಸ್ತಮಯವನು
ಭಜಿಸುವುವು ಸಾಮಂತಭೂಮೀ
ಭುಜರ ಮಣಿಮಕುಟದೊಳು ಮಿರುಗುವ ರತ್ನರಶ್ಮಿಗಳು ೭೫

ಆ ಮಹಾಕಾಳದೊಳು ನಿಂದಾ
ಸೋಮಶೇಖರನಡಿಯ ಪಕ್ಕದ
ಸೀಮೆಯೊಳು ವಾಸಿಸುವ ಕತದಿಂದೀ ನೃಪಾಲಕನು
ತಾಮಸದ ಕರ್ವಕ್ಕದೊಳಮಾ
ಸೋಮಕಿರಣದಿ ಮಿರುಗುವಿರುಳನು
ಕಾಮಿಸುತ ಸೇವಿಪನು ನಿಜಕಾಮಿನಿಯರೊಡವೆರೆದು ೭೬

ಈತನನುಂ ಕೈವಿಂಗುವ ಜವ್ವನ
ದಾತನನು ಕೈವಿಡಿದು ಶಿಪ್ರೆಯು
ಶೀತಳದ ತೆಳ್ದೆರೆಯ ತನಿಸೋಂಕಿನಲಿ ತಂಪಾಂತ
ವಾತಪೋತದ ಲಲಿತವಲನಕೆ
ಸೋತು ಮೆಲ್ಲನೆ ತಲೆಯನೊಲೆವ ಕು
ಜಾತಕೋಟಿಯ ಬನದಿ ಬಿನದಿಪ ಬಯಕೆ ನಿನಗಂಟೆ ೭೭

ಎಂದೆನುತ ಪಡಿಯರಿತಿ ನುಡಿದೊಡ
ವಿಂದುಮತಿಯಾ ಬಂಧುಪದ್ಮಾ
ನಂದನನು ವಿಕ್ರಮವಿಶೋಷಿತಶತ್ರುಪಂಕನನು
ಒಂದುವೊಡೆ ಬಗೆದಂದಳಿಲ್ಲರ
ವಿಂದಬಂಧುವಿನಲ್ಲಿ ಭಾವವ
ನೊಂದಿಸದೆ ಪಿಂದೆಗೆವ ಕೋಮಲಕುಮುದಿನಿಯ ತೆರದಿ ೭೮

ಜಡರುಹದ ಪೊಡೆಯೆಡೆಯ ಕಾಂತಿಯ
ಪಡೆದು ಮೆಲ್ಲೊಡಲಾಂತು ಸದ್ಗುಣ
ಕೆಡೆಯೆನಿಸಿ ಜಡಜಜನ ಸೃಷ್ಟಿಯ ಕೌಶಲದ ಕಲೆಗೆ
ತೊಡವೆನಿಸಿದಾ ಮಡದಿಯನು ಮುಂ
ಗಡೆಯೊಳೊಪ್ಪುವನೂಪಭೂಪನ
ಪಡಿವೊಗದೆ ನೆಲೆನಿಲಿಸಿ ನುಡಿದಳು ಪಡಿಯರಿತಿಯಿಂತು ೭೯

ಕದನದೆಡೆಯೊಳು ತೋಳ ಸಾಸಿರ
ವುದಿಸಿದವೊಲರಿಗಳನು ಭಂಗಿಸಿ
ಪದಪಿನಿಂ ಪದಿನೆಂಟು ಕುರುವದಿ ಯೂಪಗಳ ನಿಲಿಸಿ
ಪುದುವೆನಿಸದಾ ರಾಜಶಬ್ದಕೆ
ಪದವೆನಿಸುತವೆ ಕಾರ್ತವೀರ್ಯಾ
ಭಿಧೆಯ ಯೋಗಿಯದೊರ್ವನೊಪ್ಪಿದನಲ್ತೆ ಪೂರ್ವದಲಿ ೮೦

ಜನಪನಾತನು ತನ್ನ ಮುಂದಿಯ
ಮನದೊಳಳಿಗಜ್ಜಗಳನೆಸಗುವ
ನೆನಹು ಜನಿಸುವ ಸಮಯದೊಳು ಮುಳಿಸಾಂತು ನಿಜಕರದಿ

ಧನುವ ಪಿಡಿದಿದಿರಿನೊಳು ಭೋಂಕನೆ
ತನುವಡೆದು ನಿಂದಪರ ವಂಸದೊಳು
ಜನಿಸುವವಿನಯಂಗಳನು ದಂಡಿಸಿ ನಯವ ಕಲಿಸುವನು ೮೧

ಅವನ ಬಿಲ್ಲಿನ ಹೆದೆಯ ನೇಣಿನ
ಜವಳಿಗಟ್ಟಿನ ಬಿಗುಹಿನಲಿ ಭುಜ
ನಿವಹ ಬಿಗಿದಿರಲುಃಪೆನುತ ಸುಯ್ಯುತ್ತ ದಶಮುಖದಿ
ಜವವಳಿದು ಸಂಕಲೆಯ ಸೆರೆಯೊಳು
ನವೆದನಾ ಭುಜವೀರ್ಯಜಿತವಾ
ಸವನು ಲಂಕೇಶ್ವರನು ಬಂಧವ ಕಳಚಿಬಿಡುವಿನೆಗ ೮೨

ಆತನನ್ವಯದಲ್ಲಿ ಜನಿಸಿದ
ನೀತನಾಗವುವೃದ್ಧಸೇವಾ
ಖ್ಯಾತನೊಪ್ಪುವನಾ ಪ್ರತೀಪನೆನಿಪ್ಪ ಪೆಸರಿನಲಿ
ಈತನಲೆ ಕರ್ಚಿದನು ಸಾಗರ
ಜಾತೆಗಾಶ್ರಯದೋಷದಿಂ ಸಂ
ಜಾತವಾದತಿತರಳೆಯೆಂಬಪವಾದಪಂಕವನು ೮೩

ಜ್ವಲನನಿವನನು ಕೊಳುಗುಳದ ಕಳ
ನೊಳಗೆ ಕೆಳೆಯಂತೋಲಗಿಸಿ ಮಾ
ರ್ಮಲೆವ ರಿಪುಗಳನುರುಪುವನು ತಾನೆಂದೊಡೀ ನೃಪನು
ಉಳಿದ ನೃಪರಿಗೆ ಕಾಳರಾತ್ರಿಯ
ವೊಲು ವಿರಾಜಿಪ ಪರಶುರಾಮನ
ತಳದ ಕೊಡಲಿಯ ಬಾಯನಂಬುಜದೆಸಳಿಗೊರೆಯೆಂಬ ೮೪

ತಂಗಿ ನೀಂ ಮಾಹಿಷ್ಮತೀನಗ
ರಾಂಗನೆಯ ನವಕಾಂಚಿಯಂದದಿ
ಕಂಗೊಳಿಪ ನರ್ಮದೆಯ ನಿರ್ಮಳಜಳದ ವೇಣಿಯನಂ
ತುಂಗಹರ್ಮ್ಯಾಳಿಯೊಳು ನಿಂದು ಕ
ಡಂಗಿ ನೋಡುವ ಬಯಕೆವಡೆದೊಡೆ
ತುಂಗಭುಜನುತ್ಸಂಗದೊಳು ಸಿರಿಯಾಗಿ ಕಂಗೊಳಿಸು ೮೫

ಗಾಡಿಕಾತಿಯ ನಯನಕಾತನ
ಗಾಡಿ ಸವಿಯನು ಸೂಸಿದೊಡವೊಡ
ಗೂಡಿಸಿದುದಿಲ್ಲವಳ ಹೃದಯದಿ ವರಿಸುವಾಸೆಯನು
ಮೂಡಿದಾ ಶರದದೊಳು ಮುಗಿಲುಗ
ಳೋಡಿ ನಿರ್ಮಲವಾದ ನಭದೊಳು
ಗಾಡಿವಡೆದೆಸೆವಿಂದು ನಳಿನಿಗೆ ರುಚಿಸದಂದದಲಿ ೮೬

ಸಾರಿದಳು ಪಡಿಯರಿತಿಯಮರೀ
ವಾರ ಕೀರ್ತಿತಕೀರ್ತಿಯೆನಿಸಿದ
ಶೂರಸೇನಾಧೀಶನಪ್ಪ ಸುಷೇಣ ನೃಪನೆಡೆಗೆ
ತೋರಿದಳು ಬಣ್ಣಿಸಿದಳಮಳಾ
ಚಾರಪೂತೋಭಯಕುಲಂಗಳ
ಚಾರುಮಣಿಮಯದೀಪನೆನಿಸುವ ತನ್ನೃಪಾಲನನು ೮೭

ನೀಪವಂಶದೊಳುದಿಸಿದವನೀ
ಭೂಪನೀತನ ಯಜ್ಞಧೂಮದ
ಧೂಪದಲಿ ಪರಿಮಳಿತವಾದುವು ದೆಸೆಗಳೀತನಲಿ
ಕಾಪುಗೊಂಡು ಗುಣಂಗಳುಳಿದುವು
ರೂಪಿಸುವ ನಿಜವೈರವನು ತವೆ
ತಾಪಸರ ಬಳಿಯೊಳಗೆ ಪಗೆಯುಗುವಂತೆ ಸತ್ತ್ವಗಳು ೮೮

ಈತನವಯವಕಾಂತಿ ನೇತ್ರ
ಪ್ರೀತಿಯನು ಕೈಕೊಳಿಸಿ ತೊಳಗುವ
ಶೀತಕಿರಣನ ಕಳೆಯವೊಲು ಪೊಳೆದಪುದು ನಿಳಯದಲಿ
ದ್ಯೋತಿಪುದು ಬಾಹಾಪ್ರತಾಪ
ಜ್ಯೋತಿಯ ಹಿತನೃಪಾಲವೀರ
ವ್ರಾತದೆಳವುಲ್ಮೊಳೆದ ರಾಜಗೃಹಾಂಗಣಂಗಳಲಿ ೮೯

ಇವನ ಯುವತೀಜನದ ಲೀಲೋ
ತ್ಸವದ ವಾರಿವಿಹಾರಕಾಲದಿ
ಕವಿದ ಚಂದನವುಡಿಯ ಕೂಟದೆ ಜಗುನೆಯೊಳದೆರೆಯ

ನಿವಹವೆದೆಗೊಳಿಸುವುದು ಮಧುರೆಯ
ಬುವಿಯೊಳಿದಿರ್ದೊಡಮಮರಗಂಗಾ
ಧವಳವಾರಿಪ್ಲವದಿ ಕೂಡಿದದೊಂದು ಗಾಡಿಯಲಿ ೬೦

ಹಿಂದೆ ಗರುಡನ ಘಾತಿಗಂಜಿ ಕ
ಳಿಂದಕನ್ಯೆಯ ಜಲದಿ ಕಾಳಿಯು
ನಂದಗೆಟ್ಟು ಬಿಸುಟ್ಟ ಮಾಣಿಕವಣಿಯನೀ ನೃಪನು
ತಂದು ವಕ್ಷಸ್ಥಳದಿ ತಾಳಂತೆ
ಸಂದ ಕೌಸ್ತುಭದಿಂದ ಮೆರೆವ ಮಂ
ಕುಂದನಂದಕೆ ಕುಂದನೊಂದಿಪ ಗಾಡಿಗೀಡಹನು ೬೧

ವರಿಸಿ ನೀನೀ ಜವ್ವನಿಗನನಂ
ಮೆರೆವ ಚೈತ್ರರಥಕ್ಕೆ ಚಂದದೊ
ಳೊರೆಯೆನಿಸಿ ಸಿರಿವಡೆದ ಬೃಂದಾವನದ ವನದೊಳಗೆ
ಮರಲ ಹಾಸಿನ ಮೇಲೆ ಮೆಲ್ಲನೆ
ಹರಹಿದೆಳದಳಿರುಗಳ ಸೊಂಪಿನ
ಸಿರಿಯ ತಳಿರ್ವಾಸಿನಲಿ ಸೇವಿಸು ನವ್ಯಯೌವನವ ೬೨

ಇಂದುಮುಖಿ ಗೋವರ್ಧನಾದ್ರಿಯು
ಕಂದರದಿ ಜಲಬಿಂದುಕುಲದಲಿ
ನಾಂದು ಶೈಲೇಯದ ಸುಗಂಧವನುಗುಳ್ವ ಹಾಸರೆಯು
ಸಂದ ಪೀಠದಿ ಮಂಡಿಸುತ ನಲ
ವಿಂದ ನೋಡಾ ಕಾರಮೊಗದೊಳ
ಗಂದ ಮಿಗೆ ಕುಣಿಕುಣಿವ ನವಿಲಿನ ನವ್ಯನೃತ್ತಗಳ ೬೩

ಕೆಳದಿಯಿಂತೆನೆ ಸಖಿಯಂ ಪೊರ್ಕಳ
ಚೆಲುವೆಯಾ ನೃಪತಿಲಕನನು ಪಿಂ
ದುಳಿದು ನಡೆದಳು ಮುಂದೆ ವರನನು ವರಿಸುವಳ್ತಿಯಲಿ
ಜಳನಿಧಿಯು ಬಳಿಗೈದಿ ಪೋಗುವ
ಪೊಳೆ ತನಗೆ ಮಾರ್ಗದಲಿ ಸಿಲುಕಿದ
ಬಳಿಯ ಬೆಟ್ಟವನುಳಿದು ಮುಂದಕೆ ಸರಳಿಸುವ ತೆರದಿ ೬೪

ಮಂಗಡೆಯೊಳಂಗದದ ಸಂಗದಿ
ಕಂಗೊಳಿಸುವುತ್ತುಂಗಭುಜದ ಕ
ಳಿಂಗಭೂಮಿಪನೆನಿಪ ಹೇಮಾಂಗದನ ಗದ್ದುಗೆಯು
ಮಂಗಡೆಗೆ ನಡೆದಲ್ಲಿ ನಿಂದ ಕು
ರಂಗಲಾಂಛನವದನೆಗಾ ಮ್ಯದು
ಲಾಂಗಿ ಬಿನ್ನವಿಸಿದಳು ತನ್ನೃಪವರನ ಗುಣಗಣವ ೯೫

ಸಾರದಲ್ಲಿ ಮಹೇಂದ್ರಗಿರಿಗಿವ
ನೋರಗೆಯನೊಂದಿದನು ಮತ್ತಾ
ವಾರಿರಾಶಿಮಹೇಂದ್ರಗಿರಿಗಳಿಗೊಡೆಯನೆನಿಸಿದನಂ
ಧೀರನೀತನ ಜೈತ್ರಯಾತ್ರೆಯೊ
ಳೋರಣಿಸುತ ಮಹೇಂದ್ರಗಿರಿ ಮದ
ವಾರಣಾಕೃತಿಯಿಂದ ಬಂದಂತೆಸೆವುವಾನೆಗಳು ೯೬

ಧನುವ ಪಿಡಿದವರೊಳಗೆ ಮೊದಲಿಗ
ನೆನಿಸುವೀತನ ಬಾಹುಯುಗಳದಿ
ಮಿನುಗುವೀ ಜೇವೊಡೆಯು ಬಾಸುಳ ಕಿಣದ ಸಾಲುಗಳು
ಅನುವರದಿ ಸೆರೆವಿಡಿದ ರಿಪುನೃಪ
ಜನದ ಲಕ್ಷ್ಮಿಯು ಸೂಸಿ ಸುರಿವಂ
ಜನದೊಳೊಡವೆರೆದಂಬಕಾಂಬುವಿನಂತೆ ತೊಳಗುವವು ೯೭

ನರಪನಿವನರಮನೆಯ ಜಾಲಂ
ದರಗಳೆಡೆಯಿಂ ನೋಡಲಪ್ಪುದು
ತೆರೆಯ ತುರುಗಲನೆನಿಸಿ ಸನಿಯದೊಳೆಸೆವ ಸಾಗರವು
ಮೊರೆವ ಮಂದ್ರನಿನಾದದಿಂದೊ
ತ್ತರಿಸಿ ಯಾಮದ ತೂರ್ಯಗಳನೆ
ಚ್ಚರಿಸುತಿರ್ಪುದು ರಾಣಿವಾಸದಿ ಮಲಗಿದೀತನನು ೯೮

ನೀಲಕುಂತಳೆಯಿವನೊಳೊಲವನು
ತಾಳಿ ತಾಳೆಯ ಕಾಡ ಮರ್ಮರ
ದೇಳಿಗೆಯ ಜಲನಿಧಿಯ ತಟದಲಿ ನಲಿದು ಕುರುವಗಳ

ಸಾಲಿನಿಂದ ಲವಂಗಲತೆಗಳ
ಮಾಲೆವೂಗಳ ಪರಿಮಳವ ತಂ
ದೋಲಗಿಸುವೆಲರಿನಲಿ ತೊಲಗಿಸು ತಳ್ತ ಬೆಮರ್ವನಿಯ ೯೯

ದೂತಿಯಿಂತಿಂತೆದೆವುಗುವ ಸವಿ
ವಾತುಗಳನಾಡಿದೊಡಮಾ ರೂ
ಪಾತಿಶಯದ ವಿದರ್ಭಧರಣೀಪಾಲಸಹಜಾತೆ
ಆತನನು ಪಿಂದುಳಿದು ನಡೆದಳು
ನೀತಿಯಿಂ ಬಳಿಸಾರ್ದ ಜಲನಿಧಿ
ಜಾತೆ ಹತಭಾಗ್ಯನನು ನೀಗುತ ಸಾಗುವಂದದಲಿ ೧೦೦

ಬಳಿಕಲಲ್ಲಿಂ ಮುಂದೆ ಮೆಲ್ಲನೆ
ತೆಳರುತಾ ಸುಮನಸರ ಸೊಬಗನು
ಪಳಿವ ಚೆಲುವಿನ ಸಿರಿಯ ನಾಗಪುರಾಧಿನಾಯಕನ
ಬಳಿಯೊಳಗೆ ನಿಂದಿಂದುಮಂತಿಗೆಂ
ದಳು ಚಕೋರವಿಲೋಲಲೋಚನೆ
ಸುಳಿಸಿ ನಿನ್ನಯ ನಯನಕಾಂತಿಯ ಸೊಗಸನೀ ದೆಸೆಗೆ ೧೦೧

ಅಂಬುಜಾಂಬಕಿ ನೋಡು ನಿಜಭುಜ
ಲಂಬಮುಕ್ತಾಸರನು ಕಂಪಿನ
ತೊಂಬನೆತ್ತುವ ಚಂದನದ ಚರ್ಚೆಗಳ ಸೊಗಸಿಗನು
ಕಂಬೊಲದೊಳಿದೆ ಪಾಂಡ್ಯನೊಪ್ಪುವ
ನಂಬುಜಾಪ್ತನ ಚೆಂಬೊಗರ ಸಿರಿ
ಗಿಂಬೆನಿಸಿ ನಿರ್ಝರದಿ ಮಿರುಗುವ ಗಿರಿಯ ತೆರದಿಂದ ೧೦೨

ತಲೆಯನೆತ್ತದ ತೆರದಿ ವಿಂಧ್ಯವ
ನಿಲಿಸಿ ಜಳಧಿಯ ತಳದ ಮಳಲುಂಗ
ಳುಳಿವವೊಲು ಜಳವನಿತನೀಂಟಿದಗಸ್ತ್ಯಮುನಿವರನು
ತಳುವದೈದಿ ತುರಂಗಮೇಧದಿ
ಸುಲಲಿತಾವಭೃತಾರ್ದ್ರಮೂರ್ತಿಯು
ನೊಲವಿನಿಂದೀತನನು ಸುಸ್ನಾನವನು ಬೆಸಗೊಳುವ ೧೦೩

ಗಿರಿಶನನು ತಪದಿಂದ ಮೆಚ್ಚಿಸಿ
ಪರರಿಗಸದಳವೆನಿಸುವಸ್ತ್ರೋ
ತ್ಕರವ ಪಡೆದೀ ಪಾಂಡ್ಯಭೂಪನ ಧಾಳಿಯನು ತಡೆವ
ಭರದ ಬಿಂಕದೊಳೈದಿ ಲಂಕೇ
ಶ್ವರನು ಸಂಧಿಯನೆಸಗಿ ಸಮಸಂ
ತರದೊಳಮರಾವತಿಗೆ ಧಾಳಿಯನಿಡಲು ನಡೆಗೊಳ್ವ ೧೦೪

ತರುಣಿಮಣಿ ನೀಂ ವಿಧಿವಿಧಾನದ
ಪರಿಣಯದಿ ಧರಣಿಯವೊಲೊಲವಿಂ
ಕರವಿಡಿದು ಕುಲಜಾತನೆನಿಪೀ ಭೂಮಿಪಾಲನನು
ಮಿರುಪ ರತ್ನಾವಳಿಯ ಸೊಬಗಿನ
ಶರನಿಧಿಯಂ ಮೇಖಲೆಯಂ ಪ್ಯೆಮೆಯ
ಸಿರಿಯ ದಕ್ಷಿಣದಿಗ್ವಧೂಟಿಗೆ ಸವತಿಯೆಂದೆನಿಸಿ ೧೦೫

ನೀಲಕುಂತಲೆ ಮೇಲಡರ್ವ ತಾಂ
ಬೂಲವಲ್ಲಿಯ ತಳ್ಕೆಯೊಳು ಕ
ಣ್ನೋಲಗಳನೋಲಗಿಪ ಕೌಂಗಿನ ಮಾಲೆಯೇಲೆಗಳ
ಸಾಲನಾಲಿಂಗಿಸಿದ ಚಂದನ
ದೋಳಿಗಳ ಲೀಲೆಗಳ ಮಲಯವ
ನಾಳಿಯೊಳಗೆ ತಮಾಲಪತ್ರದ ತಲ್ಪದೊಳು ಸುಖಿಸು ೧೦೬

ಕಾಂತೆಯೀತನು ನೀಲನೀರಜ
ಕಾಂತಿಕಾಂತಶರೀರನರಿಯು
ಲ್ಕಾಂತೆ ನೀಂ ಕಾಂತಾಂಗದೊಳು ಗೋರೋಚನದ ರುಚಿಯಂ
ಇಂತೆಸವ ನೀವೊರ್ವರೊರ್ವರ
ಕಾಂತಿಯನು ಕೊರ್ವಿಸುವ ಕೂಟವ
ನಾಂತು ಮೆರೆಯಿಂ ಮುಗಿಲ ಮಿಂಚಿನ ಕೂಟದುನ್ನತಿಯ ೧೦೭

ಪಡಿಯರಿತಿಯಂತೊರೆದ ನಲ್ಮೆಯ
ನುಡಿಗಳೆಡೆಯಂನು ಪಡೆದುವಿಲ್ಲಾ
ಪಿಡಿಯ ಬೆಡಗಿನ ನಡೆಯ ಮುಡದಿಯ ಹೃದಯಮುಕುಲದಲಿ

ಜಡಜಸಖನಸ್ತಮಯಸಮಯದಿ
ಪಡಿಯನಿಕ್ಕಿದ ತಾವರೆಯೊಳೆಡೆ
ವಡೆಯದಂದದೊಳಿಂದುಬಿಂಬದ ಸಾಂದ್ರಕಿರಣಗಳು ೧೦೮

ಇರುಳಿನಲಿ ಸಂಚರಿಪ ದೀಪಾಂ
ಕುರದವೊಲು ಹರಿಣಾಕ್ಷಿಯಾವಾ
ವರಸನನು ಪಿಂದುಳಿದಳಾ ಆ ಧಾರಿಣೀಶ್ವರನು
ತೊರೆದ ಕಳೆಯ ವಿವರ್ಣಭಾವದ
ಮರುಕದಲಿ ಕಂದಿದನು ನಿಶೆಯೊಳು
ಧರಣಿಪತಿ ಸಂಚರಿಪ ಮಾರ್ಗದ ಮಾಡಗಳ ತೆರದಿ ೧೦೯

ಅಂತವಳು ತನ್ನೆಡೆಗೆ ನಡೆತರೆ
ಚಿಂತೆಯಾಂತನು ನೃಪಕುಮಾರನು
ಕಾಂತೆ ತನ್ನನು ವರಿಸುವಳೊ ಮೇಣ್ವರಿಸಳೋ ಎನುತ
ಅಂತು ತಪಿಸುತ ಕಳವಳಿಸುವಜ
ನಂತರಂಗದ ಸಂಶಯವನಳಿ
ವಂತೆ ಮಾಡಿದುದವನ ದಕ್ಷಿಣಬಾಹುವಿಸ್ಫುರಣ ೧೧೦

ಕುಂದು ಕೊರತೆಗಳಿಲ್ಲದಾತನ
ಸುಂದರಾಂಗದ ಸೊಬಗನೀಕ್ಷಿಸಿ
ಯಿಂದುಮತಿ ಬೇರೊಂದನೀಕ್ಷಿಸಲಾಟಿಸಿದಳಿಲ್ಲ
ಬಂದ ಮಾವಿನ ನಗುವ ಪೂವಿನ
ಸಂದ ಸೊಗಸನು ಕಂಡ ತುಂಬಿಯು
ದೆಂದುಮೆದೆಯೊಳು ನೆನೆವುದೇ ಬೇರೊಂದು ಭೂರುಹವ ೧೧೧

ಇಂದುರುಚಿರುಚಿರಾಂಗಿಯಾದಾ
ಯಿಂದುಮತಿ ಬಗೆಸೋತು ತನ್ನೃಪ
ನಂದನನ ಮುಂದೆಸೆಯೊಳಗೆ ನೆಲೆನಿಂದುದನು ನೋಡಿ
ಸಂದ ನುಡಿಗಳ ಜಾಣತನದ ಸು
ನಂದೆ ಪರಿವಿಡಿಯಿಂದ ತಾನಿಂ
ತೆಂದು ಸವಿನುಡಿಯಿಂದ ಬಿನ್ನವಿಸಿದಳು ಕನ್ನಿಕೆಗೆ ೧೧೨

ಆದಿಯೊಳಗಿಕ್ಷ್ವಾಕುವಂಶದೊ
ಳಾದನೊರ್ವ ಕಕುತ್ಸ್ಥನೆಂಬನು
ಮೇದಿನೀದಯಿತರಿಗೆ ಕಕುದಪ್ರಾಯನಾದವನಂ
ಆ ದಿನದಿನುತ್ತರದ ಕೋಸಲ
ಭೂಧವರು ಕಾಕುತ್ಸ್ಥಶಬ್ದವ
ನಾದರದಿ ತಾಳುತ್ತೆ ಕೀರ್ತಿಯನಾಂತರಿಳೆಯೊಳಗೆ ೧೧೩

ಕಂದುಗೊರಲನು ಗೊಂದೆಯೇರುವ
ಚೆಂದದಿಂದ ಪುರಂದರನನೇ
ಗೊಂದೆಮಾಡಿ ನರೇಂದ್ರನವನಡರ್ದದರ ಪೃಷ್ಠವನು
ಸಂದಿಸಿದ ಸರಳಿನಲಿ ರಾಕ್ಷಸ
ವೃಂದದಂಗನೆಯುರ ಕದಂಪುಗ
ಳಿಂದ ತೊಡೆದಳಿಸಿದನು ಮಂಗಳಪತ್ರಭಂಗಗಳ ೧೧೪

ಸುರಕರಿಯು ಕುಂಭವನು ಹಳಚುವ
ಭರಕೆ ಮಘವನ ಭುಜದಿ ಜಗುಳಿದ
ಸುರುಚಿರಾಂಗದದೊಡನೆ ತನ್ನಯ ತೋಳ ಬಳೆ ಹಳಚೆ
ಸುರಪನರ್ಧಾಸನದ ಹಸುಗೆಯ
ಸಿರಿಗೆ ಭಾಜನನಾಗಿ ಜಸವನು
ಹರಹಿದನು ದಶದಿಶೆಯೊಳಾ ನರಪಾಲಪುಂಗವನು ೧೧೫

ಆತನನ್ವಯದಲ್ಲಿ ಜನಿಸಿದ
ನಾತತಾಮಲಕೀರ್ತಿ ಜಗತೀ
ಖ್ಯಾತನಿಜಕುಲದೀಪನಪ್ಪ ದಿಲೀಪಭೂಮಿಪನು
ಆತನೆಸಗಿದ ಯಾಗಕಾ ಪುರು
ಹೂತನೆದೆಯೊಳು ಕುದಿದುಕೊಳಲು ಕೈ
ಪಾತಿಶಯದಲಿ ನಿಲಿಸಿದನು ನೂರನೆಯ ಯಾಗವನು ೧೧೬

ಧಾರಿಣಿಯನವನಾಳ್ವ ದಿನದಿ ವಿ
ಹಾರಭೂಮಿಗೆ ಹೋಗುವಂದರೆ
ದಾರಿಯೊಳು ಮೈಮರೆದು ಮಲಗಿದ ಮತ್ತಕಾಂತೆಯರ

ಸೀರೆಸೆರಗನಂ ಚಲಿಸಲಮ್ಮದು
ಮಾರುತವು ತಾನೆಂದೊಡದನಪ
ಹಾರಿಸಲು ಕೈಯಿಡುವ ಚೋರನದಾವನವನಿಯಂಲಿ ೧೧೭

ಅವನ ಸುತನಾ ರಘುನೃಪಾಲಕ
ನವನಿಯನು ಪೊರೆವಂದು ವಿರಚಿಸಿ
ಭುವನವಿಶ್ರುತವಿಶ್ವಜಿನ್ನಾಮಕಮಹಾಕ್ರತುವ
ಅವನಿಪರ ಸದೆಬಡಿದು ತಾನವ
ಯವದಿ ತಂದೈಸಿರಿಯನೆಲ್ಲವ
ತವಿಸಿ ಮೃಣ್ಮಯಪಾತ್ರಶೇಷವನೆಸಗಿದನಂ ಜವದಿ ೧೧೮

ಭೂರಮಣನವನಮಳಕೀರ್ತಿಯಂ
ಪಾರವೆನೆ ನೆಗೆದುಬ್ಬಿ ಕೊಬ್ಬುತ
ಧಾರಿಣೀಧರಶಿಖರಕೇರಿದುದೊಡನೆ ಜಡನಿಧಿಯ
ನೀರನವಗಾಹಿಸಿತು ಮೆಲ್ಲನೆ
ದೂರಿದುದು ಪಾತಾಳಕಲ್ಲಿಂ
ದೇರಿದುದು ಸುರಪಾಲನೋಲಗಸಾಲೆಯಂಗಳಕೆ ೧೧೯

ಆ ನೆಗಳ್ದ ರಘುಭೂಮಿಜಾನಿಗೆ
ಸೂನುವೆನಿಸಿದನಜನೃಪಾಲನು
ಸೂನುವಾದಂತಾ ಜಯಂತನು ದೇವರಾಜನಿಗೆ
ಆನುವನು ತಂದೆಯವೋಲಿಳೆಯನು
ತಾನುಮೀಯಜನೃಪನು ಘೋರಿಯಂ
ಮಾನುವಂತಾ ಗೂಳಿ ತಾಳುವ ಭೂರಿಭಾರವನು ೧೨೦

ಕುಲದ ಕಾಂತಿಯ ವಯದ ವಿನಯಂದಿ
ಕಲಿತ ಗುಣಗಣದೈಸಿರಿಗೆ ತಾ
ಯ್ನೆಲೆಯೆನಿಸಿ ಬೆಲೆವೆತ್ತು ನಿನ್ನೊಳಗೋರಗೆಯ ಪಡೆವ
ಚೆಲುವುವಡೆದೀ ನೃಪಕುಮಾರಕ
ತಿಲಕನನು ಕೈವಿಡಿದು ಕರುಣಿಸಿ
ಸಲಿಸು ರತ್ನಕೆ ಚಿನ್ನದೊಡನೊಡವೆರೆವ ಸಂಪದವ ೧೨೧

ಎಂದು ತನಗೆ ಸುನಂದೆಯೊರೆದುದ
ನಿಂದುಮುಖಿಯಾಲಿಸುತ ಮಿಗುವೊಲ
ವಿಂದ ಲಜ್ಜೆಯನಿನಿಸಡಂಗಿಸಿ ನಗುವ ನಯನಗಳ
ಕಂದದಿಂದೀವರದ ಮಾಲೆಯ
ನಂದ ಮಿಗೆ ನೃಪನಂದನನ ಗೆರೆ
ಯಿಂದ ರಾಜಿಪ ಕಂಧರದಿ ಕೈಕೊಳಿಸಿ ವರಿಸಿದಳು ೧೨೨

ಕೊಂಕುಗುರುಳಿನ ಕಾಂತೆ ಕಾಮನ
ಸಂಕಲೆಗೆ ಸಿಲುಕಿದೊಡವೊಡನೊಡ
ನೌಂಕುತಿಹ ಲಜ್ಜೆಯೊಳು ನುಡಿಯದೆ ಮೋನದಿಂದಿರಲು
ನೂಂಕಿ ನೆಗೆತಹ ನಿಬಿಡತರಪುಲ
ಕಾಂಕುರಂಗಳು ಹೊಮ್ಮಿ ಹೊರಗ
ಣ್ಗೌಂಕಿ ಹಿಸುಣಾಡಿದುವು ತನ್ನಯ ಹೃದಯಂಭಾವವನು ೧೨೩

ಅಂತವಳು ಮನಸೋತು ನೃಪತಿಯ
ಮುಂತೆ ನಿಲೆ ನಗೆಮೊಗದ ಸೊಬಗಿನ
ಸಂತಸದಿ ಪಡಿಯರಿತಿ ನೃಪತನುಭವೆಯನೀಕ್ಷಿಸುತ
ಅಂತರಂಗಕೆ ಸೊಗಸದಿರ್ದೊಡೆ
ಮುಂತೆ ನಡೆದಪೆವೆಂದೆನಲು ನಯ
ನಾಂತಕಂಟಿಲವಿಲೋಕನದಿ ನೃಪತನುಜೆ ನೋಡಿದಳು ೧೨೪

ಮಂಗಳದ ಪರಿಮಳದ ಪುಡಿಯೊಳು
ಸಂಗಳಿಸಿ ಕೆಂಗುಡಿಯು ಕಳೆದಳೆ
ದಂಗವಡೆದನುರಾಗವೆನೆ ಕಂಗೊಳಿಪ ಮಾಲೆಯನು
ಅಂಗನಾಮಣಿ ತನ್ನ ಸಖಿಯ ಕ
ರಂಗಳಿಂದಾ ತುಂಗಭುಜನ ಮಂ
ನಂಗೊಳಿಪ ಕಂಠದಲಿ ಸಿಂಗರಗೊಳಿಸಿದಳು ಬಳಿಕ ೧೨೫

ಅಂತು ಕಂಠದಿ ನೇಲ್ವ ನವ್ಯಲ
ತಾಂತಮಾಲೆಯನಾ ಧರಾಸೀ
ಮಂತಿನೀಪ್ರಿಯಕಾಂತನರಿದನು ತನ್ನ ಕಂಠದಲಿ

ಸಂತಸದೊಳರ್ಪಿಸಿದ ತಾರಾ
ಕಾಂತಮುಖಿಯ ಮೃಣಾಲಕೋಮಲ
ಕಾಂತಮಾಂಸಲಮಸೃಣಬಾಹಾಲತೆಗಳಿಂದೆನುತ ೧೨೬

ಮುಗಿಲ ಮುಸುಕನು ಬಿಸುಟ ಶಶಿಯನು
ತೆಗೆದು ತಳ್ಕಿಸಿದಿಂದುಕಾಂತಿಯೊ
ಬಗೆವುಗುವ ತೊರೆಯೆರೆಯನೊಡವೆರೆದೆಸೆವ ಸುರನದಿಯೊ
ಸೊಗಸುವೀ ಸಮಗುಣರ ಯೋಗದ
ಬಗೆಯ ಬಣ್ಣಿಸಲರಿದೆನುತ ನಾ
ಡುಗರೊರೆವ ನುಡಿಯಿರಿದುದವನೀಧವರ ಕೊಡಕೆಗಳ ೧೨೭

ಒಂದು ಕಡೆಯೊಳು ವರನ ಪಕ್ಕದ
ಮಂದಹಾಸದ ಮೊಗದ ಮಂದಿಗ
ಳೊಂದು ಕಡೆಯೊಳು ಕಂದುಮೋರೆಯ ನೃಪರ ಮಂದಿಗಳಂ
ಸಂದಣಿಸೆ ಸಭೆ ಸೊಗಸಿತುಷದೊಳ
ಗೊಂದು ಕಡೆಯೊಳು ನಗುವ ಕಮಲಗ
ಳೊಂದು ಕಡೆಯೊಳಂ ಮುಗಿವ ನಳಿನಗಳೆಸೆವ ಕೊಳದಂತೆ ೧೨೮

ಎರಡನೆಯ ಸಂಧಿ

ಆ ಪರಿಯೊಳನುಜಾತೆ ತನಗನು
ರೂಪನೆನಿಸುವ ವರನೊಳೊಡವೆರೆ
ದಾ ಪುರಂದರನಣುಗಿ ಗುಹನನು ವರಿಸಿದಂದದಲಿ
ರೂಪುವಡೆದಿರಲಾ ವಿದರ್ಭಮ
ಹೀಪನಲ್ಲಿಂ ರಾಜಧಾನಿಗೆ
ಪೋಪ ಮನದಿ ವಧೂವರರನೊಡಗೊಂಡು ಪೊರಮಟ್ಟು ೧

ಬಳಿಕಲುಳಿದವನಿಪರು ಮುಂಬಗ
ಲೊಳಗೆ ಮುಸಮುಸನಾದ ತಾರೆಯ
ಬಳಗದಂದದಿ ತೊಲಗಿದರು ತಂತಮ್ಮ ಬೀಡಿಂಗೆ
ನಳಿನಮುಖಿಯನು ವರಿಸದೊಂದು
ಮ್ಮಳದ ಕಳವಳದಿಂದ ಮನದೊಳು
ಹಳಿಹಳಿದು ನಿಂದಿಸುತ ನಿಜರೂಪವನು ವೇಷವನಂ ೨

ಮದುವೆಮನೆಯೊಳು ದೇವರಾಜನ
ಸುದತಿ ಸನ್ನಿದಳಾದ ಕತದಿಂ
ಮದುವಗೆಡರಿನ ತೊಡಕು ಭಂಗವ ಸಂಗಳಿಸಿತಿಲ್ಲ
ಮದವಣಿಗನೊಳು ರಾಜಸಂತತಿ
ಪುದಿದ ಮತ್ಸರದಿಂದ ಹೃದಯದಿ
ಕುದಿಯುತಿರ್ದೊಡಮೊಯ್ಯನುಸಿಕನೆ ಸೈತೆ ತೊಲಗಿದುದು ೩

ಹರಹಿದೆಳದಳಿರುಗಳ ಹೂವಿನ
ಹೊರಳಿಯಲಿ ಹೆಂಪೇರಿ ಸೊಗಸುವ
ಸುರಶರಾಸನದಂತೆ ತೊಳಗುವ ತಳಿತ ತೋರಣದ
ಸಿರಿಯೊಳಗೆ ಸೊಂಪೇರಿ ಮಿಗೆ ಕೈ
ನಿರಿವ ನಿಡುವಳಯಿಗೆಯ ನೆಳಲಿನ
ತುರುಗಲೊಳು ತಂಪೇರಿ ಮೆರೆವಾ ರಾಯಬೀದಿಯಲಿ ೪

ವರನು ವಧುವೊಡಗೂಡಿ ಸಾರುವ
ಪರಿಯನೀಕ್ಷಿಪ ತವಕದೊಳಗು
ಪ್ಪರಿಗೆಗಳ ಮಿರುಮಿರುಪ ಹೊಂಗೆಲಸದ ಗವಾಕ್ಷಗಳ
ಸರಿಸಕೈದುವ ಸಾರಸಾಂಬಕಿ
ಯರೊಳು ತಲೆದೋರಿದುದು ಮಿಕ್ಕಿನ
ಹರಿಬವನು ಹಿಂದಿಕ್ಕಿ ಮಸಗುವ ಸಿಂಗರದ ಲೀಲೆ ೫

ನೋಡಲೆನೆ ಸಡಗರದಿ ಸಾರುವ
ಗಾಡಿಕಾತಿಯದೊರ್ವಳಂದದಿ
ಸೂಡಿದಲರಿನ ತುರುಬು ಸೋರ್ದುಗುತರುವ ಪೂಸರವ
ಕೂಡಿ ತುರುಬಿಡಲೊಲ್ಲದದನಾ
ಹಾಡಿನಲಿ ಕರತಳದಿ ತಾಳುತ
ಮಾಡವೇರಿ ಗವಾಕ್ಷದೆಡೆಗೈದಿದಳು ವಹಿಲದಲಿ ೬

ಅಲತಗೆಯನಡಿಯೂಡಲೆಂದಾ
ಕೆಳದಿಯಂಕದೊಳರ್ಪಿಸಿದ ಚೆಂ
ದಳಿರಡಿಯನಿರದೊರ್ವಳೊಯ್ಯನೆ ಸೆಳೆದು ಸಂಭ್ರಮದಿ

ಲಲಿತಗತಿಯನು ಮರೆದು ಕುಟ್ಟಿಮ
ತಳದಿ ಸಲಿಸುತ ಯಾವಕದ ನಿಜ
ಚಳನಮುದ್ರೆಯನ್ನೈದಿದಳು ವಾತಾಯನದ ಬಳಿಗೆ ೭

ಒಂದು ಕಣ್ಗಂಜನದ ಸಿಂಗರ
ದಿಂದ ಸೊಬಗನು ಕೈಕೊಳಿಸಿ ಮ
ತ್ತೊಂದು ಕಣ್ಗದನಿಡದೆ ವಂಚಿಸಿ ಚಂಚಲಾಂಬಕದ
ಸುಂದರೀಮಣಿಯೊರ್ವಳಂಗುಳಿ
ಯಿಂದ ತಳೆದಂಜನದ ಸಲಗೆಯು
ನಂದಮಿಗೆ ನಡೆತಂದಳಾ ಜಾಳಂದರದ ಬಳಿಗೆ ೮

ಏರುಜವ್ವನದಾಕೆಯೊರ್ವಳು
ಮಾರುತಾಯನದಲ್ಲಿ ನೋಟವ
ದೂರಿಸುತ ಬಿರುನಡೆಯು ಭರದಲಿ ಗಂಟಳಿದಂ ಜಗುಳ್ದ
ಸೀರೆಯನಂ ಬಂಧಿಸದೆ ಕಂಕಣ
ಚಾರುರತ್ನದ ರಶ್ಮಿಯಲಿ ಪೊಳೆ
ಪೇರೆ ಪೊಡೆಯೆಡೆ ಕರದಿ ಪಿಡಿಯುತೆ ನಿಂದಂ ನೋಡಿದಳು ೯

ತರುಣಿಯೊರ್ವಳು ನೂಲ ತೊಂಗಲ
ಸರಗೊಳಿಸುತಂತಂತೆ ನಿರುಕಿಪ
ಭರದೊಳಗೆ ನಡೆತಂದೊಡಾಕೆಯು ಪಜ್ಜೆಗೋರೊರ್ವೆಂ
ಸುರಿದು ನವಮಣಿಗಣಮದೆಲ್ಲಮಂ
ಮುರುಳಿವರಿದಿರೆ ಬರಿಯ ದಾರದ
ಸೆರೆಯ ಕಾಲುಂಗುಟದಿ ವಾತಾಯನವ ಸಾರಿದಳು ೧೦

ಆಸವದ ಪರಿಮಳದ ಪಸರವ
ಸೂಸುವಾಕೆಗಳಾಸ್ಯಕಮಲದೊ
ಳಾಸೆಯಿಂ ಸುಳಿಸುಳಿವ ನೀಲಾಂಬಕದ ತುಂಬಿಗಳ
ದೇಸೆಯಲಿ ತತ್ಪುರದ ರಮ್ಯನಿ
ವಾಸಗಳ ವಾತಾಯನಂಗಳು
ದೇಸಿವಡೆದುವು ತುಂಬಿವೆರೆದಂಬುಜದಿ ಮೆರೆವಂತೆ ೧೧

ಮಡದಿಯರು ನಿಟ್ಟಿಸಳಂಗಂಗಳ
ಕುಡಿತೆಯಿಂದಜನೃಪನ ರೂಪನು
ಕುಡಿಕುಡಿದು ಮೈಮರೆದು ತೊರೆದರು ಮಿಕ್ಕ ವಿಷಯಗಳ
ನುಡಿವುದೇನುಳಿದಿಂದ್ರಿಯಂಗಳ
ಮಿಡುಕು ನಯನದ್ವಿತಯದಲಿ ನೆಲೆ
ಪಡೆದುದೆಂದೆನೆ ರಂಜಿಸಿದರಾ ಮಂಜುಳಾಂಗಿಯರು ೧೨

ಧರಣಿಪತಿಗಳು ಚಾರಮುಖದಲಿ
ವರಿಸೆ ದೂದಟ್ಟಿದೊಡಮೀ ಸುಂ
ದರಿ ಸೊಯಂಬರವೆಸಗಿ ಕಣ್ದೆರೆದೆಸೆವ ಜಾಣ್ಮೆಯನು
ಮೆರೆದಳೆಂತೆಸಗದೊಡೆ ಸಿರಿಯಾ
ಹರಿಯ ಕರವನು ಪಿಡಿದವೊಲು ತನ
ಗೊರೆಯೆನಿಪ ಸತ್ಕುಲದ ಸೊಬಗನನೆಂತು ವರಿಸುವಳು ೧೩

ಪಡೆದು ಬಯಸಲ್ತಕ್ಕ ಗಾಡಿಗೆ
ಸದನವೆನೆ ಕಂಗೊಳಿಸುವಿವರನು
ಮದುವೆಯಲಿ ಕೈವಿಡಿಸಿ ಬಗೆಯಲಿ ಬಿಗಿದು ಕೂಡಿಸದ
ಪದದೊಳೀಯಿರ್ವರನು ಸೌಂದ
ರ್ಯದೊಳು ಕರುವಿಟ್ಟಾ ಪಯೋರುಹ
ಸದನನೆಸಕಕೆ ಸಫಲತೆಯ ಸಂಪದವು ಸಾರ್ದಪುದೇ ೧೪

ಇವರು ರತಿಪತಿ ರತಿಗಳೇ ಮ
ತ್ತವತರಿಸಿದವರಕ್ಕುಮೇಕೆನ
ಲಿವಳಂ ನೆರೆದೀ ರಾಜಲೋಕಸಹಸ್ರದಲಿ ತನಗೆ
ಸವನೆನಿಪನಿವನೆನುತೆ ತಿಳಿದಿಂ
ತಿವನನೊಲ್ದಳು ಮನಕೆ ಮುನ್ನಿನ
ಭವದ ಸಂಗತಿಯರಿವು ಸಹಜವೆನಿಪ್ಪ ನುಡಿ ಪುಸಿಯೇ ೧೫

ಎನುತ ಪೌರವಧೂಜನಂಗಳ
ವನಜವದನದಿನೊಗೆದು ಕಿವಿಗಳಿ
ಗಿನಿದೆನಿಪ ಸವಿಮಾತನಾಲಿಸುತೊಯ್ಯನಡಿಯಿಡುತ

ಮಿನುಮಿನುಂಪ ಮಂಗಳವಿಧಾನದೊ
ಳನುವಡೆದು ಕಂಗೊಳಿಪ ನೃಪನರ
ಮನೆಯನಜನೃಪನಂದು ಹೊಕ್ಕನು ರಾಜವಿಭವದಲಿ ೧೬

ಬಳಿಕಲಜನಾ ಪಿಡಿಯ ಬೆನ್ನೊಳು
ತೊಳಗಿ ಬೆಳಗುವ ಪುಷ್ಪಕದಿನಿಳಿ
ಗಿಳಿದು ತನಗಾ ಕಾಮರೂಪಾಧೀಶನರ್ಪಿಸಿದ
ತಳೆದ ಲಾಗವನಾಂತು ಮೆಲ್ನಡೆ
ಗೊಳುತ ಭೋಜನೃಪಾಲಸೂಚಿತ
ನಿಳಯವನು ಪುಗುತಂದನಂಗನೆಯೆದೆಯನೊಡವುಗುತ ೧೭

ಅಲ್ಲಿ ಮಿರಮಿರನೆಸೆವ ಗದ್ದುಗೆ
ಯಲ್ಲಿ ಮಂಡಿಸಿ ಭೋಜಭೂಮೀ
ವಲ್ಲಭನ ತಂದೊಪ್ಪಿಸಿದ ಮಧುಪರ್ಕದರ್ಘ್ಯವನು
ಸಲ್ಲಲಿತರತ್ನಗಳ ರಾಶಿಯ
ನೊಲ್ಲಿವಚ್ಚಡಗಳನು ಕೊಂಡನು
ಹುಲ್ಲೆಗಂಗಳ ಹೆಂಗಳಲರ್ದಕ್ಷಿಗಳ ಕಳೆಯೊಡನೆ ೧೮

ಬಳಿಕ ಬೆಳುದುಗುಲದಲಿ ಸಲೆ ಕಂ
ಗೊಳಿಸುವಜನೃಪತಿಯನು ವಧುವಿನ
ಬಳಿಗೆ ತಂದರು ರಾಣಿವಾಸದ ವೃದ್ಧರಕ್ಷಕರು
ಬಿಳಿಯ ನೊರೆಯನು ತಳೆದು ಸಲೆ ಕಂ
ಗೊಳಿಪ ಪೊಳೆಯರಸನನು ವೇಲೆಯ
ಬಳಿಗೆ ತರುವಂತಮೃತಕಿರಣನ ಕಿರಣಲಹರಿಗಳು ೧೯

ಅಲ್ಲಿ ನೆಗಳ್ದಾ ಭೋಜಭೂಮೀ
ವಲ್ಲಭನ ಗುರುವಗ್ನಿಕಲ್ಪನು
ಭುಲ್ಲವಿಸುವಗ್ನಿಯನು ಹೋಮದ ತುಪ್ಪದಲಿ ತಣಿಪಿ
ಸಲ್ಲಲಿತವೈವಾಹಮಂಗಳ
ಕಲ್ಲಿ ಸಾಕ್ಷ್ಯವ ಪಡೆದು ವಧುವನು
ವಲ್ಲಭನೊಳೊಡಗೂಡಿ ಗಂಟಿಕ್ಕಿದನು ಮದುವೆಯಲಿ ೨೦

ಕರದಿ ಮದವಣಿಗಿತಿಯು ಮಂಜುಳ
ಕರಸರೋಜವ ಪಿಡಿದು ತನ್ನೃಪ
ವರಸುತನು ಬಗೆಗೊಂಡನಾಂತ ನವೀನಕಾಂತಿಯಲಿ
ತೆರಹುಗುಡದವೊಲಪ್ಪಿದಸುಗೆಯ
ಮಿರುಪ ತಳಿರೊಳು ಮಾರ್ದಳಿರನಿ
ಟ್ಟುರೆ ವಿರಾಜಿಪ ನೂತಚೂತಕುಜಾತದಂದದಲಿ ೨೧

ವರನ ಮಣಿಬಂಧದೊಳು ರೋಮಾಂ
ಕುರಗಳಗೆಯೊತ್ತಿದುವು ವಧುವಿನ
ಬೆರಲು ನಾಂದುವು ತೊಟ್ಟಿಡುವ ಬೆಮರ್ವನಿಯ ಬಳಗದಲಿ
ವರನ ವಧುವಿನ ಕಿಸಲಯೋಪಮ
ಕರತಲಸ್ಪರ್ಶನದೊಳಂಗಜ
ನಿರವು ಮೆರೆದುದು ಸರಿಹಸುಗೆಯಲಿ ಹಸುಂಗೆಗೈದಂತೆ ೨೨

ನೋಡುವಾಸೆಯೊಳವರ ಕಣ್ಗಳು
ಕೂಡುವುವು ಕಡೆಗಣ್ಣ ಕಡೆಯೊಳು
ನೋಡುವೆಡೆಯೊಳು ಸಂಧಿಸುತ ಬೆಚ್ಚುರದಿ ಪಿಂಗಡೆಗೆ
ಓಡುವುವು ಮಗುಳ್ದುಯ್ಯನೊಯ್ಯನೆ
ಕೂಡುವುವು ಬಳಿಕೆದೆಯೊಳೊಯ್ಕನೆ
ಮೂಡುವೆಳಲಜ್ಜೆಯ ತೊಡಕಿನೊಳು ಸಿಲುಕಿ ಸೊಗಸುವುವು ೨೩

ಜ್ವಳಿಸಿ ದಳ್ಳಿಸುವುರಿಯು ಕೊಂಡವ
ಬಳಸಿ ಬಲವರ್ಪಂದು ಸಲೆ ಕಂ
ಗೊಳಿಸಿದರು ದಂಪತಿಗಳೊಯ್ಯನೆ ಮೇರುಭೂಧರವ
ಬಳಸುತೊಂದರ ಹಿಂದೆಯೊಂದೆನೆ
ಬಳಿಸಲುತ ಬಲವಂದು ಸಲೆ ಕಂ
ಗೊಳಿಪ ಮೃದುಪದಗತಿಯ ಪಗಲಿರುಳುಗಳ ಪಾಂಗಿನಲಿ ೨೪

ಬಳಿಕ ಜಲರುಹಭವನವೊಲು ಕಂ
ಗೊಳಿಪ ಗುರುವಿನ ನಿಯಮಂದಲಿ ಮಂ
ಜುಳಚಕೋರವಿಲೋಲಲೋಚನೆ ಲಾಜೆಯುರಳುಗಳಾ

ತಳೆದು ನಿಜಕರಕಿಸಲಯದಿನು
ಜ್ವಲಿಪ ವಹ್ನಿಯ ಮುಖದಿ ತಳಿದಳು
ಮೊಳಕೆಯೊತ್ತುವ ನಾಣ ಭರದಲಿ ಬಳುಕುತಳುಕುತಲಿ ೨೫

ಹವಿಯ ಶಮಿಯೆಳದಳಿರ ಲಾಜೆಯ
ಸವಿವಡೆದ ಸೌಸವದ ಧೂಮದ
ನಿವಹವಾ ಹೋಮಾಗ್ನಿಯೆಡೆಯಿಂದೊಗೆದು ಹೊರಹೊಮ್ಮಿ
ಕವಲೊಡೆದು ಕಾಮಿನಿಯ ಕದಪಿನೊ
ಳವಿದು ಕಿವಿಯನು ಮುದ್ದಿಸುತ ಕ
ಣ್ಣವುರದೊಂದಂದವನು ತಾನರೆಗಳಿಗೆ ತಾಳಿದುದು ೨೬

ಕಾಡಿಗೆಯ ಕಂಬನಿಯ ಹನಿಗಳು
ಮೂಡಿದುವು ಕಣ್ಗಳಲಿ ಕಿವಿಯಲಿ
ಗಾಡಿವಡೆದೆಡೆಗೊಂಡ ಯವೆಯಂಕುರದ ಸಂಕುಲವು
ಬಾಡಿದುದು ಕದಪುಗಳ ಮೊಗದಲಿ
ಮೂಡಿದುದು ತಳಿರ್ಗೆಂಪು ಹೋಮದಿ
ಮೂಡಿದಾ ಧೂಮವನು ಕಾಮಿನಿ ಸವಿವ ಸಮಯದಲಿ ೨೭

ಬಳಿಕ ಮಿರುಗುವ ಹೊನ್ನ ಹಸೆಯೊಳು
ಕುಳಿತು ತದ್ದಂಪತಿಗಳೊಯ್ಯನೆ
ಬಳಿಗೆ ಬಂದಾ ಸ್ನಾತಕರ ನರಪತಿಯ ತೆತ್ತಿಗರ
ಹೊಳಲ ವಿನುತಪುರಂಧ್ರಿಯರ ಕರ
ತಳದಿ ತಳಿದಾ ಸೇಸೆಯನು ಕಂ
ದಳಿತಮಾನಸರಾಗಿ ತಳೆದರು ತಮ್ಮ ತಲೆಗಳಲಿ ೨೮

ಅಂತು ಭೋಜಕುಲಪ್ರದೀಪನು
ಸಂತಸದ ಸೊಂಪಿನಲಿ ತಂಗಿಗ
ನಂತವಿಭವದೊಳೆಸಗಿ ಪಾಣಿಗ್ರಹಣಮಂಗಳವ
ಹಂತಿಯಲಿ ನೆರೆದಿರ್ದ ಭೂಮೀ
ಕಾಂತರಂ ತರವರಿತು ಮನ್ನಿಸ
ಲಂತರಂಗದ ಪರಿಜನಕೆ ಬೆಸಸಿದನು ನಲವಿನಲಿ ೨೯

ಹಿರಿದು ಮನ್ನಣೆವಡೆದು ನರಪರು
ಹೊರಗೆ ಹರಿಸವ ನಟಿಸಿ ಮನದೊಳು
ಮರೆಸಿ ಮಾತ್ಸರ್ಯವನು ಹೊರಗಡೆ ತಿಳಿದು ಗರ್ಭದಲಿ
ಉರುವ ಮೊಸಳೆಯನಾಂತ ಮಡುವಿನ
ತೆರದಿ ತೋರುತ ತಮಗೆ ಕೊಟ್ಟುಡು
ಗೊರೆಯನೇ ಕಾಣಿಕೆಯ ನೆವದಲಿ ಕೊಟ್ಟು ತೆರಳಿದರು ೩೦

ಅಂತು ಬೀಳ್ಕೊಂಡ ನೃಪಾಲರು
ಚಿಂತೆ ಮಂತಣಗೈದ ಬಗೆಯಲಿ
ಕಾಂತೆಯನು ಕೊಂಡುಯ್ವ ಮನದೊಳಗೆಲ್ಲರೊಂದಾಗಿ
ಅಂತು ನಿಂದರು ತನ್ನ ಪಟ್ಟದ
ಕಾಂತೆಯಿಂದೊಡಗೂಡಿಯಜಭೂ
ಕಾಂತನೊಬ್ಬನೆ ರಾಜಧಾನಿಗೆ ಮರಳ್ವ ಮಾರ್ಗದಲಿ ೩೧

ಅತ್ತಲಂತಿರಲಿತ್ತ ಭೋಜ ನೃ
ಪೋತ್ತಮನು ತನಗನುಜೆಯೆನಿಸಿದ
ಮತ್ತಕಾಶಿನಿಗಿಂದುಮತಿಗೆ ವಿಚಿತ್ರ ವಸ್ತುಗಳ
ಚಿತ್ತ ತಣಿವಂದದಲಿ ನಲಿನಲಿ
ದಿತ್ತು ಸತಿಪತಿಗಳನು ತತ್ಪುರ
ದತ್ತ ಬೀಳ್ಕೊಟ್ಟವರೊಡನೆ ಹೊರವಟ್ಟನರೆಯೆಡೆಯ ೩೨

ದಾರಿಯೊಳಗವರೊಡನೆ ನರಪನು
ಮೂರು ರಾತ್ರಿಯ ಕಳೆದು ಬಳಿಕಜ
ಭೂರಮಣನನು ಸತಿಯೊಡನೆ ಬೀಳ್ಕೊಟ್ಟು ಮರಳಿದನು
ಸೂರನನು ಬಳಿಸಂದು ಪರ್ವದ
ಸೇರುವೆಯೊಳಾ ಬಳಿಕ ದೂರಕೆ
ಸಾರಿ ಪೋಗುವ ಕುಮುಂದಬಾಂಧವನೊಂದು ಬೆಡಗಿನಲಿ ೩೩

ಹಿಂದೆ ತಮ್ಮಯ ಸಿರಿಯ ಸುಲಿದನು
ತಂದೆಯಿಂದಿನೊಳಣುಗನೆಮ್ಮಯ
ಮುಂದೆ ಕೊಂಡನು ಕನ್ಯಕಾಕುಲಮೌಳಿಮಂಡನವ

ಎಂದು ಮನದಲಿ ಮೊಳೆತ ಮಚ್ಚರ
ದಿಂದ ಮಾರ್ಗವ ತಡೆದು ಭೂಪತಿ
ವೃಂದಪಿರ್ದಾ ಬಳಿಗೆ ಸಾರಿದನಜನೃಪಾಲಕನು ೩೪

ಬಲಿದ ಬಿಂಕದ ಭೂಮಿಪತಿಗಳು
ತೊಲಗದಾಯೆಡೆ ತಳ್ತು ತಡೆದರು
ನಲಿದು ನಿಜಸತಿಯೊಡನೆ ಸಾರ್ತಂದಜಮಹೀಭುಜನ
ಬಲಿಯೊಲಿದು ಕೊಟ್ಟೆಳೆಯನಳೆದ
ಗ್ಗಳಿಸಿ ಗಗನಕೆ ಬಳೆದ ಗುಜ್ಜನ
ಚಳನವನು ಬಲುಹಿಂದಲಮರವಿರೋಧಿ ತಡೆದಂತೆ ೩೫

ಒಡನೆ ತನ್ನಯ ಮಡದಿಯನಂ ಕಾ
ಪಿಡುವ ಕಜ್ಜಕೆ ಮಂತ್ರಿಯನಂ ಪೆ
ರ್ಬಡೆಯೊಡನೆ ನಿಯಮಿಸುತ ನಿಜಭುಜಬಲದೊಳಜನೃಪನು
ತಡೆದನೊರ್ಮೆಯೆ ಹೊಡಕರಿಸಿ ಭೋ
ರಿಡುವ ತೆರೆಗಳ ಶೋಣನದವು
ಗ್ಗಡದ ಗಂಗೆಯ ತಡೆದು ರಯವನು ಭಂಗಿಪಂದದಲಿ ೩೬

ಪತ್ತಿ ಪತ್ತಿಯನಟ್ಟಿದುದು ವೇ
ಣೊತ್ತಿದರು ರಥಿಕರನಂ ರಥಿಕರು
ಮುತ್ತಿದರು ತುರಗಾಧಿರೂಢರು ತುರಗಸಾದಿಗಳ
ಒತ್ತಿ ತರುಬಿದರಾನೆಯವರಾ
ಮತ್ತವಾರಣದವರನೀ ಪರಿ
ತತ್ತುದಾ ದಳವೆರಡರಲಿ ಸಮಸಮರದಾಟೋಪ ೩೭

ಸೂಳಯಿಪ ನಿಸ್ಸಾಳಗಳ ರವ
ದೇಳಿಗೆಯ ಹೋರಟೆಯ ಭರದಲಿ
ಹೇಳಲಾರದೆ ನಿಜಕುಲದ ಪನ್ನತಿಕೆಯುನ್ನತಿಯಂ
ಕೋಲ ಮ್ಮೈಯಲಿ ಬರೆದ ಬರಹದ
ಹೇಳಿಕೆಯೊಳರುಹಿದರು ತಮ್ಮ
ಬ್ಬಾಳುತನವನಂ ತಳದ ಬಿಲ್ಲಿನ ಬಿಲ್ಲ ಬಲ್ಲಿದರು ೩೮

ಪರಿವ ತುರಗೋತ್ಕರದ ಖುರಖುರ
ಭರದೊಳುಣ್ಮಿತ ರಥರಥಾಂಗದ
ಹೊರಳಿಯೊಳಗೆಡೆಗಿರಿದು ಪುಂಜಿಸಿ ಕುಂಜರಾವಳಿಯು
ಮೊರಗಿವಿಯ ಮೆಲ್ಲಲೆಪದೆಲರೊಳು
ಪರಹಿ ಮೈವಡೆದುಬ್ಬಿ ಸೀರೆಯ
ತೆರೆಯುವೊಲು ಮರಸಿದುದು ರವಿಯನು ಕವಿದ ಕೆಂಧೂಳಿ ೩೯

ಹಳವಿಗೆಗಳೊಳು ಹೊಳೆವ ಮೀಂಗಳ
ಬಳಗವೆಸಗುವ ಗಾಳಿಯುಲಿಪಕೆ
ತಲೆಗೊಡಹಿ ಬಾಯ್ದೆರೆದು ತುರುಗಿದ ರಜದ ರಾಜಿಯನು
ಉಳಿಸದೀಂಟುವುದೆಂಬ ಶಂಕೆಯಂ
ಬಳಿಯಿಸಂತ ಕೆಸರೆದ್ದು ಕದಡಿದ
ಜಳವನೀಂಟುವ ಮೀಂಗಳಂದದಿ ಕಣ್ಗೆ ಸೊಗಸಿದುವು ೪೦

ತೂರಿ ತುರುಗಿದ ರಜದ ರಜನಿಯೊ
ಳಾರ ಕಣ್ಣುಂ ಕಣ್ಗೆಡುತ್ತಿರೆ
ತೇರನರಿಪಿದುದುಲಿವ ಚಕ್ರದ ಚೀತ್ಕೃತಿಧ್ವಾನ
ವಾರಣಂಗಳನರಿಪಿದುವು ಘಂ
ಟಾರವಂಗಳು ಭತ್ರ್ಯನಾಮೋ
ಚ್ಚಾರಣವೆ ತೋರಿದುದು ನಿಜಪರಭಾವಭೇದವನು ೪೧

ಇಡಿಕಿರಿದು ಲೋಚನದ ಹಾದಿಯ
ತಡೆದು ತಾನಾ ತೆರದಿ ಪೆಂಪನು
ಪಡೆದು ಹೊಮ್ಮಿದ ಧೂಳಿಯೆಂಬಾ ಕಾಲಯಾಮಿನಿಗೆ
ಪಡೆದ ಸೂರ್ಯೋದಯವದೆನಿಸಿತು
ಪಡೆಯ ಕುದುರೆಯ ಕರಿಯ ಕಲಿಗಳ
ಕಡಿವಡೆದ ಕಾಯದಲಿ ಸೂಸುವ ರಕ್ತಜಲಧಾರೆ ೪೨

ಪರಿವ ಕೆನ್ನೀರೊರತೆಯಲಿ ಮೈ
ಮುರಿವಡೆದು ಮೂಲದಲಿ ಪೋಗಡೆ
ಮರುತಹತಿಯಲಿ ಹರಹಿ ಕೆದರಿದ ಭೂರಿರಣಧೂಳಿ

ಪರಿವಡೆದುದುರಿಯಡಗಿ ಕೆಳಗಡೆ
ತರಿಳಕೆಂಡವನಾಂತು ಮೇಗಡೆ
ಹರಹಿ ಗಗನದಿ ನೆಗೆವ ಹೊಗೆಗಳ ಹೊರಳಿಯಂದದಲಿ ೪೩

ಹಿರಿಯ ಹೊಯ್ಲಿನ ಮರವೆ ತಿಳಿದೆ
ಚ್ಚರುತ ಬಗ್ಗಿಸಿ ಸಾರಥಿಯನತಿ
ಭರದಿ ತಿರುಗಿಸಿ ಕುದುರೆಗಳನಾ ಕಳಕೆ ಪರಿತಂದು
ಮೆರೆವ ಸಿಂಧದ ಕುರುಹಿನಲಿ ಸಲೆ
ಕುರುಹಿಡುತ ಮುನ್ನಿರಿದ ಪಗೆಯಂ
ಮರೆಯದಿರಿದರು ರಥಿಕರುರಿದೇಳ್ವುಗ್ರರೋಷದಲಿ ೪೪

ಕೆಚ್ಚೆದೆಯ ಕೈಚಳಕದಂಕ್ಕಾ
ಳಿಚ್ಚ ಸರಲನು ಮಧ್ಯಮಾರ್ಗದಿ
ಕೊಚ್ಚಿದುದು ಕೋದಂಡವಿದ್ಯಾಪಂಡಿತರ ತಂಡ
ಪಚ್ಚವೊಲು ಹಿಳುಕುಡಿದು ಹೋಯ್ತುರ
ದುಚ್ಚಳಿಸಿ ಪಾಯ್ತಂದು ಮುಮ್ಮೊನೆ
ಚುಚ್ಚಿ ನಟ್ಟುದು ತಮ್ಮ ಹೇರೆದೆವಲಗೆಚೌಕದಲಿ ೪೫

ಮದಜಲವ ಮುಕ್ಕುಳಿಪ ಕರಿಗಳ
ಕದನದಲಿ ಮಾವುತರ ತಲೆಗಳು
ಮೊದಲು ಚಕ್ರದ ಧಾರೆಯಲಿ ಮುರಿದಲಗಿನಿರಿತದಲಿ
ಕದಲಿದೊಡಮಾ ಶ್ಯೇನಪಕ್ಷಿಯು
ಪದಕೆ ಸಿಲುಕಿದ ಮುಡಿಯ ತೊಡಕಿಂ
ದುದಿರದೊಯ್ಯನೆ ಸಡಿಲಿ ಮೆಲ್ಲನೆ ಬಾಗಿದುವು ಮಹಿಗೆ ೪೬

ಆದಿಯಲಿ ನಿಬ್ಬರದಿ ರಿಪುವನಂ
ಮೋದಿದಾ ರಾವುತನು ಹೊಯ್ಲಿನ
ಸೇದೆಯಲಿ ಸೊಪ್ಪಾಗಿ ತನ್ನಯ ತುರಗಪೃಷ್ಠದಲಿ
ಕೋದ ಮರವೆಯೊಳೊರಗಿದರಿಯನು
ಮೋದಲೊಲ್ಲದೆ ಮತ್ತೆ ತಿಳಿವಿನ
ಹಾದಿಯಂ.ಹೊಗುವಿನೆಗ ಸುಮ್ಮನೆ ನಿಂದು ನೋಡಿದನು ೪೭

ಹರಣದಾಸೆಯನುಳಿದು ಕರದಲಿ
ಖರತರದ ತರವಾರಿಯನು ತಳೆ
ದುರವಣಿಸಿ ಕವಚಿಗಳು ಹೊಯ್ದೊಡೆ ನಿಗ್ಗವಂಗಳಲಿ
ತರದಿ ಸೂಸುವ ಕಿಡಿಗಳನು ಮದ
ಕರಿಗಳೊಡನಳಿಸಿದುವು ನಿಜಪು
ಷ್ಕರದ ತುಂತುರ ತುರುಗಲಿನ ತನಿವಳೆಯ ತಂಪಿನಲಿ ೪೮

ಸರಳ ಕಡಿತದೊಳುಡಿದ ವೀರರ
ಶಿರಗಳೇ ಪಳಗಳವೊಲೆಸೆದಿರ
ಲುರುಳ್ದ ಸೀಸಕದೋಳಿ ಚಷಕದ ತೆರದೊಳೊಪ್ಪಿರಲು
ಹರಿವ ನೆತ್ತರೆ ಕಳ್ಳ ಕಾಲುವೆ
ಗೊರೆಯೆನಿಸೆ ರಣಭೂಮಿ ಭಯವನು
ಹರಹಿ ಮೆರೆದುದು ಕಾಲರಾಜನ ಪಾನಭೂಮಿವೊಲು ೪೯

ಕಡಿವಡೆದ ನಿಡುದೋಳ ತುಂಡಿನೊ
ಳಿಡಿದಡಗನೆಳೆದೆಳೆದು ಪೊಡೆಯೊಳ
ಗಡಸುತಿಹ ಹದ್ದುಗಳನೋಡಿಸಿ ಪಿಶಿತಲೋಭದಲಿ
ಕಡಿವಡೆಯೊಳಾ ತೋಳ ಮುರಿಯಲಿ
ತೊಡರ್ದ ತೋಳ್ವಳೆ ತನ್ನ ತಾಲುವ
ನುಡಿಯೆ ತೊರೆದೋಡಿದುದು ಭೀತಿಯೊಳೊಂದು ಗೋಮಾಯು

ಅರಿಕರದ ಕರವಾಳಘಾತದಿ
ಕೊರಲರಿದು ತೊಟ್ಟನೆ ವಿಮಾನ
ಕ್ಕೆರೆಯನಾದವನೊಬ್ಬನೆಡವಂಕದಲಿ ಮಂಡಿಸಿದ
ಸುರವನಿತೆಯೊಡನೀಕ್ಷಿಸಿದನು
ಬ್ಬರದ ರಭಸದಿ ಭೂರಿಭಯವನು
ಹರಹಿ ಕುಣಿಕುಣಿಕುಣಿವ ಮುನ್ನಿನ ನಿಜಕಬಂಧವನು ೫೧

ವೀರರಿಬ್ಬರು ರಣದಿ ನಿಜನಿಜ
ಸಾರಥಿಗಳಳಿಯಲ್ಕೆ ಚಲದಲಿ
ಸಾರಥಿಗಳುಂ ರಥಿಗಳುಂ ತಾವಾಗಿ ಕಾದಿದರು

ವಾರುವಂಗಳು ನೊಂದು ಮಡಿಯಲು
ತೋರಗಜೆಯಲಿ ಪೊಣರ್ದರವು ನಿ
ಸ್ಸಾರವಾಗಲು ಕಡಗಿ ತಳ್ತರು ತೋಳ ತೋಟಿಯಲಿ ೫೨

ಒರ್ವರೊರ್ವರ ಹೊಯ್ಲ್ಲ ಕಡುಹಿಂ
ದಿರ್ವರದಟರು ಸಮಸಮಯಿಂದಲಿ
ಕೊರ್ವಡಗಿ ಕಳನೊಳಗೆ ತನುವನು ಬಿಸುಟು ಸುರಪುರಿಗೆ
ಸಾರ್ವ ಸಮಯದೊಳಮರಸತಿಯನ
ದೊರ್ವಳನೆ ಸಂಪ್ರಾರ್ಥಿಸುತ ಮಗು
ಳ್ದಿರ್ವರುಂ ಕಾದಿದರು ಹಿಂದಿನ ಹಗೆಯ ಹೆಂಪಿನಲಿ ೫೩

ಒಂದು ಸೂಳೊಳು ಗೆಲವ ಪಡೆದುವ
ದೊಂದು ಸೂಳೊಳು ಸೋಲದಲಿ ಮೆ
ಯ್ಗುಂದಿದುವು ಸೇನೆಗಳು ತಾವೊಂದೊಂದರರಿತದಲಿ
ಹಿಂದೆ ಮುಂದೋರೊಮ್ಮೆ ಭೋರ್ಭೋರ್
ರೆಂದು ತೀಡುವ ಗಾಳಿಯಬ್ಬರ
ದಿಂದ ಕುಂದುವ ಮಗುಳೆ ಕೊಬ್ಬುವ ಕಡಲ ತೆರೆಗಳನೆ ೫೪

ಮುರಿದೊಡೇನಾ ಪಡೆಯನರಿಗಳು
ತರುಬಲಾರ್ತರೆ ಭೂಪತಿಯನವ
ನುರವಣಿಸಿ ರಿಪುನೃಪರ ದಳವನು ಕಲಕಿದನು ಕೂಡೆ
ಮುರಿಯಬಲ್ಲುದು ಗಾಳಿ ಹೊಗೆಯನು
ಮುರಿಯಬಲ್ಲುದೆ ಬೆಂಕಿಯನು ಕ
ವ್ವರಿಸಿ ಕಡಗುತ ಪುಳ್ಳಿಯಿಂದೆಡೆ ದಳ್ಳಿಸುವುದಗ್ನಿ ೫೫

ಏರಿ ತೇರನು ಬಿಗಿದು ನವತೂ
ಣೀರವನು ಸವಗವಲಿ ಮರಸಿ ಶ
ರೀರವನು ಕರತಳದಿ ತಳೆದಳವಟ್ಟ ಚಾಪವನು
ವೈರಿಸೇನೆಯನೇಕವೀರನು
ಬೀರದಲಿ ಕಲಕಿದನು ಕಲ್ಪದಿ
ವಾರಿಧಿಯನು ವರಾಹನಾಲೋಡಿಸುವ ಮಾಳ್ಕೆಯಲಿ ೫೬

ಅವನ ಬಲಗೈವೆರಲು ತೂಣದ
ವಿವರದೆಡೆಯಲಿ ನಿಂದವೊಲು ನೋ
ಳ್ಪವರ ನಯನಕೆ ಗೋಚರಿಸಿದುದು ಕೈಯ ಕಾರ್ಮುಕದ
ಕಿವಿವರೆಗೆ ಪಿಡಿದೆಳೆದ ನಾರಿಯೆ
ಕವಿವ ರಿಪುಗಳ ಜೀವವನು ಹೀ
ರುವ ಕರಾಳಶರಾಳಿಯನು ಸೂಲಿಸುತ ಸೋಲಿಸಿತು ೫೭

ಕಡಿಕಡಿದು ಕೆಂಪೇರಿದವುಡಿನ
ನಡುನೊಸಲಿನಲಿ ಮುರಿಮುರಿದು ಗಂ
ಟಿಡಿದ ಹುಬ್ಬಿನ ಬಿಡಬಿಡದೆ ನೆಗೆದೇಳ್ವ ಹೂಂಕೃತಿಯ
ನಿಡುಸರದ ಹೋರಟೆಯ ಭಲ್ಲದಿ
ಕಡಿವಡೆದ ರಿಪುನೃಪರ ತಲೆಗಳ
ನಡಕಿದನು ಪೊಡವಿಯೊಳಗೆಡೆಯಿಲ್ಲೆನಿಸುತಜನೃಪನು ೫೮

ಆನೆ ಮೊದಲಹ ನಾಲ್ವಗೆಯ ನಿಜ
ಸೇನೆಯನು ನೂಕಿದರು ಲೋಹದ
ಪೀನಕವಚವನಿರಿವ ಕೂರ್ವೊನೆಗಣೆಯ ಮೊದಲಾದ
ಊನವಿಲ್ಲದ ಸಕಲಶರಸಂ
ತಾನದಲಿ ನಿಲವಿಲ್ಲದೆಚ್ಚೆ
ಚ್ಚಾ ನರಾಧಿಪರಜನನೊರ್ವ್ವಗದೊಳಗೆ ಮುತ್ತಿದರು ೫೯

ತುರುಗಿ ತೀವಿದ ಸರಳ ಮರೆಯಲಿ
ಮರಸಿದಜಭೂವರನ ತೇರಿನ
ಕುರುಹನರಿಯಲ್ಕಾಯ್ತು ಮೇಗಡೆ ಮೆರೆವ ಸಿಂಧದಲಿ
ತುರುಗಿ ತೀವಿದ ಬಡಪದಲಿ ತಲೆ
ಗರೆದ ದಿವಸಶ್ರೀಯನರೆಗ
ಣ್ದೆರೆದ ಖರಕರನರುಣಕಿರಣದಿ ಕುರುಹಿಡುವ ತೆರದಿ ೬೦

ತರಿದು ಮೆಂದೆಗೆಡಹಿದನು ಸರಳಿನ
ಹೊರಳಿಯನು ತನಗೆಂದು ಗಂದರ
ರೆರೆಯನಣುಗನ ಕೊಟ್ಟ ಕಣೆಯನು ತಿರುವಿನಲಿ ತುಡಿಸಿ

ಭರದಿ ಕಿವಿವರೆಗೆಳೆದು ನೃಪನ
ಬ್ಬರಿಸಿ ಬಿಡಲದು ರಿಪುಗಳನು ಮೆ
ಯ್ಮರಸಿ ನಿದ್ದೆಯ ನಿಗಡದಲಿ ಬಿಗಿವಿಡಿದು ಬಂಧಿಸಿತು ೬೧

ಬಳಿಕ ಹೆದೆಯನು ಸೆಳೆವ ಹರಿಬವ
ನುಳಿದ ಬೆರಲಿನ ಕಂದದಲಿ ಜೋ
ಲ್ದಿಳಿದ ಮಣಿಮಕುಟಗಳ ಪಳವಿಗೆಗಳೆಯ ನೆಮ್ಮುಗೆಯ
ಬಲುಹಿನಲಿ ನೆಲೆಗೊಂಡ ನಿದ್ದೆಯ
ಸಿಲುಕುಗಳ ನರಪಾಲಸಂಕುಲ
ವಲುಗದೊಪ್ಪಿತು ಬಿದ್ದವಿಕ್ಕಿದ ಪಟದ ಪಾಂಗಿನಲಿ ೬೨

ಕದನಕರ್ಕಶನಜನೃಪಾಲಕ
ನದಟಿನಿಂದಾ ತೆರದಿ ಗಳಿಸಿದ
ಬಿದುಗೆಣೆಯ ಕೀರ್ತಿಯನು ಬಲಿಯಿಸಿ ಪಿಡಿದಂ ಕುಡಿವಂತೆ
ಸೊದೆಗೆ ಸೆಣಸುವ ತನ್ನ ತುಟಿಗಳ
ತುದಿಯೊಳಗೆ ಸೆರೆಗೊಳಿಸಿ ಸಂಕನು
ಮುದಿರ ನಿನದದಿ ಭೋರೆನುತ ಪೂರಿಸಿದನೊಡನೊಡನೆ ೬೩

ಅರಿದು ಶಂಖಧ್ವನಿಯ ಕುರುಂಹನು
ಮರಳಿ ನಡೆತಂದಾಕೆವಾಳರು
ನಿರುಕಿಸಿದರೊರಗಿರ್ದ ಪಗೆಗಳ ಪಡೆಯ ಮಧ್ಯದಲಿ
ಮಿರುಗುವಜನೃಪತಿಯನು ಕಣ್ಮುಗಿ
ದೊರಗಿದಂಬುಜತತಿಯ ನಡುವೆಡೆ
ಮೆರೆವ ತಿಂಗಳ ಹೊಳೆವ ನೆಳಲನು ಕಾಣುವಂದದಲಿ ೬೪

ಕ್ಷೋಣಿಪತಿಯಾಣತಿಯೊಳವದಿರು
ಶೋಣಿತಾಂಬುವಿನಲ್ಲಿ ನೆನೆಯಿಂಸಿ
ಬಾಣದಗ್ರಪ ಬರೆದರರಿಗಳ ಪಳವಿಗೆಯ ಪಟದಿ
ಕಾಣಿರೈ ನೀವಜನು ಕರುಣಿಸಿ
ಪ್ರಾಣದಾನ(ವನೆ)ಸಗಿ ನಿಮ್ಮ
ಕ್ಷೀಣಯಶವನು ಕೊಂಡನೆಂಬಕ್ಕರದ ಸೇಣೆಯನು ೬೫

ಮೆಲ್ಲಿನಲ್ಲಿಂ ಮೇಲೆಯಜಭೂ
ವಲ್ಲಭನು ಕರಪಲ್ಲವವನಾ
ಬಿಲ್ಲ ಕೊಪ್ಪಿನೊಳಿಳುಹಿ ತೊಲಗಿದ ಸೀಸಕದ ತಲೆಯು
ಚೆಲ್ಲಿ ಕೆದರಿದ ಕೂದಲಿನ ಮೊಗ
ದಲ್ಲಿ ಮೂಡಿದ ಬೆವರ್ವನಿಯು ಸಿರಿ
ಯಲ್ಲಿ ನಲ್ಲಳ ಬಳಿಗೆ ನಡೆದಿಂತೆಂದನೊಲವಿನಲಿ ೬೬

ಕಾತರಾಂಬಕಿ ಬಂದು ನೋಡಾ
ಪೋತಹಾರ್ಯಶರೌಘರೆನಿಸುತ
ಭೂತಳದೊಳೊರಗಿರುವ ಭುಜಸಾಹಸದ ಭೂಪರನು
ಈ ತೆರದ ಮೀಸಲಿನ ನಿಜಸ
ತ್ತ್ವಾತಿಶಯವನು ಮೆರೆದು ಕಳಲೆಂ
ದಾತುರಿಸಿದರು ನಿನ್ನನೀ ಭುಜವಜ್ರಪಂಜರದಿಂ ೬೭

ಎಂದು ನುಡಿದೊಡನಿಂದುಮತಿಯು ಮು
ಖೇಂದು ಮುಸುಕಿದ ಮರುಂಕವನು ತೊರೆ
ದಂದ ಮಿಗೆ ರಂಜಿಸಿತು ಪೊಂಗುವ ಕಾಂತಿಲಹರಿಯುಲಿ
ಮುಂದಯಿಪ ನಿಶ್ವಾಸಬಾಷ್ಪದಿ
ಕಂದಿ ಕಳೆಗುಂದಿರ್ದ ಕನ್ನಡಿ
ಯೊಂದೆ ನಿಮಿಷಕೆ ಪಜ್ವಳಿಸಿ ಪೊಗರೇರುವಂದದಲಿ ೬೮

ನಲವನಾಂತೊಡಮಾಕೆ ನಾಚುತೆ
ತಲೆಯನೆರಗಿಸಿ ತನ್ನ ಪಕ್ಕದ
ಕೆಳದಿಯಿಂದರುಹಿದಳು ತನ್ನಯ ಮನದ ಸಂತಸವ
ಮಳೆಯು ಜಳದಲಿ ನಾಂದ ಧರಣೀ
ಲಲನೆ ತನ್ನಯ ಮನದಲಂಪನು
ಜಳದನೃಪತಿಗೆ ಸೋಗೆಯುಲಿಯಿಂದರುಹುವಂದದಲಿ ೬೯

ಕಟ್ಟದಟಿನಿಂದಿಂತು ಪಗೆಗಳ
ಪಟ್ಟಬಂಧದ ತಲೆಯೊಳಿಡಗಾ
ಲಿಟ್ಟು ನಿಜಸತಿಯೊಡನಜನು ನಿಜನಗರಿಗೈದಿದನು

ಇಟ್ಟಣಿಪ ರಥತುರಗರಜ ನಸು
ಮುಟ್ಟಿ ಮಾಸಿದ ಮುಂಗುರುಳ ನಿಜ
ಪಟ್ಟಮಹಿಷಿಯೆ ವಿಜಯಲಕ್ಷ್ಮಿಯ ತೆರದಿ ಮೆರೆದಿರಲು ೭೦

ಮೊದಲೆ ಸುತನ ವಿವಾಹವಿಜಯಾ
ಭ್ಯುದಯವನು ರಘುನೃಪತಿ ಕೇಳ್ದತಿ
ಮುದದಿ ಸುದತಿಯಿನೊಂದುವೆರೆದೈತಂದ ತನಯನಿಗೆ
ಪದಪಿನಲಿ ಪಟ್ಟವನು ಕಟ್ಟಿಸಿ
ಹೃದಯವನು ತಪಕೀವ ಭಾವದಿ
ಹದಗೊಳಿಸಿದನು ಸೂರ್ಯವಂಶದ ಸಂಪ್ರದಾಯವನು ೭೧

ಮೂರನೆಯ ಸಂಧಿ

ಬಳಿಕಲಾ ವೈವಾಹಮಂಗಳ
ವಿಳಸನದ ಸಂಪದದ ಸುತನಲಿ
ಬಳೆದ ನೇಹದ ಬಳ್ಳಪಳ್ಳಿಯೊಳಾ ರಘೂದ್ಭವನು
ತೊಳಗುವೆರಡನೆಯಿಂದುಮತಿಯನು
ಕೆಳೆಗೊಳಿಸಿ ನಿಜಸುತನೊಡನೆ ಹಸೆ
ನಿಲಿಸಿದನೊ ಎನೆ ರಾಜ್ಯಲಕ್ಷ್ಮಿಯನೊಂದುಗೂಡಿಸಿದ ೧

ಪಾಪಕರ್ಮಕೆ ಹೇಸದಂಜದೆ
ಭೂಪರಾವುದನಾರ್ಜಿಸಲು ಪರಿ
ತಾಪಗೊಂಡುಮ್ಮಳಿಪರಾ ಧಾರಿಣಿಯನಜನೃಪನು
ಪಾಪದಲಿ ಗಳಿಸಿದನೆ ಭೋಗದ
ತಾಪದಲಿ ಬಯಸಿದನೆ ಧರ್ಮದ
ಕಾಪಿನಲಿ ನಿಜಜನಕನಾಜ್ಞೆಯೊಳೊಲಿದು ಕೈಕೊಂಡ ೨

ಗುರುವಸಿಷ್ಠ ಪ್ರಮುಖಮುನಿಗಳು
ವಿರಚಿಸಿದ ಪಟ್ಟಾಭಿಷೇಕದ
ಪರಮತೀರ್ಥಜಲಂಗಳೊಳಗಜನೊಡನೆ ತನಗಾದ
ಪರಮಮಂಗಳಮಜ್ಜನದಿ ಭೂ
ತರುಣಿ ತನ್ನ ಕೃತಾರ್ಥತೆಯನಿರ
ದೊರೆವ ತೆರದಲಿ ಸೊಗಸಿದಳು ವಿಶದೋಚ್ಛ್ವಸಿತದಿಂದ ೩

ನೆರೆಯಥರ್ವಾಭಿಜ್ಞರೆನಿಸುವ
ಗುರುಗಳೆಸಗಿದ ಸತ್ಕ್ರಿಯೆಯೊಳಜ
ನರಪನೆಸೆದನು ಪರರಿಗಸದಳವೆನಿಪ ಬಲುಹಾಂತು
ಮರುತನೊಡನೊಡೆವೆರೆದ ಕಿಚ್ಚಿನ
ತೆರನದಲ್ಲವೆ ಬ್ರಹ್ಮತೇಜ
ಸ್ಸ್ಫುರಣದೊಳಗಾ ಕ್ಷತ್ರತೇಜವದೊಂದುಗೂಡಿದೊಡೆ ೪

ಏನಿದಚ್ಚರಿ ಮತ್ತೆ ರಘುಭೂ
ಜಾನಿಗಾದುದೊ ಜವ್ವನದ ಸಂ
ಧಾನವೆನುತಲಿ ತನ್ನನೀಕ್ಷಿಸಿ ಮಂದಿ ವಿಸ್ಮಯವ
ಆನುವಂತಜನೊಪ್ಪಿ ಜನಕನ
ನೂನಸಂಪದವೆಲ್ಲವನು ಕೊಂ
ಡೇನುಳಿದನೇ ಕೊಂಡನಾತನ ಗುಣಗಣಂಗಳನು ೫

ಎರಡು ವಸ್ತುಗಳೊಪ್ಪಿದುವು ಶುಭ
ಕರವೆನಿಸಿದಿನ್ನೆರಡು ವಸ್ತುಗ
ಳೆರಕದಲಿ ರಘುನೃಪನ ಪೆಂಪಿನ ರಾಜ್ಯವಜನೃಪನ
ಎರಕದಲಿ ಸಿರಿವಡೆದುದಜನೃಪ
ವರನೊಡಲಿನಲಿ ನೆರೆದ ಜವ್ವನ
ಸಿರಿಯುಮೆಸೆದುದುಂ ಕೂಡಿದಿಂದ್ರಿಯಜಯದ ವೈಮೆಯಲಿ ೬

ನೊಂದಪಳು ಭರದಿಂದ ಸೋಂಕಿದೊ
ಡಿಂದು ಹೊಸಬಳು ಬೆದರುವಳು ತಾ
ನೆಂದು ನಯದಲಿ ಮೆಲ್ಲಮೆಲ್ಲನೆ ಪಕ್ಕವನು ಸಾರ್ದು
ಮಂದಹಸನದ ನಲ್ಮೆಗಳ ನಯ
ದಿಂದ ಸವಿವಾತುಗಳ ಲಲ್ಲೆಗ
ಳಿಂದ ಧರೆಯನು ವರಿಸಿದನು ವರಿಪಂತೆ ನವವಧುವ ೭

ನೋಂತೆನಾನೊರ್ವನೆ ನೃಪಾಲಕ
ನಂತರಂಗಕೆ ಸಲ್ವ ಪೆರ್ಮೆಯಂ
ಸಂತಸಕ್ಕೆನುತವನ ಮಂದಿಗಳೆಲ್ಲ ತಮತಮಗೆ

ಚಿಂತಿಪಂತೆಸಗಿದನು ಹೊಳೆಗಳೊ
ಳಂತರವನೀಕ್ಷಿಸದೆ ಜಳನಿಧಿ
ಸಂತಸದೊಳೆಲ್ಲವನು ತಾನೊಳಕೊಳ್ವ ಮಾಳ್ಕೆಯಲಿ ೮

ಬಿರಿಸಿನಲಿ ಮುರಿದಿಡದೆ ಮೆಲ್ಪಿನ
ಮರುಕದಲಿ ಮನ್ನಿಸದೆ ನಯಬಂ
ಧುರವಿದೆನಿಸುವ ಮಧ್ಯಮಕ್ರಮದಿಂದ ಮಾರುತನು
ತರುಗಳನು ತನಗೆರಗಿಸುವವೊಲು
ಮುರಿದು ಕೊಲ್ಲದೆ ಮರುಗಿ ಪೊರೆಯದೆ
ಚರಣಕೆರಗಿಸಿದನು ನೃಪಾಲಕನುದ್ಧತಾರಿಯನು ೯

ಅನುಗಿಡದ ಭಾವದಲಿ ನಿಜನಂ
ದನನು ಮಂತ್ರಿಪ್ರಮುಖಜನಗಳ
ಮನವಿಡಿದು ರಾಜ್ಯದಲಿ ನೆಲೆನಿಂದುದನು ನಡೆನೋಡಿ
ಮನವೊಲಿದು ರಘುನೃಪತಿ ನಶ್ವರ
ವೆನಿಪ ನಾಕದ ಸುಖಗಳಲಿ ತಾ
ಮನವನಿಕ್ಕದೆ ಪೇಸಿ ನಿಸ್ಪೃಹತೆಯನು ಕೈಕೊಂಡ ೧೦

ವರದಿಲೀಪನೃಪಾಲವಂಶದ
ಧರಣಿಪರು ಮುಪ್ಪಡಸಲೊಡನೈ
ಸಿರಿಯನೆಲ್ಲವ ಸುಗುಣೆಯೆನಿಸುವ ಸುತನೊಳಗೆ ನಿಲಿಸಿ
ಮರದ ನಾರಿನ ಚೀರವನು ತಳೆ
ದುರುತಪೋಧನರಪ್ಪ ಮುನಿವ
ರ್ಯರ ಪದವಿಯಲಿ ನಡೆದರೆಡೆಹದ ಸಂಪ್ರದಾಯದಲಿ ೧೧

ನಿಜಕುಲೋದ್ಭವರಾಚರಣೆಯನಂ
ಭಜಿಸಲೆಳಸುತ ರಘುನೃಪಾಲನು
ತ್ಯಜಿಸಿ ರಾಜ್ಯವ ಬನಕೆ ತೆರಳುವ ತರಿಸಲವ ತಳೆಯೆ
ಅಜನೃಪತಿ ಮಣಿಮುಕುಟಮಂಜುಳ
ನಿಜಶಿರವನವನಡಿಯೊಳರ್ಪಿಸಿ
ತ್ಯಜಿಸಿ ತನ್ನನು ನಡೆಯಬೇಡೆಂದೆನುತ ಬೇಡಿದನು ೧೨

ಅಗಲವೇಡೆನುತಶ್ರುಮುಖದಲಿ
ಬಗೆಬಗೆಯೊಳಡಿಗೆರಗಿ ಬೇಡಿದ
ಮಗನ ಮಾತನು ಮನ್ನಿಸಿದೊಡಂ ರಘುನೃಪಾಲಕನು
ಅಗಲೆನೂಕಿದ ಹರೆಯ ತೊವಲನು
ಮಗುಳೆ ಪಾವಿನ ತೆರದಿ ತಳೆದನೆ
ಮೊಗವ ಮುರಿದೆಳಸಿದನೆ ಮುನ್ನವೆ ತೊರೆದ ಸಂಪದವ ೧೩

ಪಿಡಿದು ನಾಲ್ಕನೆಯಾಶ್ರಮದ ನ
ಲ್ನಡೆವಳಿಯನವನೂರ ಹೊರವೊಳ
ಲೆಡೆಯೊಳಗೆ ನೆಲೆನಿಂದು ತನ್ನಖಿಳೇಂದ್ರಿಯದ ಬಿರುಬ
ಉಡುಗಿ ಸೊಸೆಯಂತಾತ್ಮಜಾತನ
ಮಡದಿಯೆನಿಸಿದ ಸಿರಿಯಹರ್ನಿಶ
ಮೊಡರಿಸುವ ಶುಶ್ರೂಷೆಯಲಿ ನೂಕಿದನು ದಿನಗಳನು ೧೪

ಪ್ರಶಮದಲಿ ನೆರೆನಿಂದ ರಘುವೊಂ
ದೆಸೆಯೊಳುದಯವನಾಂತು ರಂಜಿಪ
ಪೊಸಪೊಡವಿಯರಸೊಂದು ದೆಸೆಯೊಳು ಮೆರೆಯೆ ತತ್ಕುಲವು
ಎಸೆದುದೊಂದೆಸೆಯಲ್ಲಿ ಮುಳುಗುವ
ಶಶಧರನುಮಿನ್ನೊಂದು ದೆಸೆಯಲಿ
ಮಸಗಿ ಮೂಡುವ ರವಿಯುಮೊಪ್ಪುವ ಗಗನದಂದದಲಿ ೧೫

ಯತಿಪಚರ್ಯೆಯೊಳಿರ್ದ ರಘುವನು
ಕ್ಷಿತಿಪಚರ್ಯೆಯೊಳೊಪ್ಪಿದಜಭೂ
ಪತಿಯುಮವನು ನೆರೆ ನೋಡಿ ಬಗೆದುದು ಮಂದಿ ಪರತರದ
ಗತಿಯನೊದವಿಪ ಧರ್ಮಮಂ ಮೇ
ಣತುಲಸಂಪದವೀವ ಧರ್ಮಮು
ಮತಿಶಯದಿ ಮೆಯ್ವಡೆದು ನೆಲದಲಿ ನೆಲಸಿದಂದದಲಿ ೧೬

ದೊರೆಯದಿಹ ಸಂಪದವ ಸಾಧಿಸು
ವೆರಕದಿಂದಜಭೂಮಿಪತಿ ನಯ
ಪರಿಣತರು ತಾವೆನಿಪ ಮಂತ್ರಿಗಳೊಡನೆ ಕೂಡಿದನು

ಮರಳಿ ಬರಲೆಡೆಗುಡದ ಮೈಮೆಯ
ಪರಮಪದವನು ಪಡೆಯೆ ರಘುವುಂ
ಪುರುಳರಿದ ಯೋಗಿಗಳ ಬಳಗದೊಳೊಂದುಗೂಡಿದನು ೧೭

ತರುಣನಜನಾ ಪ್ರಜೆಗಳೊಳಗಂ
ಕುರಿಪ ಧರ್ಮಾಧರ್ಮದಿರವನು
ಪರಿಕಿಸುವ ಬಯಕೆಯಲಿ ಧರ್ಮಾಸನವನೇರಿದನು
ನರೆತ ಮಂಡೆಯ ರಘುವುಮಲುಗದ
ತೆರದಿ ಚಿತ್ತವ ನಿಲಿಸೆ ಕುಶವಿ
ಷ್ಟರವನೇರಿದನೈದೆ ವಿಜನವೆನಿಪ್ಪ ತಾಣದಲಿ ೧೮

ಎಸೆವ ಪ್ರಭುಶಕ್ತಿಯೊಳದೊರ್ವನು
ವಶಗೊಳಿಸಿದನು ಕೆಲಬಲದೊಳಿಹ
ವಸುಮತೀಶರನೆಲ್ಲರನು ಕೈಕೊಂಡ ಗೆಲ್ಲದಲಿ
ಕುಸಿಯದೆಸಪ ಸಮಾಧಿಬಲದಲಿ
ವಶಗೊಳಿಸಿದನು ತನ್ನ ಮೈಯಲಿ
ಪಸರಿಸಿದ ಪಂಚಾನಿಲವನಿನ್ನೊರ್ವನಳವಿನಲಿ ೧೯

ಅರಿಗಳೆಸಗುವ ಕರ್ಮಫಲಗಳ
ನುರುಪಿ ಬೆಂಬೂದಿಯಲಿ ತೋಣೆಯೆನೆ
ಹುರುಳುಗೆಡಿಸಿದನಿತ್ತಲೊತ್ತಂಬದಲಿ ನವನೃಪನು
ವಿರಚಿಸಿದ ಕರ್ಮಗಳನರಿವಿನ
ತರಿಳಕೆಂಡದೊಳುರುಪಿ ಬೂದಿಗೆ
ದೊರೆಯೆನಿಸಿ ನೆರೆ ಹುರುಳುಗೆಡಿಸಿದನತ್ತ ಯತಿವರನು ೨೦

ಆರು ಗುಣಗಳ ಫಲವನರಿದಾ
ಧಾರಿಣೀಶನು ತಕ್ಕೆಡೆಯನರಿ
ದಾರುವನು ಯೋಜಿಸಿದನಿಷ್ಟಾರ್ಥವನು ಪಡೆವಂತೆ
ಜಾರದವೊಲಾ ಪ್ರಕೃತಿಯೊಳಗಿಹ
ಮೂರು ಗುಣಗಳ ಮೆಟ್ಟಿದನು ರಘು
ವೇರಿಸಿದ ಸಮಲೋಷ್ಟ ಕಾಂಚನಭಾವದಳವಿನಲಿ ೨೧

ಪಿಡಿದ ಕಾರ್ಯದ ಪರಮಫಲವನು
ಪಡೆವ ವರಮೆಡೆಯುಡುಗದೊಂದೇ
ದೃಢಮನದಿ ನಡೆಯಿಸಿದನೋರಂದದೊಳಗಜನೃಪನು
ಪಿಡಿದ ಯೋಗದ ಕಡೆಯೊಳೀಶ್ವರ
ನಡಿಗಳನು ಕಾಂಬನ್ನೆವರವೆಡೆ
ಯುಡುಗದೋರಂದದಲಿ ನಡಸಿದನಾ ರಘುಪ್ರಭವ ೨೨

ಇಂತು ರಿಪುಗಳಿಗಿಂದ್ರಿಯಂಗಳಿ
ಗೆಂತುಮಣ್ಮುವೊಡೆಡೆಗುಡದೆಯೋ
ರಂತು ತಾಮೆಚ್ಚೆತ್ತು ತಮ್ಮನು ಕಾಪಿಡುತಲವರು
ಅಂತವರಿಯದ ಭಾಗ್ಯಲಕ್ಷ್ಮಿಯು
ನಂತವರಿಯದ ಮೋಕ್ಷಲಕ್ಷ್ಮಿಯು
ನಾಂತು ಪಡೆದರು ಸಿದ್ಧಿಗಳನೆಸಕಕ್ಕೆ ತಕ್ಕಂತೆ ೨೩

ಹಲವು ಬರಿಸವನಂತು ನಿಜಸುತ
ನೆಳಸಿದಂದದಿ ಕಳೆದು ಭಾಸ್ಕರ
ಕುಲಶಿಖಾಮಣಿ ತಳೆದು ಸಮದೃಷ್ಟಿಯನು ಸರ್ವದಲಿ
ಬಲಿದ ಯೋಗಸಮಾಧಿಯೊಳಗವಿ
ಚಲಿತಮಾನಸನಾಗುತೈಕ್ಯವ
ತಳೆದನವ್ಯಯನಪ್ಪ ಮಾಯಾತೀತನಲಿ ನಲಿದು ೨೪

ತನುವ ತೊಡಕನು ಕಳೆದು ಬಿಸುಟನು
ಜನಕನೆಂಬಾ ನುಡಿಯನಾಲಿಸಿ
ಜನಿಸಿದತಿಶೋಕದಲಿ ಕಂಬನಿದುಂಬಿಯಜನೃಪನು
ವಿನುತಯತಿಗಳ ಬರಿಸಿ ತಾತಂ
ಗನುಗೊಳಿಸಿದನು ವಿಧಿವಿಧಾನದೊ
ಳನಲನಲಿ ದೇಹವನು ದಾಹಿಸದಂತ್ಯಕರ್ಮವನು ೨೫

ತನುವನಾ ಪರಿ ತೊರೆದ ಪೂಜ್ಯರು
ತನಯರೆಸಗುವ ಪಿಂಡದಾನವ
ಮನದಿ ಕಾಂಕ್ಷಿಸರೆಂಬುದನು ತಿಳಿದಿರ್ದುಮಜನೃಪನು

ಮನದಿ ತೀವಿದ ಜನಕಭಕ್ತಿಯೊ
ಳನುಗೊಳಿಸಿದನು ಪೈತೃಕರ್ಮಗ
ಳನಿತುವನು ಪಿತೃಕಾರ್ಯಕೋವಿದರೊರೆದ ಮಾಳ್ಕೆಯಲಿ ೨೬

ಇಂತಹರ ಮರಣದಲಿ ಮನದಲಿ
ಚಿಂತಿಸುವುದಘಹೇತುವೆನುತಾ
ಸಂತರಾಡಿದ ವಾಕ್ಯದಲಿ ಪಿತೃಶೋಕವನು ತೊರೆದು
ಅಂತು ಕರದಲಿ ಕಾರ್ಮುಕವನೋ
ರಂತೆ ಮಾರಾಣಶಿಯನಡಿಗಿಡಂ
ವಂತೆ ಮಾಣಿಸಿ ನೆಲದಿ ತನ್ನಾಣತಿಯ ನಿಲಿಸಿದನು ೨೭

ಧರಣಿಕಾಂತೆಯುಮಿಂದುಮತಿಯುಂ
ಪರಮಪೌರುಷದಿಂದ ಮೆರೆವಜ
ನರಪನೊಡವೆರೆದೊಲ್ದು ಮೊದಲನೆಯಾಕೆ ರತುನಗಳ
ತುರುಗಲನು ಸೂಲಿಸಿದಳೆರಡನೆ
ಯರಸಿ ಬಳಿಕಲಿ ಬೆಸಲೆಯಾದಳು
ಪರಮಭುಜಸಾಹಸದ ರಾಜಕುಮಾರರತ್ನವನು ೨೮

ದಶಶತಾಂಶುವನಾಂತ ರವಿಯುಂ
ತೆಸೆದು ದಶದಿಶೆಯಲ್ಲಿ ತನ್ನಯ
ಯಶವ ಹರಹಿ ಸಮಸ್ತಜಗತೀಖ್ಯಾತನೆಂದೆನಿಪ
ದಶಶಿರಾರಿಗೆ ತಂದೆಯೆಂದೀ
ವಸುಮತೀತಳದಲ್ಲಿ ಶೋಭಿಸಿ
ದಶರಥೋರ್ವಿಪನೆಂಬ ಹೆಸರಲಿ ಮೆರೆದನಾ ಸುತನು ೨೯

ಶ್ರುತದಿನಾ ಋಷಿಗಣದ ಋಣವನು
ವಿತತಯಾಗದಿ ಸುರರ ಋಣವನು
ಸುತನ ಪೆತ್ತು ಪಿತರರ ಋಣವನು ತೀರ್ಚಿದತಿಶಯದಿ
ಕ್ಷಿತಿಪನೆಸೆದನು ತನ್ನ ಬಳಸುತ
ಗತಿನಿರೋಧವನೆಸಪ ಪರಿಧಿಯ
ವೃತಿಯ ಲಂಘಿಸಿ ರಂಜಿಸುವ ದಿವಸೇಶ್ವರನ ತೆರದಿ ೩೦

ಕ್ಷಿತಿಪತಿಯ ಧನವೊಂದೆ ಪರರುಪ
ಕೃತಿಗೆ ಸಂದುದೆ ಗುಣಗಣಂಗಳು
ಮತಿಶಯದಿ ಸಂಪಾದಿಸಿದುವು ಪರೋಪಕಾರಗಳ
ಅತುಲಭುಜಬಲವಾರ್ತೆಭಯಸಂ
ಹೃತಿಗೆ ಸಂದುದು ಬಹುಕಲಾಭಿ
ಜ್ಞತೆ ವಿರಾಜಿಸಿತಖಿಲಕೋವಿದಜನದ ಸೇವೆಯಲಿ ೩೧

ನೆಲೆಗೊಳಿಸಿ ಸೌಖ್ಯವನು ಧರೆಯಲಿ
ನೆಲೆಗೊಳಿಸಿ ರಾಜ್ಯವನು ಸುತನಲಿ
ಕುಲವಧುವಿನೊಡನಾ ನೃಪಾಲಕನೊಮ್ಮೆ ಮಂದಿರದ
ಸುಲಲಿತಾರಾಮದಲಿ ನಲಿದನು
ಲಲನೆಯೊಡನೊಲವಿಂದಲಾಖಂ
ಡಲನು ನಂದನವನದ ಮಧ್ಯದಿ ಬಿನದಿಪಂದದಲಿ ೩೨

ಆಗಳಾ ನಾರದನು ದಕ್ಷಿಣ
ಸಾಗರದ ತೀರದಲಿ ಪುಣ್ಯ
ಕ್ಕಾಗರವಿದೆನೆ ಮೆರೆವ ಗೋಕರ್ಣದಲಿ ನೆಲೆನಿಂದ
ನಾಗರಾಜವಿಭೂಷನನು ನವ
ರಾಗದಿಂದುಪವೀಣಿಸಲ್ಕೆ ನ
ಭೋಗತಿಯೊಳೈತರುತಲಿರ್ದನು ಬಡಗದೆಸೆಯಿಂದ ೩೩

ಆ ರಿಸಿಯ ಕರತಳದ ಬೀಣೆಯೊ
ಳೇರಿಸಿದ ಸುರಕುಜದ ಕುಸುಮದ
ಹಾರದಿನಿಗಂಪಿಂಗೆ ಸೋತನೊ ಮನದೊಳೆಂಬಂತೆ
ಮಾರುತನು ದ್ರುತಗತಿಯೊಳಗೆ ಸಂ
ಚಾರಿಸುತ ಸಾರ್ತಂದು ಮುನಿಗಪ
ಚಾರವೆನ್ನದೆ ಮಾಲಿಕೆಯನೋಸರಿಸಿ ಕೆಡಹಿದನು ೩೪

ಮಾಲೆಯೊಡನಿಳೆಗಿಳಿವ ತುಂಬಿಯು
ಮಾಲೆಯೆಸೆದುದು ದುರುಳತನದಲಿ
ಗಾಳಿ ತನಗವಮಾನವೆಸಗಲು ವಲ್ಲಕೀವನಿತೆ

ಕೀಲಿಸಿದ ಶೋಕದಲಿ ಕಜ್ಜಲ
ನೀಲವನಿಸಿರ್ದಶ್ರುವಾರಿಯು
ಸಾಲನಾಲಿಗಳಿಂದ ಸೂಸುವಳೆಂಬ ಪಾಂಗಿನಲಿ ೩೫

ಅಂತ ಪರಿಮಳಭರದಿ ಮಿಕ್ಕ ಬ
ಸಂತದಲಿ ಸೌಸವವನಂಗುಳ್ವ ಲ
ತಾಂತತತಿಯೆನಿಸಿ ಪಳಿಯುತಿಳೆಯೆಡೆಗಿಳಿದ ಸುಮಮಾಲೆ
ಕಾಂತನೊಡನುಪವನದಿ ಬಿನದದ
ಸಂತಸವ ಸೇವಿಸುವ ತಾರಾ
ಕಾಂತವದನೆಯು ಸೆರಗಿನಲಿ ಸೆರೆವಡೆದು ನೆಲಸಿದುದು ೩೬

ಅರೆನಿಮಿಸವಾ ತೆರದಿ ಸೆರಗಿನ
ನಿರಿಗಳಲಿ ನೆಲೆವಡೆದ ಹೂವಿನ
ಸರವನಾಕೆ ವಿಲೋಕಿಸುತ ಪರವಶತೆಯಲಿ ಬೆರೆದು
ಮರಲುಗಂಗಳ ಮುಚ್ಚಿ ಸುರವರ
ಪುರಿಗೆ ಸರಿದಳು ರಾಹುವದನೋ
ದರದೊಳಗೆ ಶಶಿಯೆಡಗೆ ಕೌಮುದಿ ಕಣ್ಮರೆಗಿವ ತೆರದಿ ೩೭

ಕರಣಗಳ ಕಾಲಾಟವುಡುಗಿದೊ
ಡೊರಗಿದಾಕೆಯು ಮೆಲ್ಲೊಡಲು ನೆಲ
ಕುರುಳುತಜನನು ತನ್ನೊಡನೆ ಕೆಡಹಿದುದು ಭೂತಲಕೆ
ಉರಿವ ಪಂಜಿನ ಕುಣಿವ ಜಿಹ್ವಾಂ
ಕುರದಿ ಸುರಿತಹ ತೈಲಬಿಂದುಗ
ಳುರಿಯನವನೀತಳಕೆ ತಮ್ಮೊಡನೆರಗಿಸುವ ತೆರದಿ ೩೮

ಅಂತು ಧರಣಿಗುರುಳ್ದ ದಂಪತಿ
ಯಂತರಂಗದ ಪರಿಜನದ ಹಾ
ಮುಂತೆ ಗತಿಯೇನಳಿದರೇ ಹಾಯೆಂಬ ರೋದನಕೆ
ಅಂತು ಭೀತಿಯನಕಟ ನಿಕಟವ
ನಾಂತರದ ತಂಗೊಳದ ಹಕ್ಕಿಯು
ಹಂತಿ ಸಮದುಃಖವನು ತಳೆದಂತೊಡನೆ ಚೀರಿದುವು ೩೯

ಬೀಸಿದೆಳಗಾಳಿಯಲಿ ತುಂತುರ
ಸೂಸಿನಲಿ ಬಲಿದಿರ್ದ ಮೂರ್ಛೆಯು
ನೋಸರಿಸಿ ಕಣ್ದೆರೆದನಜನೃಪನಿಂದುಮತಿ ನೆಲದಿ
ಸೂಸಿ ಮೈಯನು ಮೃತಿವಡೆದಳಿ
ನ್ನೇಸು ನುಡಿದೇನಕ್ಕಟಾಯು
ಶ್ಶೇಷವಿರ್ದಂದಲ್ತೆ ಫಲಿಪುವು ಕೊಂಡ ಮದ್ದುಗಳು ೪೦

ಉಡಿದ ತಂತಿಯ ಬೀಣೆಯಂದದಿ
ಪೊಡವಿಯಲಿ ಕೆಡೆದಿರ್ದ ನಿಜಸತಿ
ಯೊಡಲನೊಯ್ಯನೆ ತನ್ನ ಕರಯುಗದಿಂದ ತೆಗೆದೆತ್ತಿ
ತೊಡೆಯ ಮಂಚದೊಳೊಯ್ಯನೊಯ್ಯನೆ
ಪಡಲಿರಿಸಿದನು ಪ್ರೇಮರಸದಿಂ
ದಿಡಿದ ಮೃದುಹೃದಯದ ಮಹೀಪತಿ ಮನದ ಮರುಕದಲಿ ೪೧

ಹರಣವಳಿದು ವಿವರ್ಣಭಾವದಿ
ಕುರುಹಳಿದ ಕಾಮಿನಿಯ ಕಾಯದ
ಹೊರೆಯನಾತ್ಮಾಂಕದಲಿ ಹೊತ್ತಾ ಭೂಮಿಪಾಲಕನು
ಇರುಳ ಕೊನೆಯಲಿ ಕಾಂತಿಪುಂಜವ
ತೊರೆದು ಮಸಮಸನಾದ ಹರಿಣದ
ಕುರುಹನಾಂತ ನಿಶೀಥಿನೀನಾಯಕನವೊಲು ಮೆರೆದ ೪೨

ಹಳಯಿಸಿದನೆಡೆವಿಡದೆ ಕಂಗಳಿ
ನಿಳಿತರುವ ಕಂಬನಿಯ ಗಡಣದ
ಬಳೆಯನೊತ್ತುವ ಕೊರಲ ಗದ್ಗದರವದ ಮರುಕದಲಿ
ಅಳಿದುಹೋದುದು ನಿಜದ ಧೈರ್ಯದ
ಮೊಳಕೆ ಕಾಸಲು ಕಬ್ಬುನವೆ ಕೈ
ಕೊಳುವುದತಿಮಾರ್ದವವನೆಂದೊಡೆ ನರರ ಪಾಡೇನು ೪೩

ಅಂಗಸಂಗಮದನಿತರಲಿ ಹರ
ಣಂಗಳನು ಹಿಂಗಿಸುವ ಕಡುಹಿನ
ಭಂಗಿಯನು ಕೈಕೊಳುವುವೀ ಕುಸುಮಂಗಳೆಂದೆನಲು

ಜಂಗಮದ ಜೀವಿಗಳ ಹರಣವ
ನುಂಗುವುಗ್ರಾಂತಕನ ಕಠಿನಕ
ರಂಗಳಲಿ ಕೈದೆನಿಸದಾವುದು ವಿಶ್ವಧಾತ್ರಿಯಲಿ ೪೪

ಮೃದುಳವೆನಿಸುವ ವಸ್ತುಜಾತವ
ಮೃದುಳವೆನಿಸುವ ವಸ್ತುವಿಂದಲೆ
ಸದೆದು ಕೊಂದಪನಕ್ಕುಮಾ ಸಮವರ್ತಿಯೆಂಬವನು
ಉದುರಿ ಸುರಿತಹ ಮಂಜುವನಿಗಳ
ಹುದುವಿನಲಿ ನಲಿನಿಯನು ನಲುಗಿಸಿ
ಸದೆವುದೇ ಹಿಂದಣ ನಿದರ್ಶನವಿದಕೆ ಭಾವಿಸಲು ೪೫

ಕುಸುಮಮಾಲೆಯಿದಕಟ ಜೀವಿಗ
ಳಸುವ ಕೊಲುವೊಡೆ ನನ್ನ ಹೃದಯದಿ
ಬೆಸುಗೆವಡೆದೊಡಮೇಕೆ ನುಂಗದೊ ನನ್ನ ಹರಣವನು
ವಿಷಮುವೊಂದೆಡೆಯಮೃತದಂದದೊ
ಳೆಸಗುವುದು ಮೇಣಮೃತವೊಂದೆಡೆ
ವಿಷದವೋಲೆಸಗುವುದು ಲೋಕದೊಳೀಶ್ವರೇಚ್ಛೆಯಲಿ ೪೬

ಅಲ್ಲದೊಡೆ ಕಲ್ಲೆದೆಯ ಬಿದಿಯೀ
ಮೆಲ್ಲಲರ ಮಾಲೆಯನೆ ಜೀವವ
ಘಲ್ಲಿಸುವ ಬರಸಿಡಿಲ ಮಾಲೆಯ ಮಾಡಿ ವೃಕ್ಷವನು
ಕೊಲ್ಲದದನಪ್ಪಿರ್ದ ಕೋಮಲ
ವಲ್ಲಿಯನು ನಿಷ್ಕರುಣದಲಿ ನೆವ
ವಿಲ್ಲದೀ ತೆರದಲ್ಲಿ ಕೊಲ್ಲುವ ಮನವ ಮಾಡಿದುದೇ ೪೭

ನಲ್ಲಳೇ ನಾನಕಟ ನಿನ್ನೊಳು
ಸಲ್ಲದಪರಾಧಂಗಳನು ವಿಂತಿ
ಯಿಲ್ಲದಂತೆಸಗಿದೊಡಮವನೆಲ್ಲವನು ನೀಂ ಮರೆವ
ಮೆಲ್ಲೆದೆಯೊಳಿಂದೇತಕೊಮ್ಮೆಯೆ
ಕೊಲ್ಲಿತನವನು ತಳೆದು ನನ್ನೊಳು
ಸೊಲ್ಲನೊಂದನು ಸೊಲ್ಲಿಸದೆ ಬಿಗಿವಿಡಿದೆ ಮೌನವನು ೪೮

ನಗೆಯ ಬೆಳದಿಂಗಳ ವಿಲಾಸದ
ಮುಗುದೆ ನಿನ್ನಯ ಹೊಳ್ಪುನೇಹದ
ಬಗೆಯರಿತೆನು ಶಠನಹೆನು ನಾನಲ್ಲದೊಡೆ ನೀನು
ಮಂಗುಳಿ ಬಾರದ ಪಯಣಕೋಸುಗ
ಪಗಲುಮೀ ಸಮಯದೊಳಗಕಟಾ
ನಗದೆ ನನ್ನೊಳು ನುಡಿಯದೀ ಪರಿ ತೊರೆದು ಪೋಗುವೆಯಾ ೪೯

ಹರಣವೇ ನೀನರಸಿಯೊಡನಾ
ತೆರದಿ ನಡೆದವನೇತಕವಳನಂ
ತೊರೆದು ಬಂದೊಳಹೊಕ್ಕಿಯೀ ಹಾಳೊಡಲ ಕೊಂಪೆಯನು
ಅರಿಯದೀ ಪರಿ ಗೈದ ಪಾಪದ
ಪರಿಷ್ಕೃತಿಗೆ ದುಃಖಾಗ್ನಿಯಲಿ ಬಿ
ದ್ದುರಿದು ಬೆದಬೆದ ಬೆಂದು ಬೂದಿವೊಲಾಗು ನೀನೀಗ ೫೦

ನೀಲಕುಂತಳೆ ನಿನ್ನ ನೊಸಲೊಳು
ಕೇಳಿಕಾಲದಿ ಮೂಡಿ ಮುತ್ತಿನ
ಮಾಲೆಯಂದದಿ ಸಾಲುಗಟ್ಟಿದ ಬೆಮರ್ವನಿಯ ಬಳಗ
ಡಾಳಿಸುತ್ತಿಹುದಿನ್ನು ಮಕಟಸು
ರಾಲಯಕೆ ನೀಂ ತಳರ್ದೆ ಹಾ ಹಾ
ಹೇಳಲೇನೀ ಹಾಳುದೇಹಿಯಸಾರತೆಯ ಪರಿಯ ೫೧

ಇನಿಯಳೇ ನಿನ್ನೆಡೆಯೊಳಕಟಾ
ನೆನಹಿನೊಳಮಪರಾಧಲವವನು
ನೆನೆದವನು ನಾನಲ್ಲದೇತಕೆ ತೊರೆದೆ ನೀನಿಂತು
ಮನವು ನಿನ್ನಲಿ ಸಿಲುಕಿದುದು ತಾ
ನೆನೆಯದಿನ್ನೇನುಮನು ಹಲವೇ
ನೆನಗೆ ಧರಣೀಶ್ವರತೆಯೆಂಬುದು ಮಾತಿನುಪಚಾರ ೫೨

ಅಲರ ಸರವನು ತಳೆದು ಸುರ್ಕುತೆ
ಸುಳಿಗೊಳುತೆ ತುಂಬಿಗಳ ಬಳಗದ
ಹೊಳಹನಣಕಿಸುತೆಸೆವ ನಿನ್ನೀ ಕುರುಳ ಮಾಲೆಗಳ

ಅಲುಗಿಸುತಲಡಿಗಡಿಗೆ ಮೆಲ್ಲನೆ
ಸುಳಿವ ಮಾರುತನೆನ್ನ ಮನದೊಳು
ಮೊಳಕೆಯಿಡುವುದು ಮರಳಿ ಬಹೆ ನೀನೆಂಬ ಬಯಕೆಯನು ೫೩

ಅರಸಿ ನೀನೊಲವಿಂದ ಕಣ್ಗಳೆ
ತೆರೆದು ನನ್ನೆರ್ದೆಯೊಳಗೆ ನೆಲಸಿದ
ಮರುಕವನು ಮುರಿದಿಕ್ಕು ಕರುಣಿಸು ಕರವ ಜೋಡಿಪೆನು
ಇರುಳೊಳಾ ಹಿಮಗಿರಿಯ ಗುರುಗ
ಹ್ವರದೊಳಗೆ ತುಂಬಿರುವ ತಮವನು
ಪರಿಹರಿಸುವಂತಾ ತೃಣಜ್ಯೋತಿಗಳ ತಣ್ಬೆಳಗು ೫೪

ಅಲುಗುತಿಹ ಸುಳಿಗುರುಳ ಸೊಂಪಿನ
ಚೆಲುವ ಮೊಗವಿದು ಮಾತನಾಡದೆ
ಬಲಿದ ಮೌನದೊಳಿರಲು ಬೆದಬೆದಬೇವುದೀ ಮನವು
ಉಲುಹಡಗಿ ಬಸಿತೊಳಗೆ ನೆಲೆಗೊಂ
ಡಳಿಯನಾಂತಿರುಳೊಳಗೆ ಕಣ್ಮುಗಿ
ದಳವಳಿದ ಜಲರುಹವನೊಂದನೆ ನೋಡಿದಂದದಲಿ ೫೫

ಇರುಳು ಮರಳುತೆ ಬಂದು ಶಶಿಯನು
ಬೆರಸುವುದು ಸಲೆ ಜಕ್ಕವಕ್ಕಿಯು
ಮರಸುತಲೆ ನಡೆತಂದು ನಿಜಕಾಂತನನು ಕೂಡುವುದು
ಮರಳಿ ಬೆರಸುವ ಕತದಿನವು ಘನ
ವಿರಹವನು ಸೈರಿಸುವುವಾನೀ
ಮುರಿವನರಿಯದ ವಿರಹದುರಿಯಲಿ ಬೇವೆನೆಂತಕಟಾ ೫೬

ತಳಿರುಗಳ ಮೆಲ್ಹಾಸುಗಳ ಮೃದು
ತಳವ ನೆಮ್ಮಿದೊಡಕಟ ಬಳ್ಬಳ
ಬಳಲಿ ಬಾಡುವ ನಿನ್ನ ಮೃದುಳಶರೀರವಲ್ಲಿಯಿದು
ಮಲಗಿದಪುದೆಂತಕ್ಕಟಕ್ಕಟ
ಕುಲಿಶಕರ್ಕಶಶುಷ್ಕಕಾಷ್ಠಾ
ವಳಿಯ ಭೀಕರಚಿತೆಯ ನಿಷ್ಠುರಪೃಷ್ಠಭಾಗದಲಿ ೫೭

ಮಡದಿ ನಿನ್ನಯ ಮನದ ಸಖಿಯೆಂ
ಬೆಡೆಗೆ ಸಂದೀ ಮಂಜುಮೋಖಲೆ
ಪಡೆಯಲರಿಯದೆ ನಿನ್ನ ಬೆಡಗಿನ ನಡೆಯ ಕೂಟವನು
ನುಡಿಯಲೊಲ್ಲದೆ ಮೌನಮುದ್ರೆಯ
ಹಿಡಿದು ಸಮದುಃಖದಲಿ ಕೊರಗುತ
ಸಡಗರಿಸಿ ನಿನ್ನೊಡನೆ ಹರಣವ ತೊರೆದವೋಲಿಹುದು ೫೮

ಅಲಸಗತಿಯನು ರಾಜಹಂಸೀ
ಕುಲದೊಳಗೆ ನೆಲೆಗೊಳಿಸಿ ನಿನ್ನಯ
ಕಲವಚನವನು ಕೋಕಿಲೆಯ ಕೊರಲೊಳಗೆ ಸೆರೆಗೊಳಿಸಿ
ಚಲವಿಲೋಕನವನು ಕುರಂಗೀ
ಲಲನೆಯಂಬಕದಲಿ ನಿಗುಂಬಿಸಿ
ಯೆಲರೊಳಲಿವೆಳಲತೆಯೊಳಗೆ ಮಿತಿಗೊಳಿಸಿ ವಿಭ್ರಮವ ೫೯

ಇಲ್ಲಿ ನಿಲಿಸಿದೆಯೀ ಗುಣಂಗಳ
ನೆಲ್ಲವನು ನೀನಕಟ ನಿರ್ಜರ
ವಲ್ಲಭನ ಪುರಿಗೈದುವಂದೀ ನಿನ್ನ ವಲ್ಲಭನು
ತಲ್ಲಣಿಸುವನು ನಿನ್ನ ವಿರಹದ
ಘಲ್ಲಣೆಯೊಳೆಂದೆನುತಲಕಟಿವು
ಕೊಲ್ಲುವುವು ಸಂತೈಸಬಲ್ಲುವೆ ಮರುಗುವೀ ಮನವ ೬೦

ಲೋಲಕುಂತಳೆ ಹಿಂದೆ ನೀನೆ ರ
ಸಾಲತರುವಲ್ಲಭನಿಗೀ ಫಲಿ
ನೀಲತೆಯೆ ದೊರೆಯಹುದು ನಾನೀ ತರುಲತಾಯುಗವ
ಲೀಲೆಯಿಂದ ವಿವಾಹವಿಧಿಯಲಿ
ಮೇಳವಿಸಿದಪೆನೆಂದೆನುತ ಪಲ
ಸೂಳು ನುಡಿದದನೆಸಗದೀ ಪರಿ ಪೋಗುವುದು ತರವೆ ೬೧

ನಿನ್ನ ಪದಪಲ್ಲವದ ಸೋಂಕಿನ
ಮನ್ನಣೆಯ ದೋಹದವನಾಂತೀ
ಚೆನ್ನಸುಂಗೆ ಬೆಸಲಾಗೆ ಕೆಂಪಿನ ಕುಸುಮಕೋಟಿಯನು

ಚೆನ್ನೆ ಸಾನವೃಗಳನು ತಿರಿದೀ
ನಿನ್ನ ತುರುಬಿನೊಳೊಲಿದು ತುರುಬಿದ
ಮುನ್ನವಕಟ ನಿವಾಪಮಾಲೆಯನೆಸಗುವಂತಾಯ್ತೇ ೬೨

ಆರಸಿ ಕಲನೂಪುರದ ರವದಲಿ
ಮೆರೆವ ನಿನ್ನಯ ಪದಪಯೋಜದ
ಪರರಿಗಸುಲಭವೆನಿಪ ಸೋಂಕಿನ ಸವಿಯ ಸೇವಿಸಿದ
ಸಿರಿಯಸುಗೆಯಿಂದು ಮರಲ ಕಂಬನಿ
ಗರೆಯುತಿಂದು ಸುಗಾತ್ರಿ ನಿನ್ನನು
ಸ್ಮರಿಸಿ ಮರುಗುವ ತೆರದಿ ಮುಂಗಡೆ ಕಣ್ಗೆ ತೋರುವುದು ೬೩

ತರುಣಕಿನ್ನರಕಂಠಿ ನಿನ್ನಯ
ಸುರಭಿನಿಶ್ವಸಿತಾನಿಲಕೆ ಸರಿ
ದೊರೆಯೆನಿಸುವೀ ವಕುಳಮುಕುಳಂಗಳಲಿ ಮೇಖಲೆಯ
ವಿರಚಿಸುತ ನನ್ನೊಡನೆ ನೀನಿಂ
ತರೆಗೆಲಸದಲಿ ಮುರಿದು ನಿದ್ರಾ
ಭರದೊಳೀ ಪರಿ ಮೆಯ್ಮರೆದು ಮಲಗುವುದಂ ಗುಣದೊಳಗೇ ೬೪

ಕೆಳದಿಗಳು ಸಮದುಃಖಸುಖಿಶೃಂ
ಖಲಿತರೀ ಬಾಲಕನು ಪಾಡಿವ
ದೆಳಪೆರೆಯವೊಲು ದಿನದಿನಕೆ ಕಳೆವಡೆದು ತೊಳಗುವನು
ಹಲವ ಸುಡಿದೇನೇಕರಸಸಂ
ವಳಿತಮಾನಸನಾನು ಸೌಖ್ಯಾ
ವಳಿಯನೀ ಪರಿ ಪಡೆದುಮಿಂತೆಸಗುವೊಡೆ ಸೊಗಸಿದುದೇ ೬೫

ಧೃತಿಯಿದಸ್ತಮಿಸಿದುದು ಮಿಕ್ಕಿನ
ರತಿಯ ಬೆಸುಗೆಯದಳಿದು ಹೋದುದು
ಶ್ರುತಿಹಿತದ ಸಂಗೀತದುಲುಹಡಗಿದುದು ಲೋಕದಲಿ
ಋತುಗಳುತ್ಸವಶೂನ್ಯವಾದುವು
ಗತಿಸಿತಾಭರಣಾವಳಿಯ ಸೊಗ
ಸತಿಶಯದ ಶಯನೀಯಮೇ ಪರಿಶೂನ್ಯವಾಯ್ತೀಗ ೬೬

ಮನೆಗೆ ಗೃಹಿಣಿ ಸುಮಂತ್ರಿ ಮಾನಸ
ಕನುವೆನಿಪ ಸಖಿ ಲಲಿತಕಲೆಗಳ
ನನಿತುವನು ಕಲ್ತಿಂದು ಶಿಷ್ಯಪ್ರವರೆಯೆನೆ ಸಂದ
ಇನಿಯಳೇ ಹಾ ನಿನ್ನನಾ ಕ
ಲ್ಮನದ ಬಿದಿ ಕೊಂಡುಯ್ವ ಪದದಲಿ
ನನತು ಭಾಗ್ಯದೊಳಾವುದನು ಕೊಂಡುಯ್ದನಿಲ್ಲಕಟಾ ೬೭

ಮದಿರಲೋಚನೆ ಬಾಯೊಳಾನೂ
ಡಿದ ಸರಸವಹ ಮಧುವ ಕುಡಿದತಿ
ಮುದದೊಳರೆಗಳಿಗೆಯಲಿ ಝಡಿತಿಯೊಳೀ ಪರಿಯೊಳೆನ್ನಾ
ಕದಪಿನೆಡೆಯಲಿ ಬೆಚ್ಚಬೆಚ್ಚನೆ
ಕುದಿದು ಸುರಿತರುವಶ್ರುವಾರಿಯ
ನದಿಯ ಬೆರೆದ ನಿವಾಪಜಲವನು ಕುಡಿಯಲೆಳಸುವರೇ ೬೮

ಎನಿತು ಸಂಪದವಿದ್ದೊಡೇನೀ
ಜನಕೆ ಸೌಖ್ಯದ ಮಾತು ತಾನಿಂ
ದಿನ ದಿನಕೆ ಕೊನೆಗಂಡುದಿನ್ನೆಂತಾದೊಡೇನೆನಗೆ
ಇನಿಯಳೇ ನಿನ್ನಲ್ಲಿ ಸಿಲುಕಿದ
ಮನವಿದೆರಗದು ಪೆರಪೆರವರೊಳು
ನನಗೆ ರುಚಿಸುವ ಸುಖಗಳೆಲ್ಲವು ನಿನ್ನೊಳಡಗಿದುವು ೬೯

ಇಂತು ಗೋಳಿಡುತಜನೃಪತಿ ನಿಜ
ಕಾಂತೆಯನು ಹಂಬಲಿಸಿ ಹಲುಬುತ
ಲಂತರಂಗವ ಕೊಯ್ವ ಮರುಕದ ನುಡಿಯ ನುಡಿಯುತಲಿ
ಪಿಂತೆಮುಂತೆಡಬಲದ ಮರಗಳ
ಹಂತಿ ಹೂವಿನ ರಸದ ನೆವದಲಿ
ಸಂತತಾಶ್ರುವಿಮೋಚನವ ಮಾಡುವವೊಲೆಸಗಿದನಂ ೭೦

ಬಳಿಕ ಕುಲಜನವೊಯ್ಯನೊಯ್ಯನೆ
ಬಳಿಸಲುತ ನೃಪನಂಕಪೀಠದ
ತಳದೊಳೊರಗಿದ ಪಟ್ಟಮಹಿಷಿಯ ಮೃತಕಳೇಬರವ

ತಳೆದು ಚಂದನದಗರುಕಾಷ್ಠಾ
ವಳಿಯ ಸವುದೆಯ ಚಿತೆಯ ಪೃಷ್ಠದಿ
ಮಲಗಿಸಿದರಕಟಂತ್ಯಮಂಡನವೆನಿಸಲಾ ಮಾಲೆ ೭೧

ಅರಸಿಯೊಡನಜನೃಪತಿ ಶೋಕದೊ
ಳುರಿವ ಚಿತೆಯಲಿ ತನ್ನ ದೇಹವ
ತೊರೆದನೆಂಬಪವಾದವುದಿಸುವುದೆಂಬ ಭೀತಿಯಲಿ
ಉರಿವ ಕಿಚ್ಚಿಗೆ ತನ್ನ ಮೈಯನು
ತೆರದೆ ನಿಂದನು ಬದುಕುವಾಸೆಯ
ಸೆರೆಗೆ ಸಿಲುಕಿ ಶರೀರವನು ಸಂರಕ್ಷಿಸಿದನಿಲ್ಲ ೭೨

ಕಳೆದು ಹೋಯ್ತು ದಶಾಹವಲ್ಲಿಂ
ಬಳಿಕಲಾ ಗುಣಶೇಷಳೆನಿಸಿದ
ಲಲನೆಗಂತ್ಯದೊಳೆಸಗಬೇಡಿದ ವಿಧಿಗಳೆಲ್ಲವನು
ಹೊಳಲ ಹೊರತೋಟದಲಿ ಭೂಮಿಪ
ತಿಲಕನೆಸಗಿದನಖಿಳಶಾಸ್ತ್ರಂ
ಗಳನು ತಿಳಿದರ ಹೇಳಿಕೆಯ ಕಟ್ಟಳೆಯ ಹಾದಿಯಲಿ ೭೩

ಇರುಳು ಕಳೆದ ಶಶಾಂಕನಂದದಿ
ಕೊರಗಿಯಜನೃಪನಾತ್ಮಕಾಂತೆಯ
ಮರಣದಲಿ ತಾನೊಬ್ಬನೇ ಪುಗುವಂದು ಪತ್ತನದ
ತರುಣಿಯರ ಕಂಗಳಲಿ ಗುಳಗುಳ
ನುರುಳ್ವ ಕಂಬನಿಗಳಲಿ ತನ್ನಯ
ಮರುಕವೇ ಹೊನಲಿಟ್ಟುದನು ನಿರುಕಿಸುತ ನಡೆತಂದ ೭೪

ನರಪತಿಯು ಶೋಕಾತಿರೇಕವ
ನರಿದನಾತ್ಮಧ್ಯಾನಬಲದಲಿ
ಗುರುವಸಿಷ್ಠಮುನೀಂದ್ರನತ್ತ ನಿಜಾಶ್ರಮದಿ ಬಳಿಕ
ಅರಸನನು ಸಂತೈಸೆ ತಾನೇ
ತೆರಳಿದೊಡೆ ತೊಡಗಿರ್ದ ಯಜ್ಞಕೆ
ಮುರಿವು ಬಹುದೆನುತಟ್ಟಿದನು ನಿಜಶಿಷ್ಯನೊಳು ಬೆಸನ ೭೫

ತೆರಳಿದನು ಶಿಷ್ಯೋತ್ತಮನು ಭೂ
ಪರನ ಕಂಡಿಂತೆಂದು ನುಡಿದನು
ನರಪ ಗುರುವರಿದಿಹನು ನಿನ್ನ ವಿಷಾದವೇಗವನು
ಭರದಿ ತಾನೈತಂದು ನಿನ್ನನು
ಮರಳಿ ಪ್ರಕೃತಿಯೊಳಿರಿಸಲಿರ್ದನು
ವಿರಚಿಪಧ್ವರಕೆಡರು ಬಹುದೆಂದೆನ್ನನಟ್ಟಿದನು ೭೬

ಅವರ ಬೆಸನನು ಕೆಲವು ನುಡಿಯೊಳೆ
ಹವಣಿಸಿದುದನು ತಂದಿಹೆನು ನಾ
ನವನಿವಿಶ್ರುತಸತ್ತ್ವಸಾರ ಸುವೃತ್ತ ನೀನದನು
ಸವಿನಯದಿ ಕಿವಿಗೊಳಿಸಿ ಮಾನಸ
ಭವನದಲಿ ಧರಿಸುವುದು ಸಮುಚಿತ
ಮವನಿಪತಿ ನಿನ್ನೊರೆಯ ಗುರುಭಕ್ತಾಗ್ರಗಣ್ಯರಿಗೆ ೭೭

ಆದಿದೇವನ ಮೂಮೆಯಿಕ್ಕಿದ
ಪಾದದಳತೆಯೊಳಡಗಿದೀ ಭುವ
ನಾದಿಲೋಕತ್ರಿತಯದಲಿ ಸಲೆ ಪೂರ್ವಕಾಲದಲಿ
ಆದುದನು ಮೇಣ್ವರ್ತಮಾನದೊ
ಳಾದಪುದನಾ ಮುಂದೆಯಹುದನು
ಬೋಧದೃಷ್ಟಿಯೊಳರಿದಿಹನು ತಡಹರಿಯದಾ ಮುನಿಪ ೭೮

ಹಿಂದೆ ದುಷ್ಕರವೆನಿಪ ತಪದಲಿ
ನಿಂದ ತೃಣಬಿಂದುವಿನ ತಪಕೆ ಪು
ರಂದರನು ಮಚ್ಚರಿಸಿ ನಿಯಮವನೊಡೆವ ಚಿತ್ತದಲಿ
ಸುಂದರೀಮಣಿಯೆನಿಪ ಹರಿಣಿಯ
ನಂದು ಕರೆದೆಲೆ ರಮಣಿ ನಡೆ ನೀ
ನಿಂದೆ ಮುನಿಪನ ತರಿಸಲವ ಮುರಿಯೆನುತ ಕಳುಹಿದನು ೭೯

ಲೀಲೆ ಮಿಗೆ ನಡೆತಂದು ತಪವನ
ಕಾಳಮಾಡಿದಳಕಟ ಸುರವರ
ನೋಲಗದ ಸಮ್ಮುಖದ ಸೂಳೆಯೆನುತ್ತ ಮುನಿವರನು

ತಾಳು ನರಜನ್ಮವನು ನೀನೆನು
ತಾ ಲಲನೆಯನು ಶಪಿಸಿದನು ಶಮ
ವೇಲೆಯೊಳು ವಿಲಯೋರ್ಮಿ ಜನಿಸಿದುದೆನಿಪ ಮುನಿಸಿಸಲಿ ೮೦

ದೇವಮುನಿ ನಾನಮರಪಾಲನ
ಸೇವಕಳು ನಾನೆಸಗಿದುದನು ಕೃ
ಪಾವಲೋಕನದಿಂದ ಮನ್ನಿಸಿ ಪೊರೆವುದೆಂದೆನುತ
ಆ ವನಿತೆ ಮರುಕದಲಿ ಪದರಾ
ಜೀವದಲಿ ತಲೆಯಿಡಲು ಮುನಿಗಗ
ದೇವನಾ ಸುರಸುಮದ ದರ್ಶನವವಧಿ ಹೋಗೆಂದ ೮೧

ಬಳಿಕ ಕ್ರಥಕೈಶಿಕನೃಪಾಲರ
ಕುಲದೊಳವತರಿಸಿದಳು ಭೂಮಿಪ
ತಿಲಕ ಪಟ್ಟದ ಮಹಿಷಿಯಾದಳು ನಿನಗವಳು ಬಳಿಕ
ಇಳಿದುದಮರರ ಕುಸುಮಮಾಲಿಕೆ
ಯುಳಿದುದಾಗಳೆ ಶಾಪವಾಗಳೆ
ಕಳೆದು ಬಿಸುಟಳು ಮರ್ತ್ಯದೇಹವನಡರಿದಳು ನಭವ ೮೨

ಸಾಕು ತೆಗೆಯಿನ್ನವಳ ಮರಣದೊ
ಳೇಕೆ ಮರುಗುವೆ ಸಾವು ತಪ್ಪದು
ಲೋಕದಲಿ ಹುಟ್ಟಿದರಿಗೆಂಬುದು ನೀನು ಕಾಣದುದೇ
ಶೋಕವನು ಕೆಲನೂಕು ನೆಟ್ಟನೆ
ಲೋಕವನು ನಲವಿಂದ ಹೊರೆ ಧರ
ಣೀಕಳತ್ರರು ರಾಜರೆಂದಾಡುವರು ಸೂರಿಗಳು ೮೩

ಅರಸುತನದೊಳಮರಸ ಗರ್ವಕೆ
ತೆರಹನೀಯದೆ ನಿನ್ನ ವಿದ್ಯಾ
ಪರಿಣತೆಯ ಸಾರವನು ತೋರಿದೆ ಧಾರಿಣೀತಳದಿ
ಉರುಹಿ ಸುಡುವ ವಿಯೋಗಶೋಕ
ಜ್ವರದ ವೇಗದಿ ಬೇವ ಸಮಯದಿ
ಹುರುಳುಗೆಡದೆದೆಗುಂದದಿಂದದ ಮತ್ತೆ ಬಿತ್ತರಿಸು ೮೪

ಅತ್ತು ಫಲವೇನವಳು ಭೂಮಿಗೆ
ಮತ್ತೆ ಬಹಳೇ ಮರುಳೆ ನೀನೊಡ
ಸತ್ತೊಡೇನವಳೊಲಿದು ನಿನ್ನನು ವರಿಸುವಳೆ ಮಗುಳೆ
ಅತ್ತು ಸತ್ತೊಡದೇನು ಫಲ ಮೃತಿ
ವೆತ್ತವರು ತಂತಮ್ಮ ಕರ್ಮಗ
ಳೊತ್ತರಿಸಿದಂದದಲಿ ಹೋಪರು ಭಿನ್ನಗತಿಗಳಲಿ ೮೫

ಮಾಣು ಮಾಣೀ ಶೋಕವನು ತಳೆ
ಜಾಣತನವನು ಕಳಿದ ಪಟ್ಟದ
ರಾಣಿಯನು ಪಿಂಡೋದಕಾದಿಗಳಿಂದ ಸಂತೈಸು
ಕಾಣೆಯಾ ನೀನಕಟ ನಂಟರ
ಮಾಣದುರುಳುವ ಕಣ್ಣ ನೀರಿನ
ಸೇಣಿಯಲಿ ಬೆಂದಪರು ಸತ್ತವರೆಂಬ ವಚನವನು ೮೬

ಸಾವೆ ದೇಹಿಗೆ ಪ್ರಕೃತಿ ತೋರ್ಪೀ
ಜೀವಿತವೆ ಸಲೆ ವಿಕೃತಿಯೆಂಬೀ
ಭಾವವನು ಬೋಧಿಪರು ತತ್ವವನರಿದ ಪಂಡಿತರು
ಆವನಾದೊಡಮರೆಗಳಿಗೆಬರ
ಜೀವಿಸಿದೊಡದೆ ಲಾಭವೆನುತ ವಿ
ಭಾವಿಸುತ ತಾಳುವುದು ತಣಿವನು ತನ್ನ ಚಿತ್ತದಲಿ ೮೭

ಅರಿಯದಾತನು ತನ್ನ ನಂಟರ
ಮರಣದಲಿ ತನ್ನೆದೆಯೊಳಲಗನು
ಮುರಿದ ತೆರದಲಿ ಮಮ್ಮಲನೆ ಮರುಗುವನು ಮರುಳಾಗಿ
ಅರಿದವನು ತಾನದನೆ ಹೃದಯದಿ
ಮುರಿದ ಸರಳನು ಕರುಣದಿಂದು
ದ್ಧರಿಸಿದಂದದಿ ಬಗೆದು ನಲಿದಾಡುವನು ಮಾನಸದಿ ೮೮

ಒಡಲನೆಡೆವಿಡದಿರ್ದ ಜೀವವೆ
ಕಡೆಯೊಳೊಡಲನು ತೊರೆದು ಬೇರೆಡೆ
ಗಡಿಯನಿಕ್ಕುವುದೆಂದೊಡಿನ್ನೀ ನಂಟುಗಂಟುಗಳಾ

ನುಡಿಯಬಹುದೇ ಭಿನ್ನವೆನಿಸಿದ
ಮಡದಿಮಕ್ಕಳ ಮರಣದಲಿ ಬಾ
ಯ್ಬಿಡುವನೇ ಕಂಗೆಡುವನೇ ಹುರುಳರಿದ ಪರಿಣತನು ೮೯

ಅವರಿವರ ರೀತಿಯಲಿ ಸುಜನ
ಪ್ರವರ ನೀನೀ ಶೋಕವೇಗದಿ
ವಿವಶನಾಗುತ ಕಂದಿ ಕುಂದುವುದುಚಿತವೆನಿಸುವುದೇ
ಅವನಿರುಹಗಳ ತೆರದಿ ಪರ್ವತ
ನಿವಹಗಳು ಬಿರುಗಾಳಿಯಲಿ ಕಂ
ಪವನು ತಳೆದೊಡೆ ಭೇದವೇನಾ ತರುಗಿರಿದ್ವಯಕೆ ೯೦

ಹೇಳಿದೀ ಗುರುವಚನವೆಲ್ಲವ
ತಾಳಿದೆನು ಮನದೊಳಗೆ ನೀವಿ
ನ್ನೇಳಿ ಬಿಜಯವ ಮಾಡಿಯೆನುತಾ ಮುನಿಯನಾಶ್ರಮಕೆ
ಬೀಳುಕೊಟ್ಟನು ದುಃಖಭಾರದಿ
ಹೂಳಿದರಸನ ಹೃದಯದೊಳಗಾ
ಹೇಳಿಕೆಗಳೆಡೆವಡೆಯಲರಿಯದೆ ಹೊದ್ದಿದುವು ಗುರುವ ೯೧

ಮಗನು ಬಾಲಕನೆನುತ ಕಷ್ಟದಿ
ಜಗವ ಪರಿಪಾಲಿಸಿದನೆಣ್ಬರಿ
ಸಗಳನಾ ನೃಪವರನು ಸೂನೃತವಚನವಿತ್ತಮನು
ಮೃಗನಯನೆಯಗಲಿಕೆಯೊಳೊದವಿದ
ದುಗುಡವನು ಹೋಲಿಕೆಯ ಚಿತ್ರಾ
ದಿಗಳ ನೋಟದಿ ಮರೆದು ಕನಸಿನ ಕೂಟದಲಿ ಕಳೆದು ೯೨

ಒಡೆದುದಾತನ ಹೃದಯವನು ಮು
ಯ್ವಡೆದ ಶೋಕದ ಶಂಕು ಸೌಧವ
ನೊಡೆವ ತೆರದಿಂ ಪ್ಲಕ್ಷವೃಕ್ಷಾಂಕೂರಶಂಕುಗಳು
ಒಡಲ ನುಂಗುವ ಘೋರರುಜೆ ಬಂ
ದಡಸಿದುದು ಬೆದರಿದರು ವೈದ್ಯರು
ಮಡದಿಯೆಡೆಗೊಡನುಯ್ವ ಕೆಳೆಯೆಂದೊಲಿದನವನದಕೆ ೯೩

ಅವನಿಪತಿಯಾ ಬಳಿಕ ತನ್ನಯ
ಕವಚಹರನೆನಿಪಾತ್ಮಭವನನು
ಭುವನರಕ್ಷಣೆಯಲಿ ನಿಯೋಜಿಸಿ ಶಾಸ್ತ್ರಮಾರ್ಗದಲಿ
ತವಿಸಿ ರೋಗೋಪಹತತನುವನು
ಜವದಿ ಮೋಕ್ಷಪದಕ್ಕೆ ಪಾರುವ
ತವಕದಲಿ ಮಾಡಿದನು ಮತಿಯನು ನಿರಶನವ್ರತಕೆ ೯೪

ಬಳಿಕ ಗಂಗಾಸರಯುಗಳ ಕೂ
ಡಲೊಳು ತನುವನು ಬಿಸುಟು ವಿಬುಧರ
ಬಳಗದಲಿ ಬಾಂಧವ್ಯವನು ಕೈಕೊಂಡು ಸುರಪುರದಿ
ಹೊಳೆಹೊಳೆವ ಹೊಸಸೊಬಗಿನಲಿ ಕಂ
ಗೊಳಿಪ ನಿಜಲಲನೆಯನು ಬಳಿಸಲು
ತೊಲವಿನಲಿ ನಲಿದಾಡಿದನು ನಂದನನಿಕುಂಜದಲಿ ೯೫

ತಂದೆಯಾ ತೆರದಿಂದ ಸುರವರ
ನಂದನಕೆ ನಡೆಗೊಂಡ ತರುವಾ
ಯಿಂದ ದಶರಥನೇರಿ ಸಿಂಹಾಸನವನವನಿಯನು
ತಂದೆಯಿಂ ಮಿಗಿಲೆನಿಸಿ ಹೊರೆದನು
ಸಂದ ಯಮಿಗಳಿಗಿವನೆ ಮೊದಲೆಂ
ಬಂದದಲಿ ಸಂಯಮದಿ ಪಡೆದ ಜಿತೇಂದ್ರಿಯತ್ವದಲಿ ೯೬

ಸ್ವತಂತ್ರ ಬಿಡಿಗವಿತೆಗಳು

ಆಕಳು

ಕೇಳು ಕೇಳಿಲಿ ಸಖನೆ । ಹೇಳುವ ಮಾತ ॥ ಪ ॥

ಶ್ರೀಕರವಾಗಿರು
ವಾಕಳು ಹಾಲಿತ್ತು
ಲೋಕವನೆಲ್ಲವ
ಸಾಕುತಲಿರುವುದು ೧

ತಿರುಗುತ ವನದಲ್ಲಿ
ಗರುಕೆಹುಲ್ಲನು ತಿಂದು
ಬರುತಲೆರಡು ಹೊತ್ತು
ಕರೆವುದು ಸವಿಹಾಲ ೨

ಹಸುಗಳ ಹಾಲಿಂದೆ
ಮೊಸರು ಬೆಣ್ಣೆಗಳನು
ಹಸನಾದ ತುಪ್ಪವ
ನೆಸಗುವರೆಲ್ಲರು ೩

‘ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ’

ಬಿಸಿಲು ಕುಸಿಯಲಿ ಮಳೆಯು ಕಾಲದ
ಗಸಣಿ ಕುಂದಲಿ ಚಳಿಯು ಗಾಳಿಯು
ಮಸಕ ಮುರಿಯಲಿ ಹಿಮದ ಕೋಟಲೆ ಹಿಂಗಲಾ ಬಳಿಕ
ಎಸಗುವೆನು ಕಾರ್ಯಗಳನೆನುತವೆ
ಸಸಿದ ಹತ್ತಿಯ ಹಾಸಿಕೆಯೊಳು
ಬ್ಬಿಸಿದ ಮೈಯನು ಹೊಳಿ ಕಾಲವ ಕಳೆದೊಡೇನಹುದು ? ೧

ಮಂಗುಳುಂವವೆ ನೆನ್ನೆಗಳು ನಾಳೆಯು
ಮೊಗದ ಮುರುಕಿಂತಹುದೊ ಮರುಳೇ
ಜಗುಳಿಹೋಗದ ಮುನ್ನವೀಗಳು ನೆಗಳು ಕಾರ್ಯಗಳ
ಬಿಗಿದು ನಡುವನು ಹೆರರ ಸೇವೆಯು
ನೊಗಕೆ ಹೆಗಲನು ಚಾಚಿ ತೊತ್ತಿನ
ಹಗರಣದ ಚಮ್ಮಟಿಗೆಪೆಟ್ಟಿಗೆ ಬೆನ್ನನೊಡ್ಡದಿರು ೨

ಕೀಳು ಬೇರೊಡನಲಸಿಕೆಯನು
ಕಾರ್ಳುತನವನು ತಾಳು ನಿನ್ನಯ
ತೋಳ ಬರಿಪೊರೆಮಾಡದಿರು ಗಂಡಸಿನ ಗರುವಿಕೆಯು
ಬೀಳುಕೊಡದಿರು ಮಂದಿಯೆಂಜಲ
ಕೂಳಿಗಾಟಿಸಿ ಕೈಯನೊಡ್ಡದಿ
ರೇಳು ಜಟ್ಟಿಗನಾಗಿ ದಿಟ್ಟರ ಮೌಳಿಮಣಿಯಾಗು ೩

ಒಳಗನರಿಯದೆ ಗಿಳಿಯು ತೆರದೊಳ
ಗೆಳಸದೆಲವದ ಹಣ್ಣ ಕಪಿಯುಂ
ತೊಳಗನರಿಯದೆ ಹಳಿದು ಹಲಸಿನ ಹಣ್ಣ ಹಿಂದಿಡದೆ
ಒಳಗೆ ಹುದುಗಿದ ಹುರುಳ ತಿರುಳನು
ತಿಳಿದು ಸತ್ಕಾರ್ಯವನು ಸೇವಿಸಿ
ಫಲವ ತಳೆ ಸಂಪದದ ಕೀರ್ತಿಯು ರುಚಿರರೂಪದಲಿ ೪

ಬೆಟ್ಟದಡಿಯಲಿ ನಿಂದು ಶಿಖರವ
ನಿಟ್ಟಿಸುತಲಿದನೇರುವಡೆ ಕಡು
ಜಟ್ಟಿಗರ ಪಾಡಲ್ಲ ನಮ್ಮೊಳು ನೂಕುವದೆಯೆನುತ
ದಿಟ್ಟಿಗೆಡದಿರು ಹದ್ದು ಹಾರದ
ಬೆಟ್ಟಕಿರುವೆಗಳೇರುವವು ಮನ
ನಟ್ಟು ಮಾಡುವ ದಿಟ್ಟರಿಗೆ ದುಷ್ಕರವದೇನಿಹುದು ೫

ಆಗುಹೋಗನು ತೂಗಿ ಮುಂದಿನ
ತಾಗುಬಾಗನು ಬಗೆದು ಕೆಲಸದಿ
ತಾಗು ತಾಗಿದ ಬಳಿಕ ಮನವೋಸರಿಸದಿರು ಜನರು

ಕೂಗಿ ಹೊಗಳಲಿ ಮೇಣು ಬಗುಳಲಿ
ಬೀಗದಿರು ಬಾಗದಿರು ಕಿರಿಕಿರಿ
ದಾಗಿ ಸಾಗಿಸಿ ಕೊನೆಯ ಮುಟ್ಟಿಸು ಹಿಡಿದ ಕಾರ್ಯಗಳ ೬

ಕೆಟ್ಟು ನಡುವನು ಬರಿಯ ಮಾತಿನ
ಹೊಟ್ಟುಗುಟ್ಟದೆ ದಿಟ್ಟತನದಲಿ
ಕೊಟ್ಟು ಹೆಗಲನು ಹರಿಬವೆನಿಸುವ ಹೊರೆಯ ಹೊತ್ತಿರಿಸಿ
ಜಟ್ಟಿಗರ ಗುರುವಾಗು ಭಾಗ್ಯದ
ಪಟ್ಟವಣೆಯನು ಹತ್ತು ನಿನ್ನಯ
ಹುಟ್ಟಿದೂರಿನ ಹೆಸರ ಬೊಟ್ಟಿಡು ಜಸದ ನೊಸಲಿನಲಿ ೭

ಕಾಮದಹನದ ಹಾಡು

ಗಿರಿಜೆ ವರನನು ಬಯಸಿ ಬಂದಳು
  ಹರನನು—ಶಶಿಧರನನಂ
ಹರನ ತಪವನು ಮುರಿಯ ಬಂದನು
  ಮಾರನು—ಸುಕುಮಾರನಂ

ಕಾಮನ ಬಿಲ್ಲು

ಬಿಳಿದಾದ ಕಳೆಗಳು
ಮಳೆಹನಿಯೊಳು ಹೊಗುತಲೊಡೆಯುತೇಳ್ಬಣ್ಣದಿ ಕಂ
ಗೊಳಿಸುವುವಾಕಾಶದೊಳವು
ಗಳ ಕಾಮನ ಬಿಲ್ಲೆನುತ್ತೆ ಹೇಳುವರಿಳೆಯೊಳ್ ॥

ಮೂಡಿರುವಿದನೇ । ನೋಡೆಲೆ ಸಖನೇ ॥ ಪ ॥
ನಾಡಿಗಚ್ಚರಿಯಾಗಿ । ಕೊಡುತಲೇಳ್ಬಣ್ಣವ ॥ ಅ ॥

ಹೊಳೆಯುವ ಸೂರ್ಯನ
ಬಿಳಿದಹ ಕಳೆಗಳು
ಮಳೆಹನಿಯೊಳು ಹೊಕ್ಕು
ಬಳಿಕೊಡೆಯುತ್ತಲಿ ೧

ಸಾಲುಸಾಲಾಗಿರು
ವೇಳುಬಣ್ಣವ ಕೂಡಿ
ಬೀಳುತ ಗಗನದೊ
ಳಾಲಿಗೆ ತೋರ್ಪುದು ೨

ಉಲ್ಲಸದಿಂದ ನೀ
ನಿಲ್ಲಿಯೆ ಕಾಣ್ಬುದ
ನೆಲ್ಲರು ಕಾಮನ
ಬಿಲ್ಲೆನುತೊರೆವರು ೩

ಕಾಲದ ಬೆಲೆ

ಕಾಲಹರಿಣದ ಕಾಲ ದನಿಯನು
ಕೇಳಿದವರಾರುಂಟು ಮರುಳೇ
ನಾಳೆಯೆಂಬೀ ಬರಿಯ ಬಯಲಿಗೆ ಮನವ ಮಾರದಿರು
ಆಳು ನಿನ್ನೀ ದಿವಸವನು ಕ
ಟ್ಬಾಳುತನದಲಿ ಕೂಡು ನಿನ್ನಯ
ಬಾಳಿಕೆಗೆ ಸಫಲತೆಯನರಿಯದೆ ಬೀಳುಗೆಡಹದಿರು ೧

ಕಾಲವೆಂಬೀ ಕಾಡ ಕುದುರೆಯ
ಕಾಲ ವೇಗವ ಕಂಡರುಂಟೇ
ನಾಳಿನೋಟಕ್ಕೆಡೆಗುಡದೆ ಕಡಿವಾಳದೊಳೆ ಬಿಗಿದು
ಕೀಲಿಸುತ ನೀನಾಳದನು ಕ
ಟ್ಬಾಳುತನದಲಿ ಸುಮ್ಮನಿರ್ದೊಡೆ
ಗಾಳಿಯೋಟದೊಳೋಡಿ ನಿನ್ನನು ಹಿಂದೆ ಬಿಸುಡುವುದು ೨

ಕಾವೇರಿ

ನೋಡು ಕಾವೇರಿಯು । ನಾಡಿನ ಜನರಿಗೆ
ಬೇಡಿದ ಫಲವನು । ನೀಡುತೆ ಪೊರೆವುದು ॥ ಪ ॥

ಹಾಲನು ಹೋಲುವ । ಕಾಲುವೆನೀರೊಳು
ಸಾಲುಸಾಲಾಗಿಹ । ಶಾಲಿಯ ಪೊರೆವುದು

ನೀರೊಳು ಮುಳುಗಲು । ವಾರಿಸಿ ತಾಪವ
ಆರಿದ ಬಾಯಿಗೆ । ಬೀರುವುದಮೃತವ ೨

ಪರಿವೆಡೆಗಳೊಳೆಲ್ಲ । ಪರಿಪರಿಯಹ ಚರಾ-
ಚರಕೆ ನೀರೆರೆಯುತ । ಪೊರೆವುದು ನಾಡನು ೩

ಗೋವಿನ ಚರಿತ್ರೆ

ಕಟ್ಟಿದ್ದ ಕಣ್ಣಿಯನು ಬಿಚ್ಚಿಕೊಳ್ಳಲು ಅರಿಯೆ
ಹೊಟ್ಟೆಗೆ ಬೇಕೆಂದು ಕೇಳಲರಿಯೆ
ಪುಟ್ಟ ಕರು ಇಲ್ಲದಿರೆ ಕರೆದು ತಾರೆನಲರಿಯೆ
ನೀನಾರಿಗಾದೆಯೋ ಎಲೆ ಮಾನವಾ ೧
ಹರಿ ಹರಿ, ಗೋವು ನಾನು

ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ
ಸುಟ್ಟರೆ ನೊಸಲ ವಿಭೂತಿಯಾದೆ
ತಟ್ಟದೇ ಹಾಕಿದರೆ ಒಳ್ಳೆ ಗೊಬ್ಬರವಾದೆ
ನೀನಾರಿಗಾದೆಯೋ ೨

ಹಾಲಾದೆ ಕರೆದರೆ, ಮೊಸರಾದೆ ಹೆತ್ತರೆ
ಮೇಲ್ಗೆನೆಯು ಕಡೆದರೆ ಬೆಣ್ಣೆಯಾದೆ
ಮೇಲಾದ ತುಪ್ಪವು ನಾನಾದೆ ಕಾಸಿದರೆ
ನೀನಾರಿಗಾದೆಯೋ ೩

ಹಾದಿ ಬೀದಿಯಲಿರುವ ಕಸದ ಹುಲ್ಲನು ಮೇದು
ಬಂದು ಮನೆಗೆ ನಾನು ಅಮೃತವೀವೆ
ಅದನುಂಡು ನನಗೆರಡ ಬಗೆವ ಮಾನವ ನೀನು
ನೀನಾರಿಗಾದೆಯೋ ೪

ಹಾಯೆ ಹರಿಗೋಲಾದೆ, ರಾಯಭೇರಿಗೆ ಆದೆ
ರಾಯರಾ ಕಾಲಿಗೆ ಮುಳ್ಳೊತ್ತು ಆದೆ
ಆಯುವರಿತು ಹೊಡೆಯೆ ಒಳ್ಳೆಗಾನಕೆ ಆದೆ
ನೀನಾರಿಗಾದೆಯೋ ೫

ದೇಹಶುದ್ಧಿಗೆ ನಾನು ಪಂಚಗವ್ಯವನೀವೆ
ವಾಹನಕೆ ಆಗುವನು ಎನ್ನ ಮಗನು
ಊಹೆಗಸದಳವಹುದು ನನ್ನ ಉಪಕಾರಗಳು
ನೀನಾರಿಗಾದೆಯೋ ೬

ಉಳುವೆ ನಾ ಭೂಮಿಯನು ಹೊರುವೆ ನಾ ಹೇರನ್ನು
ತುಳಿದು ಕಡ್ಡಿಯ ಕಾಳ ವಿಂಗಡಿಸುವೆ!
ಕಳಪೆಯಾಗಿಹ ನೆಲವ ನಗುವ ತೋಪನು ಮಾಳ್ಪೆ!
ನೀನಾರಿಗಾದೆಯೋ ೭

ಕರು ಸತ್ತ ಬೇಗೆಯಲಿ ನಾ ಬೆಯ್ಯುತಿದ್ದರೆ
ಮರುಕವಿಲ್ಲದೆ ಸತ್ತ ಕರುವ ತಂದು
ತಿರುತಿರುಗಿ ಮುಂದಿಟ್ಟು ಹಾಲ ಕರೆವೆ ನೀನು
ನೀನಾರಿಗಾದೆಯೋ ೮

ಗೋವಿನ ಬಾಳು

ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ
ಸುಟ್ಟರೇ ನೊಸಲಿಗೆ ವಿಭೂತಿಯಾದೆ
ತಟ್ಟದೇ ಹಾಕಿದರೆ ಮೇಲುಗೊಬ್ಬರವಾದೆ
ನೀನಾರಿಗಾದೆಯೋ ಎಲೆ ಮಾನವಾ, ಹರಿ ಹರೀ ಗೋವು ನಾನು
೧

ಹಾಲಾದೆ ಕರೆದರೆ ಮೊಸರಾದೆ ಹೆತ್ತರೆ
ಮೇಲೆ ಕೆನೆಗಡೆದರೆ ಬೆಣ್ಣೆಯಾದೆ
ಮೇಲಾದ ತುಪ್ಪವೂ ನಾನಾದೆ ಕಾಸಿದರೆ
ನೀನಾರಿಗಾದೆಯೋ ಎಲೆ ಮಾನವಾ ೨

ಉಳುವೆ ನಾ ಭೂಮಿಯನು ಹೊರುವೆ ನಾ ಹೇರನ್ನು
ತುಳಿದು ಕಡ್ಡಿಯ ಕಾಳ ವಿಂಗಡಿಸುವೆ
ಕಳಪೆಯಾಗಿಹ ನೆಲವ ನಗುವ ತೋಪನು ಮಾಳ್ಪೆ
ನೀನಾರಿಗಾದೆಯೋ ಎಲೆ ಮಾನವಾ ೩

ಹಾಯೆ ಹರಿಗೋಲಾದೆ ರಾಯಭೇರಿಗೆಯಾದೆ
ರಾಯರಾ ಕಾಲಿಗೆ ಮುಳ್ಜೋತ್ತುವಾದೆ
ಆಯವರಿತು ಹೊಡೆಯೆ ಮಧುರಗಾನಕ್ಕಾದೆ
ನೀನಾರಿಗಾದೆಯೋ ಎಲೆ ಮಾನವಾ ೪

ಹಾದಿಬೀದಿಯಲಿರುವ ಕಸದ ಹುಲ್ಲನು ಹುಡುಕಿ
ಮೇದು ಮನೆಗೈದಿ ನಾನಮೃತವೀವೆ
ಅದನುಂಡು ನನಗೆರಡ ಬಗೆವ ಮಾನವ ಹೇಳು
ನೀನಾರಿಗಾದೆಯೋ ಎಲೆ ಮಾನವಾ ೫

ಚಂದ್ರ

ಮೂಡಲೊಳಗೆ ಚಂದ್ರನೀಗ
ಮೂಡುತಿಹನು ದೂರದೂರ
ಕೋಡುತಿಹುದು ಕಳ್ಳನಂತೆ ಕೂಡೆ ಕತ್ತಲೆ

ನೋಡು ಮನೆಯ ಮೇಲೆ ಬೆಳಕು
ಕೂಡಿ ಬೆಳ್ಳಿಯಿಂದ ತಗಡು
ಮಾಡಿ ಹೊದಿಸಿದಂತೆ ಕಣ್ಗೆ ಹೊಳೆಯುತಿರುವುದು ೧

ಮೇಲೆ ಬೆಳ್ಳಿಬಟ್ಟಲನ್ನು
ಹೋಲುತಿಹನು ಸಸಿಯು ನೆಲವು
ಹಾಲ ಮಳೆಯ ಕರೆದ ತೆರದಿ ಬೆಳಗುತಿರುವುದು
ಬಾಲರೆಲ್ಲ ಕೂಡಿ ಮುಂದದಿ
ಬಾಲಕೇಳಿಯಾಡುತಿಹರು
ಮೇಲೆಮೇಲೆ ಹರುಷವುಕ್ಕುತಿಹುದು ಜನರಿಗೆ ೨

ಚಾಮರಾಜೇಂದ್ರ ಮರಣವಾರ್ತೆ

ಬರಸಿಡಿಲು ಹೊಡೆದಂತೆ ಭೂಮೀ
ಶ್ವರನ ಚಾಮನೃಪಾಲವರ್ಯನ
ಮರಣವಾರ್ತಾಶೂಲವೆಲ್ಲರ ಕೊಡಕೆಗಳನಿರಿದು
ಕೊರಗಿಸಿತು ಮರುಗಿಸಿತು ಕಂಬನಿ
ಯೊರತೆಯಲಿ ನನೆಯಿಸಿತು ಮರವೆಯೊ
ಳೊರಗಿಸಿತು ಬಾಯ್ಬಿಡಿಸಿತಳಲಿಸಿತಳಿಸಿತನಿಬರನು ೧

ಕೇಳಿಸಿತು, ಬಾಣವನು ಕಿವಿಯೊಳು
ಕೀಲಿಸುವವೊಲು ನಿಮಿಷನಿಮಿಷ
ಕ್ಕೊಳುತಿರ್ದ ಶತಘ್ನಿಗಳ ಭೀಕರದ ಭಾಂಕಾರ
ಕೇಳಲೊಡನೊಳಗೊಳಗೆ ಕುದಿಗೊಂ
ಡೇಳುವಳ್ಕೆಯ ಬೊಬ್ಬೆಯುಬ್ಬಿನ
ಗೋಳು ಪಸರಿಸಿ ತೀವಿ ತುರುಗಿತು ಸಕಲದಿಕ್ತಟವ ೨

ಆದುದೇ ಮೃತಿ ನೃಪತಿಗಕಟಾ
ಕೋದುದೇ ನಮ್ಮೆದೆಯೊಳಲಗನು
ಸೀದುದೇ ಕಣ್ಣಾಲಿಗಳನಕಟಕಟ ಕಿವಿಯೊಳಗೆ

ಕಾದ ಸೀಸವ ಸುರಿದುದೇ ಮೇ
ಣೂದಿದುದೆ ಕೊನೆಗಾಣದುರಿವ ವಿ
ಷಾದವಹ್ನಿಜ್ವಾಲೆಗಳ ನೆಲೆಗೊಳಿಸಿ ಹೃದಯದಲಿ ೩

ನಗೆಮೊಗದ ಸವಿನುಡಿಯು ಮೆಲ್ಪಿನ
ಬಗೆಯು ಹಿಸುಣರ ನುಡಿಯು ಕೇಳದ
ಸುಗುಣದೊಲವಿಂ ನಂಟರಿಷ್ಟರನಾಶ್ರಿತರ್ಕಳನು
ಸೊಗದೊಳಿರಿಸುವ ಸಜ್ಜನರ್ಕಳ
ಬಗೆಯರಿದು ಮನ್ನಿಸುವ ಮಂದಿಗೆ
ಸೊಗವನೊದವಿಪ ನೃಪತಿ ಕಣ್ಮರೆಯಾದನಕಟಕಟಾ ೪

ವನಿತೆಯರಿಗೊಡನಾಡಿ ವಿದ್ಯಾ
ವನಿತೆಯನೆ ಕೆಳೆಗೊಳಿಸಿ ಸರಸತಿ
ಗನುಗೊಳಿಸಿ ನೇಹವನು ಸಿರಿಯೊಡನಿಲ್ಲಿ ನೆಲೆಗೊಳಿಸಿ
ಘನವೆನಿಪ ನಿಜರಾಜಕಾರ್ಯದೆ
ತನಗೆ ನೆರವಪ್ಪಂತೆ ಪ್ರಜೆಗಳಿ
ಗನುಪಮಿತ ಪದವಿಯನಂ ಕರುಣಿಸಿದರಸನಳಿದನೆ ಹಾ ೫

ವೀಣೆಗಳು ಮುಸುಕಿಟ್ಟು ಮೌನದಿ
ಕೋಣೆಯೊಳಗಡಗಿದುವು ಬಿನ್ನನೆ
ಜಾಣಳಿದು ನಾಟಕಗಳುಳಿದುವು ತೆರೆಯ ಮರೆಯೊಳಗೆ
ವಾಣಿ ಮೈಗರೆದಳು ಕವೀಂದ್ರರ
ಗೋಣಿನೆಡೆಯೊಳು ತನಗೆ ನಿಲವನು
ಕಾಣದಕಟಾ ರಾಜ್ಯಲಕ್ಷ್ಮಿಯುಂ ಮರುಗಿ ಕೊರಗಿದಳು ೬

ಒಡೆದುದಕಟಾ ಹಡಗು ತೆರೆಗಳ
ಗಡಣವುಬ್ಬೆದ್ದಪ್ಪಳಿಸಿ ಕಂ
ಗೆಡಿಸುತಿದೆ ಹಾ ಮೂಡಿ ಮುಳುಗಿದೆವಳಲ ಕಡಲೊಳಗೆ
ತಡಿಯ ಕಾಣಿಪರಾರೆನುತೆ ಬಾ
ಯ್ವಿಡುವ ನಮ್ಮನು ಕರುಣದಿಂ ಕೈ
ವಿಡಿದು ಕಡೆಹಾಯಿಸಲಿ ಯದುಕುಲತಿಲಕ ಶ್ರೀಕೃಷ್ಣ ೭

ನಾಲ್ವಡಿ ಕೃಷ್ಣರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವ

ಮಾತೆಗೆ ಮುಂಪಮೊಗೆತರೆ ಸಹ
ಜಾತಂ ನಲವೇರೆ ತುರುಗಳಂ ರಕ್ಷಿಪೆನೆಂ
ಬಾತುರದೆ ಗಿರಿಯ ಕೊಡೆವಿಡಿ
ದಾತಂ ಶ್ರೀಕೃಷ್ಣನಾಳ್ದನಕ್ಕನವರತಂ ೧

ಮೊಗಮನಲರ್ಚಿ ಮೆಲ್ಲಗೆಯನೊಯ್ಯನೆ ಮೂಡಿಸಿ ನೇತ್ರಯುಗ್ಮದಿಂ
ದುಗುವ ಕದುಷ್ಣಬಾಷ್ಪಜಲಮಂ ತೊಡೆದಾರಿಸಿ ಕರ್ಣರಂಧ್ರದೊಳ್
ಒಗುವಿಂಗೆ ಹರ್ಷವರ್ಷಮನೊಡರ್ಚಿ ಕಡಂಗುತೆ ಸೌಖ್ಯವಲ್ಲಿಯಂ
ಬಗೆವೊಲದಲ್ಲಿ ನಟ್ಟುದಿದೆ ಕೃಷ್ಣನೃಪಾಲನ ಪಟ್ಟಬಂಧನಂ ೨

ನಡುಗಡಲೊಳ್ ಪಡಂಗೊಡೆದ ಮಂದಿಗೆ ನಾವೆಯಿದೊಂದು ಬಂದುದಿ
ರ್ಪೆಡೆಯೆನಗಾವುದೆಂದು ಪಿರಿದೇವದೆ ಕಂದಿದ ರಾಜ್ಯಲಕ್ಷ್ಮಿಗೀ
ಗಡೆ ದೊರೆಕೊಂಡುದೊಂದು ನೆಲೆ ಯಾದವವಂಶದ ಕೀರ್ತಿವಲ್ಲಿಯೀ
ಗಡೆ ಕುಡಿಗೊಂಡು ಕೊರ್ವಿದುದು ಕೃಷ್ಣಮಹೀಧವನೇರೆ ಪೀಠಮಂ ೩

ತೆರೆದ ವಿಲೋಚನಕ್ಕೆ ಪುಡಿಗಪ್ಪುರವಿಟ್ಟುದು ಬಿಟ್ಟ ಬಾಯ್ಗೆ ಸ
ಕ್ಕರೆವುಡಿಯಿಟ್ಟುದೆತ್ತಿದ ಕೊರಲ್ಗೆ ಸರಂಗಳನಿಟ್ಟುದುಣ್ಮಿ ಮುಂ
ಒರಿದ ಕರಕ್ಕೆ ಕಂಕಣಮನಿಟ್ಟುದು ನೆಟ್ಟನೆ ಹರ್ಷವರ್ಷಮಂ
ಕರೆದುದು ಕೃಷ್ಣಭೂಪತಿಯ ಪಟ್ಟಮಹೋತ್ಸವದೊಂದು ವೈಭವಂ ೪

ಕುದುರೆಯ ಬೆನ್ನನೊಲ್ದಡರ್ವ ಮುನ್ನಮೆ ಗದ್ದುಗೆಯೇರಲಾಯ್ತು ಪೆಂ
ಪೊದವಿದ ಬಾಸಿಗಂದಳೆವ ಮುನ್ನಮೆ ನುಣ್ಗೊಸಲಲ್ಲಿ ಪಟ್ಟಬಂ
ಧದ ಬಿಗುಪಾಯ್ತು ಪೊಂಗಡಗಮಂ ಭುಜಕೇರಿಪ ಮುನ್ನಮೆಯ್ದೆ ಬಿ
ಣ್ಪೊದವಿದ ರಾಜಕಾರ್ಯಭರಮಂ ತಳೆವಂತೆವೊಲಾಯ್ತು ಭೂಮಿಪಾ ೫

ಆದೊಡಂ

ಜಾಣೊಡಲಾಂತುದೆಂಬಿನೆಗಮೊಪ್ಪುವ ವಾಣಿಯೆ ಮಾತೆಯಾಗೆ ಕ
ಲ್ಯಾಣಗುಣಂಗಳಂ ಮೆರೆಯೆ ಬಂಧುಗಳುಂ ನಿಜಭೃತ್ಯವರ್ಗಮುಂ
ಪ್ರಾಣಸಮಾನಮೆಂದು ಪತಿಭಕ್ತಿಯನಾಂತಿರೆ ಮಂದಿ ನಿನ್ನೊಳೀ
ಕ್ಷೋಣಿಯುಮೊಂದು ಮಾಣಿಕದ ತೋಳ್ವಳೆಯುಪ್ಪುದು ಬಾಹುವಲ್ಲಿಯೊಳ್ ೬

ಅರಿವಿನ ವಲ್ಲಿ ಪಲ್ಲವಿಸೆಯ್ಯೆಸಿರಿ ಮೆಯ್ಸಿರಿವೆರ್ಚೆ ರಾಜರೊಳ್
ಸರಿದೊರೆಯಾರುಮಿಲ್ಲೆನಿಸಿ ಸದ್ಗುಣದಿಂ ನೃಪನೀತಿಮಾರ್ಗಮಂ
ಅರಿದರ ಮಾತಿಗೊಲ್ದು ಕಿವಿಗೊಟ್ಟು ಜನಂಗಳ ಚಿತ್ತಭಿತ್ತಿಯೊಳ್
ಬರೆಯಿಸು ನಿನ್ನ ದುಗ್ಧಧವಳಾಮಳಕೀರ್ತಿಗೆ ಶಾಸನಂಗಳಂ ೭

ಧರೆಗೆ ಸಪತ್ನಿಯೊರ್ವಳೆನೆ ಸದ್ಗುಣಭೂಷಿತೆಯಪ್ಪ ಕಾಂತೆಯಂ
ವರಿಸಿ ತನೂಜರಿಂದ ಕುಲಮಂ ಕೊನರೇರಿಸಿ ಬಂಧುವರ್ಗಮಂ
ಪೊರೆದು ಕಡಂಗಿ ಮಾಡೆ ನೃಪನೀತಿವಿಶಾರದರಾತ್ಮಕೃತ್ಯಮಂ
ದೊರೆಯಿಸಿ ದೇಶದುನ್ನತಿಕೆಯಂ ಪರಿಪಾಲಿಸು ಕೃಷ್ಣಭೂಮಿಪಾ ೮

ನೇಗಿಲು

ನೇಗಿಲಿಗೆ ಕೈಯಿಡಿರಿ ಹುಡುಗರೆ
ರಾಗದಲಿ ಹೊಲಗಳನು ಬಿತ್ತನೆ
ಗಾಗಿ ನಾವುಳುತುಳುತ ಹೆಂಟೆಯನೊಡೆದು ಹದಮಾಡಿ
ಬೇಗದಲಿ ಕಾಳುಗಳ ಚೆಲ್ಲುತ
ಸಾಗಿ ಬರುವಾ ಸುಗ್ಗಿಯಲಿ ಹುಲು
ಸಾಗಿ ಬೆಳಸನು ಬೆಳೆದು ಮಾಡುವ ಹಲವು ಹಬ್ಬಗಳ ೧

ಹುಡುಗರೇ ಕೈಯಿಟ್ಟು ನೇಗಿಲ
ನಡೆಸಿ ಕುಳಿತವರೆನ್ನದುಳುತಲಿ
ಹಿಡಿದ ಕೈಯಲಿ ಹೊಲವ ಹದಗೊಳಿಸುತಲಿ ಬಿತ್ತುತಲಿ
ಹುಡಿಯು ಮಣ್ಣನು ಮೇಲೆ ಚೆಲ್ಲುತ
ನಡೆದರದು ಸುಗ್ಗಿಯಲಿ ಸಾಸಿರ
ಮಡಿ ಬೆಳೆದು ಹೆಚ್ಚುವುದು ಹೆಬ್ಬೆಳಸಾಗಿ ಹುಲುಸಾಗಿ ೨

ಹೆಚ್ಚುಕಡಿಮೆಗಳಾಗದಂದದೆ
ಎಚ್ಚರದಿ ನೇಗಿಲನು ನಡೆಸುತ
ಬೆಚ್ಚರದೆ ಹದವರಿತು ಬಿತ್ತುವ ಬಿತ್ತಿದರೆ ಮುಂದೆ

ಹೆಚ್ಚು ಬೆಳೆ ಬೆಳೆದೆಮ್ಮ ಕಣಜವ
ಹೊಚ್ಚಲಾಗದ ತೆರದೆ ತುಂಬುತ
ಮೆಚ್ಚಿದಂದದೆ ಸಾಲುಹಬ್ಬವ ತಹುದು ಸುಗ್ಗಿಯಲಿ ೩

ಬುದ್ಧಿಯು ಬಲವೇ ಬಲ

ಹಾಲ ಕರೆವಾಕಳನು ಬಿಟ್ಟು ಬಿ
ಡಾಲವನು ಕಾಪಿಡುವ ತೆರದಲಿ
ಶಾಲಿಯನ್ನವನುಳಿದು ತವುಡನು ಮುಕ್ಕುವಂದದಲಿ
ಮೇಲೆನಿಪ ಬುದ್ಧಿಯನು ವಿದ್ಯೆಯು
ಮೇಳದಲಿ ಶೀಲಕ್ಕೆ ಸೆಳೆಯದೆ
ಕೀಳೆನಿಸುವುಳಿದುದಕೆ ಮೋಹಿಸಿ ಮೂಢನೆನಿಸುವುದೆ ೧

ಕರಿಯು ಕೊರಲನು ಹತ್ತಿದನು ಕೇ
ಸರಿಯು ಸೆರೆಯೊಳಗಿಟ್ಟನೋಡುವ
ತುರಗವನು ಭಂಡಿಯೊಳು ಹೂಡಿದನಲ್ಪಬಲನೆನಿಪ
ನರನು ಬುದ್ಧಿಯ ಬಲದೊಳೆಂದೊಡೆ
ಬರಿಯ ಮೈಯ್ಬಲವೇಕೆ ಸುಡುಸುಡು
ಪರಿಕಿಸಿದೊಡಿಳೆಯೊಳಗೆ ಬುದ್ಧಿಯ ಬಲವೆ ಬಲವಹುದು ೨

ನೀರೆನಿಪ ಕುದುರೆಯನು ಹೂಡಿಸಿ
ತೇರನೋಡಿಸುವದು ವಹಿಲದಲಿ
ಸೂರಿಯನ ಕರದಲ್ಲಿ ಚಿತ್ರವ ಬರೆಯಿಸುವದಿರದೆ
ತೋರಿಯುಡುಗುವ ಮಿಂಚಿನಿಂದಲೆ
ದೂರದೇಶಕದೊಂದೆ ನಿಮಿಷದಿ
ದೂರುವದು ಸುದ್ದಿಗಳನೆಂದೊಡೆ ಮತಿಗೆ ಮಿಗಿಲುಂಟೆ ೩

ಭೋರೆನುತ ಬೊಬ್ಬಿರಿವ ತೆರೆಗಳ
ಹೋರಟೆಯೊಳೆದೆಯೊಡೆವ ಕಡಲೊಳು
ಗಾರುಗೊಳ್ಳದೆ ತೇಲುವರಮನೆಗಳಲಿ ನಿರ್ಭಯದೆ

ದೂರದೂರದ ದೇಶದೇಶವ
ಸಾರಿಪುದು ಮಾರುತನ ಬೆಂಕಿಯು
ಸಾರಥಿತ್ವದೊಳೆನಲು ಮಂತಿಯಿಂದತಿಶಯುವದುಂಟೇ ೪

ಅಳಿವನಾಗಸದಾಳವನು ರವಿ
ಯೊಳಗೆ ಹುಳುಕನು ಹುಡುಕುವನು ಹೊಳೆ
ಹೊಳೆವ ಕನ್ನಡಿಗಣ್ಣ ನಳಿಕೆಯು ಹೊಡೆಯು ಹಾದಿಯುಲಿ
ಕಳೆದು ಹೊರಗಣ ಹೊಲಿಗೆಯನು ತಾ
ತಿಳಿವನೊಡಲೊಳಗಡೆಯು ಹುರುಳನು
ತಿಳಿವ ಪಡೆದವನೆಂದೊಡಿನ್ನಾ ಬುದ್ಧಿಗಿದಿರುಂಟೆ ೫

ಸೋಲವಿಲ್ಲದೆ ನಿಲ್ಲದೋಡುವ
ಕಾಲಹರಣನ ಕಾಲ ಹಜ್ಜೆಯು
ಸಾಲ ತೋರಿಸಿ ಸಲಿಗೆವೆರಳಲಿ ಕಿರಿಯು ಗಂಟೆಗಳಾ
ನಾಲಗೆಯು ತುದಿಯಿಂದ ಕಿವಿಯೊಳು
ಹೇಳಿಸುವದರಿವೆಂದೊಡಿನ್ನದ
ರೇಳಿಗೆಯನಾರೊರೆವರದರೆಣೆತೊಣೆಗೆ ಬಹುದುಂಟೆ ೬

ತೆರೆಯು ಮರೆಯೊಳು ನಿಂದು ಲೋಕಗ
ಳಿರವು ಹುಟ್ಟಳಿವೆಂಬ ಮೂರುಂ
ತೆರದ ನಾಟಕವಾಡುವಾ ಪರಬೊಮ್ಮನಾನನದಾ
ದರುಶನಕೆ ಹಾರೈಸಿ ಮುಸುಕಿನ
ತೆರೆಯನೋಸರಿಸುವುದು ಮತಿಯೆನ
ಲರಿದು ಬಣ್ಣಿಪರಾರೊ ಬುದ್ಧಿಯು ಬಲುಮೆಗಳ·ಬಗೆಯು ೭

ಸಹಜವಹುದಿದಕೀ ಪರಿಯು ಮಾ
ಮಹಿಮೆಯುಂಟೆಂಬತುಲಮತಿಯನು
ವಿಹಿತಮಾರ್ಗದಿ ಸುಳಿಸಿದೊಡೆ ಸಚ್ಛಾಸ್ತ್ರದರಿವಿನಲಿ
ಇಹಪರದ ಸುಖಸಂಪದವ ತರ
ಲಿಹುದಿದನು ಮರೆದೆತ್ತು ಕತ್ತೆಗೆ
ಸಹಭವರ ಸಂಪದವ ಸಲಿಸುತ ಬಾಳುವದು ಸರಿಯೆ ೮

ಅಲಸಿಕೆಗೆ ನೆಲೆಗುಂಡದ ಮುನ್ನವೆ
ಬಲಿತು ಮೈ ಮರವಡದ ಮುನ್ನವೆ
ಸಿಲುಕಿ ಕೀಳಾಸೆಯಲಿ ಬುದ್ಧಿಯು ನೆಲೆಗೆಡದ ಮುನ್ನ
ಅಲಸದೆಳಸಿಗೆವಲೆಗೆ ಸಿಲುಕದೆ
ಹೊಲಬು ತಪ್ಪದೆ ನಿಲಿಸಿ ಬುದ್ಧಿಯ
ಸಲಿಸಿ ಕಾಲವನೋದಿನಲಿ ಗಳಿಸುವದು ನಲವುಗಳಾ ೯

‘ಭಗವದ್ಗೀತಾರ್ಥಪ್ರತಿಪಾದಕ ಕೀರ್ತನಂ’ ಆರಂಭಪದ್ಯ

ಪಾಲಂ ಬಯಸಿದ ರೋಗಿಗೆ
ಪಾಲಿಂದೌಷಧಮನೀವ ವೈದ್ಯನ ತೆಱದಿಂ
ದೀ ಲೋಗರೊಲ್ವ ಗೀತದ
ಮೂಲದೊಳೇ ಮುಕ್ತಿಗತಿಯ ಮೊಗದೋಱಿಸಿದಂ ೧

ಮಳೆಗಾಲ

ಮಳೆಗಾಲದೊಳು ಬೀಜ
ಗಳು ಮೊಳಕೆಯಾಗುವುವು
ಬೆಳೆಯುವುವು ಹುಲ್ಲುಗಳು ಸಸಿಗಳೆಲ್ಲಾ
ಇಳೆಯ ಗಿಡಮರಬಳ್ಳಿ
ಗಳು ಚಿಗುರಿ ಹೂವಾಗಿ
ಫಲಿಸುವುವು ಕೆರೆಕಟ್ಟೆ ತುಂಬುತಿಹುವು ೧

ಓಡುವುದು ಲೋಕವನು
ಪೀಡಿಸುವ ಬೇಸಗೆಯು
ಮೂಡುವುದು ಸಂತೋಷ ಜನರಿಗೆಲ್ಲ
ಕೂಡಿ ನವಿಲುಗಳೆಲ್ಲ
ನಾಡೆ ಗರಿಗಳ ಕೆದರಿ
ಪಾಡಿ ಕುಣಿಯುತಲಿಹುವು ವನಗಳಲ್ಲಿ ೨

ಮಳೆಯೊಡನೆ ಮುಂಗಾರಿ
ನೊಳಗಾಲಿಕಲ್ಲುಗಳು
ಘಳಘಳನೆ ಸುರಿಯುವುವು ಗುಡುಗುತಿಹುದು
ಸುಳಿಯುವುದು ಬಿರುಗಾಳಿ
ತೊಳಗುವುದು ಕುಡುಮಿಂಚು
ಛಿಳಿಲೆಂದು ಬೀಳುವುದು ಸಿಡಿಲು ಧರೆಗೆ ೩

ಶರಣು ವಿಮಲೆಯು ಚರಣಕೆ

ಲಾವಣಿ ॥ ಶರಣು ವಿಮಲೆಯು ಚರಣಕೆ ॥ ಪಲ್ಲವಿ ॥

ತಪ್ಪಲೆ ಚೊಂಬು ಬಿಟ್ಟು
ಈ ಪರಿಯ ಕಪ್ಪಾನೆ ಕತ್ತಲೇಲಿ,
(ಅಯ್ಯಯ್ಯೊ) ಈ ಪರಿಯ ಕಪ್ಪಾನೆ ಕತ್ತಲೇಲಿ
ಆ ಪಾಪಿಯನು ನಂಬಿ ಈ ಪಾಪಿಯೊಡಬಂದು
ನಾ ಪಾಪಿಯಾದೆ ಹರನೆ,
ಹರನೆ, ಶರಣು ವಿಮಲೆಯು ಚರಣಕೆ— ೧

ಭೋಜನವ ಬಿಟ್ಟಿದ್ದೆನಂ
ದ್ವಿಜನಾಗಿ ಬಿಟ್ಟಿದನು ಮತ್ತುಂಡೆನು
(ಅಯ್ಯಯ್ಯೊ) ಯಂಜಲನು ನಾ ತಿಂದೆನು
ಮಜ್ಜನವ ಮಾಡಿದೆನು ಯಂಜಲಿನ ನೀರಿನಲಿ
ಸೋಜಿಗವಿದಾಯ್ತು ಜಗಕೆ, ಹರನೆ,
ಶರಣು ವಿಮಲೆಯು ಚರಣಕೆ—

ತಂಬುಲವ ತಿಂದುದಾಯ್ತು
ಕುಂಭಮದ ಶಿರದಲ್ಲಿ ಮಕುಟಮಾಯ್ತು
ತಂಬಿಗೆಯು ಅರಳ್ಳಿಟ್ಟು ಭಸ್ಮವಾಯ್ತು
ಕಂಬುಕಂಧರಿಯೆಂದು ನಂಬಿ ನಾನೀ
ಪರಿಯು ಕಷ್ಟಕೀಡಾದೆ ಹರನೆ,
ಹರನೆ, ಶರಣು ವಿಮಲೆಯು ಚರಣಕೆ— ೩

ಶ್ರೀಕೃಷ್ಣರಾಜ ವಿಜಯಂ

ಮಿಸುನಿಯ ಪೊಪೆಸಳ್ವಿರಸು ಕುಂಕುಮಸೇಸೆಯ ಸೂಸಿತಾಗಳು
ಣ್ಮಿಸಿ ಪೊಸಪೊನ್ನ ಪೂಗಿಡುವ ಪೂಮಳಿ ಸೂಸಿತು ಬೆಳ್ಳಿವೂಗಳಂ
ದೆಸೆದೆಸೆಯಲ್ಲಿ ಚೆಲ್ಲಿದುದು ಘೊಮ್ಮನೆ ಬಾಂದಳಕೇರಿ ಕೆಂಬರಲ್
ಪಸುರ್ವರಲೆಂಬಿವಂ ಸುರಿದುದೋವಿದ ಸೇವಕನಂತೆ ಪಾವಕಂ

ಹೊಗೆಯ ಗಾಡಿ

ನೊಗವನೆತ್ತಿನ ಕೊರಳೊಳಿಡುವ ಪಾಡಿಲ್ಲ
ಬಿಗಿದ ಕುದುರೆಯ ಹೊಡುವಾಯಾಸವಿಲ್ಲ
ಮಿಗೆ ಕಾಯ್ದ ನೀರ ಹಬೆಯಿಂದ ಬಲುಬೇಗ
ಹೊಗೆಯ ಗಾಡಿಯು ನೋಡು ಹೋಗುತಿಹುದೀಗ ೧

ಸೋಲಿಪುದು ಗಾಳಿಯನು ಬಹುವೇಗದಿಂದ
ಮೇಲೆ ಹೊಗೆಯುಗುಳಿ ಬಿಡುವುದು ಕೊಳವೆಯಿಂದ
ಕಾಲಕ್ಕೆ ಸರಿಯಾಗಿ ಹೊರಟು ಕಂಬಿಗಳ
ಮೇಲೆ ಹರಿದೈದುವುದು ದೂರದೂರುಗಳ ೨

ದಾರಿಯೊಳು ಕಳ್ಳಕಾಕರ ಭೀತಿಯಿಲ್ಲ
ಮೀರಿ ಬಹ ಮಳೆಬಿಸಿಲುಗಳ ಬಾಧೆಯಿಲ್ಲ
ದೂರದೇಶದ ಬೆಳಸನೊಯ್ದು ತರಬಹುದು
ಯಾರಿಗಿದರುಪಯೋಗಗಳ ಹೊಗಳಲಹುದು ೩

ಅನುವಾದಿತ ಬಿಡಿಗವಿತೆಗಳು

ಆರ್ಯಮಹಿಮಾದರ್ಶ

ಅನಿಬರಂಮಾತ್ಮಜೀವಿತಮನುತ್ತಮಂಮೆಂದೆನಿಸಲ್ಕಮಕ್ಕುಮೀ
ತನುವಿನ ಪೋದ ಪಿಂಬಡಿನೊಳೊಡ್ಡುವ ಕಾಲಮನಿಪ್ಪ ಸೈಕತಾ
ವನಿಯೊಳಗೊತ್ತಿ ಪಜ್ಜೆಗುರುಪಂ ನೆಲೆಗೆಯ್ಯಲುಮಕ್ಕುಮೆಂಬಿದಂ
ನೆನೆಯಿಪುದಲ್ತೆ ಪುಣ್ಯಚರಿತಂ ಭುವನಸ್ತುತಮಾರ್ಯವರ್ಯರಾ

ಉತ್ತಮರಾಜ್ಯ

''ಕಂದ ಕೇಳುತ್ತಮದ ರಾಜ್ಯ ಒಂದಿಹುದು ;
ಮಂದಿ ಎಲ್ಲವು ಸುಖದಿ ಬಾಳುತ್ತಲಿಹುದು ;
ಎಂದು ನೀನಾಡುವಾ ರಾಜ್ಯ ಎಲ್ಲಿಹುದು ?
ಕಂದನಲಿ ಕರುಣೆಸುತ ಇಂದು ತಿಳಿಸಮ್ಮಾ.'' ೧

''ಕಿತ್ತಿಳೆಯ ಮರಗಳಲಿ ಹೂಗಳರಳುತ್ತ,
ಎತ್ತಲೂ ಮಿಂಚುಹುಳು ಚಿಮ್ಮಿ ಕುಣಿಯುತ್ತ
ಮುತ್ತಿಕೊಂಡಿಹ ದೇಶದೊಳಗಿಹುದೆ ? ತಾಯೆ''
''ಅತ್ತಲಿಲ್ಲಾ ರಾಜ್ಯ ಅತ್ತಲಿಲ್ಲಣುಗಾ !'' ೨

''ತಾಳೆಗಳು ಬೆಳೆದು, ಖರ್ಜೂರದಲಿ ಹಣ್ಣು
ಜೋಲುತಿಹ, ಬಿಸಿಲ ಸೀಮೆಯಲಿ ನೆಲಸಿಹುದೆ
ಆಲಿಗಳಿಗಚ್ಚ ಹಸುರಾಗಿ ಸೊಗಸುತ್ತ
ಸಾಲುಸಾಲಾಗೆಸೆದು ಸಾಗರದ ನಡುವೆ ?'' ೩

''ಹಳುವಗಳ ಪರಿಮಳವ ಗಾಳಿಗೊಪ್ಪಿಸುತ,
ಹಲವು ಬಣ್ಣದ ಗರಿಯ ಪಕ್ಷಿಸಂಕುಲದಿ
ತೊಳಗುವಾ ದ್ವೀಪಂಗಳಲ್ಲಿಹುದೆ ? ತಾಯೆ !''
''ಎಲೆ ಮಗುವೆ! ಕೇಳತ್ತಲಿಲ್ಲತ್ತಲಿಲ್ಲ.'' ೪

"ಹೊಳೆವ ಹೊನ್ನಿನ ಮರಳ ಮೇಲೆ ಹೊಳೆ ಹರಿವ,
ತೊಳಗುತಿಹ ಕೆಂಪುಗಳ ಕೆಂಬೆಳಗನುಗುಳ್ವ
ತಳತಳಿಪ ವಜ್ರಗಳ ಗಣಿಗಳಿಂದೆಸೆವ
ತಿಳಿಮುತ್ತುಗಳ ನಗೆಯ ಬೆಳಕಿಂದ ಹೊಳೆವ ೫

ಜಲದೊಳಗೆ ನೆಲೆಗೊಂಡ ಹವಳಗಳ ಕಳೆಗೆ
ತಳಿರ ಬಣ್ಣವ ತಳೆದ ಸಾಗರದ ನಡುವೆ
ಹೊಳೆವ ದ್ವೀಪಂಗಳಲಿ ನೆಲಸಿಹುದೆ ? ತಾಯೆ !''
''ಎಲೆ, ಮಗುವೆ ! ಕೇಳತ್ತಲಿಲ್ಲತ್ತಲಿಲ್ಲ.'' ೬

''ಅದರ ಸೊಗಸಿನ ಸಿರಿಯ ಕಣ್ಣು ಕಂಡಿಲ್ಲ.
ಅದರ ಗಾನದ ಸವಿಯ ಕಿವಿ ಅರಿದುದಿಲ್ಲ.
ಅದರಂದವನಂ ಕನಸು ಕಂಡರಿದುದಿಲ್ಲ.
ಅದರ ನೆಲೆಯನು ಸಾವುನೋವರಿದುದಿಲ್ಲ.'' ೭

''ಎಂದೆಂದುಮಾ ಪರಮರಾಜ್ಯವಿಭವಗಳು
ಕುಂದು ಕೊರತೆಗೆ ಸಿಲುಕದೊಂದೆ ತೆರವಿಹವು
ಕಂದ ! ಕೇಳದು ಸಾವಿನಿಂದತ್ತಲತ್ತ
ನಿಂದು ತಾನನುಗಾಲ ಎಸೆದೊಪ್ಪುತಿಹುದು.'' ೮

ಕುರುಡ ಹುಡುಗ

ಆಲಿಸುವುದೆಲೆ ಮಿತ್ರರಿರ ! ಬಹು
ಕಾಲವಾದೊಡಮೆನಗರಿಯಲನು
ಕೂಲವಾಗದ ಬೆಳಕೆನಿಪ್ಪುದು ವಸ್ತುವಾವುದದು
ಪೇಳಿರೈ ನೇತ್ರೇಂದ್ರಿಯಕ್ಕಿಹ
ಮೇಲೆನಿಪ ಫಲಮಾವುದದರ ಕರು
ಣಾಳುಗಳಿರಾ ಪೇಳಿರೀ ಬಡಕುರುಡನಾದೆನಗೆ ೧

ಒರೆವಿರಾ ಆವುದೊ ವಿಚಿತ್ರದ
ಪರಿಪರಿಯ ವಸ್ತೂತ್ಕರಂ ಗೋ
ಚರಿಪುವೆಂದತಿಶಯದೆ ಪೊಳೆವಾ ಸೂರ್ಯನೆಂದೆನಿಪ

ಪರಮವಸ್ತುವದಾವುದೆನಗದ
ನೊರೆಯಿರೆನಗದು ಬಿಸಿಲೆನಿಸಿ ಗೋ
ಚರಿಪುದದರಿಂದೆಂತು ಪಗಲಿರುಳ್ಕಳ್ವವೋ ಪೇಳಿಂ ೨

ಪಗಲುಮಿರುಳುಂ ನೋಡೆ ಮದಧೀ
ನಗಳಲಾ ನಾನಾಡುವಾಗಲೆ
ಪಗಲು ನಿದ್ದೆಯು ಮಾಡುವಾಗಲೆ ರಾತ್ರಿಯೆನಿಸುವುದು
ಬಗೆಬಗೆಯ ಬಿನದಂಗಳಿಂದಾ
ವಗಮುಮೆಚ್ಚರಗೊಂಡು ನಿದ್ದೆಯ
ನುಗಿಯ ಬಲ್ಲವನೆನಿಸಿದೊಡೆ ನಾಂ ಪಗಲೆ ನನಗಂದು ೩

ಪರಮಮಿತ್ರರೆ ಬಾರಿಬಾರಿಗು
ಮರದೆ ಭಾಗ್ಯವಿಹೀನನೆಂದೆನಿ
ಸಿರುವ ನನ್ನ ನಿಮಿತ್ತದಿಂದೇನೆಂಬೆನಕಟಕಟ
ಮರುಗುವಿರಿ ನಾನಾದೊಡೆಂದಿಗು
ಮರಿಯಲರಿದಾದೆನ್ನ ಕೊರತೆಯ
ನುರುತರ ಮನಸ್ಥೈರ್ಯಬಲದಿಂ ಸಹಿಸಿಕೊಂಡಿಹೆನು ೪

ಅದು ನಿಮಿತ್ತದಿನೆಂದಿಗುಂ ದೊರೆ
ಯದುದು ನನ್ನಯ ಮನದ ಶಾಂತಿಯ
ಚದುರಿಸುವುದೇಕಾವಗಂ ಸಂತಸದೊಳಿಹ ನಾನು
ಉದಿಸಿದುದು ಮೊದಲಾಗಿ ಮದ್ಭಾ
ಗ್ಯದ ವಿಪಾಕದ ಬಡಕುರುಡನೆನಿ
ಸಿದೊಡಮೀ ಜಗದಲ್ಲಿ ದೊರೆಯಾಗಿರ್ಪೆನೈ ಸಖರೇ ೫

ಕೋಗಿಲೆ

ಎಲೆ ಕೋಗಿಲೆ ನಿನ್ನ ದನಿಯು ಕೇಳಿಹೆ ನಾನು
ನಲಿಯುತೆ ಮತ್ತೆ ಕೇಳುವೆನು
ಚೆಲುವ ಹಕ್ಕಿಯೊ ನೀನಲ್ಲದೆ ಸುತ್ತಲು
ಸುಳಿವ ಬರಿಯ ಸವಿದನಿಯೋ ೧

ಗರುಕೆಯ ಮೇಲೆ ಮಲಗಿ ನಾನು ಕೇಳುವೆ
ನೆರಡು ಬಗೆಯ ನಿನ್ನ ದನಿಯ
ಗಿರಿಯಿಂದ ಗಿರಿಗೆ ಲಂಘಿಸಿ ಕೇಳಿಸುವುದದು
ನೆರೆಯೊಳಗಂತೆ ದೂರದೊಳು ೨

ಹೂವಿನ ಸಿಂಗರದಿಂದಲೊಪ್ಪುವ ವನ
ದೇವಿಯ ಮುಂಗಡೆ ಹಾಡಿ
ನಾವು ಬಾಲ್ಯದಿ ಮನದಲಿ ಬಣ್ಣವಿಕ್ಕಿದ
ಭಾವಕೆ ಬಣ್ಣವೇರಿಸುವೆ ೩

ಬಾರೊ ಬಸಂತದ ಕಂದ ಬಾಬಾ ಬಾರೊ
ಹಾರುವ ಹಕ್ಕಿ ನೀನಲ್ಲ
ಸಾರುವ ದನಿ ಮಾಯದ ಗಂಟು ಕಣ್ಣಿಗೆ
ತೋರದ ಹುರುಳಾಗಿ ಸುಳಿವೆ ೪

ಶಾಲೆಯೊಳೋದುವ ಕಾಲದಿ ನಲಿದು ನಾ
ನಾಲಿಸಿ ದೆಸೆದೆಸೆಯಲ್ಲಿ
ಆಲಿಯ ಸುಳಿಸುತ ಪೊದರಲಿ ಮರದಲಿ
ಮೇಲೆಯಾಗಸದಲಿ ನೋಡಿ ೫

ಹುಡುಕುತ ನಿನ್ನನು ಬನದಲಿ ಬಯಲಲಿ
ಯೆಡೆವಿಡದಲೆದೆನು ನಾನು
ಪಡೆಯದ ಬಯಕೆ ಕೈಗೂಡದ ಪ್ರೀತಿ ಕ
ಣ್ಗೆಡೆಯಾಗದೊಲಪಾದೆ ನೀನು ೬

ಈಗಳು ಹಸಲೆಯ ಮೇಲೆ ಮಲಗಿ ನಿನ್ನ
ಕೂಗನಾಲಿಸಿ ನಲಿನಲಿದು
ಆಗಳಿನಾನಂದದಿಂಪಿನ ಸೊಂಪನು
ರಾಗದಿ ಸವಿವೆನು ಮತ್ತೆ ೭

ಎಲೆ ಕೋಗಿಲೆ ನೀನೆ ಧನ್ಯನು ನಿನ್ನುಲಿ
ಗಿಳೆ ತನ್ನ ಬಿರುಸನು ತೊರೆದು
ತಳೆದಿಂದ್ರಲೋಕದ ಸವಿಸೊಬಗನು ನಿನ್ನ
ನೆಲೆಗೆ ತಕ್ಕರಮನೆಯಹುದು ೮

'ಚಂಡಮಾರುತ'ದ ಪದ್ಯಗಳು

ಕಡಲ ತಳದೊಳು ನಿನ್ನ ತಂದೆಯು
ಕೆಡೆದಿಹನು; ಮೇಣವನ ಮೂಳೆಯು
ಗಡಣವಿದೆ ಹವಳಂಗಳಾದವು, ಕಣ್ಣು ಮುತ್ತಾಯ್ತು
ಒಡಲೊಳಗೆ ಕೆಡುವೆಲ್ಲ ವಸ್ತುಗ
ಳೊಡನೆ ಕಡಲ್ಕೈಸಿರಿಗೆ ಸಲ್ವುವು
ಪಡೆದಪವು ಪೊಸತಪ್ಪ ಸಂಪ(ದ)ದೊಂದು ಪೆರ್ಚುಗೆಯಾ ೧

ಅವನ ಚರಮಶ್ಲೋಕವನು ಪಾ
ಡುವದಿದೇ ನಾಗಾಂಗನಾಜನ
ವವಿರತಂ ಬಾಜಿಸುವ ಘಂಟೆಯ ಘಣಘಣಾರಾವ
ಕಿವಿಯೊಳಗೆ ಜಿನುಗುವುದು ನಾನಾ
ರವವನಿದೆ ಕೇಳುವೆನು ಕೇಳ್ ಕೇಳ್
ಕವಿದು ಮುತ್ತುವ ಘಂಟೆಗಳ ಘಣಘಣಘಣಧ್ವನಿಯಂ ೨

*　　　*　　　*

ಕಿರಿಯ ತುಂಬಿಗಳುಂಬ ಹೂವಿನ
ಹೊರಳಿಯಲಿ ಜೇನುಂಡು ನಲಿವೆನು
ಕೊರಲ ಸರವನು ತೋರಿ ಗೂಗೆಗಳುಲಿವ ಕಾಲದಲಿ
ಬಿರಿದ ನೆಯ್ದಿಲ ತೊಟ್ಟಿಲೊಳು ನಾ
ನೊರಗುವೆನು ಮೇಣಾ ಬಸಂತದ
ಹರಹಿನಲಿ ನಲಿನಲಿದು ಕಬ್ಬಕ್ಕಿಗಳ ನುಣ್ಗರಿಯಾ ೩

ಏರುವೆನು ಮನಬಂದ ಠಾವಿಗೆ
ಹಾರುವೆನು ಪರಿಮಳದ ಸುಗ್ಗಿಯ
ಸೂರೆಗೊಡುತಿಹ ಮರದ ಕೋಡಿನ ತುದಿಯ ಹೂಗಳನು
ಸಾರುವೆನು ಮೋಣವರ ನೆಳಲನು
ಸೇರುವೆನು ನಾನಲ್ಲಿ ಹರ್ಷದ
ವಾರಿನಿಧಿಯೊಳು ಮೂಡಿ ಮುಳ್ಕಾಡುತ್ತೆ ಬಾಳುವೆನು ೪

ನಕ್ಷತ್ರ

ಮಿರಂಮಿರುಗುವೆ ಹಾ
ಕಿರುತಾರಗೆಯೇ
ಅರಿಯೆನು ನಾನೆಲೆ ನೀನಾರೋ
ಧರೆಗಿಳಿಯದೆ ನೀ
ನಿರುತಿಹೆ ದೂರದಿ
ನೆರೆ ಹೊಳೆಯುವೆ ವಜ್ರದ ತೆರದಿ ೧

ತೊಳಗುವ ಸೂರ್ಯನು
ಮುಳುಗಿದ ಕಾಲದಿ
ಬೆಳಕೆಲ್ಲೆಲ್ಲಿಯು ಕಾಣಿಸದು
ಇಳೆಯೊಳು ಜನರಿಗೆ
ಬೆಳಕನು ತೋರುತ
ಸಲೆ ಮಿಣುಕುತ್ತಿರು ರಾತ್ರಿಯೊಳು ೨

ಮೀರಿದ ಕತ್ತಲೆ
ಸೇರಿದ ಸಮಯದಿ
ದಾರಿಯು ನಡೆವವರೀ ಬೆಳಕ
ಸಾರುತೆ ನುತಿಪರು
ತೋರದೆ ನೀನಿರೆ
ದಾರಿಗರಿಗೆ ದೆಸೆ ಕಾಣುವುದೇ ೩

ಬಿಡುವು

ಬಾರೋ ನಾವಾಡುವ ಬಾರೋ,
ಸಾರಿತು ಸುಗ್ಗಿಯ ತಿಂಗಳಿದೋ,
ಸಾರುವ ನಾವಿಂದಿನ ದಿನದಿ
ದೂರದ ಬೆಟ್ಟದ ಮೇಗಡೆಗೆ ೧

ಭಲರೇ ಬಿಡುವಾಗಿಹುದಿಂದು
ತೊಳಲುತ ವನದಲಿ ತಪ್ಪಲಲಿ

ನೆಳಲಲಿ ಬಿಸಿಲಲಿ ನಲಿದಾಡಿ
ಸುಳಿವೆವು ದೂರದ ಬೆಟ್ಟದಲಿ ೨

ಹೂಗಿಡದಲಿ ಹೂವರಳಿಹುದು,
ಆಗಸ ತೊಳೆದಂತೆಸೆದಿಹುದು,
ಕೂಗುವುವೆತ್ತಲು ಹಕ್ಕಿಗಳು,
ಸಾಗುವೆವಾ ಬೆಟ್ಟದ ಬಳಿಗೆ ೩

ಯಾರೊಬ್ಬರು ಹಿಂದುಳಿಯದಿರಿ,
ಸೇರಿಸಿಕೊಳ್ಳಿರಿ ಹಸುಳೆಗಳ,
ಸಾರುವೆವೆಳಗಾಳಿಗಳಲೆವ
ದೂರದ ಬೆಟ್ಟದ ಮೇಗಡೆಗೆ ೪

ಮಕ್ಕಳು ಮಲಗುವ ಹೊತ್ತು

ಹೊತ್ತು ಮುಳುಗುತ್ತಲಿದೆ
ಕತ್ತಲಾಗುತ್ತಲಿದೆ
ಎತ್ತಲೂ ಕಾಗೆಗಳು ಗೂಡ ಬಳಿಗೆ
ಮತ್ತೆ ಕಾಯೆಂದು ಕೂ
ಗುತ್ತಲಾಗಸದೆ ಹಾ
ರುತ್ತಲಿವೆ ಮಲಗುವಾ ಹೊತ್ತಾಯಿತು ೧

ಹಗಲು ಕಳೆದುದು ತಾವ
ರೆಗಳೆಸಳು ಮುಚ್ಚುತಿದೆ
ಬಗೆಬಗೆಯ ಹೂವುಗಳು ಮೊಗವ ಮುಸುಕಿ
ಬಿಗಿದ ನಿದ್ದೆಯೊಳಿಹವು
ಮಗುವೆ ಅದರಿಂದ ಹಾ
ಸಿಗೆಯಲ್ಲಿ ಮಲಗುವಾ ಹೊತ್ತಾಯಿತು ೨

ಬಲುನಿದ್ದೆಯಿಂದೆರಕೆ
ಗಳ ಮುಚ್ಚಿದುವು ಚಿಟ್ಟೆ
ನಿಲಿಸಿದುವು ಹಾಡುಗಳ ತುಂಬಿ ಹಕ್ಕಿ

ಕೆಲಸವನು ಮುಗಿಸಿ ಮರಿ
ಗಳಿಗೆ ಗುಟುಕನು ಕೊಟ್ಟು
ಮೆಲೆ ಮಂಗುವೆ ಮಲಗುವಾ ಹೊತ್ತಾಯಿತು ೩

ಅದೊ ಮಂದೆಯಿಂದೆ ಬಂ
ದುದು ಕರುಗಳೆಡೆಗೆ ಹಸು
ಅದೊ ಹಾಸಿದಾ ಹುಲ್ಲ ಮೇಲೆ ಕುಳಿತು
ಮುದದೆ ಮೆಲುಕಿಕ್ಕಿ ಮಲ
ಗಿದುದು ಕರುಗಳ ಕೂಡಿ
ಇದೊ ಕಂದ ಮಲಗುವಾ ಹೊತ್ತಾಯಿತು ೪

ಒಳ್ಳಿತಾಗಲಿ ನಿನಗೆ
ಒಳ್ಳಿತಾಗಲಿ ನಿನಗೆ
ಒಳ್ಳಿತಾಗಲಿ ನಿನಗೆ ಬೆಳಗುತನಕ
ಒಳ್ಳೆ ಕನಸುಗಳು ಕ
ಣ್ಣಲ್ಲಿ ಸುಳಿಯಲಿ ಮಂಗುವೆ
ಉಲ್ಲಸದಿ ಮಲಗುವಾ ಹೊತ್ತಾಯಿತು ೫

ಮರಳಿ ಯತ್ನವ ಮಾಡು

ಮರಳಿ ಯತ್ನವ ಮಾಡು
ಮರಳಿ ಯತ್ನವ ಮಾಡು
ತೊರೆಯದಿರು ಮೊದಲು ಕೈಗೂಡದಿರಲು
ಭರದಿ ಧೈರ್ಯವ ತಾಳು
ತೊರೆಯದಿರು ತೊರೆಯದಿರು
ಮರಳಿ ಯತ್ನವ ಮಾಡೆ ಸಿದ್ಧಿಸುವುದು ೧

ಒಂದು ಸೋಳಲಿ ಕೆಟ್ಟೆ
ತೆಂದು ಬೆದರದೆ ಮಾಡು
ಕುಂದಿಲ್ಲ ಕೈಗೂಡದಷ್ಟರಿಂದ

ನೊಂದುಕೊಳ್ಳದೆ ಮರಳಿ
ಮುಂದೆ ಯತ್ನವ ಮಾಡು
ಸಂದೇಹವಿಲ್ಲದದು ಸಿದ್ಧಿಸುವುದು ೨

ಕೆಲಸವಿದು ಕಷ್ಟವೆಂ
ದಳುಕಿ ಬಿಡದಿರು ಮಾಡು
ಫಲಗಳನು ಕೊಡುವುದದು ಕೊನೆಗೆ ನಿನಗೆ
ಸುಲಭವಹುದಾ ಕೆಲಸ
ಫಲಿಸುವುದು ಹುಲಿಸುವುದು
ನೆಲೆಗಿಡದೆ ಯತ್ನವನು ಮಾಡು ಮಗುವೆ ೩

ಸಭಾಪರ್ವದ ನಾಂದಿ ಫಲಶ್ರುತಿಗಳು

ವಂದಿಸಿ ನಾರಾಯಣನಂ
ವಂದಿಸಿ ನರವರ್ಯನಪ್ಪ ನರನಂ ಬಳಿಯಂ
ವಂದಿಸಿ ವಾಣೀವಧುವಂ
ವಂದಿಸಿ ಬಿಯಸನುಮನೊಡನೆ ನುಡಿವುದು ಜಯಮಂ ೧

ಎರಡನೆಯ ಪರ್ವಮಿದರೊಳ್
ದೊರೆಕೊಳ್ವುದು ಮೊದಲ ಪರ್ವದಿಂದೆಯುಮಿನಿದಾ
ಗಿರೆ ರಸಮೀ ಭಾರತದೊಳ್
ಪರಿವರ್ಧಿಪುದಲ್ತೆ ಪರ್ವಪರ್ವದೊಳಮೃತಂ ೨

ಸೂರ್ಯಕಿರಣ

ಅರಮನೆಯೆಂದೆನ್ನುತ ನೆಲೆನಿಲ್ಲದೆ
ತರಗಿನ ಮನೆಯೆಂದೆನ್ನುತ ತೊರೆಯದೆ
ಸರಿತೂಕದೆ ನೋಡುತಲೆಲ್ಲರ ಸುಖಸಂಪದವಾಗಿರುವೆ
ಹರಹುವೆ ನೆಲವೆನ್ನದೆ ಜಲವೆನ್ನದೆ
ಹಿರಿದಹ ಸಮ್ಮೋದವನೆಲೆ ಸೂರ್ಯನ
ಕಿರಣವೆ ನಿನಗೆಣೆಯಹುದಾವುದು ಭೂಮೀತಲದೊಳಗಿಹುದು ೧

ಅಲೆಗಳ ತಲೆಯಲಿ ನೀನಡಿಯಿಟ್ಟರೆ
ಜಲಜಲಿಸುತ ಸಾಗರವೇ ನಗುವುದು
ತೊಳಗುವುದದರೊಳು ಗಣನೆಗೆ ಸಿಲುಕದನಂತದ್ವೀಪಗಳು
ಹಳಚನೆ ಹಡಗುಗಳೆಸೆವುವು ಬೆಳ್ಳನೆ
ಬೆಳುನೊರೆ ಪೊಳೆವುದು ನಾವಿಕರೆಲ್ಲರು
ತಳೆವರು ಹರುಷವ ನಂಟರ ನುಡಿಯನು ಕೇಳಿದ ತೆರದಿಂದ ೨

ಬೆಟ್ಟದ ತಲೆಯಲಿ ಮಂಜು ಮುಸುಕಿ ಕ
ಬ್ಬೆಟ್ಟಿಯು ಸುತ್ತಿದ ತೆರದಲಿ ತೋರುತ
ದಿಟ್ಟಿಗೆ ಕತ್ತಲೆ ಕವಿದಂದದಿ ಕಡುಕರ್ರಗೆ ಕಾಣಿಸಿತು
ಹುಟ್ಟಿದೆ ಕಿರಣವೆ ನೀನದ ತೊಟ್ಟನೆ
ಮುಟ್ಟಿದೆಯದು ಪೊಸವಜ್ರಕಿರೀಟವ
ನಿಟ್ಟಾ ಬೆಟ್ಟಕೆ ಹೊಸಹೊಂಬಟ್ಟೆಯ ಹೊದಿಸಿದ ತೆರನಾಯ್ತು ೩

ಒಕ್ಕಲಿಗನ ಹಟ್ಟಿಯು ನೋಡಿದರದು
ದುಕ್ಕದಿ ಮುಂಡೆಗೆ ಕಂಬಳಿಯನು ಮುಸು
ಕಿಕ್ಕುತ ಮೌನದೆ ಮೂಗಾದಂದದೆ ತೋರಿತು ಕಂಗಳಿಗೆ
ಇಕ್ಕಿದೆ ನೀನತ್ತಲೆ ಕಣ್ಗಳನದು
ಸಿಕ್ಕಿತು ನಿನ್ನಯ ಮಂತ್ರಕೆ ಕೂಡಲೆ
ನಕ್ಕುದು ಭರದಿಂದುಕ್ಕುವ ಸುಮ್ಮಾನದ ಹೊಸ ಸುಗ್ಗಿಯಲಿ ೪

ಎಲೆ ಸುಗ್ಗಿಯ ಸೂರ್ಯನ ಕಿರಣವೆ ಭೂ
ತಲದೊಳಂ ನಿನಗಾವುದುಂ ಸರಿಯಪ್ಪುದು
ನೆಲಕೆಲ್ಲಕೆ ಸುಖ ಜಗಕೆಲ್ಲಕೆ ಸಂತಸ ನೀನಾಗಿರುವೆ
ನೆಲದೊಳು ನಿನ(ಗೆಣೆ)ಯಹುದೊಂದಿಹುದದು
ಹುಲುಮಾನಸನನು ಪರಮಪದದ ನಿ
ಶ್ಚಲತೇಜದೆ ಕೂಡಿಸುತಿಹುದದೆ ಜಗದೀಶ್ವರಪದಭಕ್ತಿ ೫

೧. ಉತ್ತರರಾಮ ಚರಿತಂ

ಮೊದಲನೆಯ ಅಂಕ

ಇದುವೇ ಪೂರ್ವಕವೀಂದ್ರರ
ಪದಕೆ ನಮಸ್ಕಾರವೆಂದು ನುಡಿವೆವು ಬಳಿಕಂ
ಪದಪಿಂದೆ ನಮಿಪೆವಾ ಶಾ
ರದೆಯಂ ಪರಮಾತ್ಮಕಲೆಯುನನಪಾಯಿನಿಯಂ ೧

ಸೂತ್ರಧಾರ—(ನಾಂದಿಯ ಬಳಿಕ, ಸಭೆಯನ್ನು ನೋಡಿ) ಸಭೆಸೇರಿರುವ ಪೂಜ್ಯರಿರಾ! ಶ್ರೀಕಾಳಪ್ರಿಯನ ಯಾತ್ರೋತ್ಸವದಲ್ಲಿ ನನ್ನದೊಂದು ವಿಜ್ಞಾಪನೆಯಿರುವದು ; ಅದನ್ನು ತಾವು ಲಾಲಿಸಿ ಕೇಳಬೇಕು. ಕಶ್ಯಪಗೋತ್ರೋತ್ಪನ್ನನಾಗಿ ಪದವಾಕ್ಯಪ್ರಮಾಣಜ್ಞನಾದ ಶ್ರೀಕಂಠ ಭವಭೂತಿಯೆಂಬ ಮಹಾಕವಿಯು ಪ್ರಖ್ಯಾತನಾಗಿರುವನಲ್ಲವೆ—

ಆ ವಿಪ್ರನ ಬೆಂಬಳಿಯೊಳ
ಗೀ ವಾಗ್ವಧು ವಶ್ಯೆಯಾದವೋಲ್ ಬಳಿಸಲ್ವಳ್
ಕೋವಿದತಿಲಕನವಂ ಪೇ
ಳ್ದಾವುತ್ತರರಾಮಚರಿತಮಂ ಕನ್ನಡಿಪೆಂ ೨

ಕವಿಯ ಇಷ್ಟಾನುಸಾರವಾಗಿ ನಾನು ಆಗಲೇ ಅಯೋಧ್ಯಾದೇಶದವನೂ ರಾಮಚಂದ್ರನ ಸಮಕಾಲದವನೂ ಆಗಿಬಿಟ್ಟೆನು. (ಸುತ್ತಲೂ ನೋಡಿ) ಎಲೆಲಾ ! ರಾವಣವಂಶಧೂಮಕೇತುವಾದ ಮಹಾರಾಜ ರಾಮಚಂದ್ರನ ಈ ಪಟ್ಟಾಭಿಷೇಕ ಮಹೋತ್ಸವದಲ್ಲಿ ಮಂಗಳವಾದ್ಯಗಳು ಹಗಲೂ ಇರುಳೂ ಏಕಪ್ರಕಾರವಾಗಿ ಭೋರ್ಗರೆಯುತ್ತಿದ್ದುವು. ಅದೇನು, ಈಗ ರಾಜಬೀದಿಗಳಲ್ಲಿ ಆಳುಗಳ ಸದ್ದೇ ಕಾಣದಿದೆ ?

(ನಟನು ಪ್ರವೇಶಿಸುತ್ತಾನೆ.)

ನಟ—ಎಲೈ ಆರ್ಯನೆ, ಮಹಾರಾಜ ರಾಮಚಂದ್ರನು ತನ್ನೊಡನೆ ಬಂದಿದ್ದ ಲಂಕಾಸಮರಸಹಾಯಿಗಳಾದ ಕಪಿಶ್ರೇಷ್ಠರನ್ನೂ ರಾಕ್ಷಸೋತ್ತಮರನ್ನೂ ಅವರವರ ಸ್ಥಾನಗಳಿಗೆ ಕಳುಹಿಸಿಕೊಟ್ಟನು. ನಾನಾ ದೇಶಗಳಿಂದ ಬಂದಿದ್ದ ಪೂಜ್ಯರಾದ ಬ್ರಹ್ಮರ್ಷಿಗಳೂ ದೇವರ್ಷಿಗಳೂ ರಾಜರ್ಷಿಗಳೂ ಸ್ವಸ್ಥಾನಗಳಿಗೆ ತೆರಳಿದರು. ಅವರುಗಳನ್ನು ಆರಾಧಿಸುವುದಕ್ಕಾಗಿ ಇದುವರೆಗೂ ಮಹೋತ್ಸವವು ಬೆಳೆಯಿತು.

ಸೂತ್ರಧಾರ—ಅಹುದು; ನ್ಯಾಯ. ಇದು ಸರಿಯಾದ ಕಾರಣ.

ನಟ—ಇದಕ್ಕೆ ಇನ್ನೂ ಒಂದು ಕಾರಣವುಂಟು. ಅದೇನೆಂದರೆ—

ಅರಸನ ಮಾತೆಯರುಂ ತಾ
ಮರುಂಧತೀಸತಿಯನಿರದೆ ಮುಂಕೊಂಡು ವಸಿ
ಷ್ಠರ ಕಾಪಿನೊಳಾ ಜಾಮಾ
ತರನಾಶ್ರಮದೆಡೆಗೆ ಯಾಗಕೀಗಳೆ ಸಾರ್ದರ್ ೩

ಸೂತ್ರಧಾರ—ನಾನು ಪರಸ್ಥಳದವನಾದುದರಿಂದ ಕೇಳುತ್ತೇನೆ; ಜಾಮಾತೃವೆಂಬವರು ಯಾರು ?

ನಟ—

ಪಡೆದಂ ದಶರಥನರಪತಿ
ಕೊಡಗೂಸಂ ಶಾಂತೆಯೆಂಬಳಂ ಮೋಣವಳಂ
ಪಡೆದ ಮಗಳಂತೆ ನೀಂ ಕಾ
ಪಿಡೆನುತ್ತುಂ ರೋಮಪಾದನೃಪತಿಗೆ ಕೊಟ್ಟಂ ೪

ಆಕೆಯನ್ನು ವಿಭಂಡಕಪುತ್ರನಾದ ಋಷ್ಯಶೃಂಗನು ಮದುವೆಯಾದನು. ಆತನೇ ಈಗ ದ್ವಾದಶವಾರ್ಷಿಕ ಸತ್ರವನ್ನು ಆರಂಭಿಸಿರುವನು. ತನ್ನಿಮಿತ್ತವಾಗಿ ಮಹಾ ಮಾತೃಶ್ರೀಗಳು ಪೂರ್ಣಗರ್ಭಿಣಿಯಾದ ಜಾನಕೀದೇವಿಯನ್ನು ಇಲ್ಲಿಯೇ ಬಿಟ್ಟು ಅಲ್ಲಿಗೆ ಹೋದರು.

ಸೂತ್ರಧಾರ—ಒಳ್ಳೆಯದು. ಈ ಸಮಾಚಾರವನ್ನು ಕಟ್ಟಿಕೊಂಡು ನಮಗೇನು ? ಬಾ, ನಮ್ಮ ಜಾತಿಪದ್ಧತಿಯ ಮೇರೆ ರಾಜದ್ವಾರದಲ್ಲಿ ನಿಂತು ಸ್ತೋತ್ರಮಾಡೋಣ.

ನಟ—ಹಾಗಾದರೆ ಪರಿಶುದ್ಧವಾಗಿಯೂ ರಾಜಸೇವಾಯೋಗ್ಯವಾಗಿಯೂ ಇರುವ ಸ್ತೋತ್ರವನ್ನು ನೀವೇ ನಿರೂಪಿಸಬೇಕು.

ಸೂತ್ರಧಾರ—

ನುಡಿಯಲಿಪೇಳ್ಕುಂ ನುಡಿವುದ
ನಡೆಯೊಳ್ ಪರಿಶುದ್ಧಮೆಂಬ ಮಾತೆಲ್ಲಿರ್ಕುಂ
ನುಡಿಗಳ ಗುಣದೊಳಗೆಂತಾ
ಮಡದಿಯ ಗುಣದೊಳಗಮಂತೆ ಲೋಕಂ ದುಷ್ಟಂ ೫

ನಟ—ಅತಿದುಷ್ಟವೆಂದು ಹೇಳಬೇಕು. ಏಕೆಂದರೆ

ದೇವಿಯೊಳವನೀಜೆಯೊಳಂ
ಭಾವಿಸುವುದು ಪಳಿವನಹಹ ರಾಕ್ಷಸಗೃಹದೊಂ
ದಾವಾಸಮೆ ನೆಪಮಕ್ಕುಂ
ಪಾವಕಸಂಶುದ್ಧಿ ನಿಶ್ಚಯಕ್ಕೆಡೆಯಲ್ಲಂ ೬

ಸೂತ್ರಧಾರ—ಈ ಜನವಾರ್ತೆ ಮಹಾರಾಜನ ಕಿವಿಗೆ ಬಿದ್ದರೆ ಬಹಳ ಕಷ್ಟ.

ನಟ—ಋಷಿಗಳೂ ದೇವತೆಗಳೂ ಸರ್ವಪ್ರಕಾರದಲ್ಲಿಯೂ ಮಂಗಳವನ್ನು ಉಂಟು ಮಾಡುವರು.

ಸೂತ್ರಧಾರ—(ಮುಂದೆ ಹೋಗಿ ಆಕಾಶದಲ್ಲಿ ಲಕ್ಷ್ಯವಿಟ್ಟು) ಎಲೈ, ಈಗ ಮಹಾರಾಜ ರವರು ಎಲ್ಲಿರುವರು ? (ಆಕಾಶದಲ್ಲಿ ಕಿವಿಗೊಟ್ಟು) ಜನರು ಹೀಗೆಂದು ಹೇಳು ವರು :

ಜನಕಂ ಪ್ರೀತಿಯೊಳೋಲಗಿಪ್ಪ ಬಗೆಯಿಂದೈತಂದು ತಾನಿನ್ನೆಗಂ
ಮನಮೊಲ್ದಿರ್ದು ವಿದೇಹಕಿಂದೆ ಮಗುಳ್ದಂ ಪೋತಂದನಾ ದೂಸರಿಂ
ಮನಮಂ ಚಿಂತೆಗೆ ಪಕ್ಕುಗೆಯ್ದಿನಿಯಳಂ ಸಂತೈಸಲೆಂದೆಳ್ದು ತೊ
ಟ್ಟನೆ ಧರ್ಮಾಸನದಿಂದೆ ಬಂದು ಪುಗುವಂ ಶುದ್ಧಾಂತವಂ ರಾಘವಂ ೭

(ಎಂದು ಇಬ್ಬರೂ ಹೊರಟುಹೋಗುವರು)

ಪ್ರಸ್ತಾವನೆ

[ಬಳಿಕ ರಾಮನೂ ಸೀತೆಯೂ ಕುಳಿತು ಪ್ರವೇಶಿಸುತ್ತಾರೆ.]

ರಾಮ—ದೇವಿ, ಸ್ವಲ್ಪ ಸಂತೈಸಿಕೋ, ಸಂತೈಸಿಕೋ. ಗುರುಜನಗಳೂ ಕೂಡ ನಮ್ಮನ್ನು ಬಿಟ್ಟಿರಲಾರರು. * ಆದರೆ ನಿತ್ಯಕರ್ಮಾನುಷ್ಠಾನವು ಅವರ ಸ್ವಾತಂತ್ರ್ಯಕ್ಕೆ ಕುಂದಕವನ್ನು ಉಂಟುಮಾಡುವುದು. ಆಹಿತಾಗ್ನಿಗಳಾದ ಗೃಹಸ್ಥರಿಗೆ ನಿರ್ಬಂಧ ಗಳು ಇದ್ದೇ ಇರುತ್ತವೆ. ೮

ಸೀತೆ—ಆರ್ಯಪುತ್ರನೆ ! ಅದನ್ನು ಬಲ್ಲೆನು. ಆದರೂ ಬಂಧುಜನವಿಯೋಗವು ಸಂತಾಪ ವನ್ನು ಉಂಟುಮಾಡುವುದು.

ರಾಮ—ಹೀಗೆಯೇ. ಸಂಸಾರವೇ ಹೃದಯವನ್ನು ಕೊಯ್ದಿಕ್ಕುವುದು. ಅದರಿಂದಲೇ ಬುದ್ಧಿವಂತರು ಸಂಸಾರಭೀತಿಯಿಂದ ಸರ್ವಕಾಮವಿಮುಖರಾಗಿ ಅರಣ್ಯದಲ್ಲಿ ವಿಶ್ರಾಂತಿಸುಖವನ್ನು ಸೇವಿಸುವರು.

(ಕಂಚುಕಿಯ ಪ್ರವೇಶ)

ಕಂಚುಕಿ—ಜಯವಾಗಲಿ ರಾಮಭದ್ರ (ಎಂದು ಅರ್ಧವಾಕ್ಯದಲ್ಲಿಯೇ ನಿಲ್ಲಿಸಿ); ಜಯ ವಾಗಲಿ ಮಹಾರಾಜನಿಗೆ.

ರಾಮ—(ನಸುನಗೆಯೊಡನೆ) ಗುರುಜನದ ಪರಿಜನರು ನನ್ನನ್ನು ರಾಮಭದ್ರ ಎಂದು ಕರೆ

---

* ಮೂಲದಲ್ಲಿ ಈ ಭಾಗ ಶ್ಲೋಕರೂಪವಾಗಿದೆ.

ದರೆ ಸಾಕಾಗಿರುತ್ತದೆ. ಆದುದರಿಂದ ಹೇಗೆ ಅಭ್ಯಾಸವೋ ಹಾಗೆಯೇ ನನ್ನನ್ನು ಕರೆಯಬಹುದು.

ಕಂಚುಕಿ—ಋಷ್ಯಶೃಂಗಾಶ್ರಮದಿಂದ ಅಷ್ಟಾವಕ್ರಋಷಿಗಳು ದಯೆಮಾಡಿಸಿರುವರು.

ಸೀತೆ—ವಿಲಂಬವೇತಕ್ಕೆ ?

ರಾಮ—ಜಾಗ್ರತೆಯಾಗಿ ಅವರನ್ನು ಕರೆದುಕೊಂಡು ಬಾ.

ಕಂಚುಕಿ—ಅಪ್ಪಣೆ (ಎಂದು ಹೋಗುವನು).

(ಅಷ್ಟಾವಕ್ರನ ಪ್ರವೇಶ)

ಅಷ್ಟಾವಕ್ರ—ನಿಮಗೆ ಮಂಗಳವಾಗಲಿ.

ರಾಮ—ಪೂಜ್ಯರೆ ! ಅಭಿವಂದಿಸುವೆನು. ಇಲ್ಲಿ ಕುಳ್ಳಿರಬೇಕು.

ಸೀತೆ—ಪೂಜ್ಯರೆ ! ನಮಸ್ಕರಿಸುವೆನು. ನಮ್ಮ ಅತ್ತೆಯಮ್ಮನವರೂ ಅಳಿಯಂದಿರೂ ಕ್ಷೇಮವಾಗಿದ್ದಾರೆಯೆ ?

ರಾಮ—ಪೂಜ್ಯರಾದ ಋಷ್ಯಶೃಂಗಭಾವನವರು ಕ್ಷೇಮವೇ? ಅವರ ಯಜ್ಞವು ನಿರ್ವಿಘ್ನವಾಗಿ ನಡೆಯುತ್ತಿದೆಯೆ ? ನಮ್ಮ ಅಕ್ಕ ಶಾಂತಾದೇವಿಯವರಿಗೆ ಕುಶಲವೇ ?

ಸೀತೆ—ನಮ್ಮನ್ನು ನೆನೆಯುತ್ತಾರೆಯೆ ?

ಅಷ್ಟಾವಕ್ರ— (ಕುಳಿತುಕೊಂಡು) ನಿಮ್ಮನ್ನು ಸರ್ವದಾ ನೆನೆಯುತ್ತಿರುವರು. ದೇವಿ, ಪೂಜ್ಯರಾದ ವಸಿಷ್ಠರು ಹೀಗೆ ಹೇಳಿ ಕಳುಹಿಸಿರುವರು :

ನಿನಗೆ ಧರಿತ್ರಿಯೇ ಪಡೆದ ತಾಯ್ ಪರಮೇಷ್ಠಿಗೆ ಸಾಟಿಯೋದನಾ
ಜನಕನೃಪಾಲನೇ ಜನಕನಿಂ ಪೆರತಾವುದೊ ಪುತ್ರಿ ನೀನುಮಾ
ಜನಪರ ಗೇಹದಲ್ಲಿ ಸೊಸೆಯಾದೆಯದಾವ ನೃಪಾಲವಂಶಕಾ
ದಿನಪನುಮಾಮುಮೊಲ್ದು ಗುರುವಾದುದರಿಂದೆ ನೆಗಳ್ತೆ ಸಂದುದೋ ೯

ಇನ್ನು ಬೇರೆ ಹರಸತಕ್ಕುದೇನಿದೆ—ನೀನು ವೀರರಾದ ಮಕ್ಕಳನ್ನು ಪಡೆವವಳಾಗು!

ರಾಮ—ದೇವಿ, ನಾವು ಅನುಗ್ರಹಿಸಲ್ಪಟ್ಟೆವು.

ಪರಿಕಿಸೆ ಲೌಕಿಕಸಾಧುಗ
ಳೊರೆವಾ ನುಡಿ ನಡೆದುಪೋಪುದರ್ಥದ ಬೆನ್ನೊಳ್
ದೊರೆವಡೆದರ್ಥಮೆ ತಡೆಯದೆ
ಪರಿದೋಡುವುದಾದ್ಯಋಷಿಯರುಕ್ತಿಯ ಬೆನ್ನೊಳ್ ೧೦

ಅಷ್ಟಾವಕ್ರ—ಮಹಾರಾಜನೆ, ಲಾಲಿಸಬೇಕು. ವತ್ಸೆ ಸೀತಾದೇವಿಯು ಗರ್ಭಿಣಿಯಾಗಿದ್ದಾಳೆ ; ಅವಳಿಗೆ ಏನಾದರೂ ಬಯಕೆಯಾದರೆ ಅದನ್ನು ಕೂಡಲೆ ತಪ್ಪದೆ ನಡೆ

ಯಿಸಿಕೊಡಬೇಕು ಎಂದು ಪೂಜ್ಯಳಾದ ಅರುಂಧತೀದೇವಿಯೂ ನಿಮ್ಮ ಮಾತೃಶ್ರೀಯವರೂ ಅಕ್ಕಂದಿರೂ ಸಾರಿಸಾರಿಗೂ ಹೇಳಿಕಳುಹಿಸಿದ್ದಾರೆ.

ರಾಮ—ಈಕೆಯೇನು ಹೇಳುತ್ತಾಳೆಯೋ ಅದನ್ನೆಲ್ಲಾ ನಡಿಸಿಕೊಡುವೆನು.

ಅಷ್ಟಾವಕ್ರ—ವತ್ಸೆ, ಸೀತಾದೇವಿ ! ನಿಮ್ಮ ಭಾವಂದಿರು ಋಷ್ಯಶೃಂಗರು ಹೀಗೆಂದು ಹೇಳಿಕಳುಹಿಸಿರುವರು. ವತ್ಸೆ ! ಪೂರ್ಣಗರ್ಭಿಣಿಯೆಂದು ನಿನ್ನನ್ನು ಕರೆತರಲಿಲ್ಲ. ನಿನ್ನ ವಿನೋದಾರ್ಥವಾಗಿಯೇ ರಾಮಭದ್ರನನ್ನೂ ನಿನ್ನ ಬಳಿಯಲ್ಲಿಯೇ ಬಿಟ್ಟೆವು. ಸೋಗಿಲ ಮಗುವನ್ನೂ ನಿನ್ನನ್ನೂ ಬಂದು ನೋಡಿ ಸಂತೋಷಪಡುವೆವು.

ರಾಮ—(ಸಂತೋಷದಿಂದ ನಗುತ್ತ) ಹಾಗೆಯೇ ಆಗಲಿ. ಪೂಜ್ಯರಾದ ವಸಿಷ್ಠರು ನನಗೆ ಏನನ್ನೂ ಆಜ್ಞಾಪಿಸಲಿಲ್ಲವೆ ?

ಅಷ್ಟಾವಕ್ರ—ಅಪ್ಪಣೆಕೊಡಿಸಿದ್ದಾರೆ, ಕೇಳಬೇಕು.

ಅಳಿಯನ ಮಾಳ್ಪಧ್ವರಕಾ
ಮುಳಿದೆವು ನೀಂ ಬಾಳನಪ್ಪೆ ರಾಜ್ಯಂ ಪೊಸತೀ
ಯಿಳೆ ಮೆಚ್ಚುವಂತೆ ನಡೆವುದು
ತಿಳಿ ಜಸಮೇ ನಮಗೆ ಪರಮಧನಮೆನಿಸಿರ್ಕುಂ ೧೧

ರಾಮ—ಪೂಜ್ಯರಾದ ವಸಿಷ್ಠರು ಆಜ್ಞಾಪಿಸಿದಂತೆ ನಡೆದುಕೊಳ್ಳುವೆನು.

ಇಳೆಯುಂ ಮೆಚ್ಚಿಸುವೆಡೆಯೊಳ್
ಕೆಳೆಯುಂ ದಯೆಯುಂ ಸುಖಂಗಳಂ ಮೇಣ್ ಮನದ
ನ್ನಳೆನಿಪ್ಪೀ ಜಾನಕಿಯುಮ
ನುಳಿವೊಡಮೆನ್ನೆರ್ದೆಗೆ ನೋವು ಸಮನಿಸದು ವಲಂ ೧೨

ಸೀತೆ—ಆರ್ಯಪುತ್ರ, ಆದುದರಿಂದಲೇ ನೀನು ರಘುಕುಲಧುರಂಧರನಾಗಿರುವೆ.

ರಾಮ—ಎಲಾ, ಅಲ್ಲಿ ಯಾರು ಇದ್ದೀರಿ. ಅಷ್ಟಾವಕ್ರ ಮುನಿಗಳನ್ನು ಕರೆದುಕೊಂಡು ಹೋಗಿ ವಿಶ್ರಾಂತಿಯಾಗುವಂತೆ ಉಪಚರಿಸಿರಿ.

ಅಷ್ಟಾವಕ್ರ—(ಎದ್ದು) ಇದೋ, ವತ್ಸ ಲಕ್ಷ್ಮಣನು ಬಂದನು (ಎಂದು ಹೋಗುವನು).

ಲಕ್ಷ್ಮಣ—(ಪ್ರವೇಶಿಸಿ) ಆರ್ಯನಿಗೆ ಜಯವಾಗಲಿ. ಆರ್ಯನೆ, ತಮ್ಮ ಆಜ್ಞಾನುಸಾರವಾಗಿ ಅರ್ಜುನನೆಂಬ ಚಿತ್ರಕಾರನು ತಮ್ಮ ಚರಿತವನ್ನೆಲ್ಲಾ ಈ ಚಿತ್ರಪಟದಲ್ಲಿ ಬರೆದಿರುವನು. ದಯೆಮಾಡಿ ಆಲೋಕಿಸಬೇಕು.

ರಾಮ—ವತ್ಸ, ಇದು ಚಿಂತಾಕ್ರಾಂತೆಯಾದ ದೇವಿಯ ವಿನೋದಕ್ಕಾಗಿ ಬರೆಯಿಸಿದುದೆಂದು ನೀನೂ ಬಲ್ಲೆಯಷ್ಟೆ. ಈಗ ಎಲ್ಲಿಯವರೆಗೆ ಬರೆದಿದೆ ?

ಲಕ್ಷ್ಮಣ—ಆರ್ಯೆಯ ಅಗ್ನಿಶುದ್ಧಿಯವರೆಗೂ ಬರೆದಿದೆ.

ರಾಮ—ನಾರಾಯಣ, ನಾರಾಯಣ, (ಎಂದು ಕಿವಿಮುಚ್ಚಿಕೊಂಡು)

ಜನಿಯಿಂದೆ ಶುದ್ಧೆಯೆನಿಸಿದ
ಜನಕಜೆಗಿನ್ನಾವ ಶುದ್ಧಿಯೇವುದೊ ಸಲೆ ಪಾ
ವನತೀರ್ಥವಾರಿಗಂ ಮೇ
ಣನಲಂಗಂ ಬೇರೆ ಶುದ್ಧಿ ಬೇಡಿರ್ದಪುದೇ ೧೩

ದೇವಿ, ದೇವಯಜನಸಂಭವೆ, ಪ್ರಸನ್ನಳಾಗು. ನಿನಗೆ ಕೈಮುಗಿದು ಪ್ರಾರ್ಥಿಸಿಕೊಳ್ಳುವೆನು.

ನೊಂದ ಜನಂಗಳಂ ಕುಲಜನಂಗಳ ಸಂತಯಿಸಲ್ಕೆವೇಳ್ಕುಮಾ
ಮೊಂದುದಮಂಗಳೋಕ್ತಿಯಿದು ಪೊಲ್ಲದು ಸಲ್ಲದು ನಿನ್ನೊಳೊರ್ಮೆಯುಂ
ಕಂಪದ ಕಂಪುವೆತ್ತ ಕುಸುಮಂ ತಲೆಯೊಳ್ ನೆಲಸಲ್ಕೆ ಸಾಜದಿಂ
ಸಂದಪುದಕ್ಕುಮಲ್ಲದೆ ಪದಾಹತಿಗಕ್ಕಟ ತಕ್ಕುದಕ್ಕುಮೇ ೧೪

ಸೀತೆ—ಆರ್ಯಪುತ್ರ, ಆ ಮಾತು ಹಾಗಿರಲಿ; ತಮ್ಮ ಚರಿತವನ್ನು ನೋಡೋಣ. (ಎಲ್ಲರೂ ಎದ್ದು ಹೋಗುವರು.)

ಲಕ್ಷ್ಮಣ—ಇದೋ, ಇದೇ ಚಿತ್ರಪಟವು.

ಸೀತೆ—(ನೋಡಿ) ಇವರು ಯಾರು ? ಮೇಲುಗಡೆ ಗುಂಪುಗುಂಪಾಗಿ ನಿಂತುಕೊಂಡು ಆರ್ಯಪುತ್ರನನ್ನು ಸ್ತುತಿಸುವಂತಿರುವರು ?

ಲಕ್ಷ್ಮಣ—ಇವೇ ಸಮಂತ್ರಕಗಳಾದ ಜೃಂಭಕಾಸ್ತ್ರಗಳು. ಇವು ಪೂಜ್ಯರಾದ ಭೃಶಾಶ್ವರಿಂದ ಕೌಶಿಕಋಷಿಗಳಿಗೆ ಬಂದುವು. ಅವರು ತಾಟಕಾವಧಕಾಲದಲ್ಲಿ ಇವುಗಳನ್ನು ಆರ್ಯನಿಗೆ ಅನುಗ್ರಹಿಸಿದರು.

ರಾಮ—ದೇವಿ, ಈ ದಿವ್ಯಾಸ್ತ್ರಗಳಿಗೆ ವಂದಿಸು.

ಸರಸಿಜಸಂಭವಾದಿಗುರುಗಳ್ ಪಿರಿಯರ್ ಜಗತೀಹಿತಂಗಳಂ
ದೊರೆಯಿಸಲೆಂದು ನಿಂದು ತಪದೊಳ್ ಕೃಪೆಯಿಂದೆ ಪರಸ್ಸಹಸ್ರವ
ತ್ಸರಮನನಂತರಂ ನಿಜತಪೋಮಯದೇಹದ ನೈಜತೇಜದಂ
ತಿರೆ ಮೆರೆವೀ ಮಹಾಸ್ತ್ರಕುಲಮಂ ನಲವುಣ್ಮಿರೆ ಕಂಡರಾಗರೇ ೧೫

ಸೀತೆ—ಈ ಅಸ್ತ್ರದೇವತೆಗಳನ್ನು ಅಭಿವಂದಿಸುವೆನು.

ರಾಮ—ಇವುಗಳು ಸರ್ವಪ್ರಕಾರದಿಂದಲೂ ನಿನ್ನ ಮಕ್ಕಳನ್ನು ಸೇರುವುವು.

ಸೀತೆ—ಅನುಗೃಹೀತಳಾದೆನು.

ಲಕ್ಷ್ಮಣ—ಇದೇ ಮಿಥಿಲೆಯ ವೃತ್ತಾಂತವು.

ಸೀತೆ—ಆಃ, ಇಲ್ಲಿ–

ವಿದಳಿತನೀಲನೀರರುಹಮೇಚಕಮಂಜುಳಮಾಂಸಳಾಂಗಮಂ
ಪದಪಿನೊಳಿಮ್ಮೆ ಪೌರತತಿ ನಿಶ್ಚಳನೇತ್ರದೆ ನಾಡೆ ನೋಳ್ಪಿನಂ
ಪದುಳಿಸಿ ನಿಂದು ಚಂದ್ರಧರಚಾಪಮನಶ್ರಮಮೊತ್ತಿ ಭಂಗದೊಳ್
ಪುದುಗಿಸಿದಾರ್ಯಪುತ್ರನ ಶಿಖಂಡಿಕಮಂಡಿತಚಿತ್ರಮೊಪ್ಪುಗುಂ* ೧೬

ಲಕ್ಷ್ಮಣ— ಮಾತೆ ವಿಲೋಕಿಸು ನಿನ್ನಯ
ತಾತಂ ಪೂಜಿಸುಗುಮಿಲ್ಲಿ ಸಂಬಂಧಿಗಳಂ
ಈ ತೆರದೆ ಜನಕ ಗುರುಮೀ
ಗೌತಮನಿದೆ ಪೂಜಿಕುಂ ವಸಿಷ್ಠರನಿತ್ತಲ್ ೧೭

ರಾಮಂ—ಇದೀಗ ಅನುರೂಪವಾದ ಸಂಬಂಧವು.

ಜನಕರ ರಘುಗಳ ನಂಟ
ರ್ತನಮಾವನ ಮನಕೆ ಮುದಮನೊದವಿಸದಿರ್ಕುಂ
ಮನವೊಲ್ದು ಕುಡುವನುಂ ಕೊ
ಳ್ವನುಮೊರ್ವನೆ ಕುಶಿಕತನಯನೆನಲೊರೆದಪುದೇಂ ೧೮

ಸೀತೆ—ಇದೇ ಅಲ್ಲವೆ ಗೋದಾನಮಂಗಳವನ್ನು ನಿರ್ವರ್ತಿಸಿ ನೀವು ನಾಲ್ವರು ಸಹೋದರರೂ ವಿವಾಹದೀಕ್ಷಿತರಾಗಿ ನಿಂತಿರುವಿರಿ ! ಆಶ್ಚರ್ಯ ! ಆಶ್ಚರ್ಯ ! ಈಗ ನನಗೆ ಅದೇ ಸ್ಥಳದಲ್ಲಿ, ಅದೇ ಸಮಯದಲ್ಲಿ ಇದ್ದ ಹಾಗೆ ತೋರುತ್ತದೆ !

ರಾಮಂ—ನನಗೂ ಹಾಗೆಯೇ ಇದೆ.

ಸುಮುಖಿ ಮನೋಜ್ಞಮಪ್ಪ ಮಣಿಕಂಕಣದಿಂ ಕಮನೀಯಮಾಗಿ ಗೌ
ತಮಗುರುವಿಂದಮೆನ್ನ ಕರಕರ್ಪಿತಮಾಗಿ ಮಹೋತ್ಸವಂ ಶರೀ
ರಮನೊಲವಿಂದೆ ತಾಳ್ದುದೆನೆ ರಂಜಿಪ ನಿನ್ನಯ ಪಾಣಿಪಲ್ಲವಂ
ಪ್ರಮದಮನಿತ್ತು ಮಂಗಳಮುಹೂರ್ತಮೆ ಬಂದವೊಲಿಂದು ತೋರುಗುಂ ೧೯

ಲಕ್ಷ್ಮಣ—ಇದೇ ಆರ್ಯೆಯ ಚಿತ್ರವು. ಈಕೆಯೋ ಆರ್ಯೆ ಮಾಂಡವಿ. ಈಕೆ ವಧು ಶ್ರುತಕೀರ್ತಿ.

ಸೀತೆ—(ನಸುನಗೆಯೊಡನೆ) ಇನ್ನೊಬ್ಬಳು ಈಕೆ ಯಾರು ?

ಲಕ್ಷ್ಮಣ—(ಲಜ್ಜೆಯೊಡನೆ ನಸುನಕ್ಕು ಆತ್ಮಗತವಾಗಿ) ಆರ್ಯೆಯು ಊರ್ಮಿಳೆಯನ್ನು ಕೇಳುವಳಂ. ಆಗಲಿ; ಮುಂದೆ ದೃಷ್ಟಿ ಬೀಳುವಂತೆ ಮಾಡುವೆನು. (ಪ್ರಕಾಶವಾಗಿ) ಆರ್ಯೆ! ನೋಡತಕ್ಕುವು ಇನ್ನೂ ಬಹಳವಿರುವುವು. ಇದೋ, ಇಲ್ಲಿ ಪೂಜ್ಯನಾದ ಪರಶುರಾಮನು.

ಸೀತೆ—ಅಮ್ಮಮ್ಮ ! ಈ ಹೆಸರನ್ನು ಕೇಳಿದ ಮಾತ್ರಕ್ಕೆ ನಡುಗಿಹೋದೆನು.

---

* ಮೂಲದಲ್ಲಿ ಈ ಭಾಗ ಗದ್ಯರೂಪವಾಗಿದೆ.

ರಾಮ—ಋಷಿಯೇ, ನಮಸ್ಕರಿಸುವೆನು.

ಲಕ್ಷ್ಮಣ—ಆರ್ಯೆ, ಇತ್ತ ನೋಡಬೇಕು. ಇದೊ, ಈತನು ಆರ್ಯನಿಂದ—

ರಾಮ—(ಆಕ್ಷೇಪಿಸಿ) ವತ್ಸ ! ವಿಶೇಷವಾಗಿ ನೋಡತಕ್ಕುವುಗಳನ್ನು ಇನ್ನೊಂದು ಕಡೆ ತೋರಿಸು.

ಸೀತೆ—ಆರ್ಯಪುತ್ರ ! ಈ ವಿನಯಮಹಾತ್ಮ್ಯದಿಂದ ಶೋಭಿಸುವೆ.

ಲಕ್ಷ್ಮಣ—ಇದೋ, ನಾವು ಅಯೋಧ್ಯೆಗೆ ಬಂದು ಸೇರಿದೆವು.

ರಾಮ—(ಕಣ್ಣೀರೊಡನೆ) ಆಃ ! ನಾನು ಇನ್ನೂ ನೆನೆದುಕೊಳ್ಳುತ್ತಿರುವೆನು :

ತಂದೆಗಳುಂ ಜೀವಿಸುತಿರೆ
ಸುಂದರಿಯೊಳ್ ನೇಹವೆಮಗೆ ಪೊಸತಾಗಿರೆಯು
ಮ್ಮಂದಿರೊಲವಿಂದೆ ಸೀಯನೆ
ಸಂದಾ ದಿವಸಂಗಳಿನ್ನದೇಂ ಬಂದಪುವೇ ? ೨೦

ಆಗ ಈ ಜಾನಕಿಯೂ ಕೂಡ

ಪನೆಯ ಕಳಲ್ದ ತಾಣದೊಳಗೊಯ್ಯನೆ ಬೆಳ್ಮಗುಳೊತ್ತುತಿರ್ಪ ಪ
ಲ್ಮನೆಗಳ ಮುದ್ದುನೋಟಗಳ ಮುಗ್ಧಮುಖಾಬ್ಜದ ಬಾಲೆಯೀಕೆ ಚಂ
ದ್ರನ ತಿಳಿದಿಂಗಳಂತೆಸೆದು ನೈಜವಿಲಾಸದೊಳೊಂದಿ ಸಂದು ಕ
ಣ್ಗೆನಿದೆನಿಪಂಗಕಂಗಳಿನವೇನೆರ್ದೆಗಾಗಿಸಿದಳ್ ಪ್ರಮೋದಮಂ ೨೧

ಲಕ್ಷ್ಮಣ—ಇದೇ ಮಂಥರೆಯ ವೃತ್ತಾಂತವು.

ರಾಮ—(ಬೇಗನೆ ಬೇರೆ ಕಡೆ ತೋರಿಸಿ) ದೇವಿ, ವೈದೇಹಿ.

ಇಂಗುದಿಯ ಮರನಿದೆ ನೋ
ಡಂಗನೆ ಮುಂ ಶೃಂಗಿಬೇರಪುರದೊಳಗೆಮ್ಮೊಳ್
ಸಂಗಳಿಸಿತಿದರ ಮೊದಲೊಳೆ
ಸಂಗಮಸುಖಮಾ ಗುಹಂಗೆ ಕೆಳೆತನದೊಳ್ಪಿಂ ೨೨

ಲಕ್ಷ್ಮಣ—(ನಕ್ಕು) ಎಲೆಲ ! ಆರ್ಯನು ಚಿಕ್ಕಮ್ಮನ ವೃತ್ತಾಂತವನ್ನು ಮರಸಿಯೇ ಬಿಟ್ಟನು !

ಸೀತೆ—ಇದೇ ಜಡೆಯನ್ನು ಧರಿಸಿದ ವೃತ್ತಾಂತವು.

ಲಕ್ಷ್ಮಣ—

ಸುತರೊಳ್ ನಿರಿಸುತೆ ಲಕ್ಷ್ಮಿಯ
ನತಿವೃದ್ಧರ್ ಪಿರಿಯರೆಸಗಿದಾರಣ್ಯಕಮಂ
ವ್ರತಮಂ ಬಾಲ್ಯದೊಳೇ ಸ
ಮ್ಮತಿಯಿಂ ಕೈಕೊಂಡಂ ತೊಳಗಿ ಬೆಳಗಿದನಾರ್ಯಂ ೨೩

ಸೀತೆ— ಇವಳೇ ಪ್ರಸನ್ನವಾದ ಪುಣ್ಯಸಲಿಲವುಳ್ಳ ಭಾಗೀರಥಿಯು.

ರಾಮ— ಭಾಗೀರಥಿ, ರಘುಕುಲದೇವತೆ, ನಿನಗೆ ನಮಸ್ಕರಿಸುವೆನು.

ಸಗರಮಹೀಶನಧ್ವರದ ವಾಜಿಯನಂದರಸಲ್ಕೆ ಭೂಮಿಯಂ
ಬಗಿದೊಳಪೊಕ್ಕು ರುಷ್ಟ ಕಪಿಲರ್ಷಿಯ ತೇಜದೆ ಬೆಂದ ನಂತರಂ
ಸುಗತಿಗೆ ಸಾರ್ಚಲೆಂದು ತಪದಿಂ ತನುವಾಗಿ ಭಗೀರಥೋರ್ವಿಪಂ
ಭಗವತಿ ನಿನ್ನ ಪುಣ್ಯಜಲಶೀಕರಸೇಕದಿನಲ್ತೆ ಸಾರ್ಚಿದಂ ೨೪

ಮಾತೆ, ನೀನೂ ಅರುಂಧತೀದೇವಿಯಂತೆ ನಿನ್ನ ಸೊಸೆಯಾದ ಸೀತಾದೇವಿಗೆ ಮಂಗಳವನ್ನೇ ಹಾರೈಸುತ್ತಿರು.

ಲಕ್ಷ್ಮಣ—ಇದೇ ಚಿತ್ರಕೂಟಮಾರ್ಗದಲ್ಲಿ ಕಾಳಿಂದೀತಟದಲ್ಲಿರುವ ಶ್ಯಾಮವೆಂಬ ವಟವೃಕ್ಷವು. ಇದನ್ನೇ ಅಲ್ಲವೆ ಭರದ್ವಾಜರು ಗುರುತಾಗಿ ಹೇಳಿದುದು?

ಸೀತೆ—ಆರ್ಯಪುತ್ರನೆ. ಈ ಪ್ರದೇಶವು ಸ್ಮರಣೆಯಲ್ಲಿರುವುದೆ ?

ರಾಮ—ದೇವಿ, ಇದನ್ನು ಹೇಗೆ ತಾನೆ ಮರೆವೆನು ?

ಲಳಿತಗತಂಗಳಿಂ ನಡೆದು ನೀನಲಸಂಗಳುಮಂತೆ ಮಂಜುಳಂ
ಗಳುಮೆನೆ ಸಂದ ತಳ್ತ ಬಿಗಿಯಪ್ಪುಗಳಿಂ ಸೊಗವಾಂತ ನಾಡೆಯುಂ
ಪಿಳಿದ ಮೃಣಾಳನಾಳಮೆನೆ ಕಂದಿದ ನಿನ್ನಯ ಕೋಮಳಾಂಗಕಂ
ಗಳನೊಲವಿಂದಮೆನ್ನೆರ್ದೆಯೊಳಿಕ್ಕಿ ಮಲಂಗಿದುದಿಲ್ಲಿಯಲ್ಲವೇ ೨೫

ಲಕ್ಷ್ಮಣ— ಇದೇ ವಿಂಧ್ಯಾರಣ್ಯದ ಮುಂಗಡೆಯಲ್ಲಿ ವಿರಾಧನ ವೃತ್ತಾಂತವು.

ಸೀತೆ— ಇದು ಇಷ್ಟಕ್ಕೆ ಸಾಕು. ಆರ್ಯಪುತ್ರನ ಓಲೆಯು ಬೀಸಣಿಗೆಯು ನೆಳಲಲ್ಲಿ ನಡೆಯುತ್ತ ಹೋದ ನನ್ನ ಪ್ರಾಣಾಂತಕವಾದ ದಕ್ಷಿಣಾರಣ್ಯಪ್ರಯಾಣವನ್ನು ನೋಡುವೆನು.

ರಾಮ— ಇದೆ ಮುಂ ಕಂಡ ತಪೋವನಂ ಗಿರಿರ್ಝರಪ್ರಾಂತಾವನೀಜಾತಮೂ
ಲದೆ ವೈಖಾನಸರಿರ್ಪರಿಲ್ಲಿ ಪಲಬರ್ ನೀವಾರಮಂ ನೋಯಲೀ
ಯದೆ ತಂದೊರ್ಪಿಡಿಯನ್ನಮಂ ಪಚಿಸುತುಂ ಸತ್ಕಾರಮಂ ಮಾಡುತುಂ
ಮುಂದದಿಂದಿಲ್ಲಿ ಯಮಿಾಂದ್ರರಪ್ಪ ಗೃಹಿಂಗಳ್ ಮಾಳ್ಕುಂ ಸುಖಾವಾಸಮಂ ೨೬

ಸೀತೆ— ಇದೋ ಇಲ್ಲಿ ಹೂಬಿಟ್ಟಿರುವ ಕಡವದ ಮರದ ಮೇಲೆ ನವಿಲು ಕುಳಿತಿದೆಯಲ್ಲ, ಇದು ಯಾವ ಪರ್ವತ ?

ಲಕ್ಷ್ಮಣ— ಇದೇ ಜನಸ್ಥಾನಮಧ್ಯದಲ್ಲಿರುವ ಪ್ರಸ್ರವಣ ಪರ್ವತವು. ಆರ್ಯೆ ! ಈ ಪರ್ವತದ ಕಣಿವೆಯ ನೋಡು. ಅಲ್ಲಿ ದಟ್ಟವಾಗಿ ಬೆಳೆದು ಕತ್ತಲೆ ಕವಿದುಕೊಂಡಿರುವ ಕಾಡುಗಳು ಗೋದಾವರಿಯ ಮುಖಕಂದರವನ್ನೇ ಮರೆಸಿರುವುವು. ಇದರ

ಶಿಖರವನ್ನು ನೋಡು ! ಯಾವಾಗಲೂ ಕವಿದುಕೊಂಡಿರುವ ಮೇಘಗಳಿಂದ ಕಪ್ಪಗೆ ಕಂಗೊಳಿಸುತ್ತಿರುವುದು.

ರಾಮ— ನೆನೆವೋ ಸಲ್ಲಲಿತಾಂಗಿಯಾ ಶಿಖರಿಯೊಳ್ ಸೌಮಿತ್ರಿಯಂದಂದು ಬೇ
ರೆನೆ ತಂದಿತ್ತ ಸಪರ್ಯೆಯಿಂದೆ ನಲವಾಂತಾವಿರ್ದ ಕಾಲಂಗಳಂ
ನೆನೆವೋ ಮೇಣ್ ತಿಳಿದಿಂಪುವೆತ್ತು ಪರಿವಾ ಗೋದಾವರೀಪೂರವಂ
ನೆನೆವೋ ತತ್ತಟದಲ್ಲಿ ನಮ್ಮ ನಲಿದಾ ನಾನಾವಿನೋದಂಗಳಂ ೨೭

ಇದೂ ಅಲ್ಲದೆ—

ಸಡಿಲದವೊಲ್ ತೊಡಂಕೆ ಭುಜದಂಡದೊಳೀ ನಳಿತೋಳ್ ಕದಂಪಿನೊಳ್
ತೊಡರೆ ಕದಂಪು ಸೋಲ್ತು ಸವಿಸೂಸುವ ಮೆಲ್ನುಡಿಯಾವುದಾವುದಂ
ತಡತಡಮಕ್ರಮಂ ನುಡಿಯುತಾವೊಲವಿಂ ನಲಿವನ್ನಮಾಗಡಾ
ಗಡೆ ನಡೆಗೊಂಡ [ಯಾ]ಮದರಿವಿಲ್ಲೆನೆ ಪಿಂಗಿದುದಲ್ತೆ ರಾತ್ರಿಯೇ ೨೮

ಲಕ್ಷ್ಮಣ—ಇದೇ ಪಂಚವಟಿಯಲ್ಲಿ ಶೂರ್ಪನಖಿಯ ವೃತ್ತಾಂತವು.

ಸೀತೆ—ಹಾ ! ಆರ್ಯಪುತ್ರ, ಇಲ್ಲಿಯವರೆಗೇ ನಿಮ್ಮ ದರ್ಶನವು.

ರಾಮ—ದೇವಿ, ಈಗಲೂ ಹೀಗೆ ವಿಯೋಗಕ್ಕೆ ಭಯಪಡಬೇಕೆ ? ಇದು ಚಿತ್ರವಲ್ಲವೆ ?

ಸೀತೆ—ಇದು ಏನಾದರೂ ಆಗಲಿ. ದುರ್ಜನರು ಮನಸ್ಸಿಗೆ ದುಃಖವನ್ನು ಉಂಟು ಮಾಡುವರು.

ರಾಮ—ಪ್ರಿಯೆ ! ಆ ಜನಸ್ಥಾನದ ವೃತ್ತಾಂತವು ಈಗಲೂ ನನ್ನ ಕಣ್ಣೆದಿರಿಗೆ ಕಟ್ಟಿದಂತಿದೆ.

ಲಕ್ಷ್ಮಣ—ಅಹಹ ! ಆ ಕಾಲದಲ್ಲಿ ಜನಸ್ಥಾನವು ಶೂನ್ಯವಾದ ಬಳಿಕ,

ಟಕ್ಕಿನ ಪೊನ್ನ ಪುಲ್ಲೆವರಿಯಂ ನೆಪಗೊಂಡು ಕಠೋರಕರ್ಮಿಗಳ್
ರಕ್ಕಸರಂದು ಮಾಡಿದುದನಾ ಪರಿ ತೀರ್ಚಿಯುಮಿಂದು ನೋಯಿಕುಂ
ದುಕ್ಕದಿನಾರ್ಯನಂದು ವಿಕಲೇಂದ್ರಿಯನಾಗಿ ನೆಗಳ್ದ ಚರ್ಯದಿಂ
ದಕ್ಕಟ ಕಲ್ಲುಮಳ್ತಪುದು ಸೀಳ್ದು ಸಿಡಿಲ್ದಪುದುಗ್ರವಜ್ರಮುಂ ೨೯

ಸೀತೆ— (ಕಣ್ಣೀರು ಸುರಿಸುತ್ತ, ಮನದಲ್ಲಿ) ಅಯ್ಯೋ ! ನನಗಾಗಿ ದಿನಕರಕುಲಾನಂದನನಾದ ಆರ್ಯಪುತ್ರನು ವೃಥಾ ಎಷ್ಟೊಂದು ಶ್ರಮಪಡಬೇಕಾಯಿತು.

ಲಕ್ಷ್ಮಣ—(ರಾಮನನ್ನು ನೋಡಿ) ಆರ್ಯ ! ಇದೇನು ?

ಉಡಿಯೆ ಕಳಲ್ದ ಮುತ್ತಿನ ಸರಂಬೊಲೆ ಕಣ್ಬನಿ ಸೂಸಿಸೂಸಿ ಮೆ
ಯ್ಯೊಡೆದು ಸಿಡಿಲ್ದು ಭೂತಳದೆ ಬಿಳ್ದಪುದುರ್ಬಿ ಮರಲ್ದ ಮೊಗುಮೀ

ನಡೆಕುಮನಾಂತೆ ಬೆಳ್ದುಟಿಯುಮುರ್ಬುವ ನಿನ್ನ ವಿಶಾಲವಕ್ಷಮುಂ
ನುಡಿದಪುವಿಕ್ಕಿ ಮೆಟ್ಟಿದೊಡವೊತ್ತುವ ತಾವಕಶೋಕವೇಗಮಂ ೩೦

ರಾಮಂ—ವತ್ಸ,

ಅಂದೆನಗಾದ ಕಾಂತೆಯ ವಿಯೋಗಕೃಶಾನು ಕಠೋರಮಾದೊಡಂ
ಕಂದದೆ ಸೈಸಲಾರ್ತೆನರಿಯಂ ಪರಿಮರ್ದಿಸಿ ತೀರ್ಚುವಿಚ್ಛೆಯಿಂ
ಇಂದದು ಮತ್ತಮುರ್ವಿ ಪರಿಪಾಕದೆ ಕೊರ್ವಿ ಪೊದಳ್ದು ಪರ್ವಿ ಕೊ
ರ್ಪಿಂದುರೆ ನೋವನೀವುದಕಟಾ ನೆರನೊಳ್ ದೊರೆಕೊಂಡ ಪುಣ್ಣವೋಲ್ ೩೧

ಸೀತೆ—ಛೆ! ಇದೇನು! ನಾನು ಮಿತಿಮೀರಿ ಭಯಪಟ್ಟು ಆರ್ಯಪುತ್ರನಿಂದ ಅಗಲಿದವಳಂತೆ ಭಾವಿಸಿಕೊಂಡುಬಿಟ್ಟೆನು.

ಲಕ್ಷ್ಮಣ—(ಆತ್ಮಗತ) ಆಗಲಿ. ಬೇರೆ ಕಡೆ ತೋರಿಸಿ ಇದನ್ನು ಮರೆಸುವೆನು. (ಪ್ರಕಾಶ) ಆರ್ಯೆ! ಇತ್ತ ನೋಡಬೇಕು, ಇದೇ ಮನ್ವಂತರಪುರಾಣರಾದ ಗೃಧ್ರರಾಜ ಜಟಾಯುತಾತನವರ ಪರಾಕ್ರಮಪ್ರದರ್ಶನವು.

ಸೀತೆ—ಹಾ! ತಾತ! ನಿಮ್ಮ ಅಪತ್ಯವಾತ್ಸಲ್ಯವು ಸಫಲವಾಯಿತು.

ರಾಮಂ—ಹಾ! ತಾತ! ಕಾಶ್ಯಪ! ಪಕ್ಷಿರಾಜ! ನಿಮ್ಮಂತಹ ಹಿತೈಷಿಗಳಾದ ಸಾಧುಗಳ ಸಮಾಗಮವಿನ್ನೆಲ್ಲಿ?

ಲಕ್ಷ್ಮಣ—ಇದೊ! ಇದೇ ಜನಸ್ಥಾನಕ್ಕೆ ಪಶ್ಚಿಮದಲ್ಲಿ ಕುಂಜವಂತವೆಂಬ ದಂಡಕಾರಣ್ಯಭಾಗವು. ಇಲ್ಲಿಯೇ ದನುವಿನ ಕಬಂಧವು ಬಿದ್ದಿರುವುದು. ಇದರ ಪಕ್ಕದಲ್ಲಿ ಇದೇ ಮತಂಗಾಶ್ರಮಸ್ಥಾನವು. ಈಕೆಯೇ ಶ್ರಮಣೆ ಎಂಬ ಶಬರಸಿದ್ಧೆಯು. ಇದೊ, ಇದೇ ಪಂಪಾಸರಸ್ಸು.

ಸೀತೆ—ಇಲ್ಲಿಯೇ ಅಲ್ಲವೆ ಆರ್ಯಪುತ್ರನು ಕೋಪವನ್ನೂ ಧೈರ್ಯವನ್ನೂ ಮರೆತು ಕೊರಳೆತ್ತಿ ಅತ್ತುದು.

ರಾಮಂ—ದೇವಿ, ಈ ಪದ್ಮಸರೋವರವು ರಮಣೀಯವಾದುದು.

ಇದರೊಳ್ ಮದಕಲಹಂಸದ
ಮೃದುಪಕ್ಷಾನಿಲನೊಳೊಲೆವ ತಾವರೆಯಂ ಪೊ
ಣ್ಮಿದ ನೈದಿಲುಮಂ ಕಂಡೆಂ
ಪೊದಳ್ದು ನೆಗೆವುಗುವ ಕಣ್ಬನಿಗಳೆಡೆಯೆಡೆಯೊಳ್ ೩೨

ಲಕ್ಷ್ಮಣ—ಈತನೇ ಪೂಜ್ಯನಾದ ಹನುಮಂತನು.

ಸೀತೆ—ಈತನೇ ಅಲ್ಲವೆ ಚಿರಕಾಲದಿಂದ ದುಃಖದಲ್ಲಿ ಮುಳುಗಿದ್ದ ಜನವನ್ನು ಉದ್ಧರಿಸಿ ಮಹೋಪಕಾರಮಾಡಿದ ಪುಣ್ಯಾತ್ಮನು.

ರಾಮ—ಭಾಪು ! ಭಾಪು !

ಈತನೆ ಜಗತೀತಳದಿ
ಖ್ಯಾತಮಹಾಬಾಹುಸತ್ತ್ವನಂಜನೆಯಣುಗಂ
ಈತನ ಬೀರದೆ ನಾಮುಂ
ಭೂತಲಮಂ ನಾಡೆ ಧನ್ಯರೆನಿಸಿದೆವಲ್ತೇ ೩೩

ಸೀತೆ—ಆ ಪುಷ್ಪಿತವಾದ ಕದಂಬವೃಕ್ಷದಲ್ಲಿ ನವಿಲು ಕುಣಿಯುತ್ತಿದೆಯಲ್ಲ ; ಅದು ಯಾವ ಪರ್ವತ ? ಅಲ್ಲಿ ಆ ಮರದ ಕೆಳಗೆ ಸೌಭಾಗ್ಯಮಾತ್ರಶೇಷನಾದ ಆರ್ಯಪುತ್ರನು ಮೂರ್ಛೆಯಿಂದ ಪ್ರೈಮರೆತು, ಗಟ್ಟಿಯಾಗಿ ರೋದಿಸುತ್ತಿರುವ ನಿನ್ನ ಮೇಲೆ ಒರಗಿಕೊಂಡಿರುವಂತೆ ಬರೆದಿರುವುದು ?

ಲಕ್ಷ್ಮಣ—ಆರ್ಯೆ,

ನೀಲನವೀನನೀರದವಿರಾಜಿತಕೂಟದೆ ನೋಟಕರ್ಕಳಂ
ಸೋಲಿಸಿ ಗಂಧವತ್ಕಕುಭದಿಂ ಮೆರೆವಾ ಗಿರಿ ಮಾಲ್ಯವಂತಮಾ
ಶೈಲದೊಳಾರ್ಯನಂದು—

ರಾಮ—

ಬಿಡು ಮಾಣುಳಿ ನಾಂ ಕ್ಷಮನಲ್ಲೆನಕ್ಕಟಿ
ನ್ನಾಲಿಸಲಾರೆನಯ್ಯೊ ವಿರಹಂ ಮಗುಳ್ದುಂ ದೊರೆದಂತೆ ನೊಂದಪೆಂ ೩೪

ಲಕ್ಷ್ಮಣ—ಇನ್ನು ಮುಂದೆ ಆರ್ಯನ ಮತ್ತು ಪೂಜ್ಯರಾದ ಕಪಿರಾಕ್ಷಸರುಗಳ ಅಸಂಖ್ಯಾತವಾದ ಅದ್ಭುತವ್ಯಾಪಾರಗಳು ಬರೆದಿವೆ. ಆರ್ಯೆಯು ಬಳಲಿರುವಳು. ಆದುದರಿಂದ ಸ್ವಲ್ಪಕಾಲ ವಿಶ್ರಮಿಸಿಕೊಳ್ಳಬೇಕಾಗಿ ವಿಜ್ಞಾಪಿಸುವೆನು.

ಸೀತೆ—ಆರ್ಯಪುತ್ರ, ಈ ಚಿತ್ರಪಟವನ್ನು ನೋಡಿ ನನಗೊಂದು ಬಯಕೆಯುಂಟಾಗಿದೆ. ಅದನ್ನು ಮಾತ್ರ ನಡಸಿಕೊಡಬೇಕು.

ರಾಮ—ಅದೇನು ? ಆಜ್ಞಾಪಿಸು.

ಸೀತೆ—ಪ್ರಸನ್ನವಾದ ಮಹಾರಣ್ಯಗಳಲ್ಲಿ ಪುನಃ ವಿಹರಿಸಬೇಕು, ಪುನಃ ಪವಿತ್ರವಾದ ಭಾಗೀರಥಿಯ ಶೀತಲಜಲದಲ್ಲಿ ಸ್ನಾನಮಾಡಬೇಕು ಎಂದು ನನಗೆ ಬಯಕೆಯಾಗುತ್ತದೆ.

ರಾಮ—ವತ್ಸ, ಲಕ್ಷ್ಮಣ, ಈ ರೀತಿಯಾದ ಬಯಕೆಗಳನ್ನು ಒಡನೆ ನಡಸಿಕೊಡಬೇಕೆಂದು

ಈಗ ತಾನೆ ಗುರುಜನರು ಆಜ್ಞಾಪಿಸಲಿಲ್ಲವೆ ? ಆದುದರಿಂದ ಕುಲುಕದೆ ಅಲುಗದೆ ಇರುವ ಒಂದು ಒಳ್ಳೆಯ ತೇರನ್ನು ಸಿದ್ಧಪಡಿಸಿಕೊಂಡು ಬಾ.

ಸೀತೆ—ತಾವೂ ನನ್ನೊಡನೆ ಬರಬೇಕು.

ರಾಮ—ಎಲೆ ಕಠಿನೆ, ಇದನ್ನೂ ಹೇಳಬೇಕೆ ?

ಸೀತೆ—ಇದೀಗ ನನಗೆ ಇಷ್ಟವಾದುದು.

ಲಕ್ಷ್ಮಣ—ಅಪ್ಪಣೆಯಾದಂತೆ ರಥವನ್ನು ಸಿದ್ಧಪಡಿಸುವೆನು. (ಎಂದು ಹೋಗುವನು)

ರಾಮ—ಪ್ರಿಯೆ, ಈ ಚಿಕ್ಕಮನೆಯಲ್ಲಿ ಕಿಟಕಿಯ ಬಳಿ ಸ್ವಲ್ಪಕಾಲ ವಿಶ್ರಮಿಸಿಕೊ, ನಡೆ.

ಸೀತೆ—ಹಾಗೆಯೇ ಆಗಲಿ. ನನಗೆ ಇಷ್ಟಕ್ಕೇ ಸಾಕಾಗಿ ನಿದ್ದೆ ಬರುವಂತಿರುವುದು.

ರಾಮ—ಹಾಗಾದರೆ ನನ್ನ ಮೇಲೆ ಒರಗಿಕೊಂಡು ಸ್ವಲ್ಪಕಾಲ ಮಲಗಿಕೊ.

ಐಂದವರುಚಿ ಮುದ್ದಿಸೆ ಜಲ
ಬಿಂದುವನಂಗುವಿಂದುಮಣಿಯ ಸರವೆನೆ ಬೆಮರಿಂ
ದೊಂದಿದ ನಳಿತೋಳಂ ದಯೆ
ಯಿಂದಂ ಪೊರೆವಂತಿರಿಳಿಪು ನನ್ನಯ ಕೊರಲೊಳ್ ೩೫

(ಹಾಗೆಯೇ ಮಾಡಿ, ಆನಂದಪಟ್ಟು) ಪ್ರಿಯೆ, ಇದೇನು ?

ತಿಳಿಯಲ್ಬಾರದಿದಿಂತುಟೆಂದು ಸುಖಮೋ ಮೇಣ್ ದುಃಖಮೋ ಮೋಹದೊ
ಬ್ಬುಳಿಯೋ ನಿದ್ರೆಯೊ ನಂಜಿನೊಂದು ಕಡುಪ್ಪೋ ಮೇಣೇಂ ಮದೋದ್ರೇಕಮೋ
ತಳದಿಂ ಸೋಂಕಲೊಡಂ ತ್ವದಂಗಲತೆಯಿಂ ಸರ್ವೇಂದ್ರಿಯಂ ಮೋಹಮಂ
ತಳೆಗುಂ ನನ್ನೆರ್ದೆಯುಂ ಕರಂ ಭ್ರಮಿಸುಗುಂ ಮತ್ತಂ ಸಮುನ್ಮೀಲಿಕುಂ ೩೬

ಸೀತೆ—ನೀವು ಸ್ಥಿರಪ್ರಸಾದರು ; ಇನ್ನು ಇದರಲ್ಲಿ ಆಶ್ಚರ್ಯವೇನಿದೆ ?

ರಾಮ—ಪ್ರಿಯೆ, ಮಧುರವಾಣಿ,

ಬಾಡಿ ಸುರುಳ್ದ ಜೀವಕುಸುಮಕ್ಕೆ ವಿಕಾಸಮನುಂಟುಮಾಡುಗುಂ
ನೀಡುಗುಮಂತೆ ತೃಪ್ತಿಯನೊಡರ್ಚುಗುಮಿಂದ್ರಿಯಕೊಂದು ಮೋಹಮಂ
ಆಡುವ ನಿನ್ನ ನಲ್ನುಡಿಗಳಿಂತಮೃತಪ್ಲವಮಂ ಕೊಡಂಕೆಯೊಳ್
ಕೂಡುಗುಮೆನ್ನ ಮಾನಸಮನೂಡುಗುಮೊಲ್ದು ರಸಾಯನಂಗಳಂ ೩೭

ಸೀತೆ—ಪ್ರಿಯವಾದೀ ; ಸಾಕು, ದಯಮಾಡು ; ನಿದ್ರೆಮಾಡೋಣ. (ಎಂದು ತಲೆದಿಂಬನ್ನು ಹುಡುಕುವಳು)

ರಾಮ—ಪ್ರಿಯೆ, ಏನನ್ನು ಹುಡುಕುವೆ ?

ಮದುವೆವಿಡಿದಿಂದುವರೆಗಂ
ಸದನದೆ ಕಾನನದೆ ಬಾಲ್ಯದೊಳ್ ಯೌವನದೊಳ್
ಪದೆದು ಪರವನಿತೆಯಂ ಸೋಂ
ಕದ ರಾಮನ ತೋಳೆ ನಿನಗೆ ತಲೆಗಿಂಬಕ್ಕುಂ ೩೮

ಸೀತೆ—ಹಾಗೆಯೇ ಆಗಲಿ. (ನಿದ್ದೆಯನ್ನು ನಟಿಸುತ್ತ) ಆರ್ಯಪುತ್ರ, ಆರ್ಯಪುತ್ರ.

ರಾಮ—ಇದೇನು ! ಪ್ರಿಯವಾದಿನಿಯು ನನ್ನ ವಕ್ಷದಲ್ಲಿ ನಿದ್ದೆಹೋಗಿಯೇಬಿಟ್ಟಳು ? (ಪ್ರೇಮದೊಡನೆ ನೋಡಿ)

ಇವಳೇ ಮಂದಿರದಲ್ಲಿ ಲಕ್ಷ್ಮಿಯಿವಳೇ ಪೀಯೂಷಮೆನ್ನಕ್ಷಿಗ
ಳ್ಗಿವಳೀ ಸೋಂಕಿದ ಸೋಂಕೆ ಚಂದನರಸಾಲೇಪಂ ಶರೀರಕ್ಕೆ ಮೇಣ್
ಇವಳೀ ಬಾಹುವೆ ಕಂಠದಲ್ಲಿಳಿಪಿದಾ ನುಣ್ಮುತ್ತಿನೊಳ್ಹಾರಮಿಂ
ತಿವಳೊಳ್ ವಿಪ್ರಿಯಮಾವುದುಂಟು ವಿರಹಂ ತಾನೊಂದಣಂ ದುಸ್ಸಹಂ ೩೯

ಪ್ರತೀಹಾರಿ—(ಪ್ರವೇಶಿಸಿ) ದೇವ, ಬಂದಿತು ; ಬಂದಿತು.

ರಾಮ—ಏನು ಬಂದಿತು ?

ಪ್ರತೀಹಾರಿ—ಮಹಾಸ್ವಾಮಿಯವರ ಸಮ್ಮುಖದ ಪರಿಚಾರಕನಾದ ದುರ್ಮುಖನೆಂಬ ಆಳು.

ರಾಮ—(ಸ್ವಗತ) ಅಂತಃಪುರದ ಆಳು ದುರ್ಮುಖನೆ ? ; ಅವನನ್ನು ಗೂಢಚಾರನಂತೆ ಕಳುಹಿಸಿದ್ದೆನು. (ಪ್ರಕಾಶ) ಒಳಗೆ ಬರಲಿ.

ಪ್ರತೀಹಾರಿ—ಅಪ್ಪಣೆ. (ಎಂದು ಹೋಗುವಳು)

(ದುರ್ಮುಖನ ಪ್ರವೇಶ)

ದುರ್ಮುಖ—(ಸ್ವಗತ) ಅಕಟಾ ! ಈಗ ಸೀತಾದೇವಿಯನ್ನು ತಪ್ಪಿಸಿ ಈ ಅಚಿಂತನೀಯವಾದ ಜನಾಪವಾದವನ್ನು ಹೇಗೆ ಮಹಾರಾಜನಿಗೆ ಅರಿಕೆಮಾಡಲಿ ! ಮಂದಭಾಗ್ಯನಾದ ನನ್ನ ನಿಯೋಗವೇ ಈ ರೀತಿಯಾದುದು.

ಸೀತೆ—(ಕನವರಿಸುತ್ತಾ) ಆರ್ಯಪುತ್ರ, ಸೌಮ್ಯ, ಎಲ್ಲಿರುವೆ ?

ರಾಮ—ಎಲೆಲೆ ! ದೇವಿಗೆ ಚಿತ್ರದರ್ಶನದಿಂದುಟಾದ ವಿರಹಭೀತಿಯೇ ಕನಸ್ಸಿನಲ್ಲಿಯೂ ಕೂಡ ತಲೆಯೆತ್ತಿದಂತೆ ಕಾಣುವುದು. (ಆಕೆಯ ಮೈಯನ್ನು ಸವರುತ್ತಾ)

ಅಡಸಿದವಸ್ಥೆಯೆಲ್ಲವರೊಳಂ ಸುಖದುಃಖದ ಸಾಮ್ಯಮೆಲ್ಲಿಯಾ
ವೆಡೆ ಹೃದಯಕ್ಕೆ ವಿಶ್ರಮಮದಾವೆಡೆ ಮುಪ್ಪೆಡೆಗೊಂಡೊಡಂ ರಸಂ

ಉಡುಗದದೆತ್ತಲೆಯ್ದೆ ಚಿರಕಾಲದ ಸಲ್ಗೆಯಿನೊಲ್ದ ತೋರ್ಕೆಯಿಂ
ಪಡೆದಪುದಾ ನೆಗಳ್ತೆಯ ಸುಮಾನುಷಕಾವಗಮಕ್ಕೆ ಮಂಗಳಂ ೪೦

ದುರ್ಮುಖ—(ಸಮೀಪಕ್ಕೆ ಹೋಗಿ) ಜಯವಾಗಲಿ ! ಮಹಾರಾಜನಿಗೆ.

ರಾಮ—ಏನು ಸಂಗತಿ ತಿಳಿಯಬಂದಿತು, ಹೇಳು.

ದುರ್ಮುಖ—ರಾಮಚಂದ್ರನು ದಶರಥಚಕ್ರವರ್ತಿಯನ್ನು ಕೂಡ ಮರೆತುಬಿಡುವಂತೆ ಮಾಡಿರುವನು ಎಂಬುದಾಗಿ ತಮ್ಮನ್ನು ಊರೇ ಕೊಂಡಾಡುತ್ತಿರುವುದು.

ರಾಮ—ಇದು ಉಪಚಾರೋಕ್ತಿ. ಇದು ಹಾಗಿರಲಿ ; ದೋಷವಿದ್ದರೆ ತಿಳಿಸು. ಅದಕ್ಕೆ ಪ್ರತೀಕಾರ ಮಾಡಬೇಕು.

ದುರ್ಮುಖ—(ಕಣ್ಣೀರು ಚೆಲ್ಲಿ)ಮಹಾರಾಜನೆ ವಿಜ್ಞಾಪಿಸುವೆನು(ಎಂದು ಕಿವಿಯಲ್ಲಿ ಹೇಳುತ್ತಾನೆ).

ರಾಮ—ಅಕಟಕಟ ! ಈ ಕರ್ಣಕಠೋರವಾದ ಮಾತು ವಜ್ರದಂತೆ ಅತಿಕ್ರೂರವಾದುದು (ಮೂರ್ಛಿಸುತ್ತಾನೆ).

ದುರ್ಮುಖ—ಮಹಾರಾಜನೆ ! ಸಂತೈಸಿಕೊಳ್ಳಬೇಕು.

ರಾಮ—(ಸೈರಿಸಿಕೊಂಡು) .

ಅಕ್ಕಟ ಸೀತೆಗಂದು ಪರಮಂದಿರವಾಸದೆ ಬಂದ ನಿಂದೆಯಂ
ನ್ಯಕ್ಕರಿಪಂತಿರದ್ಭುತದುಪಾಯಶತಂಗಳಿನಿಕ್ಕಿ ಮೆಟ್ಟಿಯುಂ
ಅಕ್ಕಟ ಮತ್ತೆ ಬೆಂದ ಬಿದಿಯಿಂ ಪೊರಪೊಣ್ಮಿತು ಪೈತ್ಯಮುಣ್ಮಿದಾ
ಕುಕ್ಕುರದೆಂಜಲಿಂದೊಗೆದ ನಂಜಡಗಿರ್ದ ಜಲಕ್ಕನೇಳ್ವವೋಲ್ ೪೧

ಅಯ್ಯೋ, ಮಂದಭಾಗ್ಯನಾದ ನಾನು ಈಗ ಏನುಮಾಡಲಿ ? ಬೇರೆ ಮಾರ್ಗವೇನಿದೆ ?

ಎಂತುಂ ಲೋಕಂ ಸಮ್ಮತಿ
ಪಂತೆಸಗುವುದಲ್ತೆ ಸುಜನಸಮ್ಮತಕಾರ್ಯಂ
ಅಂತೆ ಗಡ ನೆಗಳ್ದ ತಾತಂ
ತಾಂ ತೊರೆದಂ ನನ್ನುಮಂ ನಿಜಪ್ರಾಣಮುಮಂ ೪೨

ಈಯಂ[ಶ]ವನ್ನು ವಸಿಷ್ಠರೂ ಕೂಡ ಈಗತಾನೆ ಆಜ್ಞಾಪಿಸಿರುವರು.

ರವಿವಂಶಜಾತರೆಂದೆನಿ
ಪವನೀಶರ ವಿಮಲಸಾಧುಶೀಲಕ್ಕೆನ್ನಿಂ

ಸವನಿಸೆ ನಿಂದಾದೋಷಂ
ಬುವಿಯೊಳಗೆನ್ನಿಂದೆ ಕಷ್ಟತರಪ್ಪರುಮುಂಟೇ ೪೩

ಹಾ ! ದೇವಿ, ದೇವಯಜನಸಮ್ಭವೆ, ನೀನು ಅವತರಿಸಿ ಅನುಗ್ರಹಿಸಿದುದರಿಂದ ಈ ಭೂಮಿಯು ಪವಿತ್ರವಾಯಿತಲ್ಲ. ನಿನ್ನ ಶೀಲವನ್ನು ಅಗ್ನಿವಸಿಷ್ಠಾರುಂಧತಿಗಳು ಕೊಂಡಾಡಿ ದಣಿಯರಲ್ಲ. ಹಾ! ರಾಮಮಯಜೀವಿತೆ! ಹಾ! ದಂಡಕಾರಣ್ಯಪ್ರಿಯ ಸಖಿ, ಹಾ ಪ್ರಿಯವಾದಿನಿ, ಅಯ್ಯೋ ! ನಿನ್ನಂಥವಳಿಗೆ ಹೀಗೆ ಪರಿಣಾಮ ವಾಯಿತೇ ? ಅಯ್ಯೋ ! ಮುಂದೇನು ಗತಿ ?

ನಿನ್ನಿಂ ಪುಣ್ಯಂ ಲೋಕಂ
ನಿನ್ನಲ್ಲಿ ಜನೋಕ್ತಿಯಕಟ ನಾಡೆಯಪುಣ್ಯಂ
ನಿನ್ನಿಂ ಸನಾಥಮಿಾ ಲೋ
ಕನ್ನೀಂ ಕೇಡಿಂಗನಾಥೆವೋಲ್ ಗುರಿಯಪ್ಪಯ್ ೪೪

ದುರ್ಮುಖ, ನೀನು ಹೋಗಿ ಲಕ್ಷ್ಮಣನೊಡನೆ—ನಿಮ್ಮ ಹೊಸ ದೊರೆಯಾದ ರಾಮನು ಹೀಗೆ ಆಜ್ಞಾಪಿಸಿದನೆಂದು ಹೇಳು. (ಎಂದು ಕಿವಿಯಲ್ಲಿ ಹೇಳುತ್ತಾನೆ)

ದುರ್ಮುಖ—ಮಹಾರಾಜನೆ, ಅಗ್ನಿಶುದ್ಧಳಾಗಿ ಗರ್ಭದಲ್ಲಿ ಪವಿತ್ರವಾದ ರಘುಕುಲಸಂತಾನ ವನ್ನು ಧರಿಸಿರುವ ದೇವಿಯ ವಿಷಯದಲ್ಲಿ ಯಾರೋ ದುರ್ಜನರು ಏನೋ ಆಡಿ ಕೊಂಡರೆಂದು ಹೀಗೆ ಅನುಚಿತವಾಗಿ ನಡಸಬಹುದೆ ?

ರಾಮ—ಸಾಕು ! ಸಾಕು ! ಏನು ಹೇಳಿದೆ ? ನಮ್ಮ ಪೌರರೂ ಜನಪದದವರೂ ದುರ್ಜನರೆ ?

ಜನಕಭಿಮತಮಿಾ ದಿನಕರಾ
ತನ ವಂಶಂ ವಿಧಿಯಿನಕಟ ! ನಿಂದಾಸ್ಪದಮಾ
ಯ್ತನವದ್ಯಶುದ್ಧಿಸಮಯದ
ಘನಕಾರ್ಯಂ ದೂರಮಾಯ್ತದಂ ನಂಬುವರಾರ್ ೪೫

ದುರ್ಮುಖ, ನೀನು ಹೋಗು.

ದುರ್ಮುಖ—ಹಾ ! ದೇವಿ ಜಾನಕಿ ! (ಎಂದು ಹೊರಟುಹೋಗುವನು)

ರಾಮ—ಹಾ ! ಕಷ್ಟ ಕಷ್ಟ ! ನಾನು ಮಹಾಕ್ರೂರಕರ್ಮಿಯಾದೆನು ! ಘಾತುಕನಾದೆನು !

ಕೊಡಗೂಸುತನದ ದಿನದಿಂ
ನಡಪಿದ ನನ್ನಿನಿಯಳಂ ಮದೇಕಾಶ್ರಯಳಂ
ಕುಡುವೆಂ ಮೃತ್ಯುಗೆ ಮೋಸದೆ
ಕುಡುವಂತಿರೆ ಸೌನಿಕಂಗೆ ಸಲಪಿದ ಗಿಳಿಯಂ ೪೬

ಮುಟ್ಟುವದಕ್ಕೂ ಕೂಡ ಯೋಗ್ಯತೆಯಿಲ್ಲದ ಮಹಾಪಾತಕಿಯಾದ ನಾನು ದೇವಿಯನ್ನು ಮುಟ್ಟಿ ಏಕೆ ಆಕೆಯ ಪರಿಶುದ್ಧತೆಯನ್ನು ಕೆಡಿಸಲಿ ?
(ಮೆಲ್ಲಗೆ ಸೀತೆಯ ತಲೆಯನ್ನು ಎತ್ತಿ ತನ್ನ ಕೈಗಳನ್ನು ಸೆಳೆದುಕೊಂಡು)

ಅನುಪಮಿತಕರ್ಮಚಂಡಾ
ಲನನೆನ್ನಂ ಕಳೆದು ನೂಂಕು ಮುಂಗುಂದೇ ನೀಂ ಚಂ
ದನಮೆಂಬ ಶಂಕೆಯಿಂ ಸಾ
ರ್ದ ನಿತಾಂತಂ ಕ್ರೂರಮಪ್ಪ ವಿಷಭೂರುಹಮಂ ೪೭

(ಎದ್ದು) ಈಗ ನನ್ನ ಭಾಗಕ್ಕೆ ಈ ಜೀವಲೋಕವೇ ಬೇ[ರೆಯಾ]ಯಿತು. ಇಂದಿಗೆ ರಾಮನ ಜೀವಿತದ ಪ್ರಯೋಜನವು ತೀರಿಹೋಯಿತು. ಈಗ ನನ್ನ ಪಾಲಿಗೆ ಈ ಜಗತ್ತೇ ಜೀರ್ಣಾರಣ್ಯದಂತೆ ಶೂನ್ಯವಾಯಿತು. ಸಂಸಾರವೇ ಅಸಾರವಾಯಿತು. ನನ್ನ ಶರೀರವು ಕಡ್ಡಿಗೂ ಕಡೆಯಾಯಿತು. ಈಗ ಅನಾಥನಾದೆನು. ಏನುಮಾಡಲಿ? ಗತಿಯೇನು? ಎಲ್ಲಿ ತೊಲಗಿ ಹೋಗಲಿ? ಅಯ್ಯೋ !

ಮರುಗಲ್ಕೆಂದೇ ಮಂಗುಳ್ದಂ
ದೊರೆಕೊಂಡುದು ರಾಮನಲ್ಲಿ ಚೈತನ್ಯಂ ಸು
ಸ್ಥಿರಮಕ್ಕುಂ ಹರಣಂಗಳ್
ನೆರನೊಳ್ ಬೆಟ್ಟಿರ್ಪ ಬಜ್ಜರದ ಮೊಳೆಗಳವೋಲ್ ೪೮

ಹಾ ! ತಾಯಿ ಅರುಂಧತಿ, ಹಾ ! ಪೂಜ್ಯರೆ ವಸಿಷ್ಠ ವಿಶ್ವಾಮಿತ್ರರೆ! ಹಾ ! ಅಗ್ನಿದೇವನೆ ! ಹಾ ! ದೇವಿ! ಭೂಮಾತೆ ! ಹಾ ! ತಾತ ! ಜನಕಮಹಾರಾಜ ! ಹಾ! ತಾತ! ಹಾ! ಮಾತೆ ! ಹಾ ! ಹಾ ! ಪ್ರಿಯಸಖಸುಗ್ರೀವ ಮಹಾರಾಜ! ಸೌಮ್ಯ ಹನುಮಂತ, ಹಾ ! ಮಹೋಪಕಾರಿ ! ಲಂಕಾಪತಿ ವಿಭೀಷಣಾ, ಸಖೀ ತ್ರಿಜಟೇ ! ಅಯ್ಯೋ! ಈ ನೀಚನಾದ ರಾಮನು ನಿಮ್ಮನ್ನೆಲ್ಲಾ ಮೋಸಗೊಳಿಸಿದನು ; ನಿಮ್ಮನ್ನೆಲ್ಲಾ ತಿರಸ್ಕರಿಸಿದನು. ಈಗ ಆ ಮಹಾತ್ಮರ ಹೆಸರೆತ್ತುವುದಕ್ಕೆ ನಾನು ಯಾರು ?

ಆ ಮಹನೀಯರ ಪಾವನ
ನಾಮಾಕ್ಷರಮುಂ ಕೃತಘ್ನನೀಚನೆನಿಪ್ಪೀ
ರಾಮನ ಬಾಯೊಳ್ ಬಂದಂ
ದಾ ಮಹಿತರನಘಮೆ ಸೋಂಕಿದಂತೆವೊಲಕ್ಕುಂ ೪೯

ಅಯ್ಯೋ ! ನಾನು ಎಂತಹ ಪಾಪಿಯಾದೆನು!

ನಂಬುಗೆವೆತ್ತು ನನ್ನೆರ್ದೆಯೊಳಂಗವನರ್ಪಿಸಿ ನೆಮ್ಮಿ ನಿದ್ರಿಪೀ
ಯಂಬುಜವಕ್ತ್ರೆಯಂ ಪ್ರಿಯೆಯನೆಮ್ಮಯ ಗೇಹದ ಭಾಗ್ಯಲಕ್ಷ್ಮಿಯಂ

ತುಂಬಿ ಪೊಡರ್ವ ಗರ್ಭಗುರುಭಾರದೆ ಬಾಡಿದಳಂ ನೃಶಂಸನಾಂ
ನಂಬಿಸಿ ರಕ್ಕಸಂಗೆ ಬಲಿಯಿಕ್ಕುವವೋಲ್ ಪೊರಗಿಕ್ಕಲಿರ್ದಪೆಂ ೫೦

(ಸೀತೆಯ ಕಾಲುಗಳ ಮೇಲೆ ತಲೆಯನ್ನಿಟ್ಟುಕೊಂಡು)
ದೇವಿ ! ರಾಮನಿಗೆ ಇದೇ ನಿನ್ನ ಕೊನೆಯ ಪಾದಸ್ಪರ್ಶನವು (ಎಂದು ಅಳುತ್ತಾನೆ).
(ತೆರೆಯಲ್ಲಿ) ರಕ್ಷಿಸಬೇಕು ! ರಕ್ಷಿಸಬೇಕು !

ರಾಮ—ಅದೇನು ಕೂಗು ! ವಿಚಾರಿಸಿರಿ. (ತೆರೆಯಲ್ಲಿ)

ಯಮುನಾತೀರದೆ ವಸಿಯಿಂಪ
ಯಮೀಂದ್ರರಾ ಲವಣದನುಜಭಯದಿಂದಾತ್ಮಾ
ಶ್ರಮಮಂ ತೊರೆದೀಗಳ್ ಭೂ
ರಮಣಾ ನಿನ್ನೆಡೆಗೆ ಮರೆವುಗಲ್ ಬಂದಿರ್ಪರ್ ೫೧

ರಾಮ—ಏನು ! ಇನ್ನೂ ರಾಕ್ಷಸರ ಕಾಟ ತಪ್ಪಲಿಲ್ಲವೇ ? ಈ ನೀಚನಾದ ಕುಂಭೀನಸೀಪುತ್ರನನ್ನು ನಿರ್ಮೂಲನಮಾಡುವುದಕ್ಕೆ ಶತ್ರುಘ್ನನನ್ನು ಕಳುಹಿಸುವೆನು.

(ಸ್ವಲ್ಪದೂರ ಹೋಗಿ, ಪುನಃ ಹಿಂದಿರುಗಿ ಬಂದು)

ಹಾ! ದೇವಿ! ಅಯ್ಯೋ ! ನೀನು ಹೀಗೆ ಕಾಡುಪಾಲಾಗುವೆಯಾ? ಎಲೌ ಪೂಜ್ಯಳೆ, ಭೂಮಿದೇವಿ, ನಿನ್ನ ಲೋಕಮಾನ್ಯಳಾದ ಮಗಳನ್ನು ಕಾಪಾಡು.

ಜನಕರ ರಘುಗಳ ಗೋತ್ರ
ಕ್ಕನೂನಮಂಗಳಮನೀಕೆಯಂ ನಿನ್ನೊಡಲೊಳ್
ಅನಘತರ ದೇವಯಜನದೆ
ಜನಿಸಿದಳಂ ಪುಣ್ಯಶೀಲೆಯಂ ಪೊರೆ ತಾಯೇ ೫೨

(ಎಂದು ಅಳುತ್ತ ಹೊರಟು ಹೋಗುವನು)

ಸೀತೆ—(ಕಣ್ಣು ತೆರೆದು ನೋಡಿ) ಸೌಮ್ಯ, ಆರ್ಯಪುತ್ರ, ಎಲ್ಲಿರುವೆ ? ಇದೇನಿದು ! ದುಸ್ಸ್ವಪ್ನದರ್ಶನದಿಂದ ಕಾತರಳಾಗಿ ಆರ್ಯಪುತ್ರನಿಂದ ಅಗಲಿದಂತೆ ಭಾವಿಸಿಕೊಂಡಿರುವೆನು. (ಚೆನ್ನಾಗಿ ನೋಡಿ) ಇದೇನು ? ನಿದ್ರಿಸುತ್ತಿದ್ದ ನನ್ನೊಬ್ಬಳನ್ನೇ ಇಲ್ಲಿ ಬಿಟ್ಟು ಆರ್ಯಪುತ್ರನು ಹೊರಟುಹೋಗಿರುವನು ! ಇರಲಿ. ಆರ್ಯಪುತ್ರನು ಇಲ್ಲಿಗೆ ಬಂದಾಗ ನನ್ನ ಕೈಯಲ್ಲಾದರೆ ಈ ಸಲ ಕೋಪಿಸಿಕೊಳ್ಳುವೆನು. ಆರಲ್ಲಿ ?

ದುರ್ಮುಖ—(ಪ್ರವೇಶಿಸಿ) ದೇವಿ ! ಕುಮಾರ ಲಕ್ಷ್ಮಣದೇವನು—ರಥವು ಸಿದ್ಧವಾಗಿದೆ ಎಂದು ಅರಿಕೆಮಾಡಹೇಳಿರುವನು.

ಸೀತೆ—ಇದೊ ! ಬರುವೆನು. (ಎಂದು ಹೊರಟುಬರುವಳು)

ದುರ್ಮುಖ—ಹೀಗೆ ದಯಮಾಡಬೇಕು. ಇದೇ ರಥವು.

ಸೀತೆ—ಇಗೋ ಹತ್ತುವೆನಂ. ನನ್ನ ಗರ್ಭವು ಅಲುಗುವುದು. ರಥವು ಮೆಲ್ಲಮೆಲ್ಲಗೆ ನಡೆಯಲಿ. ರಘುಕುಲದೇವತೆಗಳಿರಾ ! ನಿಮಗೆ ನಮಸ್ಕಾರವು. ತಪೋಧನರಿರಾ ! ನಿಮಗೆ ತಲೆಬಾಗುವೆನಂ.

(ಎಂದು ಎಲ್ಲರೂ ಹೊರಟುಹೋಗುವರು)

ಎರಡನೆಯ ಅಂಕ

(ತೆರೆಯಲ್ಲಿ) ತಾಪಸಿಗೆ ಸುಖಾಗಮನವೇ ?

(ಬಳಿಕ ಪ್ರಯಾಣಿಕವೇಷದ ತಾಪಸಿಯು ಪ್ರವೇಶಿಸುವಳು)

ತಾಪಸಿ—ಇದೋ ವನದೇವತೆಯು ಫಲಕುಸುಮಂಗಳೊಡನೆ ಕೂಡಿದ ಪಲ್ಲವಾರ್ಘ್ಯವನ್ನು ತೆಗೆದುಕೊಂಡು ಈ ಕಡೆಯೇ ಬರುತ್ತಿರುವಳು.

ವನದೇವಿ—(ಪ್ರವೇಶಿಸಿ ಅರ್ಘ್ಯವನ್ನು ಕೊಟ್ಟು) ಎಲೌ ಪೂಜ್ಯಳೆ,

ನಿಮಗುಂಪಭೋಗ್ಯಮಕ್ಕೆ ಬನಮಿ‌ಾ ದಿನಮೇ ಸುದಿನಂ ಮಹಾತ್ಮರೊಳ್
ಸಮನಿಪುದಲ್ತೆ ಸಜ್ಜನಕೆ ಸಂಗತಿ ಸಂಚಿತಪುಣ್ಯಪಾಕದಿಂ
ದ್ರುಮದ ನೆಳಲ್ಗಳಂ ಪೊಳೆಯ ನೀರ್ಗಳನಿಂಪಿನ ಕಂದಮೂಲಮಂ
ನಿಮಗೆ ತಪಕ್ಕೆ ಸಲ್ವ ಪೆರವಪ್ಪುಣಿಸಂ ನಿಮತೆಂದೆ ಸೇವಿಸಿಂ ೧

ತಾಪಸಿ—ಈ ವಿಷಯದಲ್ಲಿ ಹೇಳತಕ್ಕುದೇನಿದೆ ?

ಹಿತಯುತಮಪ್ಪ ವೃತ್ತಿ ನಯದಿಂ ಮಿತಮಪ್ಪಿನಿವಾತು ಮಂಗಳೋ
ನ್ನತಿಗೆಡೆಯಪ್ಪ ಚಿತ್ತಮವಿಗರ್ಹಿತಮೆಂದೆನೆ ಸಂದ ಸಖ್ಯಮಾ
ಯತಿಗೊಳೆ ಮುಂತುಪಿಂತಿದೆನೆ ಭೇದಮದೊಂದದದೊಂದೆ ಪಾಂಗಿನೊಳ್
ಕ್ಷಿತಿನುತರಪ್ಪ ಸಾಧುಗಳ ನಿರ್ಮಳಮಂಗಳಶೀಲಮೊಪ್ಪದೇ ೨

(ಇಬ್ಬರೂ ಕುಳಿತುಕೊಳ್ಳುವರು)

ವನದೇವಿ—ಪೂಜ್ಯಳೆ, ನೀನು ಯಾರೆಂದು ತಿಳಿಯಲಿ ?

ತಾಪಸಿ—ಪೂಜ್ಯಳೆ, ನನ್ನನ್ನು ಆತ್ರೇಯಿ ಎಂದು ಕರೆಯುತ್ತಾರೆ.

ವನದೇವಿ—ಆರ್ಯೆ, ಆತ್ರೇಯಿ, ಎಲ್ಲಿಂದ ಇಲ್ಲಿಗೆ ಬಂದೆ ? ಈ ದಂಡಕಾರಣ್ಯಕ್ಕೆ ಬಂದ ಉದ್ದೇಶವೇನು ?

ತಾಪಸಿ—ವಿಜ್ಞಾಪಿಸುವೆನು, ಕೇಳಬೇಕು.

ಈ ಕಾಡೊಳ್ ಸಾಮಜ್ಞರ
ನೇಕರಗಸ್ತ್ಯಾದಿ ಮುನಿಗಳಿರ್ದಪರವರಿಂ
ಕೈಕೊಳೆ ವಿದ್ಯೆಯನಾ ವಾ
ಲ್ಮೀಕಿ ಮಹಾಮುನಿಗಳಾಶ್ರಮದಿನಿದೆ ಬಂದೆಂ ೩

ವನದೇವಿ—ಆರ್ಯೆ, ಎಲ್ಲಾ ಮುನಿಗಳೂ ಬ್ರಹ್ಮಪಾರಾಯಣಕ್ಕಾಗಿ ಪುರಾಣಬ್ರಹ್ಮವಾದಿಯಾದ ವಾಲ್ಮೀಕಿಮುನಿಗಳನ್ನು ಆಶ್ರಯಿಸುವರು. ಹೀಗಿರುವಲ್ಲಿ ನೀನು ಆ ಆಶ್ರಮವನ್ನು ಬಿಟ್ಟು ಇಷ್ಟುದೂರ ಬರುವುದಕ್ಕೆ ಕಾರಣವೇನು ?

ತಾಪಸಿ—ಅಲ್ಲಿ ಅಧ್ಯಯನಕ್ಕೆ ಪ್ರಬಲವಾದ ವಿಘ್ನವುಂಟಾದುದರಿಂದ ಈ ದೀರ್ಘವಾದ ದೇಶಾಂತರವಾಸವನ್ನು ಅಂಗೀಕರಿಸಬೇಕಾಯಿತು.

ವನದೇವಿ—ಅದೆಂತಹ ವಿಘ್ನವಿರಬಹುದು ?

ತಾಪಸಿ—ಒಬ್ಬ ದೇವತೆಯು, ಆಗತಾನೆ ಎದೆಹಾಲು ಕುಡಿವುದನ್ನು ಬಿಟ್ಟಿದ್ದ ಸರ್ವಾಶ್ಚರ್ಯಕರವಾದ ಎರಡು ಗಂಡುಮಕ್ಕಳನ್ನು ತಂದು ವಾಲ್ಮೀಕಿಗಳಿಗೆ ಕೊಟ್ಟಳು. ಆ ಮಕ್ಕಳು ಮುನಿಗಳ ಮನಸ್ಸನ್ನು ಮಾತ್ರವಲ್ಲದೆ ಪಶುಪಕ್ಷ್ಯಾದಿಗಳ ಮನಸ್ಸನ್ನು ಕೂಡ ಸ್ನೇಹಗೊಳಿಸುತ್ತಿರುವರು.

ವನದೇವಿ—ಆ ಮಕ್ಕಳ ಹೆಸರೇನು ಗೊತ್ತಿರುವುದೆ ?

ತಾಪಸಿ—ಅದೇ ದೇವತೆಯೇ ಅವರ ಹೆಸರು ಕುಶಲವರೆಂದು ತಿಳಿಸಿ, ಅವರ ಪ್ರಭಾವವನ್ನೂ ಹೇಳಿದಳು.

ವನದೇವಿ—ಅವರ ಪ್ರಭಾವವೆಂಥದಂತೆ ?

ತಾಪಸಿ—ಅವರಿಗೆ ಸಮಂತ್ರಕವಾದ ಜೃಂಭಕಾಸ್ತ್ರಗಳು ಜನ್ಮಸಿದ್ಧವಂತೆ.

ವನದೇವಿ—ಹಾಗಾದರೆ ಅವರ ಪ್ರಭಾವವು ಅದ್ಭುತವಾದುದೇ ಸರಿ.

ತಾಪಸಿ—ಆ ಮಕ್ಕಳನ್ನು ವಾಲ್ಮೀಕಿಗಳೇ ದಾದಿಯಂತೆ ಸಾಕಿ ಸಲಹಿದರು. ಚೌಲಮಂಗಳವನ್ನು ನಡಸಿ ವೇದವೊಂದು ಹೊರತು ಉಳಿದ ಮೂರು ವಿದ್ಯೆಗಳನ್ನೂ ಸಾಂಗವಾಗಿ ಕಲಿಸಿದರು. ಬಳಿಕ ಹತ್ತನೆಯ ವಯಸ್ಸಿನಲ್ಲಿ ಕ್ಷತ್ರಿಯವಿಧಾನದಿಂದ ಉಪನಯನವನ್ನು ಬೆಳಸಿ ವೇದಾಧ್ಯಯನಮಾಡಿಸಿದರು. ಮಹಾಪ್ರತಿಭಾಶಾಲಿಗಳಾದ ಅಂಥವರೊಡನೆ ನಮ್ಮಂಥವರಿಗೆ ಸಹಾಧ್ಯಯನವೆಂದರೇನು ?

ಜಾಣನನೆಂತುಟೆಗ್ಗನುಮನಂತುಟೆ ಸದ್ಗುರು ತಿರ್ದಿ ಬೋಧಿಪಂ
ವೋಣೆಸಗಂ ಗಡಂತವರ ಜಾಣ್ಮೆಗೆ ವೃದ್ಧಿಯನಂತೆ ಹಾನಿಯಂ

ಕಾಣಿಕುಮಾದೊಡಂ ಫಲದೆ ಭೇದಮದಂತುಟೆ ಮಾರ್ನೆಳಲ್ಗಳಂ
ಸಾಣೆಯೊಳಿಟ್ಟು ವಜ್ರಮೊಳಕೊಳ್ವುದು ಕೊಳ್ವವೆ ಮಣ್ಣ ಮುದ್ದೆಗಳ್
ಳ

ಅಧ್ಯಯನಕ್ಕೆ ಇದೊಂದು ವಿಘ್ನವು. ಇನ್ನೂ ಒಂದುಂಟು.

ವನದೇವಿ—ಇನ್ನೊಂದು ಯಾವುದು ?

ಆತ್ರೇಯಿ—ಆ ಬ್ರಹ್ಮರ್ಷಿಗಳು ಒಂದು ದಿವಸ ಮಧ್ಯಾಹ್ನದಲ್ಲಿ ತಮಸಾನದಿಗೆ ಹೋದರು. ಆಗ ಅಲ್ಲಿ ಜತೆಯಾಗಿದ್ದ ಕ್ರೌಂಚಪಕ್ಷಿಗಳಲ್ಲಿ ಒಂದನ್ನು ಒಬ್ಬ ಬೇಡನು ಕೊಂದು ಬಿಟ್ಟನು. ಅದನ್ನು ನೋಡಿ ಅವರ ಮುಖದಿಂದ

ಮಾ ನಿಷಾದ ಪ್ರತಿಷ್ಠಾಂ ತ್ವಮಗಮಶ್ಶಾಶ್ವತೀಸ್ಸಮಾಃ
ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಂ ॥

ಎಂದು ಹಠಾತ್ತಾಗಿ ಅನುಷ್ಟುಭ್ಛಂದೋರೂಪದಿಂದ ಸರಸ್ವತೀದೇವಿಯು ಅವತರಿಸಿದಳು.

ವನದೇವಿ—ವೇದವಲ್ಲದೆ ಬೇರೆ ಕಡೆಯಲ್ಲಿಯೂ ಛಂದೋವತಾರವಾದುದು ಆಶ್ಚರ್ಯವು.

ಆತ್ರೇಯಿ—ಆದುದರಿಂದಲೇ ಹಾಗೆ ಸರಸ್ವತಿಯು ವ್ಯಕ್ತೀಭವಿಸಿದ ಕೂಡಲೆ ವಾಲ್ಮೀಕಿಗಳ ಬಳಿಗೆ ಚತುರ್ಮುಖನು ಬಂದು-"ಋಷಿಯೇ, ನೀನು ಬ್ರಹ್ಮಜ್ಞನಾಗಿರುವೆ. ರಾಮಾಯಣವನ್ನು ಹೇಳು. ನಿನಗೆ ಜ್ಞಾನಚಕ್ಷುಸ್ಸು ಉನ್ಮೀಲಿತವಾಯಿತು. ನೀನೇ ಪ್ರಥಮಕವಿ" ಎಂದು ಹೇಳಿ ಅಲ್ಲಿಯೇ ಅದೃಶ್ಯನಾದನು. ಆಮೇಲೆ ವಾಲ್ಮೀಕಿಗಳು ಶಬ್ದಬ್ರಹ್ಮದ ಪ್ರಥಮಾವತಾರರೂಪವಾದ ರಾಮಾಯಣವನ್ನು ನಿರೂಪಿಸಿದರು.

ವನದೇವಿ—ಭಾಪು ! ಭಾಪು ! ಈಗಲೀಗ ಸಂಸಾರವು ಸಾರವಾಯಿತಂ.

ಆತ್ರೇಯಿ—ಆದುದರಿಂದ ಅಲ್ಲಿ ಅಧ್ಯಯನಕ್ಕೆ ವಿಘ್ನವೆಂದು ಹೇಳಿದೆನು.

ವನದೇವಿ—ಅಹುದು, ಒಪ್ಪತಕ್ಕುದು.

ಆತ್ರೇಯಿ—ಆರ್ಯೆ. ನನಗೆ ಶ್ರಮಪರಿಹಾರವಾಯಿತು. ಇನ್ನು ಹೊರಡುವೆನು. ಅಗಸ್ತ್ಯಾಶ್ರಮದ ಮಾರ್ಗವು ಯಾವುದು ತಿಳಿಸು.

ವನದೇವಿ—ಇದೇ ಪಂಚವಟಿಯನ್ನು ಪ್ರವೇಶಿಸಿ ಈ ಗೋದಾವರೀತೀರದಲ್ಲೆ ಪ್ರಯಾಣ ಮಾಡು.

ಆತ್ರೇಯಿ—(ಕಣ್ಣೀರುಸೂಸಿ) ಏನು ! ಇದು ತಪೋವನವೆ ? ಇದೇ ಪಂಚವಟಿಯೆ ? ಈ ನದಿ ಗೋದಾವರಿಯೆ ? ಇದೇ ಪ್ರಸ್ರವಣಪರ್ವತವೆ ? ನೀನೇನು ಜನಸ್ಥಾನ ದೇವತೆಯಾದ ವಾಸಂತಿಯೊ ?

ವನದೇವಿ—ಅಹುದು. ನೀನು ಕೇಳಿದುದೆಲ್ಲವೂ ಅಹುದು,

ಆತ್ರೇಯಿ—ಹಾ ವತ್ಸೆ ! ಜಾನಕಿ,

ಇವಿವೇ ನೀಂ ನಡಪಿದ ತರು
ನಿವಹಂಗಳ್ ನಾಮಶೇಷಳೆನಿಸಿದ ನಿನ್ನಂ
ಅವಯವದೆ ತಂದು ಕಣ್ಗೊಳ್
ಕವಿಸುವವೊಲ್ ತೋರ್ಪುವಕಟ ಜನಕತನೂಜೇ 6

ವನದೇವಿ—(ಭಯದಿಂದ ಸ್ವಗತಂ) ಹಾ ! ಇದೇನು ನಾಮಶೇಷಳಾದೆಯೆಂದಳು. (ಪ್ರಕಾಶಂ) ಆರ್ಯೆ, ಸೀತಾದೇವಿಗೆ ಏನಪಾಯವುಂಟಾಯಿತು ?

ಆತ್ರೇಯಿ—ಅಯ್ಯೋ, ಅಪಾಯ ಮಾತ್ರವಲ್ಲ ; ಅಪವಾದವೂ ಉಂಟಾಯಿತು.

(ಕಿವಿಯಲ್ಲಿ ಹೀಗೆಂದು ಹೇಳುವಳು).

ವನದೇವಿ—ಅಹಹ ! ವಿಧಿಯು ವಜ್ರದಂತೆ ಕ್ರೂರವಾದುದು(ಎಂದು ಮೂರ್ಛಿಸುವಳು).

ಆತ್ರೇಯಿ—ಸೈರಿಸು ಸೈರಿಸು.

ವನದೇವಿ—(ಸಂತೈಸಿಕೊಂಡು) ಹಾ ಪ್ರಿಯಸಖಿ, ಹಾ ಮಹಾಭಾಗೆ, ನಿನ್ನ ಪಾಡು ಹೀಗಾಯಿತೆ ? ಹಾ ರಾಮಭದ್ರ ! ಅಥವಾ ನಿನ್ನಿಂದ ಇನ್ನೇನು. ಆರ್ಯೆ ಆತ್ರೇಯಿ, ಹೇಳು. ಹಾಗೆ ಸೀತಾದೇವಿಯನ್ನು ಲಕ್ಷ್ಮಣನು ಕಾಡಿನಲ್ಲಿ ಬಿಟ್ಟುಬಂದ ಬಳಿಕ ಏನಾಯಿತು ? ಹೇಳು. ಪ್ರಿಯಸಖಿಯ ಸಮಾಚಾರವೇನಾಯಿತೆಂದು ಆಡಿಕೊಳ್ಳುವರು, ತಿಳಿಸು.

ಆತ್ರೇಯಿ—ಏನೂ ಗೊತ್ತೇ ಇಲ್ಲವಲ್ಲಾ.

ವನದೇವಿ—ಅಹಹ ! ಕಷ್ಟಕಷ್ಟ ! ಪೂಜ್ಯರಾದ ಅರುಂಧತೀವಸಿಷ್ಠಾದಿಗಳು ಅರಮನೆಯಲ್ಲಿದ್ದೂ ವೃದ್ಧರಾದ ರಾಣಿಗಳು ಜೀವಿಸಿದ್ದೂ ಇದು ಹೇಗೆ ನಡೆಯಿತು ?

ಆತ್ರೇಯಿ—ಆ ಕಾಲದಲ್ಲಿ ಅವರೊಬ್ಬರೂ ಇರಲಿಲ್ಲ. ಆಗ ಅವರೆಲ್ಲರೂ ಋಶ್ಯಶೃಂಗರ ದ್ವಾದಶವಾರ್ಷಿಕ ಯಜ್ಞಕ್ಕೆ ಹೋಗಿದ್ದರು. ಈಗ ಆ ಯಜ್ಞವು ಪೂರ್ತಿಯಾಯಿತು. ಋಶ್ಯಶೃಂಗನು ಎಲ್ಲರನ್ನೂ ಪೂಜಿಸಿ ಕಳುಹಿಸಿಕೊಟ್ಟನು. ಅರುಂಧತೀದೇವಿಯು ಸೀತೆಯಿಲ್ಲದ ಅಯೋಧ್ಯೆಗೆ ಪ್ರವೇಶಿಸಲೊಲ್ಲೆನೆಂದಳು. ರಾಮನ ಜನನಿಯರೂ ಹಾಗೆಯೇ ಹೇಳಿದರು. ಹಾಗಾದರೆ ವಾಲ್ಮೀಕಿಗಳ ತಪೋವನದಲ್ಲಿ ಇರುವೆವೆಂದು ನಿಶ್ಚಯಿಸಿ ವಸಿಷ್ಠಮಹರ್ಷಿಗಳು ಅಪ್ಪಣೆಕೊಡಿಸಿದರು. ಈಗ ಎಲ್ಲರೂ ಅಲ್ಲಿರುವರು.

ವನದೇವಿ—ಎಲೌ, ಆ ರಾಜನಾದ ರಾಮನು ಈಗ ಏನು ಮಾಡುತ್ತಿರುವನು ?

ಆತ್ರೇಯಿ—ರಾಜಸೂಯವನ್ನು ತೊಡಗಿರುವನು.

ವನದೇವಿ— ಛೆ ! ಛೆ ! ಮದುವೆಯನ್ನೂ ಮಾಡಿಕೊಂಡನೆ ?

ಆತ್ರೇಯಿ—ಇಲ್ಲ; ಇಲ್ಲ.

ವನದೇವಿ—ಹಾಗಾದರೆ ಯಜ್ಞದಲ್ಲಿ ಸಹಧರ್ಮಚಾರಿಣಿ ಯಾರು?

ಆತ್ರೇಯಿ—ಹಿರಣ್ಮಯವಾದ ಸೀತಾಪ್ರತಿಕೃತಿಯನ್ನು ಇಟ್ಟುಕೊಂಡಿರುವನು.

ವನದೇವಿ—ಅಹಹ !

ಕ್ರೂರಂ ಸಿಡಿಲಂತಿರೆ ಸುಕು
ಮಾರಂ ಕಣ್ದೆರೆವ ಕುಸುಮದಂತಿರೆನಿಪ್ಪಾ
ಧೀರರ ಲೊಕೋತ್ತರರ ಗ
ಭೀರಮೆನಲ್ ಸಂದ ಮನಮನಾರರಿದಪರೋ ೭

ಆತ್ರೇಯಿ—ವಾಮದೇವನ ಅನುಜ್ಞೆಯಂತೆ ಯಜ್ಞಾಶ್ವವನ್ನು ಬಿಟ್ಟಿರುವರು. ಶಾಸ್ತ್ರಾನುಸಾರವಾಗಿ ಅಶ್ವರಕ್ಷಕರನ್ನೂ ಗೊತ್ತುಮಾಡಿರುವರು. ಅವರಿಗೆ ಲಕ್ಷ್ಮಣಪುತ್ರನಾದ ಚಂದ್ರಕೇತುವೇ ಗೊತ್ತುಗಾರನಾಗಿರುವನು. ಅವನಿಗೆ ಮಂತ್ರಾಸ್ತ್ರಗಳ ಪ್ರಯೋಗೋಪಸಂಹಾರಗಳನ್ನು ಕಲಿಸಿ ಸೈನ್ಯದೊಡನೆ ಕಳುಹಿಸಿರುವರು.

ವನದೇವಿ—(ಸಂತೋಷದೊಡನೆ) ಭಾಪು ! ಬದುಕಿದೆನು ! ಕುಮಾರಲಕ್ಷ್ಮಣನಿಗೆ ಮಕ್ಕಳಾದರೆಂದು ಕೇಳಿದೆನಲ್ಲಾ ! ಭಾಪು ! ಭಾಪು!

ಆತ್ರೇಯಿ—ಈ ನಡುವೆ ಅಯೋಧ್ಯೆಯಲ್ಲಿ ಒಬ್ಬ ಬ್ರಾಹ್ಮಣನು ತನ್ನ ಸತ್ತ ಮಗನನ್ನು ಅರಮನೆಯ ಮುಂದೆ ಹಾಕಿಕೊಂಡು ಎದೆಬಡಿದುಕೊಳ್ಳುತ್ತ ಅಬ್ರಹ್ಮಣ್ಯವ ಬ್ರಹ್ಮಣ್ಯವೆಂದು ಗೋಳಿಟ್ಟನು.

ವನದೇವಿ—ಆಮೇಲೆ ?

ಆತ್ರೇಯಿ—ಅದನ್ನು ನೋಡಿ, ರಾಜರಲ್ಲಿ ದೋಷವಿಲ್ಲದೆ ಪ್ರಜೆಗಳಿಗೆ ಅಕಾಲಮೃತ್ಯುವುಂಟಾಗದೆಂದು ರಾಮಭದ್ರನು ನೊಂದುಕೊಂಡು ತನ್ನ ದೋಷವನ್ನು ಹೇಳಿಕೊಳ್ಳುತ್ತಿರುವಾಗ ಹೀಗೆಂದು ಅಶರೀರವಾಣಿಯಾಯಿತು.

ಖಲನಾ ಶಂಬೂಕಂ ನಿ
ಷ್ಕಲಮನನಿಳೆಯಲ್ಲಿ ತಪಮನೆಸಗುತ್ತಿರ್ಕುಂ
ತಲೆಗೊಯ್ದವನಂ ಬ್ರಾಹ್ಮಣ
ಕುಲವರ್ಧನನಂ ಬದುಕಿಪುದು ರಘುವೀರಾ ೮

ಅದನ್ನು ಕೇಳಿ ರಾಮಚಂದ್ರನು ಖಡ್ಗಪಾಣಿಯಾಗಿ ವಿಮಾನವನ್ನು ಹತ್ತಿ ದಿಕ್ಕು ವಿದಿಕ್ಕುಗಳಲ್ಲೆಲ್ಲಾ ಶೂದ್ರತಾಪಸನನ್ನು ಹುಡುಕಲಿಕ್ಕೆ ಹೊರಟಿರುವನು.

ವನದೇವಿ—ಹೊಗೆಬತ್ತಿ ಸೇದುವ ಶಂಬೂಕನೆಂಬ ಒಬ್ಬ ಶೂದ್ರತಾಪಸನು ಈ ವನದಲ್ಲಿ ತಲೆಕೆಳಗಾಗಿ ನಿಂತು ತಪಸ್ಸು ಮಾಡುತ್ತಿರುವನು. ಆದುದರಿಂದ ಒಂದು ವೇಳೆ ರಾಮಭದ್ರನು ಪುನಃ ಈ ವನವನ್ನು ಅಲಂಕರಿಸುವನೋ ಏನೊ !

ಆತ್ರೇಯಿ— ಭದ್ರೇ, ನಾನು ಹೋಗುವೆನು.

ವನದೇವಿ—ಆರ್ಯೆ, ನೀನು ಪ್ರಯಾಣಮಾಡು. ಬಹಳ ಹೊತ್ತಾಗಿ ಬಿಸಿಲೇರಿತು. ಹೇಗೆಂದರೆ—

ಮಂದಿಸಿರ್ಪಾನೆಗಳುರ್ದೆ ಕಂಪಿಪ ತರುವ್ರಾತಂ ಬಿಸಿಲ್ಬೇಗೆಗಾ
ರದೆ ಬೀಳ್ತಪ್ಪಲರಿಂದೆ ಪೂಜಿಸುಗುಮೀ ಗೋದಾವರೀಪೂರಮಂ
ಪುದಿದೀ ತಣ್ಣೆಳಲಲ್ಲಿ ಕಾಗೆ ಪುಳುವಂ ತೋಲುಂಚುರ್ಗುಂ ನಾಡೆ ಬಾ
ಡಿದ ಪಾರಾವತಮುಂ ಪದಾಯುಧಮುಮೀ ನೀಡಂಗಳೊಳ್ ಪಾಡುಗುಂ ೯

ಶುದ್ಧ ವಿಷ್ಕಂಭಕ

(ಬಳಿಕ ಪುಷ್ಪಕಸ್ಥನಾದ ರಾಮನು ಖಡ್ಗಪಾಣಿಯಾಗಿ ಪ್ರವೇಶಿಸುತ್ತಾನೆ.)

ರಾಮ— ಎಲೆ ಬಲಗಯ್ಯೆ ಸಾವಡಸಿದಾ ದ್ವಿಜಪುತ್ರನ ಪೋದ ಜೀವಮಂ
ನೆಲೆಗೊಳಿಸಲ್ಕೆ ಶೂದ್ರಮುನಿಯಂ ಕಡಿದಿಕ್ಕು ಕರಾಳಖಡ್ಗದಿಂ
ನೆಲಸಿದ ಗರ್ಭಭಾರದೊಳೆ ಕಂದಿದ ಸೀತೆಯನುಯ್ದು ಕಾಡಿನೊಳ್
ನಿಲಿಸಿದ ರಾಮನಂಗವಲೆ ನೀಂ ನಿನಗಂ ದಯೆಯೆಂಬುದಿರ್ಕುಮೇ ೧೦

(ಮನವಲ್ಲದ ಮನದಲ್ಲಿ ಸಂಹರಿಸಿ) ಈಗಲೀಗ ರಾಮನಿಗೆ ಸದೃಶವಾದ ಕಾರ್ಯವನ್ನು ಮಾಡಲಾಯಿತು. ಈಗ ಆ ಬ್ರಾಹ್ಮಣರ ಹುಡುಗನು ಬದುಕಿಕೊಂಡಿರಬಹುದೊ ?

(ದಿವ್ಯಪುರುಷನು ಪ್ರವೇಶಿಸಿ)

ಅಭಯಮನಾಂತ ವಿಪ್ರಶಿಶು ಮತ್ತೆ ಬದುರ್ಕಿದುದತ್ತಲಿತ್ತಲೀ
ವಿಭವಕೆ ಸಂದೆನಾಂ ಮೊದಲ ಶಂಬುಕನೆಂ ಭವದಂಘ್ರಿಪದ್ಮದೊಳ್
ಅಭಿನತಿಗೈದಪೆಂ ತಿಳಿಯೆ ಸಜ್ಜನರತ್ತಣಿನಾದ ವಿಂತ್ತುವುಂ
ವಿಭವಕೆ ಮೂಲಮಪ್ಪುದೆನೆ ಬಣ್ಣಿಪುದೇಂ ಸುಜನಪ್ರಭಾವಮಂ ೧೧

ರಾಮ—ಎರಡೂ ನಮಗೆ ಇಷ್ಟವಾದುದೆ. ಇನ್ನು ನೀನು ನಿನ್ನ ತಪಃಫಲವನ್ನು ಅನುಭವಿಸುವವನಾಗು.

ಆವೆಡೆಯಾನಂದಂ ಮೇ
ಣಾವೆಡೆ ಮೋದಂಗಳಲ್ಲಿ ಸಂಪದ್ವಿಭವಂ
ಆವಿರ್ಭವಿಸಿ ಪೊದಳ್ದಪು
ವಾ ವೈರಾಜದೊಳೆ ನಿನಗೆ ಸೊಗಮಕ್ಕನಿಶಂ ೧೨

ಶಂಬೂಕ—ತಮ್ಮ ಪ್ರಸಾದದಿಂದ ನನಗೆ ಇಷ್ಟೊಂದು ಮಹಿಮೆಯುಂಟಾಯಿತು, ಇಲ್ಲಿ ತಪಸ್ಸಿನಿಂದೇನು ? ಅಥವಾ ತಪಸ್ಸಿನಿಂದಲೇ ಮಹೋಪಕಾರವಾಯಿತು. ಏಕೆಂದರೆ :

ಶರಣೆಂದೀ ಲೋಕಮೇ ನಿಮ್ಮಡಿಗಳನರಸುತ್ತಿರ್ಪಿನಂ ದೇವ ನೀಮಿಂ
ತರಸುತ್ತೀ ಶೂದ್ರನಂ ಭ್ರಷ್ಟನನಿನಿವಿರಿದುಂ ದೂರಮುಂ ಬಂದುದೆಂತುಂ
ದೊರೆಕೊಂಡತ್ತಕ್ಕುಮಾಂ ಮಾಡಿದ ತಪದೊದವಿಂದಲ್ಲದಂದಾ ಅಯೋಧ್ಯಾ
ಪುರಮೆಂತ್ತಲ್ ದಂಡಕಾರಣ್ಯದ ನಡುವಳುವಂ ನಿಮ್ಮ ಸಾರ್ವಂದಮೆತ್ತಲ್ ೧೩

ರಾಮ—ಏನು ! ಇದು ದಂಡಕಾರಣ್ಯವೇ ? (ಸುತ್ತಲೂ ನೋಡಿ) ಏನಿದಾಶ್ಚರ್ಯ !

ಒಂದೆಡೆ ಕರ್ರ್ರಕರ್ರನೆಯದೊಂದೆಡೆ ನೋಳ್ಪೊಡೆ ತಿಣ್ಣತಿಣ್ಣನಂ
ತೊಂದೆಡೆ ನಿರ್ಝರಾವಳಿಯ ಝಾತ್ಕೃತದಿಂದುರೆ ಬೆಟ್ಟವೆಟ್ಟನೆಂ
ತಂದಿನ ನಮ್ಮ ಕಂಡರಿದ ದಂಡಕೆ ತನ್ನೊಳೆ ನಿಂದಗಸ್ತ್ಯನಿಂ
ಸಂದ ಝರಂಗಳಿಂ ಗಿರಿಗಳಿಂ ಮಡುವಿಂ ಗಿಡುವಿಂದಮೊಪ್ಪುಗುಂ ೧೪

ಶಂಬೂಕ—ಅಹುದು ! ಇದೇ ದಂಡಕಾವನವು. ಈ ಅರಣ್ಯದಲ್ಲಿ ತಾವು ವಾಸಮಾಡುವ ಕಾಲದಲ್ಲಿ,

ಪದಿನಾಲ್ಕುಂ ಸಾಸಿರಮುಂ
ಪದಿನಾಲ್ಕೆನಲೆತ್ತಿವಂದ ರಕ್ಕಸಪಡೆಯುಂ
ಮದವತ್ಖರದೂಷಣಮುಂಖ
ಕದರ್ಯರಂ ಪಿಂದೆ ಕೊಂದ ತಾಣಮಿದಲ್ತೇ ೧೫

ಆ ರೀತಿ ತಾವು ಆ ದುಷ್ಟರನ್ನು ಸಂಹರಿಸಿದುದರಿಂದಲ್ಲವೆ, ಸಿದ್ಧಕ್ಷೇತ್ರವಾದ ಈ ಜನಸ್ಥಾನದಲ್ಲಿ ನನ್ನಂಥ ಸಾಮಾನ್ಯನೂ ಕೂಡ ನಿರಾತಂಕವಾಗಿ ಸಂಚರಿಸಬಹುದಾಯಿತು.

ರಾಮ—ಏನು ! ಇದು ದಂಡಕಾರಣ್ಯದಲ್ಲಿಯೂ ಜನಸ್ಥಾನಪ್ರದೇಶವೇ ?

ಶಂಬೂಕ—ಅಹುದು. ಇದೇ ಜನಸ್ಥಾನವು. ಈ ಕಡೆಯಲ್ಲಿ ನೋಡಬೇಕು. ಅಬ್ಬಬ್ಬ ! ಇವುಗಳನ್ನು ನೋಡಿದರೆ ಯಾರಿಗೆ ತಾನೆ ಮೈ ಜುಮ್ಮೆನುವುದಿಲ್ಲ. ಇದೊ ಕೊಬ್ಬಿದ ಕಾಡ ಮೃಗಗಳಿಂದ ಕೂಡಿದ ಈ ಪರ್ವತಪ್ರಾಂತಗಳಲ್ಲಿ ದಟ್ಟವಾಗಿ

ಬೆಳೆದುಕೊಂಡಿರುವ ದೀರ್ಘಾರಣ್ಯಗಳು ಕಣ್ಣಿಗೆ ನಿಲುಕದ ಹಾಗೆ ದಕ್ಷಿಣ ದಿಕ್ಕನ್ನೇ ವ್ಯಾಪಿಸಿಕೊಂಡಿರುವುವು. ವಿಲೋಕಿಸಬೇಕು. ಇವುಗಳಲ್ಲಿ—

ಉಲಿಯಡಗಿರ್ಪುದೊಂದೆಡೆಯದೊಂದೆಡೆ ಸತ್ತ್ವಕಠೋರನಾದದಿಂ
ದುಲಿವೆರೆದಿರ್ಪುದೊಂದೆಡೆ ಮಲಂಗಿದ ಭೋಗಿಯ ಫೂತ್ಕೃತಂಗಳಿಂ
ಜ್ವಲಿಪುದು ಕಿಚ್ಚದೊಂದೆಡೆ ಜಲಂ ಕಿರುವಳ್ಳದೆ ತೋರ್ಪುದತ್ತಲಾ
ಸ್ಥಲದೊಳಹೀಂದ್ರಘರ್ಮಜಲಮಂ ತೃಷೆಯಿಂ ಕೃಕಲಾಸಮೀಂಟುಗುಂ ೧೬

ರಾಮಂ—ಅಹುದು ! ಸಂದೇಹವೇನು ?

ಕಂಡಪುದು ಜನಸ್ಥಾನಂ
ಕಂಡಪುದಂದಾದ ಖರನ ಗೇಹಮುಮೊಡಲಂ
ಕೊಂಡುದೊ ಪಿಂತಣ ಕತೆಯೆನೆ
ಕಂಡಪೆನನುಭವಿಪೆನಂದಿನೆಸಕಮನೆಲ್ಲಂ ೧೭

(ಸುತ್ತಲೂ ನೋಡಿ) ಅಹಹ ! ಸೀತೆಯು ಸರ್ವಪ್ರಕಾರದಲ್ಲಿಯೂ ರಾಮನಲ್ಲಿ ಪರಮಪ್ರೀತಿಯುಳ್ಳವಳು. ಇವೇ ಅಲ್ಲವೆ ಅವಳಿದ್ದ ಕಾಡುಗಳು ! ಅಮ್ಮ ! ಇವುಗಳಿಗಿಂತಲೂ ಭಯಂಕರವಾದುದೊಂದುಂಟೊ ?

ನಾನುಂ ನಿನ್ನೊಡನಿರ್ಪೆಂ
ಜೇನಿಂ ಮಗಮಗಿಸುವಲರ್ಗಳಡವಿಯೊಳೆನುತುಂ
ಜಾನಕಿಯೀಯೆಡೆ ಸುಖಮಂ
ತಾನುಂಡಳ್ ನೇಹಮವಳದಾ ಪರಿಯುಕ್ಕುಂ ೧೮

ಒಂದುಮನೆಸಗದೊಡಂ ತನ
ಗೊಂದಿದ ಸುಖದಿಂದೆ ದುಃಖಮಂ ಮಾಣಿಸುಗುಂ
ಸಂದಾ ಪ್ರಿಯಜನಮೆಂದೊಡ
ದೆಂದು ಪ್ರಿಯಜನಕೆ ರನ್ನದನ್ನಮುದಲ್ತೇ ೧೯

ಶಂಬೂಕ—ಮಹಾರಾಜನೇ ! ಸಂತೈಸಿಕೊಳ್ಳಬೇಕು. ಆ ಸುಖಗಳನ್ನೆಲ್ಲಾ ನೆನೆನೆನೆದು ಹಂಬಲಿಸಿದರೆ ಪ್ರಯೋಜನವೇನು? ಕಳೆದುಹೋದುವು ಮರಳಿ ಕೈಗೂಡುವುವೇ? ಅವುಗಳ ಹಂಬಲವನ್ನು ತೊರೆದು ಇತ್ತ ವಿಲೋಕಿಸಬೇಕು. ಈ ಮಹಾರಣ್ಯಗಳು ಎಷ್ಟು ಗಂಭೀರವಾಗಿವೆ. ಅದೋ ಆ ಪ್ರದೇಶವು ಮದಿಸಿದ ನವಿಲುಗಳ ಕೊರಳಿನಂತೆ ಎಷ್ಟಂದವಾಗಿ ಒಪ್ಪುತ್ತಿದೆ. ನೋಡಬೇಕು. ಈ ಕಡೆ ಮರಗಳು ಒತ್ತೊತ್ತಾಗಿ ಬೆಳೆದು ಸೂರ್ಯರಶ್ಮಿಗೆಡೆಗುಡದೆ ಕರ್ರಗೆ ಕಗ್ಗತ್ತಲೆಯಂತೆ ನೆರಳು ಹಾಕುತ್ತಿವೆ!

ಕಟಾಕ್ಷಿಸಬೇಕು. ಇದೋ, ಈ ಕಡೆಯಲ್ಲಿ ಕಾಡ ಮೃಗಗಳು ನಿರ್ಭಯವಾಗಿ ಗುಂಪು ಗುಂಪಾಗಿ ಸಂಚರಿಸುತ್ತಿವೆ ; ಪರಾಮರ್ಶಿಸಬೇಕು.

ಇದರೊಳ್ ಮತ್ತಪತತ್ರಿಪಕ್ಷಪವನವ್ಯಾಲೋಲವಾ ನೀರದಿಂ
ದುದಿರ್ವಾ ಪೂಗಳ ಕಂಪನಾಂತಮಳಮಾಗೊಪ್ಪಿರ್ಪ ಶೀತಾಂಬುವಿಂ
ಪುದಿದೀ ನಿರ್ಝರರಾಜಿ ಪಣ್ದುರುಗಲಿಂ ಕರ್ಪಾದ ನೇರಿಲ್ಗಳೊ
ಳ್ವೊದರಿಂ ಭೋರೆನೆ ಪಾಯ್ದು ಪಾಯ್ದು ಭರದಿಂ ಬೀಳ್ಗುಂ
ಧರಾಭಾಗದೊಳ್ ೨೦

ಇತ್ತ ನೋಡಬೇಕು,

ಗವಿಯೊಳ್ ಪೊಯ್ಗ್ವಿರ್ಪ ಋಕ್ಷಪ್ರಸರಮೆಸಗುಮಂಬೂತ್ಕೃತಧ್ವಾನಮೊತ್ತಂ
ಕವಿತರ್ಕುಂ ಪೊಣ್ಮುವಾ ಮಾರ್ದನಿವೆರಸು ಕರಂ ತೀಣ್ಣಮೆಂಬಂತಿರೀಗಳ್
ಕವಳಂಗೆಯ್ಯಲ್ಕೆನುತ್ತುಂ ಕರಿ ಪಿಡಿದುಡಿದಾ ಸಲ್ಲಕೀಗ್ರಂಥಿಯಿಂದಂ
ಕವಿತರ್ಕುಂ ಕೈಪೆಯುಂ ಮೇಣ್ ತೊವರುಮೆನೆ ಪೊಸಲ್ವಾಯ್ವ
ನಿಷ್ಯಂದಪೂರಂ ೨೧

ರಾಮ — (ಸ್ವಲ್ಪಕಾಲ ಅವಾಕ್ಕಾಗಿ ನಿಂತು, ಬಳಿಕ) ಎಲೈ ದಿವ್ಯಪುರುಷನೇ ! ದೇವಯಾನ ಪಥಗಳು ನಿನಗೆ ಅನುಕೂಲವಾಗಲಿ. ಇನ್ನು ಪುಣ್ಯಲೋಕಗಳನ್ನು ಕುರಿತು ತೆರಳುವವನಾಗು.

ಶಂಬೂಕ—ಪುರಾಣಬ್ರಹ್ಮವಾದಿಗಳಾದ ಅಗಸ್ತ್ಯರ ಸಂದರ್ಶನಮಾಡಿಕೊಂಡು ಶಾಶ್ವತ ಪದಕ್ಕೆ ತೆರಳುವೆನು. (ಎಂದು ಹೋಗುವನು)

ರಾಮ— ಇದನೀಗಳ್ ಮಗುಳ್ದುಂ ವಿಲೋಕಿಪವೊಲಾಯ್ತೋಪೋಪೊ ಮುನ್ನಿಲ್ಲಿ ನಾಂ
ಪದಿನಾಲ್ಕುಂ ಬರಿಸಂಗಳುಂ ವಸತಿಯುಂ ಗೆಯ್ವಾಗಳಾರಣ್ಯಕರ್
ಮೊದಲಲ್ಲಿಂ ಬಳಿಯುಂ ಸ್ವಧರ್ಮನಿರತರ್ ಸಂಸಾರಸೌಖ್ಯೈಕಕೋ
ವಿದರಪ್ಪಾ ಗೃಹಮೇಧಿಗಳ್ ವಲಮೆನಲ್ ಸಂದಿರ್ದವೀ ಕಾಡಿನೊಳ್ ೨೨

ಮತ್ತಂ,

ಇವಿವೇ ಕೇಗುವ ಸೋಗೆವಿಂಡಿನುಲಿಯಿಂ ತೀವಿರ್ಪ ಶೈಲಂಗಳಿಂ
ತಿವಿವೇ ಚೆಂಗನೆ ಪೊಂಗಿ ಪಾಯ್ವರಳೆಯಿಂ ತಳ್ತಿರ್ಪ ಕಾಂತಾರಮಿಂ
ತಿವಿವೇ ಮಂಜುಳಮಂಜುಕೂಜಿತದೆ ಕರ್ಣಾನಂದಮಂ ನೀಡುತೊ
ಪ್ಪುವ ನೀರಂಧ್ರನಿರೂಢನೀಪನಿಚುಳಪ್ರಾಂತಂ ನದೀತೀರದಾ ೨೩

ಮುಗಿಲ ಕುಲದಂತೆ ಮುಂಗಡೆ
ಬಗೆಗೊಳ್ವಾ ಶೈಲರಾಜಿಯೇ ಪ್ರಸ್ರವಣಂ

ಒಗೆವುಗುವುದದರ ಕಟಕದೆ
ನೆಗಳ್ದಾ ಗೋದಾವರೀಸ್ರವಂತಿಯ ಪೂರಂ ೨೪

ಇದರತ್ಯುನ್ನತಕೂಟದೊಳ್ ವಸಿಕುಮಾ ಗೃಧ್ರೇಂದ್ರನಿಂತೀ ಗಿರೀಂ
ದ್ರದ ಸಾನುಸ್ಥಳಿಯಲ್ಲಿ ಪರ್ಣಕುಟಿಯೊಳ್ ನಾಂ ಗೆಯ್ದೆವಾವಾಸಮಂ
ಇದೆ ಗೋದಾವರಿಯಲ್ಲಿ ಮಾರ್ತೊಳಗುವೀ ಶ್ಯಾಮಾವನೀಜಾತದಿಂ
ಪುದಿದೋರಂತೆ ಕರಂಗಿ ಪಕ್ಕಿಯುಲಿಯಿಂ ರಂಜಿಪ್ಪರಣ್ಯಸ್ಥಳಂ ೨೫

ಆ ಪಂಚವಟಿಯೂ ಇಲ್ಲಿಯೇ ಇದೆ. ಇಲ್ಲಿ ನಾವು ಬಹುಕಾಲವಿದ್ದುದರಿಂದ ಇಲ್ಲಿನ ಸಮಸ್ತ ಪ್ರದೇಶಗಳೂ ನಮ್ಮ ವಿಲಾಸಗಳಿಗೆ ಸಾಕ್ಷಿಗಳಾಗಿವೆ. ಇಲ್ಲಿಯೇ ಪ್ರಿಯೆಯ ಪ್ರಿಯಸಖಿಯಾದ ವಾಸಂತಿಯೆಂಬ ವನದೇವತೆಯೂ ವಾಸಮಾಡುತ್ತಿರುವಳು. ಅಯ್ಯೋ ! ಅಕಟಾ ! ಈಗ ರಾಮನಿಗೆ ಏನು ಕಷ್ಟ ಬಂದೊದಗಿತು ! ಈಗ,

ಚಿರಕಾಲಂಬಿಡಿದುರ್ವಿ ತೊಟ್ಟನೊಡಲಂ ದಾಹಿಪ್ಪ ಕೂರ್ನಂಜೊ ಮೇಣ್
ಭರದಿಂ ತಾಂಗಿದೊಡಂಗದೊಳ್ ಚಲಿಸುವತ್ಯುಗ್ರಾಸ್ತ್ರಖಂಡಂಗಳೋ
ಪಿರಿದುಂ ಗಂಟಿಡುತುರ್ವಿ ಕೊರ್ವಿ ಬಿರಿವಾ ಹೃನ್ಮರ್ಮದುಗ್ರವ್ರಣೋ
ತ್ಕರಮೋ ಎಂಬಿನಮಿಂದುಮುಂದಿನಳಲೇ ನೂತ್ನಂಬೊಲೇಂ ನೋಯಿಕುಂ ೨೬

ಹೇಗಾದರೂ ಮಾಡಿ ಪೂರ್ವಪರಿಚಿತಗಳಾದ ಈ ವನಸ್ಥಳಗಳನ್ನು ನೋಡುವೆನು. (ಚೆನ್ನಾಗಿ ನೋಡಿ) ಆಶ್ಚರ್ಯ ! ಆಶ್ಚರ್ಯ ! ಭೂತಸನ್ನಿವೇಶಗಳು ಒಂದು ರೀತಿಯಾಗಿರದೆ ಯಾವಾಗಲೂ ವ್ಯತ್ಯಾಸವಾಗುತ್ತಲೇ ಇವೆ ! ಅಮಮ !

ಪೊಳೆಗಳ ತಾಣದಲ್ಲಿ ಪುಳಿನಂ ಪುಳಿನಂ ನೆಲಸಿರ್ದ ತಾಣದೊಳ್
ಪೊಳೆಗಳರಣ್ಯಮಿರ್ದೆಡೆ ಬಯಲ್ ಬಯಲಿರ್ದೆಡೆ ತಳ್ತರಣ್ಯಮಿಂ
ತಳವಡೆ ಪಿಂತೆ ಕಂಡ ಪಳುವುಂ ಪೊಸತೆಂಬಿನಮಿಂಪ್ರೊಡಂ ಮಹಾ
ಚಳಕುಳದಿಂದೆ ನಿರ್ಣಯಿಸಲಪ್ಪುದು ದಂಡಕೆಯಿಂತಿದೆಂಬುದಂ ೨೭

ಅಕಟಕಟಾ ! ತೊರೆದು ಹೋಗುವೆನೆಂದರೂ ಕೂಡ ಪಂಚವಟೀಸ್ನೇಹವು ನನ್ನನ್ನು ಬಿಡದೆ ಬಲವಾಗಿ ಹಿಡಿದೆಳೆವಂತಿರುವುದು.

ಎಲ್ಲಿ ದಿನಂಗಳಂ ಪ್ರಿಯೆಯೊಡಂ ಕಳೆದೆಂ ಮನೆಯಲ್ಲಿ ನಿಂದವೋ
ಲೆಲ್ಲಿಯ ಸೊಂಪುವೆತ್ತ ಕತೆಯಿಂ ನಲಿದಾಂ ನಿಡುಪೊಳ್ತನೊತ್ತಿದೆಂ
ನಲ್ಲಳನೊಕ್ಕ ಪಾಪಿಯೆನದೊರ್ವನೆ ಪೋದಪೆನೀಗಳೆಂತು ನಾ
ನಲ್ಲಿಗೆ ಮೇಣದೆಂತು ಪರಿಭಾವಿಸದಕ್ಕಟ ಬಿಟ್ಟು ಪೋದಪೆಂ ೨೮

ಶಂಬೂಕ—(ಪ್ರವೇಶಿಸಿ) ದೇವನಿಗೆ ಜಯವಾಗಲಿ ! ಪೂಜ್ಯರಾದ ಅಗಸ್ತ್ಯರು ತಮ್ಮ ಆಗಮನವೃತ್ತಾಂತವನ್ನು ನನ್ನಿಂದ ತಿಳಿದು ತಮಗೆ ಹೀಗೆ ಹೇಳಿ ಕಳುಹಿಸಿರುವರು : "ಎಲೈ ರಾಮಚಂದ್ರನೇ, ನಿನ್ನ ಆಗಮನವನ್ನು ಕೇಳಿ ಲೋಪಾಮುದ್ರಾದೇವಿಯು ಮಂಗಳೋಪಕರಣಗಳನ್ನು ಸಿದ್ಧಮಾಡಿಕೊಂಡು ವಾತ್ಸಲ್ಯದಿಂದ ನಿನ್ನನ್ನು ಎದುರು ನೋಡುತ್ತಿರುವಳು. ಅದೇ ರೀತಿಯಾಗಿಯೇ ಎಲ್ಲಾ ಮಹರ್ಷಿಗಳೂ ಕಾದಿರುವರು. ಆದುದರಿಂದ ನೀನು ಇಲ್ಲಿಗೆ ಬಂದು ನಮ್ಮನ್ನೆಲ್ಲಾ ಸಂತೋಷಪಡಿಸಿ, ಅನಂತರ ವೇಗವಾದ ಪುಷ್ಪಕದಲ್ಲಿ ಸ್ವದೇಶಕ್ಕೆ ತೆರಳಿ ಅಶ್ವಮೇಧವನ್ನು ಕೈಕೊಳ್ಳಬಹುದು."

ರಾಮ—ಪೂಜ್ಯರು ಆಜ್ಞಾಪಿಸಿದಂತೆಯೇ ಆಗಲಿ.

ಶಂಬೂಕ—ಮಹಾರಾಜನೆ ! ಹೀಗೆ ಬಿಜಯಮಾಡಬೇಕು.

ರಾಮ—(ಪುಷ್ಪಕವನ್ನು ನಡಸುತ್ತ) ಎಲೌ ಪೂಜ್ಯಳಾದ ಪಂಚವಟಿ, ಗುರುಜನರ ಆಜ್ಞೆಗೆ ಕಟ್ಟುಬಿದ್ದು ನಿನ್ನನ್ನು ಬಿಟ್ಟುಹೋಗುವ ರಾಮನ ಅಪರಾಧವನ್ನು ಒಂದು ಕ್ಷಣಕಾಲ ಮನ್ನಿಸುವವಳಾಗು.

ಶಂಬೂಕ—ಮಹಾರಾಜನೆ, ವಿಲೋಕಿಸಬೇಕು.

ಕುತ್ತುಗೊಂಡುಲಿಗ್ಗೈವ ಗೂಗೆಯುಲಿಯಿಂ ಮೇಣ್ ಕೀಚಕಾರಾವದಿಂ
ದೆತ್ತಂ ಕಾಗೆಗೆ ಮೌನಮಂ ಸಲಿಸುವೀ ಕ್ರೌಂಚಾವತಾದ್ರೀಂದ್ರದೊಳ್
ಸುತ್ತುತ್ತಿರ್ಪ ಶಿಖಿವ್ರಜಕ್ಕಳರುತಂ ಜೀರ್ಣಾವನೀಜಾಗ್ರಮಂ
ಪತ್ತಿರ್ಪುಗ್ರಭುಜಂಗಪುಂಗವಕುಲಂ ಸಂತಾಪದಿಂ ಕಂಪಿಕುಂ ೨೯

ಇವೆ ಗೋದಾವರಿಯೊಂದು ಘೋಷಣವೆ ಘೂರ್ಮಿಪ್ಪಾ ಗುಹಾನೀಕದಿಂ
ನವಮೇಘಾವೃತಶೃಂಗದಿಂ ಮೆರೆಗುಮಿಂತೀ ದಕ್ಷಿಣಾದ್ರಿವ್ರಜಂ
ಕವಿತಂದೊಂದಿ ಪಳಂಚಿ ಘೂರ್ಣಿಸಿ ಕೆರಳ್ದುರ್ಬೆಳ್ದು ಕಲ್ಲೋಲದಾ
ರವದಿಂದಂ ಮಡುಗೊಂಡುವಿಂತಿವೆ ವಲಂ ಪುಣ್ಯಂ ನದೀಸಂಗಮಂ ೩೦

ಮೂರನೆಯ ಅಂಕ

(ತಮಸೆ, ಮುರಳೆ ಎಂಬಿಬ್ಬರು ನದೀದೇವತೆಗಳು ಪ್ರವೇಶಿಸುವರು.)

ತಮಸೆ—ಸಖಿ ಮುರಳೆ, ಅದೇನು ಇಷ್ಟೊಂದು ತ್ವರೆಯಾಗಿ ಹೋಗುವೆ ?

ಮುರಳೆ—ಎಲೌ ಪೂಜ್ಯಳೇ, ಪೂಜ್ಯರಾದ ಅಗಸ್ತ್ಯಮುನಿಗಳ ಧರ್ಮಪತ್ನಿಯಾದ ಲೋಪಾಮುದ್ರಾದೇವಿಯು ಗೋದಾವರೀದೇವಿಗೆ ಹೀಗೆ ಹೇಳಹೇಳಿ ನನ್ನನ್ನು

ಕಳುಹಿಸಿರುವಳು : ಎಲೌ ಗೋದಾವರಿ, ಸೀತೆಯನ್ನು ತೊರೆದಂದುಮೊದಲು ಗೊಂಡು

ಒಳಗಡಗಿ ನೆಲಸಿ ನೋಟ
ಕ್ಕೊಳಗಾಗದೆ ತೀವ್ರಮಪ್ಪ ಯಾತನೆಯಂ ಕೈ
ಕೊಳಿಸುತೆ ರಾಮನ ಶೋಕಂ
ತಳೆದುದು ಪುಟಪಾಕದಲ್ಲಿ ಸಾಟಿಯನಕಟಾ ೧

ಹೀಗೆ ಇಷ್ಟಜನವಿಯೋಗದಿಂದುಂಟಾದ ದುಃಖದಿಂದ ರಾಮಭದ್ರನು ಕೊರಗಿ ಬಡವಾಗಿಹೋಗಿರುವನು. ಅವನನ್ನು ನೋಡಿ ನನ್ನ ಹೃದಯವು ಕಂಪಿಸುತ್ತಿದೆ. ಆ ಮಹಾಭಾಗನು ಇಲ್ಲಿಂದ ಹಿಂದಿರುಗಿ ಹೊರಡುವಾಗ ಪಂಚ ವಟಿಯಲ್ಲಿ ಹಿಂದೆ ತಾನು ಸೀತಾದೇವಿಯೊಡನೆ ವಿಹರಿಸುತ್ತಿದ್ದ ಪ್ರದೇಶಗಳನ್ನು ಹೇಗಿದ್ದರೂ ನೋಡುವನು. ಆ ಕಾಲದಲ್ಲಿ ಸ್ವಭಾವಧೀರನಾದ ಆತನಿಗೂ ಕೂಡ ದುಃಖೋದ್ರೇಕದಿಂದ ಪ್ರಮಾದವಾದ ಅವಸ್ಥೆಗಳು ಉಂಟಾಗಬಹುದು. ಆದುದ ರಿಂದ ನೀನು ಜಾಗರೂಕಳಾಗಿ ನೋಡಿಕೊಳ್ಳಬೇಕು. ರಾಮಭದ್ರನಿಗೆ ಏನಾ ದರೂ ಅಪಾಯವುಂಟಾದರೆ---

ತೆರೆಗಳ ತಣ್ಪುವೆತ್ತ ತನಿಸೀರ್ಪನಿಯಂ ತಳೆದೆತ್ತಿ ತಳ್ತ ತಾ
ವರೆಗಳ ನುಣ್ಪುವೆತ್ತ ನರುವೂವುಡಿಯಂ ತೆಗೆದೆತ್ತಿ ತಾಳ್ದ ಬಿ
ಣ್ಪೊರೆಗೆ ಕುನುಂಗಿ ತೀಡುವೆಳಗಾಳಿಯನಾಗಳುಮಟ್ಟಿಯಟ್ಟಿ ತೆ
ಪ್ಪರಿಪುದು ಮತ್ತೆಮತ್ತೆ ರಘುನಾಯಕನಾವೆಡೆ ಮೂರ್ಛೆವೋಪೊಡಂ ೨

ಅದು ಕಾರಣ ಈ ಅರ್ಥವನ್ನು ತಿಳಿಸುವುದಕ್ಕಾಗಿ ಬೇಗಬೇಗನೆ ಹೋಗುತ್ತಿದ್ದೆನು.

ತಮಸೆ—ನ್ಯಾಯ ; ಈ ವಿಧವಾದ ದಾಕ್ಷಿಣ್ಯವು ಸ್ನೇಹಕ್ಕೆ ಉಚಿತವಾದುದು. ಈಗ ರಾಮ ಭದ್ರನನ್ನು ಬದುಕಿಸುವ ಸಂಜೀವನವೇ ಕರಗತವಾಗಿರುವಲ್ಲಿ ಈ ಉಪಚಾರಗಳು ಯಾತಕ್ಕೆ ?

ಮುರಳೆ—ಹಾಗೆಂದರೇನು, ನನಗೆ ವಿಶದವಾಗಿ ತಿಳಿಸು.

ತಮಸೆ—ಎಲ್ಲವನ್ನೂ ಹೇಳುವೆನು ಕೇಳು. ಲಕ್ಷ್ಮಣನು ಸೀತಾದೇವಿಯನ್ನು ವಾಲ್ಮೀಕಿ ಮಹರ್ಷಿಗಳ ತಪೋವನದ ಬಳಿಯಲ್ಲಿ ಬಿಟ್ಟು ಬಂದ ಕೂಡಲೇ ಆಕೆಗೆ ಪ್ರಸವ ವೇದನೆಯೆತ್ತಿತು. ಆ ಕಾಲದಲ್ಲಿ ಆಕೆಯು ಮಿತಿಮೀರಿದ ದುಃಖದಿಂದ ಗಂಗಾ ನದಿಯಲ್ಲಿ ಬಿದ್ದುಬಿಟ್ಟಳು. ಕೂಡಲೆ ಅಲ್ಲಿ ಅವಳಿಮಕ್ಕಳನ್ನು ಹೆತ್ತಳು. ಆ ಸಮಯದಲ್ಲಿ ಭೂಮಿದೇವಿಯೂ ಗಂಗಾದೇವಿಯೂ ಬಂದು ಅವಳನ್ನು ರಸಾ

ತಲಕ್ಕೆ ಕರೆದುಕೊಂಡು ಹೋದರು. ಆ ಶಿಶುಗಳು ಹಾಲು ಕುಡಿವುದನ್ನು ಬಿಟ್ಟ ಕೂಡಲೇ ಗಂಗಾದೇವಿಯು ಅವುಗಳನ್ನು ಎತ್ತಿಕೊಂಡು ಹೋಗಿ ವಾಲ್ಮೀಕಿ ಮಹರ್ಷಿಗಳ ಸಮೀಪದಲ್ಲಿ ಬಿಟ್ಟು ಬಂದಳು.

ಮುರಳೆ—(ಆಶ್ಚರ್ಯದೊಡನೆ)

[ಅಸಮಗ್ರ.]

೨. ಕವಿತೆಗಳಿಗೆ ಟಿಪ್ಪಣಿಗಳು

೧

ಪ್ರೋಷಿತ ಪ್ರಿಯಸಮಾಗಮಂ

ಈ ಕೃತಿಯ ಆಕರ ಕರ್ಣಾಟಕ ಗ್ರಂಥಮಾಲೆ, ಮೈಸೂರು (ಜುಲೈ, ಆಗಸ್ಟ್ ೧೮೯೩). ಎಸ್. ಜಿ. ನ. ಅವರೇ ಸ್ವತಃ ಬರೆದಿರುವ ಆರಂಭದ ಪರಿಚಯಾತ್ಮಕ ಟಿಪ್ಪಣಿ ಈ ರೀತಿಯಾಗಿದೆ :

> ಇದು ಗೋಲ್ ಸ್ಮಿತ್‌ಯೆಂಬ ಹೂಣಕವಿಯಿಂದ ವಿರಚಿತವಾದ ದಿ ಹರ್ಮಿಟ್ ಎಂಬುದರ ಕರ್ಣಾಟಕ ಭಾಷಾಂತರವು.
>
> ಕಥಾಂಶ : ಒಬ್ಬ ಧನಿಕನಿಗೆ ಒಬ್ಬಳೇ ಮಗಳಿದ್ದಳು. ಅಕೆಗೂ ಮತ್ತೊಬ್ಬ ತರುಣನಿಗೂ ಪರಸ್ಪರಾನುರಾಗವು ಉಂಟಾಗಿತ್ತು. ಆದರೂ ಆಕೆಯು ಧನಮದದಿಂದಲೋ ಅಥವಾ ಸ್ತ್ರೀಜನಸಹಜವಾದ ಚಾಂಚಲ್ಯದಿಂದಲೋ ಆತನನ್ನು ಧಿಕ್ಕರಿಸಿದಳು. ಆತನು ಮನೋವ್ಯಥೆಯಿಂದ ವನಪ್ರವೇಶಮಾಡಿ ಋಷಿಚರ್ಯೆಯಲ್ಲಿರುತ್ತಿದ್ದನು. ಬಳಿಕ ಆಕೆಗೆ ಪಶ್ಚಾತ್ತಾಪವುಂಟಾಗಿ ಆತನನ್ನು ವರಿಸಬೇಕೆಂದು ಎಲ್ಲೆಲ್ಲಿ ಹುಡುಕಿದರೂ ಕಾಣದೆ ಪುರುಷವೇಷವನ್ನವಲಂಬಿಸಿ ಅರಣ್ಯದಲ್ಲಿ ಹುಡುಕುತ್ತಾ ಇರುವಲ್ಲಿ ಒಂದು ದಿವಸ ಸಂಧ್ಯಾಕಾಲದಲ್ಲಿ ಈ ವಿರಹಿಗಳಿಬ್ಬರೂ ಸಂಧಿಸಿದರು. ವೇಷಾಂತರದಲ್ಲಿದ್ದ ಕಾರಣದಿಂದ ಇಬ್ಬರಿಗೂ ಗುರುತು ತಿಳಿಯಲಿಲ್ಲ. ಆ ಕಾಲದಲ್ಲಿ ಆಕೆಯು ಆತನನ್ನು ನೋಡಿ ಇಂತೆಂದಳು :

ಎರಡನೆಯ ಮುದ್ರಣ (೧೯೧೧) ಕರ್ಣಾಟಕ ಕಾವ್ಯಕಲಾನಿಧಿಯ ಎಂ. ಎ. ರಾಮಾನುಜಯ್ಯಂಗಾರ್ಯರ ಮೂಲಕ ಆಗಿರುವಂತೆ ಪರೋಕ್ಷವಾಗಿ ತಿಳಿಯಬಹುದಾಗಿದೆ. Reprint from Karnataka Granthamala ಎಂಬುದಾಗಿ ಸೂಚಿತವಾಗಿದೆ. 'ಪ್ರವೇಶ' ಎಂಬ ಭಾಗದಲ್ಲಿ "ಕರ್ಣಾಟಕ ಕವಿಯೆಂದು ಪ್ರಸಿದ್ಧವಡೆದ ಎಸ್. ಜಿ. ನರಸಿಂಹಾಚಾರ್ಯರಿಂದ ರಚಿತವಾದ ಈ ಸಣ್ಣ ಕಾವ್ಯವು ಗೋಲ್ಡ್‌ಸ್ಮಿತ್ ಎಂಬ ಹೂಣ ಕವಿಶ್ರೇಷ್ಠನ ದಿ ಹರ್ಮಿಟ್ ಎಂಬುದರ ಪದ್ಯಾನುವಾದವು. ಇದೊಂದು ಶೃಂಗಾರರಸ ಪ್ರಧಾನವಾದ ರಮಣೀಯವಾದ ಕಾವ್ಯವು"—ಎಂಬುದಾಗಿರುವ ಟಿಪ್ಪಣಿಯನ್ನು ಪ್ರಾಯಶಃ ರಾಮಾನುಜಯ್ಯಂಗಾರ್ಯರೇ ಬರೆದಿರುವುದು ಸಂಭವನೀಯ.

ಈ ಕವಿತೆಯನ್ನು ಎಸ್. ಜಿ. ಗೋವಿಂದರಾಜ ಅಯ್ಯಂಗಾರ್ಯರು ತಮ್ಮ 'ಪ್ರಿಂರೋಜ ವಿಜಯಂ' ಎಂಬ ಗೋಲ್ಡ್‌ಸ್ಮಿತ್ ಕವಿಯ Vicar of Wakefield ಕಾದಂಬರಿಯ ಅನುವಾದಗ್ರಂಥದಲ್ಲಿಯೂ (ಕರ್ಣಾಟಕ ಗ್ರಂಥಮಾಲೆ-೩೭, ಮೈಸೂರು

೧೯೧೩) ಕೊನೆಯ ಒಂದು ಪದ್ಯ ಹೊರತಾಗಿ ಉದ್ಧರಿಸಿಕೊಟ್ಟಿದ್ದಾರೆ (೮ನೆಯ ಅಧ್ಯಾಯ, ಪು. ೪೪-೪೯). "ಇದು ನನ್ನ ಅಣ್ಣಂದಿರು ಎಸ್. ಜಿ. ನರಸಿಂಹಾಚಾರ್ಯರು ರಚಿಸಿದ ಪದ್ಯಾನುವಾದವು" ಎಂಬುದಾಗಿ ಅಡಿಟಿಪ್ಪಣಿಯಲ್ಲಿ ಕರ್ತೃತ್ವವನ್ನು ಸೂಚಿಸಿಯೂ ಇದ್ದಾರೆ.

ಈ ನೀಳ್ಗವಿತೆಯ ಛಂದಸ್ಸು ಕಂದಪದ್ಯ. ಪದ್ಯ ೩೭ರಲ್ಲಿ ಕೊನೆಯ ಪಾದ "ತಿರೆಗೈದಂ ನಾಂ ತದರ್ಥಮಂತುಟೆ ಗೈವೆಂ" ಎಂಬುದಾಗಿಯೂ ಪ.೩೯ರಲ್ಲಿ ೩ನೆಯ ಪಾದದ ಆದ್ಯಕ್ಷರ 'ಎ' ಎಂಬುದಾಗಿಯೂ ೧೮೯೩ರ ಪರಿಷ್ಕರಣದಲ್ಲಿದೆ.

೨

ದಿಲೀಪ ಚರಿತೆ

ಈ ಕೃತಿಯ ಆಕರ ಕರ್ಣಾಟಕ ಗ್ರಂಥಮಾಲೆ, ಮೈಸೂರು (೧೮೯೭). ಈ ಕೃತಿಯೂ ಇದರ ಭಾಗಗಳೂ ಶಾಲೆಗಳಲ್ಲಿ ಪಠ್ಯವಾಗಿ ಆಗಾಗ ನಿಯಮಿತವಾಗುತ್ತಿದ್ದುವು.

ಈ ಕೃತಿಗೆ ಎಸ್. ಜಿ. ನ. ಅವರೇ ಸ್ವತಃ ಬರೆದಿರುವ ಪೀಠಿಕೆಯನ್ನು ಇಲ್ಲಿ ಉದ್ಧರಿಸಬಹುದಾಗಿದೆ :

> ಮಹಾಕವಿ ಕಾಳಿದಾಸನ ರಘುವಂಶವು ಜಗತ್ಪ್ರಸಿದ್ಧವಾದುದು. ಇದು ಪದಲಾಲಿತ್ಯದಿಂದಲೂ ಶಯ್ಯಾಮಾಧುರ್ಯದಿಂದಲೂ ಅರ್ಥಗಾಂಭೀರ್ಯದಿಂದಲೂ ಕಾವ್ಯಗಳಿಗೆಲ್ಲಾ ರತ್ನಪ್ರಾಯವಾಗಿದೆ. ಇದರಲ್ಲಿ ಇತರ ಕಾವ್ಯಗಳಲ್ಲಿರುವಂತೆ ಕೇವಲ ಕವಿಸಮಯ ಕಲ್ಪಿತಗಳಾದ ವರ್ಣನಾವೈಖರಿಗಳೂ ಅನುಭವಕ್ಕೆ ಬಾರದ ಅಲಂಕಾರಾಡಂಬರಗಳೂ ವಿಶೇಷವಾಗಿಲ್ಲದೆ, ಸರ್ವರಿಗೂ ಅನುಭವಗೋಚರವಾಗುವ ವಿಷಯಗಳೇ ಸ್ವಭಾವೋಚಿತವಾಗಿಯೂ ಚಮತ್ಕಾರವಾಗಿಯೂ ಹೃದಯಂಗಮವಾಗಿಯೂ ವರ್ಣಿಸಲ್ಪಟ್ಟಿವೆ.
>
> ಈ ಶ್ಲಾಘ್ಯವಾದ ಗ್ರಂಥವನ್ನು ಇದುವರೆಗೂ ಯಾರೂ ಕನ್ನಡಿಸಿಲ್ಲವಾದುದರಿಂದ ಈ ಕುಂದನ್ನು ಹೋಗಲಾಡಿಸುವುದಕ್ಕಾಗಿ ಇದರ ಮೊದಲು ಮೂರು ಸರ್ಗದ ಕಥೆಯಾದ ದಿಲೀಪ ಚರಿತೆಯನ್ನು ಕುಸುಮ ಷಟ್ಪದಿಯ ರೂಪವಾಗಿ ಪರಿವರ್ತಿಸಿ ಮುದ್ರಿಸಿದೇನೆ.
>
> ಇದು ಕನ್ನಡಿಗರಿಗೆ ಪರಿಗ್ರಾಹ್ಯವಾದರೆ ಈ ಕಾವ್ಯವನ್ನು ಕೊನೆಯವರೆಗೂ ಪರಿವರ್ತಿಸಿ ಬರೆಯಬೇಕೆಂಬ ಕುತೂಹಲವಿದೆ.
>
> ಇದನ್ನು ಕರ್ಣಾಟಕ ಗ್ರಂಥಮಾಲೆಯಲ್ಲಿ ಪ್ರಕಟಿಸಿದುದಕ್ಕಾಗಿ ತತ್ಸಂಪಾದಕರಾದ ಮ|| ರಾ|| ಎಮ್. ಶಾಮರಾವ್, ಎಂ. ಎ. ಯವರಿಗೆ ಕೃತಜ್ಞನಾಗಿದೇನೆ.

೩

ಅಜನೃಪ ಚರಿತೆ

ಈ ಕೃತಿಯ ಆಕರ ಕರ್ಣಾಟಕ ಗ್ರಂಥಮಾಲೆ-೨೫, ಮೈಸೂರು (೧೯೦೦). ಈ ಗ್ರಂಥಕ್ಕೆ ಬರೆದಿರುವ ವಿಜ್ಞಾಪನೆ, ಎಸ್. ಜಿ. ನ. ಅವರೇ ಬರೆದುದು. ಅದು ಹೀಗಿದೆ :

ಶ್ರೀ ಕಾಳಿದಾಸ ವಿರಚಿತವಾದ ರಘುವಂಶದ ಮೊದಲು ಮೂರು ಸರ್ಗಗಳಿಗೆ ಕರ್ಣಾಟಕ ಪದ್ಯಾನುವಾದರೂಪವಾದ ದಿಲೀಪ ಚರಿತವೆಂಬ ಗ್ರಂಥವನ್ನು ಹಿಂದೆ ಮುದ್ರಿಸಿದೆನಷ್ಟೆ. ಈಗ ಆ ಭಾಗಕ್ಕೆ ಸ್ವಲ್ಪ ಮುಂದೆ-ಎಂದರೆ ರಘುವಂಶದ ನಾಲ್ಕನೆಯ ಸರ್ಗದ ಉತ್ತರ ಭಾಗದಿಂದ ಏಳನೆಯ ಸರ್ಗದ ಕಡೆಯವರೆಗೆ-ದೊರೆವ ಅಜ ನೃಪ ಚರಿತೆಯನ್ನು ಭಾಮಿನೀಷಟ್ಪದಿಯಲ್ಲಿ ಅನುವಾದಮಾಡಿ ಮುದ್ರಿಸಿ ಕರ್ಣಾಟ ಭಾಷಾಭಿಮಾನಿಗಳ ಸನ್ನಿಧಿಯಲ್ಲಿ ಸಮರ್ಪಿಸಿದೇನೆ. ಇದು ಅವರ ಅನುಗ್ರಹಕ್ಕೆ ಪಾತ್ರವಾದರೆ ನನ್ನ ಪ್ರಯತ್ನವು ಸಫಲವಾಯಿತೆಂದು ಭಾವಿಸುವೆನು. ಇದನ್ನು ತಮ್ಮ ಪತ್ರಿಕೆಯಲ್ಲಿ ಪ್ರಚಾರಪಡಿಸಿದ ಕರ್ಣಾಟಕ ಗ್ರಂಥಮಾಲಾಸಂಪಾದಕರ ಉಪಕಾರವು ನನಗೆ ಚಿರಸ್ಮರಣೀಯವಾಗಿದೆ.

ಈ ಕಾವ್ಯಭಾಗದಲ್ಲಿ ಲೇಖಕರೇ ತೋರಿಸಿರುವ ಶೋಧನಪತ್ರದ ತಿದ್ದುಪಡಿಗಳ ಜೊತೆಗೆ, ಇನ್ನೂ ಕೆಲವು ಸಣ್ಣಪುಟ್ಟ ಅಚ್ಚಿನ ತಪ್ಪುಗಳನ್ನು ಮೊದಲ ಸಲ ತಿದ್ದಲಾಗಿದೆ.

ಳ

ಆಕಳು

ಈ ಪದ್ಯದ ಆಕರ: ಸಂ. ಎಸ್. ಶ್ರೀನಿವಾಸ ರಾಯರು, 'ಬಾಲಬೋಧೆ,' ಭಾಗ ೨, ೧೯೧೪ (೯ನೆಯ ಮುದ್ರಣ). ವಿಷ್ಣುಗಣಗಳಿಂದ ಕಟ್ಟಿದ ರಚನೆಯಾಗಿರುವಂತೆ ತೋರುತ್ತದೆ. ಮೂಲದಲ್ಲಿ "ರಾಗ ಕಮಾಚ್, ಅಟತಾಳ" ಎಂದು ರಾಗ ತಾಳಗಳನ್ನು ನಿರ್ದೇಶಿಸಿದೆ.

'ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ'

ಈ ಪದ್ಯದ ಆಕರ : ಸಂ. ಎಲ್. ಶ್ರೀಕಂಠೇಶ ಗೌಡ, ಸುರಭಿ, ೧-೫, ಆಗಸ್ಟ್ ೧೮೯೬, ಪು. ೫೯-೬೦. ಇದರಲ್ಲಿ ಪದ್ಯದ ಕೊನೆಗೆ ಎಸ್. ಜಿ. ನರಸಿಂಹಾಚಾರ್ಯ ಎಂಬುದಾಗಿ ಕರ್ತೃವಿನ ಹೆಸರಿದೆ. ಕರ್ಣಾಟಕ ಕಾವ್ಯಕಲಾನಿಧಿ ಪತ್ರಿಕೆಯ ೧೮-೫೪, ೫೫ (ಮಾರ್ಚ್, ಏಪ್ರಿಲ್ ೧೯೧೩)ರ ಸಂಚಿಕೆಗಳ ರಕ್ಷಾಪುಟಗಳಲ್ಲಿಯೂ ಕರ್ತೃವಿನ ಹೆಸರಿನೊಂದಿಗೆ ಈ ಪದ್ಯ ಪ್ರಕಟವಾಗಿದೆ.

ಪದ್ಯದ ಛಂದಸ್ಸು ಭಾಮಿನೀಷಟ್ಪದಿ. ಎಸ್. ಜಿ. ನ. ಅವರ ಸ್ವತಂತ್ರ ಕವಿತೆಗಳಲ್ಲಿ ಇದು ಬಹುಶಃ ಅತ್ಯುತ್ಕೃಷ್ಟವಾದುದು.

ಕಾಮದಹನದ ಹಾಡು

ಈ ಪದ್ಯದ ಆಕರ : ಡಿ. ವಿ. ಜಿ., 'ಸಾಹಿತ್ಯೋಪಾಸಕರು' (ಜ್ಞಾಪಕ ಚಿತ್ರಶಾಲೆ-೩, ೧೯೭೦, ಪು. ೪೫). ಇಲ್ಲಿ ಎತ್ತಿ ಕೊಟ್ಟಿರುವುದು ಒಂದೇ ನುಡಿ. ಅದಾದರೂ ನೆನಪಿನಿಂದ ಎತ್ತಿ ಕೊಟ್ಟದ್ದು. ಈ ನುಡಿಯನ್ನು ಉದ್ಧರಿಸುತ್ತ, ಡಿ. ವಿ. ಜಿ. ಹೇಳಿರುವ ಮಾತುಗಳು ಎಂದರೆ :

> ನರಸಿಂಹಾಚಾರ್ಯರು ಕಾಮದಹನದ ಹಬ್ಬಕ್ಕಾಗಿ ಒಂದು ಹಾಡು ಕಟ್ಟಿದರು. ಆ ಹಾಡು ಆ ಕಾಲದ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಕೆಲವರ ಮನಸ್ಸನ್ನು ಹಿಡಿದಿತ್ತು...ಇವರು ಆ ಹಾಡಿನ ತುಣುಕುಗಳನ್ನು ಆಗಾಗ ಹೇಳಿಕೊಳ್ಳುತ್ತಿದ್ದುದನ್ನು ನಾನು ಕೇಳಿದ್ದೇನೆ. ಆದರೆ ಯಾರಿಗೂ ಆ ಹಾಡು ಪೂರ್ತಿಯಾಗಿ ತಿಳಿದಿದ್ದಂತೆ ತೋರಲಿಲ್ಲ. ನನಗೆ ಈ ಹಾಡಿನ ವಿಷಯ ತಿಳಿದದ್ದು ಎಸ್. ಜಿ. ನರಸಿಂಹಾಚಾರ್ಯರು ತೀರಿಕೊಂಡ ಬಹುದಿನಗಳ ಮೇಲೆ. ಆದದ್ದರಿಂದ ಹಾಡಿನ ಸಾಹಿತ್ಯವನ್ನು ನಾನು ಸಂಪಾದಿಸಲಾಗಲಿಲ್ಲ. ಅದರ ಒಂದು ಚರಣ ಕೂಡ ಪೂರ್ತಿಯಾಗಿ ನಾನು ಕೇಳಲಿಲ್ಲ. ನಾನು ಕೇಳಿದ ಹರಕು ಮುರುಕುಗಳಿಂದ ಆ ಹಾಡು ಒಂದು ಅಸಾಧಾರಣ ಧಾಟಿಯಲ್ಲಿತ್ತೆಂದು ನನಗನ್ನಿಸಿದೆ, ಹೀಗೆ...

ಪದ್ಯದ ಛಂದಸ್ಸು ಬಹುಶಃ ೩-೪ರ ಮಾತ್ರಾಲಯದ್ದು ; ಅಸಾಂಪ್ರದಾಯಿಕ ಬಂಧಲಕ್ಷಣ ಇಲ್ಲಿಯದು.

ಕಾಮನ ಬಿಲ್ಲು

ಈ ಪದ್ಯದ ಆಕರ : ಸಂ. ಆರ್. ಶ್ರೀನಿವಾಸ ರಾಯರು, 'ಬಾಲಬೋಧೆ,' ಭಾಗ ೨, ೧೯೧೪ (೯ ನೆಯ ಮುದ್ರಣ). ಕರ್ತೃವಿನ ಹೆಸರಿಲ್ಲ. ಎಸ್. ಜಿ. ನ. ಅವರದೆಂದು ಸಾಮಾನ್ಯವಾಗಿ ಭಾವಿಸಲಾಗಿದೆ.

ಪದ್ಯದ ಮೊದಲ ನುಡಿ ಒಂದು ಕಂದಪದ್ಯ ; ಮುಂದಿನ ಭಾಗ ವಿಷ್ಣುಗಣಗಳ ಸಾಮಾನ್ಯ ವಿನ್ಯಾಸದಲ್ಲಿರುವಂತಿದೆ. ಕಂದಪದ್ಯದ ಬಳಿಕ "ರಾಗ ಶ್ಯಾಮ ಕಲ್ಯಾಣಿ, ಆದಿ ತಾಳ" ಎಂದು ರಾಗತಾಳಗಳನ್ನು ನಿರ್ದೇಶಿಸಿದೆ.

'ವಿದ್ಯಾದಾಯಿನಿ' ೨-೧ (ಜನವರಿ ೧೮೯೪) ರಲ್ಲಿ, ಪು. ೨೫ ರಲ್ಲಿ ಕಾಮನಬಿಲ್ಲು ವಸ್ತುವಾಗಿರುವ ಒಂದು ಕವಿತೆಯಿದೆ. ಆದರೆ ಇದರ ಕರ್ತೃ ಎಸ್. ಜಿ. ನ. ಎಂಬುದಕ್ಕೆ ಯಾವ ಸೂಚನೆಯೂ ಇಲ್ಲ.

ಕಾಲದ ಬೆಲೆ

ಈ ಪದ್ಯದ ಆಕರ: ಮಂ. ಆ. ರಾಮಾನುಜಯ್ಯಂಗಾರ್ಯರ 'ಪ್ರಬಂಧಾವಳಿ' ಎಂಬ ಪ್ರಬಂಧಗಳ ಸಂಕಲನದಲ್ಲಿ(ಕರ್ಣಾಟಕ ಗ್ರಂಥಮಾಲೆ-೩೭, ಮೈಸೂರು, ೧೯೦೪)'ಕಾಲದ ಬೆಲೆ' ಎಂಬ ಪ್ರಬಂಧದಲ್ಲಿ ಉದ್ಧೃತ.

ಕರ್ತೃವಿನ ಹೆಸರಿಲ್ಲ. ಈ ಎರಡು ಪದ್ಯಗಳ ಕರ್ತೃ ಎಸ್. ಜಿ. ನ. ಅವರೇ ಆಗಿರುವಂತೆ ತೋರುತ್ತವೆ. ಇದನ್ನು ಈ ಆಧಾರಗಳಿಂದ ಊಹಿಸಲಾಗಿದೆ : (i) ಪೂರ್ವೋಕ್ತ ಪ್ರಬಂಧದ ಭಾಗವಾಗಿ ಈ ಪದ್ಯಗಳು ಬಂದಿದ್ದು, ಇವು ಆರಂಭವಾಗುವ ಮೊದಲು "ಕಾಲವನ್ನು ಸದ್ವಿನಿಯೋಗ ಮಾಡದಿದ್ದರೆ ಉಂಟಾಗುವ ನಷ್ಟವನ್ನು 'ಕಾಲಃ ಪಿಬತಿ ತದ್ರಸಂ' (ಕಾಲವು ಅದರ ರಸವನ್ನೇ ಹೀರಿಬಿಡುತ್ತದೆ) ಎಂಬ ಕವಿವಾಕ್ಯವೇ ಸ್ಪಷ್ಟಪಡಿಸುತ್ತದೆ" ಎಂಬ ವಾಕ್ಯವಿದ್ದು, ಆ ಕವಿವಾಕ್ಯವನ್ನು ಬೇರೊಂದು ಕವಿವಾಕ್ಯದಿಂದ ಪುಷ್ಟೀ

ಕರಿಸುವ ಹಂಚಿಕೆ ಪ್ರಬಂಧಕಾರರಿಗೆ ಇರುವಂತೆ ತೋರುತ್ತದೆ. (ii) ರಾಮಾನುಜಯ್ಯಂಗಾರ್ಯರು ಸ್ವತಃ ಕವಿಯಾಗಿ ಪ್ರಸಿದ್ಧಿ ಪಡೆದು ಕವಿತೆಗಳನ್ನು ರಚಿಸಿರುವುದಕ್ಕೆ ಆಧಾರವಿಲ್ಲ. ಆದ್ದರಿಂದ ಪದ್ಯಗಳು ಉದ್ಧೃತವಾಗಿರಬೇಕು; ಅನ್ಯಕರ್ತೃಕವೂ ಆಗಿರಬೇಕು. ಪದ್ಯದ ಕೊನೆಗೆ ನಕ್ಷತ್ರಚಿಹ್ನೆ ಹಾಕಿರುವುದು ಅನ್ಯಕರ್ತೃಕವೆಂಬುದನ್ನು ಸೂಚಿಸಲೆಂದೇ ಇರಬಹುದು. (iii) "ಪ್ರಬಂಧರಚನೆಯಲ್ಲಿ ವಿಶೇಷ ಪ್ರೋತ್ಸಾಹವನ್ನು ಕೊಟ್ಟು ಸಹಾಯಮಾಡಿದುದಕ್ಕಾಗಿ ನನ್ನ ಮಿತ್ರರಾದ ಮ॥ ರಾ॥ ಎಸ್. ಜಿ. ನರಸಿಂಹಾಚಾರ್ಯರಲ್ಲಿ ಬಹಳ ಕೃತಜ್ಞನಾಗಿರುತ್ತೇನೆ" ಎಂಬುದಾಗಿ ಕೃತಿಯ ಪೀಠಿಕೆಯಲ್ಲಿ ಹೇಳಿರುವುದರಿಂದ ಅವರು ಹೀಗೆ ಪದ್ಯ ಬರೆದುಕೊಟ್ಟು ಸಹಾಯ ಮಾಡಿರುವುದೂ ಸಂಭವನೀಯವೇ. ಎಸ್. ಜಿ. ನ. ತಮ್ಮ ಮಿತ್ರರ ಪುಸ್ತಕಗಳಿಗೆ ಪದ್ಯಗಳನ್ನು ಬರೆದು ಕೊಟ್ಟಿರುವ ಬೇರೆ ನಿದರ್ಶನಗಳಿವೆ. (iv) ಪದ್ಯಗಳ ಕಾವ್ಯಸತ್ತ್ವ, ಬಂಧಗುಣ ಉತ್ತಮ ಮಟ್ಟದವಾಗಿದ್ದು ಅಂತಸ್ಸಂಭಾವ್ಯತೆಯ ದೃಷ್ಟಿಯಿಂದ ಎಸ್. ಜಿ. ನ. ಅವರ ಬೇರೆ ರಚನೆಗಳನ್ನು ಇವು ಹೋಲಬಹುದಾಗಿವೆ. (v) ಈ ಪದ್ಯಗಳ ಭಾವವೂ ಸಂದೇಶವೂ ಮಾತುಗಾರಿಕೆಯೂ ಅವರದೆಂದು ನಿಶ್ಚಯವಾಗಿ ತಿಳಿದಿರುವ 'ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ' ಎಂಬ ಕವಿತೆಯ ಭಾವ, ಸಂದೇಶ, ಮಾತುಗಾರಿಕೆಗಳನ್ನು ನಿಕಟವಾಗಿ ಹೋಲುತ್ತವೆ.

ಪದ್ಯಗಳ ಛಂದಸ್ಸು ಭಾಮಿನೀ ಷಟ್ಪದಿ.

ಕಾವೇರಿ

ಈ ಪದ್ಯದ ಆಕರ : ಸಂ. ಎಂ. ಎಸ್. ಪುಟ್ಟಣ್ಣ, 'ಕನ್ನಡದ ಒಂದನೆಯ ಪುಸ್ತಕವು', ಬೆಂಗಳೂರು, ೧೯೦೬, ೪೮ ನೆಯ ಪಾಠ, ಪು. ೪೮; ಇದು ೧೯೦೮ ರ 'ಕನ್ನಡ ಒಂದನೆಯ ಪುಸ್ತಕ'ದಲ್ಲಿಯೂ ಬಂದಿದೆ.

ಕರ್ತೃವಿನ ಹೆಸರಿಲ್ಲ. ರೂಢಿಯಲ್ಲಿ ಕರ್ತೃ ಎಸ್. ಜಿ. ನ. ಎಂಬುದಾಗಿ ತಿಳಿಯಲಾಗಿದೆ. ಪದ್ಯದ ಛಂದಸ್ಸು ೪ ಮಾತ್ರೆಗಳ ಮಾತ್ರಾಗಣಛಂದಸ್ಸು. ಅಸಾಂಪ್ರದಾಯಿಕ ಬಂಧಲಕ್ಷಣ ಇಲ್ಲಿಯದು. ಕವಿತೆಯ ಮೊದಲಲ್ಲಿ "ರಾಗ ಸುರಟಿ. ಆದಿತಾಳ ('ಆರತಿಯೆತ್ತಿರೆ' ಎಂಬಂತೆ)" ಎಂಬ ಸೂಚನೆಯನ್ನು ಕೊಟ್ಟಿದೆ.

ಗೋವಿನ ಚರಿತ್ರೆ

ಈ ಪದ್ಯದ ಆಕರ : ವಿದ್ಯಾದಾಯಿನಿ, ಭಾಗ ೩-ಸಂಚಿಕೆ ೬, ಜೂನ್ ೧೮೯೫ (ಪದ್ಯ ೨ರಲ್ಲಿ 'ಕಟ್ಟಿದರೆ ಮರುಳಾದೆ' ಎಂದೂ ೪ರಲ್ಲಿ 'ಒಂದು' ಎಂದೂ ಇರುವುದು ಬಹುಶಃ ಅಚ್ಚಿನ ದೋಷಗಳಿರಬಹುದು.)

ಕರ್ತೃವಿನ ಹೆಸರಿಲ್ಲ. ರೂಢಿಯಲ್ಲಿ ಕರ್ತೃ ಎಸ್.ಜಿ. ನ. ಎಂದು ತಿಳಿಯಲಾಗಿದೆ. ಈ ಜನಪ್ರಿಯ ಮಕ್ಕಳ ಹಾಡು ದಶಕಗಳ ಕಾಲ ಬಾಲಬೋಧೆಗಳಲ್ಲಿ ಪ್ರಕಟವಾಗುತ್ತಿದ್ದು, ಬಹಳ ಹಿಂದೆಯೇ ಪರಿಷ್ಕರಣ ಹಾಗೂ ಸಂಕ್ಷೇಪಕ್ಕೆ ಒಳಗಾದಂತೆ ತೋರುತ್ತದೆ.

ಪದ್ಯದ ಛಂದಸ್ಸು ಸ್ಥೂಲವಾಗಿ ಕುಸುಮ ಷಟ್ಪದಿ. ಆದರೆ ಹೊಂದಾಣಿಕೆಯ ಮಾತ್ರಾಗಣಗಳನ್ನು ಹೂಡಿ ಅಸಾಂಪ್ರದಾಯಿಕ ಚತುಷ್ಪದಿಯ ರೂಪದಲ್ಲಿ ಇದನ್ನು ಅಳವಡಿಸಲಾಗಿದೆ.

ಗೋವಿನ ಬಾಳು

ಈ ಪದ್ಯದ ಆಕರ : 'ಕನ್ನಡ ಒಂದನೆಯ ಪುಸ್ತಕವು', ಅರುವತ್ತಾರನೆಯ ಪಾಠ, ಪು. ೬೭–೬೯. 'ಕನ್ನಡ ಒಂದನೆಯ ಪುಸ್ತಕ' (೧೯೦೦), 'ಕನ್ನಡ ಎರಡನೆಯ ಪುಸ್ತಕ' (೧೯೧೪) ಇಲ್ಲಿಯೂ ಬಂದಿದೆ. ಇದೇ ಪದ್ಯಪಾಠ ಸ್ವಲ್ಪಪಾಠಭೇದಗಳೊಡನೆ ೧೯೩೯ ರಲ್ಲಿ ಪ್ರಕಟವಾದ 'ಕನ್ನಡ ನೂತನ ಪಾಠಮಾಲೆ' ಯ ಎರಡನೆಯ ಪುಸ್ತಕದಲ್ಲಿಯೂ (ಸಂ. ಎಂ. ರಾಮನ್ ನಂಬ್ಯಾರ್, ಉಗ್ರಾಣ ಮಂಗೇಶ ರಾವ್, ದಾಮೋದರ ಬಾಳಿಗ, ಮಂಗಳೂರು) ೧೯೬೦ ರಲ್ಲಿ ಪ್ರಕಟವಾದ ಮೈಸೂರು ವಿದ್ಯಾಭ್ಯಾಸ ಇಲಾಖೆಯ 'ಕನ್ನಡ ನಾಲ್ಕನೆಯ ಪುಸ್ತಕ'ದಲ್ಲಿಯೂ ಸೇರ್ಪಡೆಯಾಗಿದೆ. 'ವಿದ್ಯಾದಾಯಿನಿ' ಯೊಳಗಿನ ಪೂರ್ವೋಕ್ತ 'ಗೋವಿನ ಚರಿತ್ರೆ' ಯಾವಾಗ ಈ ಪರಿಷ್ಕೃತ ಹಾಗೂ ಸಂಕ್ಷಿಪ್ತ ರೂಪವನ್ನು ಪಡೆದುಕೊಂಡಿತೋ ನಮಗೆ ತಿಳಿಯದು.

ಹೊಸಕೆರೆ ಚಿದಂಬರಯ್ಯನವರು ತಮ್ಮ 'ನೀತಿಗಳ ನೆಲಗಟ್ಟು' ಎಂಬ ಪುಸ್ತಕದಲ್ಲಿ (೧೯೨೬), ಪರೋಪಕಾರ ಎಂಬ ಪ್ರಬಂಧದ ಭಾಗದಲ್ಲಿ (ಪು. ೧೭೯-೮೦) ಈ ಪದ್ಯವನ್ನು ಸವ್ಯಾಖ್ಯಾನವಾಗಿ ಉದ್ಧರಿಸಿದ್ದಾರೆ.

ಚಂದ್ರ

ಈ ಪದ್ಯದ ಆಕರ : ಸಂ. ಎಂ. ಎಸ್. ಪುಟ್ಟಣ್ಣ, ಬಿ. ಎ., 'ಕನ್ನಡದ ಒಂದನೆಯ ಪುಸ್ತಕವು', ಬೆಂಗಳೂರು, ೧೯೦೬ (೪ನೆಯ ಮುದ್ರಣ), ೮೪ನೆಯ ಪಾಠ, ಪು. ೮೯.

ಕರ್ತೃವಿನ ಹೆಸರಿಲ್ಲ. ರೂಢಿಯಲ್ಲಿ ಎಸ್. ಜಿ. ನ. ಅವರ ರಚನೆಯೆಂಬುದಾಗಿ ತಿಳಿಯಲಾಗಿದೆ. ಪದ್ಯದ ಛಂದಸ್ಸು ಭೋಗ ಷಟ್ಪದಿ.

ಚಾಮರಾಜೇಂದ್ರ ಮರಣವಾರ್ತೆ

ಈ ಪದ್ಯದ ಆಕರ : ಸಂ. ಮಂ. ಆ. ರಾಮಾನುಜಯ್ಯಂಗಾರ್, 'ಕವಿಸಮಯ', ಪ್ರಥಮ ಭಾಗ, ಕರ್ಣಾಟಕ ಗ್ರಂಥಮಾಲೆ-೪೭. ಮೈಸೂರು, ೧೯೦೮, ಪು. ೬೬–೬೭.

ಈ ಪದ್ಯದ ಆರಂಭದಲ್ಲಿ ಈ ವಾಕ್ಯಭಾಗವನ್ನು ಬರೆದಿದೆ: "...ಈಗಿನ ಕವಿಶ್ರೇಷ್ಠರಾದ ಎಸ್.ಜಿ. ನರಸಿಂಹಾಚಾರ್ಯರು ನಮ್ಮ ಶ್ರೀಮನ್ಮಹಾರಾಜರವರ ತಂದೆಗಳಾದ ಶ್ರೀ ಚಾಮರಾಜೇಂದ್ರವೊಡೆಯರವರು ಗತಿಸಿದ ಕಾಲದಲ್ಲಿ ಬರೆದ ಈ ಪದ್ಯಗಳಿಂದ ವ್ಯಕ್ತಗಳಾಗುವುದು."

ಈ ಮೊದಲೇ ಎಂ. ಶಿಂಗ್ರಯ್ಯನವರ 'ಶ್ರೀ ಚಾಮರಾಜೇಂದ್ರ ಒಡೆಯರವರ

ಚರಿತ್ರೆ' (೧೯೦೫) ಯಲ್ಲಿ ೧೮ನೆಯ ಉಪಸಂಹಾರವೆಂಬ ಅಧ್ಯಾಯದಲ್ಲಿ ಇದು ಸೇರಿದ್ದುದು ತಿಳಿಯುತ್ತದೆ. ಪದ್ಯಗಳ ಕೊನೆಗೆ S. G. N. ಎಂಬುದಾಗಿ ಕರ್ತೃತ್ವದ ಸೂಚನೆಯಿದೆ. ಈ ಗ್ರಂಥದ ಉಪೋದ್ಘಾತಭಾಗದಲ್ಲಿ "ಮೈಸೂರು ಕರ್ಣಾಟಕ ಕಾವ್ಯಮಂಜರೀ ಪತ್ರಿಕಾಕರ್ತರಾದ ಮ॥ ಎಸ್. ಜಿ. ನರಸಿಂಹಾಚಾರ್ಯರು ಉಪಸಂಹಾರಾಧ್ಯಾಯದಲ್ಲಿ ಕೊಟ್ಟಿರುವ ಪದ್ಯಗಳನ್ನು ಮುದ್ರಿಸುವಂತೆ ಕರುಣಿಸಿ ಕೊಟ್ಟುದಕ್ಕಾಗಿಯೂ...." ಎಂಬುದಾಗಿ ಕೃತಜ್ಞತೆಯ ಮಾತನ್ನು ಹೇಳಿದೆ (೪ನೆಯ ಮುದ್ರಣ, ೧೯೨೬, ಪು. ೨೫೩-೫೪).

ಪದ್ಯಗಳ ಛಂದಸ್ಸು ಭಾಮಿನೀಷಟ್ಪದಿ.

ನಾಲ್ವಡಿ ಕೃಷ್ಣರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವ

ಈ ಪದ್ಯದ ಆಕರ : ಎಂ. ಲಿಂಗ್ರಯ್ಯ, 'ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆ' (೧೯೦೫), ೧೮ನೆಯ 'ಉಪಸಂಹಾರ' ಎಂಬ ಅಧ್ಯಾಯ (೪ನೆಯ ಮುದ್ರಣ, ೧೯೨೬, ಪು. ೨೫೯-೬೦).

ಕರ್ತೃವಿನ ಹೆಸರು S. G. N. ಎಂಬುದಾಗಿ ಪದ್ಯಗಳ ಕೊನೆಗೆ ಕೊಟ್ಟಿದೆ. ಪದ್ಯಗಳಲ್ಲಿ ೧ ಕಂದ; ೨ರಿಂದ ೫ ಮತ್ತು ೮, ೯ ಚಂಪಕಮಾಲಾ ವೃತ್ತಗಳು ; ಪ. ೭ ಉತ್ಪಲ ಮಾಲಾವೃತ್ತ.

ನೇಗಿಲು

ಈ ಪದ್ಯದ ಆಕರ : 'ಕನ್ನಡ ಎರಡನೆಯ ಪುಸ್ತಕವು', ಮೂವತ್ತೆರಡನೆಯ ಪಾಠ, ೧೯೩೭. (ಪ್ರಥಮ ಮುದ್ರಣ, ೧೯೧೪, ಪು. ೪೦-೪೧).

ಪದ್ಯದ ಛಂದಸ್ಸು ಭಾಮಿನೀ ಷಟ್ಪದಿ.

ಬುದ್ಧಿಯೆ ಬಲವೇ ಬಲ

ಈ ಪದ್ಯದ ಆಕರ: ಸಂ. ಎಂ.ಎಲ್. ಶ್ರೀಕಂಠೇಶ ಗೌಡ, 'ಸುರಭಿ', ಸಂಪುಟ ೧- ಸಂಚಿಕೆ ೪, ಜುಲೈ ೧೮೯೬, ಪು. ೪೭.

ಕರ್ತೃವಿನ ಹೆಸರಿಲ್ಲ. ಆದರೆ ಕರ್ತೃ ಎಸ್.ಜಿ.ನ. ಅವರೇ ಆಗಿರುವ ಸಾಧ್ಯತೆ ಇದೆ ಇದನ್ನು ಈ ಕೆಳಗಿನ ಆಕರಗಳಿಂದ ತರ್ಕಿಸಲಾಗಿದೆ: (i) 'ಸುರಭಿ' ಪತ್ರಿಕೆಯಲ್ಲಿಯೇ ಸ್ಪಷ್ಟವಾಗಿ ಕರ್ತೃತ್ವ ಸೂಚನೆಯಿರುವ ಎರಡು ಪದ್ಯಗಳು ೧-೫,೬ರಲ್ಲಿ ಕಂಡುಬರುತ್ತವೆ· ಆ ಮೊದಲು ೧-೪ ರಲ್ಲಿಯೇ ಒಂದು ಪದ್ಯವನ್ನು ಎಸ್. ಜಿ. ನ. ಅವರು ಬರೆದು, ಹೆಸರುಕೊಡದೆ ಪ್ರಕಟಿಸಿರಲೂ ಬಹುದು. (ii) ಪದ್ಯದ ಭಾಷೆ, ಶೈಲಿಗಳು ಎಸ್. ಜಿ.ನ. ಅವರ ಬೇರೆ ಪದ್ಯಗಳ ಭಾಷೆ ಶೈಲಿಗಳಿಗೆ ತುಂಬಾ ಹತ್ತಿರವಾಗಿ ಹೋಲುತ್ತವೆ. ಎಸ್. ಜಿ. ನ. ಅವರ ವೈಯಕ್ತಿಕತೆಯ ಮುದ್ರೆ ಇವರಲ್ಲಿ ಕಂಡುಬರುತ್ತದೆ. (iii) ಈ ಪದ್ಯದಲ್ಲಿಯ ಭಾವ ಉಕ್ತಿಗಳು ಈಗಾಗಲೇ ಎಸ್. ಜಿ. ನ. ಅವರದೆಂದು ನಾವು ತರ್ಕಿಸಿ

ರಂವ ಪದ್ಯಗಳ ಭಾವ ಉಕ್ತಿಗಳಿಗೆ ಹತ್ತಿರದ ಹೋಲಿಕೆಯನ್ನು ತೋರಿಸುತ್ತವೆ. ಉದಾಹರಣೆಗೆ, 'ಕಾಲದ ಬೆಲೆ' ಪದ್ಯದ ಮೊದಲನೆಯ ನುಡಿಯನ್ನೂ ಈ ಪದ್ಯದ ಆರನೆಯ ನುಡಿಯನ್ನೂ ಹೋಲಿಸಿದರೆ ಇದು ಸ್ಪಷ್ಟವಾಗುತ್ತದೆ. ಹಾಗೆಯೇ 'ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ' ಪದ್ಯದ ಮೂರನೆಯ ನುಡಿಯನ್ನೂ ಈ ಪದ್ಯದ ಒಂಬತ್ತನೆಯ ನುಡಿಯನ್ನೂ ಹೋಲಿಸಬಹುದು ; ಅದೇ ಪದ್ಯದ ನಾಲ್ಕನೆಯ ನುಡಿಯನ್ನೂ ಈ ಪದ್ಯದ ಐದನೆಯ ನುಡಿಯನ್ನೂ ಹೋಲಿಸಿ ನೋಡಬಹುದು.

ಪದ್ಯದ ಛಂದಸ್ಸು ಭಾಮಿನೀಷಟ್ಪದಿ.

'ಭಗವದ್ಗೀತಾರ್ಥ ಪ್ರತಿಪಾದಕ ಕೀರ್ತನಂ' ಆರಂಭಪದ್ಯ

ಅಜ್ಞಾತಕರ್ತೃಕ 'ಭಗವದ್ಗೀತಾರ್ಥ ಪ್ರತಿಪಾದಕ ಕೀರ್ತನಂ' ಗ್ರಂಥದ ಉಪೋದ್ಘಾತ ಸಂಪಾದಕೀಯವಾದುದು. ಸಂಪಾದಕರು ಎಸ್. ಜಿ. ನ. ಮತ್ತು ಮಂ. ಆ. ರಾ. ಅವರು. ಈ ಉಪೋದ್ಘಾತದ ಕೊನೆಗಿರುವ ಪದ್ಯ ಎಸ್.ಜಿ.ನ. ಅವರದೆಂದು ತೋರುತ್ತದೆ. ಕವಿತೆಗಳ ರಚನೆಯಲ್ಲಿ ಮಂ. ಆ. ರಾ. ಅವರು ಎಸ್. ಜಿ. ನ. ಅವರ ನೆರವು ಪಡೆಯುತ್ತಿದ್ದುದು ವಿದಿತ. ಅಲ್ಲದೆ ಮಂ.ಆ.ರಾ. ಅವರ ಕವಿತೆಗಳಾವುವೂ ನಮಗೆ ತಿಳಿದುಬಂದಿಲ್ಲ.

ಮಳೆಗಾಲ

ಈ ಪದ್ಯದ ಆಕರ : ಸಂ. ಎಸ್. ಶ್ರೀನಿವಾಸ ರಾಯರು, 'ಬಾಲಬೋಧೆ,' ಭಾಗ ೨, ೧೯೧೪ (೯ನೆಯ ಮುದ್ರಣ).

ಪದ್ಯದ ಛಂದಸ್ಸು ಕುಸುಮಷಟ್ಪದಿ.

ಶರಣು ವಿಮಲೆಯ ಚರಣಕೆ

ಈ ಪದ್ಯದ ಆಕರ : ಬಿ. ವೆಂಕಟಾಚಾರ್ಯ, 'ದುರ್ಗೇಶನಂದಿನಿ', ೧೮೮೫ (ಪ್ರಥಮ ಮುದ್ರಣ), ಪು. ೫೪. ಎರಡನೆಯ ಮುದ್ರಣದಲ್ಲಿ (ಮೈಸೂರು, ೧೯೧೦) ಲೇಖಕರು " ಪಂಡಿತವರ್ಯರಾಗಿ ಸ್ವನಾಮಖ್ಯಾತರಾಗಿದ್ದ ಪ್ರಾತಃಸ್ಮರಣೀಯರಾದ ಶ್ರೀ ಎಸ್.ಜಿ. ನರಸಿಂಹಾಚಾರ್ಯರವರು" ತಮಗೆ ತಿಳಿಸಿದ್ದ ಪ್ರಕಾರ ಕೆಲವು ಸುಧಾರಣೆಗಳನ್ನು ಮಾಡಿರುವುದಾಗಿ 'ವಿಜ್ಞಾಪನೆ' ಯಲ್ಲಿ ಹೇಳಿಕೊಂಡಿದ್ದಾರೆ.

ಪದ್ಯದ ಛಂದಸ್ಸು ಆಧುನಿಕವಾಗಿದ್ದು, ಹಾಡಿನ ಧಾಟಿಯಲ್ಲಿದೆ.

ಶ್ರೀ ಕೃಷ್ಣರಾಜ ವಿಜಯಂ

ಈ ಪದ್ಯದ ಆಕರ: ಸಂ. ಎಂ.ಎಲ್. ಶ್ರೀಕಂಠೇಶ ಗೌಡ, 'ಸುರಭಿ', ಸಂಪುಟ ೧-ಸಂಚಿಕೆ ೬, ಸೆಪ್ಟೆಂಬರ್ ೧೮೯೬, ಪು. ೭೦.

ಕರ್ತೃವಿನ ಹೆಸರು 'ಮ॥ರಾ॥ ಎಸ್. ಜಿ. ನರಸಿಂಹಾಚಾರ್ಯರು' ಎಂಬುದಾಗಿದೆ. ಈ ಕವಿತೆ 'ವಿಜಯದಶಮಿ' ಎಂಬ ಲೇಖನದ ಭಾಗ.

> ಸಕಲ ಪೃಥ್ವೀಪಾಲರನ್ನೊಳಗೊಂಡು ಯುಧಿಷ್ಠಿರನ ಅಶ್ವಮೇಧಯಾಗದಲ್ಲಿ ಹಸ್ತಿನಾವತಿಯಿದ್ದಂತಿರುವ ಈ ವಿಜಯದಶಮಿಯ ವಿಜಯೋತ್ಸವದ ವೈಭವದಿಂದ ವಿಜೃಂಭಿಸುತ್ತಿರುವ ಈಗಿನ ಮೈಸೂರು ಪಟ್ಟಣವನ್ನು ವರ್ಣಿಸುವುದು ಅಸಾಧ್ಯವಾಗಿರುವದು. ಆದರೂ ಸುರಭಿಗೆ ಸಹಾಯಕರಾಗಿ ಕೆಲವು ಕನ್ನಡ ಕವಿಗಳು ಒಟ್ಟು ಸೇರಿ ಒಂದೊಂದು ವಿಷಯವನ್ನು ಒಬ್ಬೊಬ್ಬರು ಸಂಕ್ಷೇಪವಾಗಿ ವರ್ಣಿಸಿರುವರು.

–ಎಂಬುದಾಗಿ ಇಲ್ಲಿ ಹೇಳಿದ್ದು, ಮೊದಲು ಎ. ಲಿಂಗರಾಜ ಅರಸಿನವರು, ನಂ. ಅನಂತ ನಾರಾಯಣ ಶಾಸ್ತ್ರಿಗಳು, ಸುಬ್ಬಾಶಾಸ್ತ್ರಿಗಳು, ಎ. ಲಿಂಗರಾಜ ಅರಸಿನವರು, ಸುರಭಿ ಇವರು ರಚಿಸಿದ ಪದ್ಯಗಳನ್ನು ಅಚ್ಚುಮಾಡಿದೆ. ಆರನೆಯ ಪದ್ಯ ಎಸ್.ಜಿ.ನ. ಅವರದು. ೭ ಮತ್ತು ೮ನೆಯ ಪದ್ಯಗಳು ಕ್ರಮವಾಗಿ ದೇವೋತ್ತಮ ಜೋಯಿಸರು ಮತ್ತು ಎ. ಲಿಂಗರಾಜ ಅರಸಿನವರದು. ಮುಂದೆ ಇನ್ನೂ ಕೆಲವು ಪದ್ಯಗಳು ಇದ್ದಿರಬಹುದು. ಆದರೆ ಪತ್ರಿಕೆಯ ಮುಂದಿನ ಪುಟಗಳು ಹರಿದಿವೆ.

ಪದ್ಯದ ಛಂದಸ್ಸು ಚಂಪಕಮಾಲಾವೃತ್ತ.

ಹೊಗೆಯ ಗಾಡಿ

ಈ ಪದ್ಯದ ಆಕರ : 'ಕನ್ನಡ ಒಂದನೆಯ ಪುಸ್ತಕ', ಎಪ್ಪತ್ತೆರಡನೆಯ ಪಾಠ, ಪು ೭೫. ಎಂ. ಎಸ್. ಪುಟ್ಟಣ್ಣನವರು ಸಂಪಾದಿಸಿ ೧೯೦೬ರಲ್ಲಿ ಪ್ರಕಟವಾದ ಕನ್ನಡ ೧ನೆಯ ಪುಸ್ತಕವು' ಇಲ್ಲಿಯೂ ಈ ಪದ್ಯವಿದ್ದು, ಛಂದಸ್ಸಿನ ದೃಷ್ಟಿಯಿಂದ ಪದ್ಯಪಾಠ ತೃಪ್ತಿಕರವಾಗಿಲ್ಲ. ಆದ್ದರಿಂದ ಈಚಿನ ಪರಿಷ್ಕರಣದ ಪಾಠವನ್ನು ಇಲ್ಲಿ ಒಪ್ಪಿಕೊಂಡಿದೆ.

ಕರ್ತೃವಿನ ಹೆಸರಿಲ್ಲ. ರೂಢಿಯಲ್ಲಿ ಎಸ್. ಜಿ. ನ. ಅವರ ರಚನೆ ಎಂಬುದಾಗಿ ತಿಳಿಯಲಾಗಿದೆ. ಆದರೆ ಎಸ್.ಜಿ. ನ. ಅವರಿಂದ ರಚಿತವಾದ 'ಕನ್ನಡ ನಾಲ್ಕನೆಯ ಪುಸ್ತಕವು' ಎಂಬ ಪಠ್ಯಗ್ರಂಥದ ೪೪ನೆಯ ಪಾಠದಲ್ಲಿ (ಕಬ್ಬಿಣದ ಪಟ್ಟಿಯ ಹಾದಿ) ಬರುವ ಕೆಲವು ಸಾಲುಗಳು ಈ ಪದ್ಯದ ಆಶಯವನ್ನು ಒಳಕೊಂಡ ಗದ್ಯವಾಕ್ಯಗಳೇ ಆಗಿರುವುದರಿಂದ (ಪು. ೧೧೧-೧೨) ಕರ್ತೃತ್ವ ಸಮರ್ಥನೀಯವಾಗಿದೆ. ಉದಾಹರಣೆಗೆ: "ಸಾಧಾರಣವಾಗಿ ಗಾಡಿಯನ್ನು ಕುದುರೆಯಾಗಲಿ ಎತ್ತಾಗಲಿ ಎಳೆಯುತ್ತವೆ. ಆದರೆ ಹಬೆಗಾಡಿಯನ್ನು ಮಾತ್ರ ಯಾವ ಮೃಗವೂ ಎಳೆಯುವುದಿಲ್ಲ.... ಹಾದಿಯಲ್ಲಿ ಪ್ರಯಾಣಿಕರನ್ನು ಹೊಡೆದು ಸುಲಿದುಕೊಳ್ಳುವ ಕಳ್ಳಕಾರರು ಬಹಳ ಮಂದಿ ಇದ್ದರು....ಬೇರೆ ಊರುಗಳಿಂದ ದವಸಗಳನ್ನು ತರುವುದಕ್ಕೆ ಮಾರ್ಗವಿರುತ್ತಿರಲಿಲ್ಲ."

೫

ಆರ್ಯಮಹಿಮಾದರ್ಶ

ಈ ಪದ್ಯದ ಆಕರ: 'ವಿದ್ಯಾದಾಯಿನಿ', ೧೩-೯, ಸೆಪ್ಟೆಂಬರ್ ೧೯೦೪, ಪು.೧೯೭. ಅನ್ಯಕರ್ತೃಕವಾದ 'ಆರ್ಯಮಹಿಮಾದರ್ಶ' ಎಂಬ ಲೇಖನದ ಭಾಗವಾಗಿ ಸೇರಿರುವ

ಅನುವಾದಿತ ಪದ್ಯವಿದು. ಈ ಸೂಚನೆ ಅಡಿಟಿಪ್ಪಣಿಯಲ್ಲಿ ಹೀಗಿದೆ : "ಗೌರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ|| ರಾ|| ಎಸ್. ಜಿ. ನರಸಿಂಹಾಚಾರ್ಯರವರಿಂದ ರಚಿಸಲ್ಪಟ್ಟ ಪ್ರಸಿದ್ಧ ಹೂಣಕವಿಯಾದ ಲಾಂಗ್‌ಫೆಲೋ ಎಂಬವನ ಪದ್ಯಾನುವಾದ". ಇದು H. W. Longfellow (1807-82) ರಚಿಸಿರುವ A Psalm of Life ಎಂಬ ಕವಿತೆಯ ಒಂದು ನುಡಿಯ ಅನುವಾದ.

ಛಂದಸ್ಸು ಚಂಪಕಮಾಲಾವೃತ್ತ.

ಉತ್ತಮ ರಾಜ್ಯ

ಈ ಪದ್ಯದ ಆಕರ : ಸಂ. ಪಂಜೆ ಮಂಗೇಶರಾವ್, 'ಕನ್ನಡ ಎರಡನೆಯ ಪುಸ್ತಕ', ೧೯೨೫.

ಕರ್ತೃವಿನ ಹೆಸರಿಲ್ಲ. ಕರ್ತೃ ಪಂಜೆ ಮಂಗೇಶರಾಯರೆಂದು ಎಂ. ಗೋವಿಂದ ಪೈ ಬರೆದಿದ್ದಾರೆ ('ಪಂಜೆಯವರ ನೆನಪಿಗಾಗಿ', ಪು. ೬). ಆದರೆ ತೀ. ನಂ. ಶ್ರೀಕಂಠಯ್ಯ ನವರಿಗೆ ಶಿವರಾಮ ಕಾರಂತರು ಬರೆದ ಒಂದು ಪತ್ರದಲ್ಲಿ (೯-೮-೧೯೫೧) "ಉತ್ತಮ ರಾಜ್ಯ ಮೊದಲು Marsden Reader ಗಳಲ್ಲಿ ಬಂದಿತ್ತು. ಅದನ್ನು ಎಸ್.ಜಿ ಯವರು ಬರೆದುದಾಗಿರಬೇಕೆಂದು ಪಂಜೆಯವರ ಮಗ ಮೊನ್ನೆ ನಾನು ಕೊಯಮುತ್ತೂರಿಗೆ ಹೋದಾಗ ತಿಳಿಸಿದರು."—ಎಂಬುದಾಗಿ ತಿಳಿಸಿರುವರೆಂದು ಈಚೆಗೆ ಗೊತ್ತಾಗಿದೆ (ಎಸ್. ಅನಂತನಾರಾಯಣ, 'ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ', ೧೯೬೨, ಪು. ೫೧). ಇದು ಬಲುಮಟ್ಟಿಗೆ ಸರಿಯೆಂದು ತೋರುತ್ತದೆ. ಏಕೆಂದರೆ ಪೂರ್ವೋಕ್ತ 'ಕನ್ನಡ ಎರಡನೆಯ ಪುಸ್ತಕ'ದಲ್ಲಿ ಸೇರಿರುವ ಬೇರೆ ಎಲ್ಲ ಪದ್ಯಗಳಿಗೂ ಕರ್ತೃತ್ವಸೂಚನೆಯಿದೆ. ಪಂಜೆಯವರು ಬರೆದವುಗಳಿಗೆ 'ಕವಿಶಿಷ್ಯ' ಎಂಬ ಅವರ ಅಂಕಿತ ವನ್ನು ಹಾಕಿದೆ. 'ಉತ್ತಮ ರಾಜ್ಯ' ಪದ್ಯಕ್ಕೆ ಮಾತ್ರ ಕರ್ತೃತ್ವಸೂಚನೆಯಿಲ್ಲದಿರುವುದು ಎದ್ದು ಕಾಣುವ ಸಂಗತಿ. ಈ ಕಾರಣದಿಂದ ಈ ಪದ್ಯ ಪಂಜೆಯವರದಲ್ಲ ಎಂಬುದರಲ್ಲಿ ಸಂಶಯವಿಲ್ಲ. ಹೀಗಿದ್ದೂ ಈಚೆಗೆ ಓರಿಯೆಂಟ್ ಲಾಂಗ್‌ಮನ್ ಲಿಮಿಟೆಡ್ ಸಂಸ್ಥೆಯವರು ಪ್ರಕಟಿಸಿರುವ 'ಪಂಜೆಯವರ ಕೃತಿಗಳು—ಸಂಪುಟ ೧' ರಲ್ಲಿ (೧೯೬೩) ಪು. ೬೯ ರಲ್ಲಿ ಈ ಪದ್ಯವನ್ನು ಪಂಜೆಯವರದಾಗಿ ಸೇರಿಸಿರುವುದು ಕಾಣುತ್ತದೆ. ಇದು ಸರಿಯಲ್ಲ. ನಿಶ್ಚಿತ ವಾಗಿ ಕರ್ತೃತ್ವ ತಿಳಿಯುವವರೆಗೆ ಈ ಪದ್ಯದ ಕರ್ತೃ ಎಸ್. ಜಿ. ನ. ಎಂದೇ ಭಾವಿಸಲು ಅಡ್ಡಿಯಿರಲಾರದೆಂದು ನನ್ನ ತಿಳಿವಳಿಕೆ.

ಈ ಪದ್ಯ Mrs. F. Hemans ಅವರ The Better Land ಎಂಬ ಇಂಗ್ಲಿಷ್ ಕವಿತೆಯ ಅನುವಾದ.

ಪದ್ಯದ ಛಂದಸ್ಸು ನಡುಗನ್ನಡದ ಮಾತ್ರಾಚೌಪದಿ.

ಕುರುಡ ಹುಡುಗ

ಈ ಪದ್ಯದ ಆಕರ : 'ಕನ್ನಡ ನಾಲ್ಕನೆಯ ಪುಸ್ತಕ'. ಪು. ೪-೫. ಕರ್ತೃವಿನ ಹೆಸರು 'ಎಸ್. ಜಿ. ನರಸಿಂಹಾಚಾರ್' ಎಂಬುದಾಗಿ ಪದ್ಯದ ಕೊನೆಯಲ್ಲಿದೆ. ಅಲ್ಲದೆ ಕವಿಚರಿತೆಯನ್ನು ತಿಳಿಸುತ್ತ ಅಡಿಟಿಪ್ಪಣಿಯಲ್ಲಿ, "ಇವರು ಮೈಸೂರು ಗವರ್ನ ಮೆಂಟು ವಿದ್ಯಾಭ್ಯಾಸದ ಇಲಾಖೆಯಲ್ಲಿ ಕನ್ನಡ ಟ್ರಾನ್ಸ್‌ಲೇಟರಾಗಿದ್ದು 17 ವರ್ಷಗಳಿಗೆ ಹಿಂದೆ (1907ರಲ್ಲಿ) ಗತಿಸಿದರು. ದಿಲೀಪ ಚರಿತ್ರೆ, ಅಜನೃಪ ಚರಿತ್ರೆ, ಉತ್ತರರಾಮ ಚರಿತ್ರೆ ಮೊದಲಾದ ಗ್ರಂಥಗಳನ್ನು ರಚಿಸಿರುತ್ತಾರೆ."—ಎಂಬುದಾಗಿ ಕೊಟ್ಟಿದೆ. ಪೂರ್ವೋಕ್ತ ಆಕರಗ್ರಂಥ ಬಹುಶಃ ೧೯೨೪-೨೫ ರಲ್ಲಿ ಪ್ರಕಟವಾಗಿದ್ದಿರಬಹುದು. ಅದನ್ನು ತಿಳಿಸುವ ಮುಖಪುಟ ನಷ್ಟವಾಗಿದೆ (ನಂ. ૩೭೨೦, ಕನ್ನಡ ಸಾಹಿತ್ಯ ಪರಿಷತ್ತಿನ ಸಂಶೋಧನವಿಭಾಗ).

ಈ ಪದ್ಯ Colley Cibber (1671-1757) ಕವಿಯ The Blind Boy ಎಂಬುದರ ಅನುವಾದವಾಗಿದೆ. ಪದ್ಯದ ಛಂದಸ್ಸು ಭಾಮಿನೀಷಟ್ಪದಿ. ಪದ್ಯದ ಕನ್ನಡ ಶೀರ್ಷಿಕೆಯ ಮೇಲೆ ಇಂಗ್ಲಿಷ್ ಪದ್ಯನಾಮವೂ ಕೆಳಗೆ 'ಭಾಮಿನಿ ಷಟ್ಪದಿ' ಎಂಬ ಸೂಚನೆಯೂ ಇದೆ. ಪಾಠಾನುಕ್ರಮಣಿಕೆಯಲ್ಲಿ "ಕುರುಡ ಹುಡುಗ (ಹಳೆಯ ಎರಡನೆಯ ಪುಸ್ತಕದಿಂದ)" ಎಂಬುದಾಗಿ ಗುರುತಿಸಿದೆ.

ಕೋಗಿಲೆ

ಈ ಪದ್ಯದ ಆಕರ : 'ಕನ್ನಡ ಎರಡನೆಯ ಪುಸ್ತಕ', ಪು. ೮೪-೮೫. William Wordsworth (1770-1850) ಕವಿಯ To the Cuckoo ಎಂಬ ಇಂಗ್ಲಿಷ್ ಕವಿತೆಯ ಅನುವಾದವಿದು.

ಪದ್ಯದ ಛಂದಸ್ಸು ಸಾಂಗತ್ಯ.

'ಚಂಡಮಾರುತ'ದ ಪದ್ಯಗಳು

ಈ ಪದ್ಯಗಳ ಆಕರ : ಬಾಪು ಸುಬ್ಬರಾವ್, 'ಷೇಕ್ಸ್‌ಪಿಯರ್ ಮಹಾಕವಿಯ ನಾಟಕಗಳಲ್ಲೊಂದರಿಂದ ಸಂಗ್ರಹಿಸಿದ ಕಥೆಯ ಭಾಷಾಂತರವು', ಕರ್ಣಾಟಕ ಗ್ರಂಥಮಾಲೆ-೧, ಜಿ. ಟಿ. ಎ. ಪ್ರೆಸ್, ಮೈಸೂರು, ೧೮೯೩, ಪು. ೧೧, ಪು. ೨೩.

ಕರ್ತೃವಿನ ಹೆಸರನ್ನು "ಮ|| ರಾ|| ಎಸ್. ಜಿ. ನರಸಿಂಹಾಚಾರ್ಯ ಕೃತಃ" ಎಂಬುದಾಗಿ ಸೂಚಿಸಿದೆ. ಈ ಪದ್ಯಗಳನ್ನು ಮೊದಲು ಗುರುತಿಸಿದವರು ಎಸ್. ಅನಂತನಾರಾಯಣ ಅವರು ('ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್‌ಕಾವ್ಯದ ಪ್ರಭಾವ,' ೧೯೭೬, ಪು. ೫೧-೫೨).

ಪದ್ಯಗಳ ಛಂದಸ್ಸು ಭಾಮಿನೀಷಟ್ಪದಿ. ಮೊದಲ ಎರಡು ಷಟ್ಪದಿಗಳು W. Shakespeare (1564-1616) ಕವಿಯ The Tempest ನಾಟಕದಲ್ಲಿ, ಏರಿ

ಯಂಲ್ ಹಾಡುವ "Full fathom five thy father lies" ಎಂಬ ಗೀತದ (Act I Scene 2) ಹಾಗೂ ಅನಂತರದ ಎರಡು ಷಟ್ಪದಿಗಳು ಅದೇ ನಾಟಕದಲ್ಲಿ ಅದೇ ಪಾತ್ರ ಹಾಡುವ "Where the bee sucks, there suck I" ಎಂಬ ಗೀತದ (Act V Scene 1) ಅನುವಾದಗಳಾಗಿವೆ.

ನಕ್ಷತ್ರ

ಈ ಪದ್ಯದ ಆಕರ : ಸಂ. ಎಸ್. ಶ್ರೀನಿವಾಸ ರಾವ್, 'ಬಾಲಬೋಧೆ', ಭಾಗ ೨, ೧೯೧೪ (೯ ನೆಯ ಮುದ್ರಣ). ಈ ಶಿಶುಗೀತೆ Twinkle Twinkle Little Star ಎಂಬ ಇಂಗ್ಲಿಷ್ ಶಿಶುಗೀತದ ಅನುವಾದವಾಗಿದೆ. ಈ ಗೀತವು Ann Taylor (1782-1866) ಮತ್ತು Jane Taylor (1783-1824)ಇವರ ರಚನೆಯೆಂದೂ ಇದು 'Original Poems for Infant Minds : By Several young persons' (1804) ಸಂಕಲನದೊಳಗಿನದೆಂದೂ ತಿಳಿದುಬರುತ್ತದೆ (ಈಯಂಶವನ್ನು ನನ್ನ ಗಮನಕ್ಕೆ ತಂದವರು ಎಂ. ಎನ್. ವಿ. ಪಂಡಿತಾರಾಧ್ಯರು).

ಪದ್ಯದ ಛಂದಸ್ಸು ಶರಷಟ್ಪದಿ. ಕವಿತೆಯ ಮೊದಲಿಗೆ 'ರಾಗ ಮೋಹನ, ನೋಟ್ ಶರಷಟ್ಪದಿ' ಎಂದಿದೆ.

ಬಿಡುವು

ಈ ಪದ್ಯದ ಆಕರ: ಮೂವತ್ತೊಂಬತ್ತನೆಯ ಪಾಠ, 'ಕನ್ನಡ ಎರಡನೆಯ ಪುಸ್ತಕವು' ೧೯೩೭(ಪ್ರಥಮ ಮುದ್ರಣ ೧೯೧೪),ಪು. ೪೮-೪೯. ಇದರ ಮೂಲ ತಿಳಿಯದು.

ಚತುರ್ಮಾತ್ರಾಗಣಗಳ ಹೊಸ ಛಂದಸ್ಸಿನಲ್ಲಿದೆ.

ಮಕ್ಕಳು ಮಲಗುವ ಹೊತ್ತು

ಈ ಪದ್ಯದ ಆಕರ : ವಿದ್ಯಾದಾಯಿನಿ, ಭಾಗ ೨೨-ಸಂಚಿಕೆ ೭, ಜುಲೈ ೧೯೧೪, ಪು.೧೪೯. ಇದು 'ಕನ್ನಡ ಎರಡನೆಯ ಪುಸ್ತಕವು' ೧೯೩೭ (ಪ್ರಥಮ ಮುದ್ರಣ ೧೯೧೪) ಪು. ೬೦-೬೧ ರಲ್ಲಿಯೂ ಇದೆ.

ಎಂ. ಎ. ರಾಮಾನುಜಯ್ಯಂಗಾರ್ಯರು ಬರೆದ 'ಮಕ್ಕಳು ಮಲಗುವ ಹೊತ್ತು' ಎಂಬ ಗದ್ಯಲೇಖನದಲ್ಲಿ ಈ ಪದ್ಯ ಉದ್ಧೃತವಾಗಿದೆ. ಅಲ್ಲಿ ಈ ಟಿಪ್ಪಣಿಯಿದೆ : "An adaptation from Tom Hood's 'Bed-Time' by S. G. Govindaraja Iyengar." ಈ ಟಿಪ್ಪಣಿಯಿಂದಾಗಿ ಕರ್ತೃ ಎಸ್. ಜಿ. ನ. ಅವರಲ್ಲವೆಂದೂ ಅವರ ಸೋದರರಾಗಿದ್ದ ಗೋವಿಂದರಾಜೈಂಗಾರ್ಯರೆಂದೂ ಸ್ಪಷ್ಟವಾಗುತ್ತದೆ. ಎಂ. ಎ. ಆರ್. ಅವರು ಎಸ್. ಜಿ. ನ. ಅವರ ಆಪ್ತಮಿತ್ರರಾಗಿದ್ದುದರಿಂದ, ಗೋವಿಂದರಾಜಯ್ಯಂಗಾರ್ಯರು ತಮಗೆ ಬಂಧುಗಳೇ ಆದುದರಿಂದ, ಅವರ ಗ್ರಹಿಕೆಯಲ್ಲಿ ಸಂದಿಗ್ಧತೆಯಿರುವುದು ಶಕ್ಯವಲ್ಲ ಎಂದು ಭಾವಿಸುವುದು ಸಹಜವೇ. ಹೀಗಿದ್ದೂ ಸಹ, ಭಾಷೆ ಶೈಲಿಗಳ ದೃಷ್ಟಿ

ಯಿಂದ ಈ ರಚನೆ ಎಸ್. ಜಿ. ನ. ಅವರದೆಂದೇ ತಿಳಿಯುವಂತಿದೆ. ಎಸ್. ಜಿ. ನ. ಅವರು ೧೯೦೭ ರಲ್ಲಿ ಗತಿಸಿದ ಮೇಲೆ, ಅವರ ಸೋದರರ ಮೂಲಕವಾಗಿ ಬಂದಿರಬಹುದಾದ ಎಸ್. ಜಿ. ನ. ಅವರ ಪದ್ಯವನ್ನು, ಅವರ ಸೋದರರ ಪದ್ಯವನ್ನಾಗಿಯೇ ತಿಳಿದಿದ್ದರೆ, ಅದೇನೂ ತೀರ ಅಸಂಭವವಲ್ಲ. ಹಾಗೆಂದೇ ಈ ಪದ್ಯವನ್ನು ಎಸ್. ಜಿ. ನ. ಅವರದೆಂದೇ ಭಾವಿಸಿ ಈ ಸಂಕಲನದಲ್ಲಿ ಸೇರಿಸಿದೆ. ಈ ವಿಷಯದಲ್ಲಿ ಪ್ರಬಲವಾದ ಸಂದೇಹವೇನೋ ಉಳಿಯುತ್ತದೆ. ಸದ್ಯ, ಪ್ರತೀತಿಯನ್ನು ಮನ್ನಿಸಿ, ಕರ್ತೃತ್ವಸಮಸ್ಯೆಯನ್ನು ಮುಂದಿನ ಶೋಧನೆಗೆ ಬಿಟ್ಟಿದೆ.

ಪದ್ಯದ ಛಂದಸ್ಸು ಕುಸುಮಷಟ್ಪದಿ.

ಮರಳಿ ಯತ್ನವ ಮಾಡು

ಈ ಪದ್ಯದ ಆಕರ ಇಪ್ಪತ್ತೈದನೆಯ ಪಾಠ, 'ಕನ್ನಡ ಎರಡನೆಯ ಪುಸ್ತಕವು', ೧೯೩೭ (ಪ್ರಥಮ ಮುದ್ರಣ ೧೯೧೪), ಪು. ೩೧. ಕರ್ತೃತ್ವ ಸೂಚನೆಯಿಲ್ಲ. ರೂಢಿಯನ್ನು ಒಪ್ಪಿ ಎಸ್. ಜಿ. ನ. ಅವರ ರಚನೆಯೆಂದು ಇಲ್ಲಿ ಗ್ರಹಿಸಿದೆ. ಈಚೆಗೆ 'ಪಂಜೆಯವರ ಕೃತಿಗಳು' ಮಾಲಿಕೆಯ ಪದ್ಯಸಂಪುಟದಲ್ಲಿ (೧೯೭೩), ಪು. ೧೧ ರಲ್ಲಿ ಇದೇ ಪದ್ಯ 'ಸ್ಥಿರಪ್ರಯತ್ನ' ಎಂಬ ಶೀರ್ಷಿಕೆಯೊಂದಿಗೆ ಪಂಜೆಯವರ ರಚನೆಯೆಂದು ಪ್ರಕಟವಾಗಿದೆ. ಆದರೆ ಭಾಷೆ ಶೈಲಿಗಳ ದೃಷ್ಟಿಯಿಂದ ಇದು ಎಸ್. ಜಿ. ನ. ಅವರ ರಚನೆಯೆಂಬುದಾಗಿ ತಿಳಿಯಲವಕಾಶವಿದೆ. ಮೂರನೆಯ ನುಡಿಯಲ್ಲಿಯ "ಫಲಿಸುವುದು ಹುಲಿಸುವುದು" ಎಂಬ ಮಾತುಗಾರಿಕೆ ಎಸ್. ಜಿ. ನ. ಅವರದು.

ಈ ಪದ್ಯವು Try Try Try Again ಎಂಬ ಇಂಗ್ಲಿಷ್ ಪದ್ಯದ ಅನುವಾದವೆಂದು ತಿಳಿಯಲಾಗಿದೆ.

ಸಭಾಪರ್ವದ ನಾಂದಿ ಫಲಶ್ರುತಿಗಳು

ಈ ಪದ್ಯದ ಆಕರ : ಎಂ. ಎ. ಆರ್. ಮತ್ತು ಎಸ್. ಜಿ. ನ. ಅವರ ಸಂಯುಕ್ತ ಗ್ರಂಥವಾದ 'ಮಹಾಭಾರತ ಕಥಾಪ್ರಸಂಗ (ಸಭಾಪರ್ವ)', ಮೈಸೂರು, ೧೮೯೨ (೨ನೆಯ ಮುದ್ರಣ), ಪು. ೧, ೯೬.

ಕರ್ತೃ ಎಸ್. ಜಿ. ನ. ಅವರೇ ಆಗಿರುವುದು ಸಂಭವನೀಯ. ಮೊದಲನೆಯ ಪದ್ಯ ಮಹಾಭಾರತದ ಮಂಗಳಶ್ಲೋಕವಾದ "ನಾರಾಯಣಂ ನಮಸ್ಕೃತ್ಯ..." ಎಂಬುದರ; ಎರಡನೆಯದು ಪಂಚತಂತ್ರದ "ಇಕ್ಷೋರಗ್ರಾತ್ ಕ್ರಮಶಃ..."(೨-೩೯) ಎಂಬುದರ (ಭಾಗಶಃ) ಅನುವಾದ.

ಸೂರ್ಯಕಿರಣ

ಈ ಪದ್ಯದ ಆಕರ : 'ಕನ್ನಡ ನಾಲ್ಕನೆಯ ಪುಸ್ತಕ,' ಪು.೨೭-೨೮. ಕರ್ತೃವಿನ ಹೆಸರು

'ಎಸ್. ಜಿ. ನರಸಿಂಹಾಚಾರ್' ಎಂಬುದಾಗಿ ಪದ್ಯದ ಕೊನೆಯಲ್ಲಿದೆ. ಪೂರ್ವೋಕ್ತ ಆಕರ ಗ್ರಂಥ ಬಹುಶಃ ೧೯೨೪-೨೫ರಲ್ಲಿ ಪ್ರಕಟವಾಗಿದ್ದಿರಬಹುದು. ಅದನ್ನು ತಿಳಿಸುವ ಮುಖ ಪುಟ ನಷ್ಟವಾಗಿದೆ (ನಂ. ೩೭೨೦, ಕನ್ನಡ ಸಾಹಿತ್ಯ ಪರಿಷತ್ತಿನ ಸಂಶೋಧನವಿಭಾಗ). ಈ ಪದ್ಯವೂ ಒಂದು ಅನುವಾದಿತ ಕವನವಿರಬೇಕೆಂದು ತೋರುತ್ತದೆ. ಅದನ್ನು ಗುರುತಿಸುವುದು ಸಾಧ್ಯವಾಗಿಲ್ಲ. ಪದ್ಯದ ಛಂದಸ್ಸು ಪರಿವರ್ಧಿನೀಷಟ್ಪದಿ (ಪದ್ಯದ ಶೀರ್ಷಿಕೆಯ ಕೆಳಗೂ ಈ ಸೂಚನೆಯಿದೆ). ಶೀರ್ಷಿಕೆಯ ಮೇಲೆ Sun-Beam ಎಂಬುದಾಗಿ ಇಂಗ್ಲಿಷ್ ಪದ್ಯನಾಮವಿದೆ. ಪಾಠಾನುಕ್ರಮಣಿಕೆಯಲ್ಲಿ "ಸೂರ್ಯಕಿರಣ (ಹಳೆಯ ಎರಡನೆಯ ಪುಸ್ತಕದಿಂದ)" ಎಂಬುದಾಗಿ ತೋರಿಸಿದೆ. ಕೆ. ಜಿ. ನಾರಾಯಣ ಪ್ರಸಾದ್ ತಮಗೆ ದೊರೆತ ಜೀರ್ಣವಾದ 'ಎರಡನೆಯ ಪುಸ್ತಕ'ದಲ್ಲಿ ಈ ಪದ್ಯವು 'ನಾಲ್ವತ್ತಾರನೆಯ ಪಾಠ'ವಾಗಿ 'ಸೂರ್ಯಕಿರಣವು' ಎಂಬ ಶೀರ್ಷಿಕೆಯೊಂದಿಗೆ ಅಚ್ಚಾಗಿರುವುದನ್ನು ತಮ್ಮ ಟಿಪ್ಪಣಿಗಳಲ್ಲಿ ಗುರುತಿಸಿಕೊಂಡಿದ್ದಾರೆ. ವಿಶೇಷವೆಂದರೆ ಇಲ್ಲಿ ಶಕಟರೇಫಘಟಿತವಾಗಿರುವ ಪದಗಳು ಶಕಟರೇಫಸಹಿತವಾಗಿಯೇ ಇರುವುದು(ಪು. ೬೬-೬೭) ; ೧೯೨೪-೨೫ರ 'ಕನ್ನಡ ನಾಲ್ಕನೆಯ ಪುಸ್ತಕ'ದಲ್ಲಿ ಹೇಳಿರುವ 'ಹಳೆಯ ಎರಡನೆಯ ಪುಸ್ತಕ' ಎನ್ನುವುದು ಇದೇ ಇದ್ದರೂ ಇದ್ದೀತು.

೩. ಎಸ್. ಜಿ. ನರಸಿಂಹಾಚಾರ್ಯರ ಕೃತಿಗಳು

೧. ಸ್ವತಂತ್ರ ಮತ್ತು ಅನುವಾದಿತ ಕೃತಿಗಳು (೧೪)

ಅಜನೃಪ ಚರಿತೆ (ಅನು.)
ಕರ್ಣಾಟಕ ಗ್ರಂಥಮಾಲೆ- ೨೫, ೧೯೦೦

ಅಲ್ಲಾವುದ್ದೀನ್ ಮತ್ತು ಅದ್ಭುತ ದೀಪ (ಕಥೆ)
ಕರ್ಣಾಟಕ ಗ್ರಂಥಮಾಲೆ, ೧೮೯೯

ಆದಿಪುರಾಣಂ – ಪಂಪ (ಸಂ.)
ಓರಿಯೆಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಮೈಸೂರು, ೧೯೦೦

ಈಸೋಪನ ನೀತಿಕಥೆಗಳು (ಕಥೆ)*
ಕರ್ಣಾಟಕ ಗ್ರಂಥಮಾಲೆ, ೧೯೦೦

ಉತ್ತರ ರಾಮಚರಿತಂ (ನಾಟಕ ; ಅಸಮಗ್ರ)
ಕರ್ಣಾಟಕ ಗ್ರಂಥಮಾಲೆ, ಸಂ. ೮, ೯, ೧೯೦೦-೦೧

ಕನ್ನಡ ನಾಲ್ಕನೆಯ ಪುಸ್ತಕದ ಹಸ್ತಕವು*
ಮೆಕ್‌ಮಿಲನ್ ಕಂಪನಿ, ೧೯೦೮

ಗಯ್ಯಾಳಿಯನ್ನು ಸಾಧುಮಾಡುವಿಕೆ *
(?)

ಗಲಿವರನ ದೇಶಸಂಚಾರ (ಕಥೆ)*
ಕರ್ಣಾಟಕ ಗ್ರಂಥಮಾಲೆ, ೧೯೦೦

ಜಗನ್ನಾಥ ವಿಜಯಂ– ರುದ್ರಭಟ್ಟ (ಸಂ.)
ಓರಿಯೆಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಮೈಸೂರು, ೧೯೦೪

ದಿಲೀಪ ಚರಿತೆ (ಅನು.)
ಕರ್ಣಾಟಕ ಗ್ರಂಥಮಾಲೆ– ೧೩, ೧೮೯೭

ಪ್ರೋಷಿತ ಪ್ರಿಯಸಮಾಗಮಂ (ಅನು.)
ಕರ್ಣಾಟಕ ಗ್ರಂಥಮಾಲೆ, ೧೮೯೩, ೧೯೧೧ (ದ್ವಿತೀಯ ಮುದ್ರಣ)

ಭಾರತವೀರ ಚರಿತ
ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಮೈಸೂರು ಸರ್ಕಾರ, ಬೆಂಗಳೂರು, ೧೯೨೭, ೧೯೩೭

ಭಾರವಿ*
(?)

ಮುಕುಂದಮಾಲೆ*

(?)

೨. ಸಹಕರ್ತೃಕ ಕೃತಿಗಳು (೭)

ಕನ್ನಡ ನಾಲ್ಕನೆಯ ಪುಸ್ತಕವು

ಸಹಕರ್ತೃ : ಇ. ಮಾರ್ಸ್‌ಡೆನ್ ; ಮೆಕ್‌ಮಿಲನ್ ಕಂ. ಮುಂಬಯಿ, ೧೮೯೭

ಕನ್ನಡ ಆರನೆಯ ಪುಸ್ತಕವು*

ಸಹಕರ್ತೃ : ಇ. ಮಾರ್ಸ್‌ಡೆನ್ ; ಮೆಕ್‌ಮಿಲನ್ ಕಂ. ಮುಂಬಯಿ, ೧೯೦೨

ಕರ್ಣಾಟಕ ಕವಿಚರಿತೆ–ಸಂಪುಟ ೧

ಸಹಕರ್ತೃ : ಆರ್. ನರಸಿಂಹಾಚಾರ್ಯ, ಬೆಂಗಳೂರು, ೧೯೦೭

ಪದ್ಯಸಾರ–ಭಾಗ ೧

ಸಹಕರ್ತೃ : ಪಠ್ಯನಿಯಾಮಕ ಸಮಿತಿ ಸದಸ್ಯರು ; ವಿದ್ಯಾಭ್ಯಾಸ ಇಲಾಖೆ, ಮೈಸೂರು ಸರ್ಕಾರ, ಬೆಂಗಳೂರು, ೧೯೦೩, ೧೯೨೪

ಬಾಲ ಭೂವಿವರಣೆ

ಸಹಕರ್ತೃ : ಬಾಪು ಸುಬ್ಬರಾವ್ ; ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಮೈಸೂರು, ೧೯೧೧, ೧೯೨೪, ೧೯೨೭

ಮಹಾಭಾರತ ಕಥಾಪ್ರಸಂಗ (ಸಭಾಪರ್ವ)

ಸಹಕರ್ತೃ : ಎಂ. ಎ. ರಾಮಾನುಜಯ್ಯಂಗಾರ್, ವೆಸ್ಲಿಯನ್ ಮಿಷನ್ ಪ್ರೆಸ್, ಮೈಸೂರು, ೧೮೯೨ (ದ್ವಿತೀಯ ಮುದ್ರಣ)

ಹಿಂದೂದೇಶದ ನಾಗರಿಕ ತಾತ್ಪರ್ಯಸಹಿತವಾದ ಟಿಪ್ಪಣಿ (೨ನೆಯಭಾಗ)*

ಸಹಕರ್ತೃ : ಬಾಪು ಸುಬ್ಬರಾವ್, ಜಿ, ಟಿ. ಎ. ಪ್ರೆಸ್, ಮೈಸೂರು, ೧೯೦೨

[ನಕ್ಷತ್ರ ಚಿಹ್ನೆಯುವು ಈ ಸಂಪಾದಕನ ಪರಿಶೀಲನೆಗೆ ದೊರೆಯಲಿಲ್ಲ.]

೩. ಸಹಸಂಪಾದಿತ ಕೃತಿಗಳು (೪೦)

(ಅ) ಎಂ. ಎ. ರಾಮಾನುಜಯ್ಯಂಗಾರ್ಯರೊಂದಿಗೆ ಸಂಪಾದಿಸಿ, ಮೈಸೂರಿನ ಕರ್ಣಾಟಕ ಕಾವ್ಯಮಂಜರಿ ಪತ್ರಿಕೆಯಲ್ಲಿ ಪ್ರಕಟಿಸಿದ ಕೃತಿಗಳು (೨೪) :

ಅದ್ಭುತ ರಾಮಾಯಣಂ-ಮುದ್ದಣ ೧೪, ೧೮೯೬ ; ಅಪ್ರತಿಮ ವೀರಚರಿತಂ-ತಿರುಮಲಾರ್ಯ ೮, ೧೮೯೩ ; ಉದಯಾದಿತ್ಯಾಲಂಕಾರಂ-ಉದಯಾದಿತ್ಯ ೬, ೧೮೯೪ ; ಕಬ್ಬಿಗರ ಕಾವಂ-ಆಂಡಯ್ಯ ೨, ೧೮೯೩ ; ಕರ್ಣಾಟಕ ನಿಘಂಟು-ಅಜ್ಞಾತಕರ್ತೃಕ ೩. ೧೮೯೩ ; ಕರ್ಣಾಟಕ ಪಂಚತಂತ್ರಂ-ದುರ್ಗಸಿಂಹ ೨೩, ೧೮೯೮ ; ಕರ್ಣಾಟಕ ಶಬ್ದಸಾರಂ-ಅಜ್ಞಾತಕರ್ತೃಕ ೧೮, ೧೮೯೭ ; ಕರ್ಣಾಟಕ ಸಂಜೀವನಂ-ಶೃಂಗಾರಕವಿ ೧೬, ೧೮೯೬ ; ಕಾವ್ಯಸಾರಂ-ಅಭಿನವ ವಾದಿವಿದ್ಯಾನಂದ ೨೦, ೧೮೯೮ ; ಕೃಷ್ಣಗೋಪೀವಿಲಾಸಂ-ಅಜ್ಞಾತಕರ್ತೃಕ ೧೧. ೧೮೯೪ ; ಗದಾಯುದ್ಧಂ-ರನ್ನ ೧೨. ೧೮೯೫ ; ಚತುರಾಸ್ಯ ನಿಘಂಟು-ಚತುರಾಸ್ಯ ಬೊಮ್ಮರಸ ೫. ೧೮೯೩ ; ಚಿಕದೇವರಾಜ ವಿಜಯಂ-ತಿರುಮಲಾರ್ಯ ೧೭, ೧೮೯೬ ; ಚಿಕದೇವರಾಯ ವಂಶಾವಳಿ-ತಿರುಮಲಾರ್ಯ ೧೩, ೧೮೯೫ ಜಯನೃಪಕಾವ್ಯಂ-ಮಂಗರಸ ೧೯, ೧೮೯೭ ; ಮಲ್ಲಿನಾಥ ಪುರಾಣಂ-ನಾಗಚಂದ್ರ ೧೧, ೧೮೯೫ ; ಮಿತ್ರವಿಂದಾ ಗೋವಿಂದ ನಾಟಕಂ-ಸಿಂಗರಾರ್ಯ ೭, ೧೮೯೩ ; ರತ್ನಾಕರಾಧೀಶ್ವರ ಶತಕಂ ಅಪರಾಜಿತೇಶ್ವರಶತಕಂ-ರತ್ನಾಕರ. ೧, ೧೮೯೩; ಲೀಲಾವತಿ-ನೇಮಿಚಂದ್ರ ೨೧, ೧೮೯೮ ; ಶೃಂಗಾರ ರತ್ನಾಕರಂ-ಕವಿಕಾಮ ೯, ೧೮೯೪ ; ಶ್ರೀರಾಮಪಟ್ಟಾಭಿಷೇಕಂ-ಮುದ್ದಣ ೧೫, ೧೮೯೭ ; ಸುಭಾಷಿತ ಮುಕ್ತಕ ಶತಕಂ-ಸಂಕಲಿತ ೨೨, ೧೮೯೮ ; ಹದಿಬದೆಯ ಧರ್ಮ-ಸಂಚಿಯ ಹೊನ್ನಮ್ಮ ೪, ೧೮೯೩.

(ಆ) ಮಂ. ಆ. ರಾಮಾನುಜಯ್ಯಂಗಾರ್ಯರೊಂದಿಗೆ ಸಂಪಾದಿಸಿ, ಮೈಸೂರಿನ ಕರ್ಣಾಟಕ ಕಾವ್ಯಕಲಾನಿಧಿ ಪತ್ರಿಕೆಯಲ್ಲಿ ಪ್ರಕಟಿಸಿದ ಕೃತಿಗಳು (೧೬) :

ಅಭಿನವ ದಶಕುಮಾರ ಚರಿತೆ-ಚೌಂಡರಾಜ ೯, ೧೯೦೨ ; ಉತ್ತರರಾಮಚರಿತ್ರ ಕಥೆ-೧೧, ೧೯೦೩ ; ಕನ್ನಡ ವಚನ ಕಾದಂಬರಿ-ಅಜ್ಞಾತಕರ್ತೃಕ ೩, ೧೯೦೦ ; ಕವಿಕಂಠಹಾರ-ಸೂರ್ಯಕವಿ ೮, ೧೯೦೨ ; ಗಿರಿಜಾಕಲ್ಯಾಣಂ-ಹರಿಹರ ೪, ೧೯೦೫ ; ಚಂದ್ರಪ್ರಭಪುರಾಣಂ-ಅಗ್ಗಳ ೫, ೧೦, ೧೯೦೧-೦೩ ; ಚಿಕದೇವರಾಜ ಬಿನ್ನಪಂ-ಚಿಕದೇವರಾಯ ೧೫, ೧೯೦೫ ; ಚಿಕದೇವೇಂದ್ರವಂಶಾವಳಿ-ವೇಣುಗೋಪಾಲವರಪ್ರಸಾದ ೬, ೧೯೦೧ ; ನಂದಿ ಮಾಹಾತ್ಮ್ಯಂ-ಗೋಪಕವಿ ೧೭, ೧೯೦೭ ; ನಳಚರಿತ್ರೆ-ಕನಕದಾಸ ೧೮, ೧೯೦೬ ; ಭಗವದ್ಗೀತಾರ್ಥಪ್ರತಿಪಾದಕ ಕೀರ್ತನಂ-ಅಜ್ಞಾತಕರ್ತೃಕ ೧೬, ೧೯೦೫ ಭಾವಚಿಂತಾರತ್ನಂ-ಗುಬ್ಬಿ ಮಲ್ಲಣಾರ್ಯ ೨, ೧೯೦೦ ; ವತ್ಸರಾಜನ ಕಥೆ (೧)-ಮುಮ್ಮಡಿ ಕೃಷ್ಣರಾಜ ೧೨, ೧೯೦೪ ; ವರ್ಷವರ್ಧಂತೀ ಶತಕಂ-ಶ್ರೀವಾಸ ೪, ೧೯೦೧; ಶ್ರೀಗೀತಗೋಪಾಲಂ-ಚಿಕದೇವರಾಯ ೧೭, ೧೯೦೫; ಶ್ರೀರಾಮಾಶ್ವಮೇಧಂ-ಮುದ್ದಣ ೬, ೧೯೦೧ .

೪. ಚರಿತ್ರ ವಸ್ತುಕೋಶ

೧

ಮೈಸೂರು ಓರಿಯಂಟಲ್ ಲೈಬ್ರೇರಿಯನ್ ಮ|| ರಾ|| ಎಸ್. ಜಿ. ನರಸಿಂಹಾಚಾರ್ಯರು ಕನ್ನಡಿಸಿರುವ ಅಲ್ಲಾವುದ್ದೀನ್ ಮತ್ತು ಅದ್ಭುತದೀಪವೆಂಬ ಕಥೆಯನ್ನು ಮೊದಲಿನಿಂದ ಕೊನೆಯುವರೆವಿಗೂ ಆದರವಾಗಿ ನೋಡಲಾಯಿತು.

ಇಷ್ಟು ಕಥೆಯೂ 90 ಪುಟಗಳಲ್ಲಿ ಬರೆದಿರುವುದಲ್ಲದೆ ಆಯಾಯಾ ಕಥಾಭಾಗವು ಸೂಚನೆಯಾಗುವಂತೆ ಅಲ್ಲಲ್ಲೆ 48 ಚಿತ್ರಗಳನ್ನು ಚಿತ್ರಿಸಿರುವುದು. ಈ ಗ್ರಂಥವು ಸಾಮಾನ್ಯವಾಗಿ ಕನ್ನಡವನ್ನು ಓದಲು ಬಲ್ಲವರಿಗೆ ಅರ್ಥವಾಗುವಂತೆ ಶ್ಲಾಘ್ಯವಾದ ಭಾಷಾಶೈಲಿಯಲ್ಲಿ ಬರೆದಿರುವರು. ಚಿಕ್ಕ ಚಿಕ್ಕ ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಅಭಿರುಚಿಯನ್ನುಂಟುಮಾಡಲು ಸಚಿತ್ರವಾದ, ಮನೋಹರವಾದ, ಸುಲಭವಾದ ಕಥೆಗಳನ್ನು ಗ್ರಾಜುಯೇಟ್ಸ್ ಪ್ರೆಸ್ಸಿನವರು ಮುದ್ರಿಸಲು ಆರಂಭಿಸಿರುವುದು ಸ್ತೋತ್ರಾರ್ಹವಾದುದು.

ವಿದ್ಯಾದಾಯಿನಿ, ಆಗಸ್ಟ್, ೧೮೯೯.

೨

We are in receipt of an excellent translation in Canarese of the 'Story of Aladdin and the Wonderful Lamp' belonging to 'Books for the Bairns' series. The translation is by Mr. S.G. Narasimha Chary, Librarian, Government Oriental Library, Mysore. The book is written in very simple and chaste Canarese and is very well suited for home reading. It is very neatly printed and the illustrations have come off very well.

The Madras Standard (Quoted in the text)

೩

ಗ್ರಂಥವಿಮರ್ಶೆ

Books for the Bairns III

'ಗಲಿವರನ ದೇಶಸಂಚಾರ'

ರಾ. ರಾ || ಎಸ್. ಜೀ. ನರಸಿಂಹಾಚಾರ್ಯರಿಂದ ಬರೆಯಲ್ಪಟ್ಟು ಮೈಸೂರಿನ

ಜಿ. ಟಿ. ಏ. ಪ್ರೆಸ್ಸಿನಲ್ಲಿ ಸಚಿತ್ರವಾಗಿ ಮುದ್ರಿಸಲ್ಪಟ್ಟುದು. ಡೆಮ್ಮಿ ಅಷ್ಟಪ್ರತಿ 70 ಪುಟಗಳು.

ಗ್ರಂಥಪ್ರಕಾಶಕರು ವಿಶ್ವಾಸಪೂರ್ವಕವಾಗಿ ನಮ್ಮ ಕಡೆಗೆ ಕಳುಹಿಸಿದ ಈ ಪುಸ್ತಕವನ್ನು ನಾವು ಆನಂದದಿಂದ ಕೊನೆಯವರೆಗೂ ಓದಿ ನೋಡಿದೆವು; ಇದು ಇಂಗ್ಲಿಷಿನಲ್ಲಿರುವ "Gulliver's travels" ಎಂಬ ಮನೋಹರವಾದ ಪುಸ್ತಕದೊಳಗಣ ಪ್ರಥಮ ಪ್ರಯಾಣದ ಕಥೆಯಾಗಿದೆ. ಪ್ರತಿಯೊಂದು ಪುಟದಲ್ಲಿಂಬಂತೆ ಒಂದೊಂದು ಚಿತ್ರವಿದೆ. ಇತ್ತಲಾಗಿನವರೆಗೂ ಕನ್ನಡದಲ್ಲಿ ಇಂತಹ ಪುಸ್ತಕಗಳಿರಲಿಲ್ಲವೆಂಬೀ ಕೊರತೆಯನ್ನು ಹೋಗಗೊಳಿಸ ಪ್ರಯತ್ನಿಸುತ್ತಿರುವ ಗ್ರಂಥಪ್ರಕಾಶಕರಾದ ರಾ. ರಾ॥ ಎಲ್. ಜಯರಾವ್ ಬಿ. ಏ. ಇವರ ಈ ಉದ್ಯೋಗವು ಸ್ತುತ್ಯವಾಗಿದೆ. ಈ ಪುಸ್ತಕವು ಲಲಿತವಾಗಿಯೂ, ಸುಲಭವಾಗಿಯೂ, ಶುದ್ಧವಾಗಿಯೂ ಬರೆಯಲ್ಪಟ್ಟಿರುವುದರಿಂದ ಕನ್ನಡಿಗರೆಲ್ಲರೂ ಇದಕ್ಕೆ ಯೋಗ್ಯವಾದ ಆಶ್ರಯ ಕೊಡಬೇಕೆಂದು ಸೂಚಿಸುವೆವು.

63ನೆಯ ಪುಟದ 17 ನೆಯ ಪಂಕ್ತಿಯಲ್ಲಿ ಏನೋ ತಪ್ಪುಬಿದ್ದು ಅರ್ಥ ಕೆಟ್ಟು ಹೋಗಿದೆ. ಇದನ್ನು ಪ್ರಕಾಶಕರು ಎರಡನೆಯ ಮುದ್ರಣದಲ್ಲಿ ಸರಿಗೊಳಿಸುವರೆಂದು ನಂಬುವೆವು. ಅಂದವಾಗಿ ಅಚ್ಚುಹಾಕಿರುವ ಈ ಪುಸ್ತಕವನ್ನು ಮೈಸೂರು ಜಿ. ಟಿ. ಏ. ಪ್ರೆಸ್ ಮೆನೆಜರರಿಗೆ ಬರೆದು ತರಿಸಿಕೊಳ್ಳಬಹುದು.

ಸುವಾಸಿನಿ, ಮಂಗಳೂರು, ಪುಸ್ತಕ ೧-ಅಂಕ ೩. ಸಪ್ಟಂಬರ ೧೯೦೦, ಪು.೪೮.

೪

ವಿಶೇಷ ವಿಷಯಾವಳಿ

ಮೈಸೂರು ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಯ ಕಡೆಯಿಂದ ಈಗ ಪೂರ್ವದ ಕನ್ನಡ ಗ್ರಂಥಗಳು ಅಚ್ಚಾಗಲು ಆರಂಭವಾಗಿದೆ. ಮೊದಲನೆಯ ಗ್ರಂಥವಾದ ಪಂಪವಿರಚಿತ ಆದಿಪುರಾಣವು ಪ್ರಸಿದ್ಧರಾದ ರಾ॥ ಎಸ್. ಜೀ. ನರಸಿಂಹಾಚಾರ್ಯರವರಿಂದ ಪರಿಷ್ಕೃತವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ರಾ॥ ನರಸಿಂಹಾಚಾರ್ಯರ ಕೈಕೆಳಗೆ ಅಚ್ಚಾದ ಗ್ರಂಥವನ್ನು ನೋಡಿದವರಿಗೆ ಈ ಗ್ರಂಥವನ್ನು ಅಚ್ಚುಹಾಕಿದ ರೀತಿಯನ್ನು ವರ್ಣಿಸಿ ಹೇಳಬೇಕಾದುದಿಲ್ಲ. ಈ ಪುಸ್ತಕದ ಪರಿಮಾಣಕ್ಕೆ ರೂ. 2-8ಆಣೆ ಬೆಲೆ ಇಟ್ಟುದು ಕಡಮೆಯೇ ಆಗಿದೆ. ಈ ಗ್ರಂಥಮಾಲೆಯ ಎರಡನೆಯ ಪುಸ್ತಕವಾದ 'ಜಗನ್ನಾಥ ವಿಜಯ'ವು ಈಗ ಅಚ್ಚಿನಲ್ಲಿದೆ.

ಸುವಾಸಿನಿ, ಪುಸ್ತಕ ೧- ಅಂಕ ೧೦, ಎಪ್ರಿಲ್ ೧೯೦೧, ಪು. ೧೯೨.

೫

ವಿಶೇಷ ವಿಷಯಗಳು

ಮ॥ ರಾ॥ ನರಸಿಂಹಾಚಾರ್ಯರು ಕನ್ನಡದಲ್ಲಿ ಅಸಾಧಾರಣವಾದ ಪಾಂಡಿತ್ಯವುಳ್ಳವರಾಗಿರುವುದು ಮಾತ್ರವೇ ಅಲ್ಲದೆ, ಕನ್ನಡ ಭಾಷೆಯ ಉತ್ತರೋನ್ನತಿಯ ವಿಷಯದಲ್ಲಿ

ವಿಶೇಷವಾದ ಕುತೂಹಲವಿಶಿಷ್ಟರಾಗಿರುವುದರಿಂದ, ವಾರ್ಷಿಕಸಭೆ ಕೂಡಿದ ಕಾಲದಲ್ಲಿ ಅತ್ಯಂತೋತ್ತೇಜಕವಾದ ಮತ್ತು ಪ್ರೌಢವಾದ ಒಂದು ಭಾಷಣವನ್ನು ಮಾಡಿ ಸಭಿಕರನ್ನು ಮೆಚ್ಚಿಸಿದರು.

ಮ॥ ನರಸಿಂಹಾಚಾರ್ಯರವರು ಮಾತನಾಡಿದುದರಲ್ಲಿ ಧಾರವಾಡದವರು ಮಾತ್ರವೇ ಅಲ್ಲದೆ ಕನ್ನಡಿಗರೆಲ್ಲರೂ ಲಕ್ಷ್ಯವಿಟ್ಟು ಕೇಳತಕ್ಕ ಹಲವು. ಅಂಶಗಳಿದ್ದುವು – ಅವುಗಳಲ್ಲಿ ಈ ಕೆಳಗೆ ಕೊಟ್ಟ ೫ ಅಂಶಗಳು ಮುಖ್ಯವಾಗಿವೆ.

(೧) ಮೈಸೂರಿನ ಕರ್ಣಾಟಕ ಪಂಡಿತ ಪರೀಕ್ಷೆಯು ಮದರಾಸ್ ಎಮ್. ಎ. ಪರೀಕ್ಷೆಯಷ್ಟು ಕಠಿನವಾಗಿದೆ. ಆ ಪರೀಕ್ಷೆಯನ್ನು ಧಾರವಾಡದಲ್ಲಿಯೂ ನಡೆಯಿಸಲು ಏರ್ಪಾಟು ಮಾಡಿಕೊಳ್ಳುವುದರಿಂದ ಅಲ್ಲಿಯೂ ಕನ್ನಡದ ಜ್ಞಾನವು ಹೆಚ್ಚುವುದು.

(೨) ಮೈಸೂರಿನವರು ತೆಲುಗು, ತಮಿಳು, ಬಂಗಾಳೀಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸುತ್ತಿರುವರು. ಧಾರವಾಡದವರು ಮರಾಟೀ, ಗುಜರಾತೀ, ಉರ್ದು ಗ್ರಂಥಗಳನ್ನು ಕನ್ನಡಿಸಲು ಪ್ರಯತ್ನಪಡಬೇಕು.

(೩) ಕನ್ನಡ ಹಾಡುಗಳನ್ನೂ, ಜನೋದಾಹರಣೆಯ ಕಥೆಗಳನ್ನೂ (Lyrics and Folklore) ಸಂಗ್ರಹಿಸಿ ಮುದ್ರಿಸಲು ಪ್ರತಿಯೊಬ್ಬರೂ ಯತ್ನಿಸಬೇಕು. ಉಪಾಧ್ಯಾಯರುಗಳು ಈ ಕಾರ್ಯವನ್ನು ಮಾಡಲು ಇರುವಷ್ಟು ಸೌಕರ್ಯವು ಬೇರೊಬ್ಬರಿಗೆ ಇರುವುದಿಲ್ಲ.

(೪) ಪ್ರಾಚೀನ ಮತ್ತು ನೂತನ ಗ್ರಂಥಗಳ ಮತ್ತು ರಚಕರುಗಳ ಚರಿತ್ರೆಗಳನ್ನು ವಾಗ್ಭೂಷಣವೇ ಮೊದಲಾದ ಪತ್ರಿಕೆಗಳಲ್ಲಿ ಆಗಿಂದಾಗ ಪ್ರಕಟಿಸಬೇಕು. ಇವನ್ನೂ ಶಿಕ್ಷಕರುಗಳೇ ಸುಲಭವಾಗಿ ಮಾಡಬಹುದು.

(೫) ಕನ್ನಡ ಭಾಷೆಯನ್ನು ಊರ್ಜಿತಾವಸ್ಥೆಗೆ ತರಲು ಎಲ್ಲರೂ ಪ್ರಯತ್ನಿಸಬೇಕು. ಬ್ರಾಹ್ಮಣರಿಗೆ ಇದು ಮಾತೃಭಾಷೆ ಮಾತ್ರವೇ. ಲಿಂಗಾಯತರಿಗೆ ಇದು ಮಾತೃಭಾಷೆಯಲ್ಲದೆ ಮತಭಾಷೆಯೂ ಆಗಿರುವುದರಿಂದ ಅವರು ಈ ಭಾಷೆಯನ್ನು ಅಭಿವೃದ್ಧಿಗೆ ತರುವುದರಲ್ಲಿ ವಿಶೇಷವಾಗಿ ಪ್ರಯತ್ನಿಸುವುದು ಅವರುಗಳ ಕರ್ತವ್ಯವಾಗಿದೆ.

ವಿದ್ಯಾದಾಯಿನಿ, ೯-೬, ಜೂನ್ ೧೯೦೧, ಪು. ೧೧೫-೧೭ (ಎಡಿಟರವರ ನೋಟ್ಸ್)

೬

ವಿಶೇಷ ವಿಷಯಾವಳಿ

ನಮ್ಮ ಸನ್ಮಾನ್ಯಮಿತ್ರರಾದ ಮ । ಎಸ್. ಜೀ. ನರಸಿಂಹಾಚಾರ್ಯರವರು ನಡೆಯಿಸುತ್ತಿದ್ದ "ಕರ್ಣಾಟಕ ಕಾವ್ಯಕಲಾನಿಧಿ" ಎಂಬ ಮಾಸಪುಸ್ತಕವು ಕೆಲವು ಕಾಲದಿಂದೀಚೆಗೆ ಪ್ಲೇಗಿನ ದೆಸೆಯಿಂದ ಹೊರಡುತ್ತಿರಲಿಲ್ಲ. ಈಗ ಪುನಃ ಕ್ರಮವಾಗಿ ಹೊರಡಲಾರಂಭವಾದುದನ್ನು ನೋಡಿ ಆನಂದಿಸುವೆವು. ಪ್ರಾಚೀನ ಗ್ರಂಥಗಳನ್ನು ಪ್ರಕಾಶಗೊಳಿಸುವ ಒಂದೇ

ಒಂದಾದ ಈ ಕನ್ನಡ ಪತ್ರಿಕೆಗೆ ಮಹಾಜನಗಳು ಆಶ್ರಯ ಕೊಡುವುದು ಯೋಗ್ಯವಾಗಿದೆ.

ಸುವಾಸಿನಿ, ಪುಸ್ತಕ ೧-ಅಂಕ ೧೨, ಜೂನ್ ೧೯೦೨, ಪು. ೨೪೦.

೭

ಧಾರವಾಡದ ಕರ್ಣಾಟಕ ವಿದ್ಯಾವರ್ಧಕ ಸಂಘದ ಹನ್ನೊಂದನೆಯ (೧೯೦೦ ಅಕ್ಟೋಬರ್—೧೯೦೧ ಮಾರ್ಚಿ) ವರ್ಷದ ಚರಿತ್ರೆವನ್ನು ಅತ್ಯಾದರದಿಂದ ಓದಿ ನೋಡಿದೆವು....ವಾರ್ಷಿಕೋತ್ಸವ ಕಾಲದಲ್ಲಿ (೯ನೇ ಮೇ, ೧೯೦೨) ಮೈಸೂರು ಸರಕಾರವು ಪಂಡಿತಪುಂಗವರುಗಳಾದ ಮ॥ ಎಸ್. ಜಿ. ನರಸಿಂಹಾಚಾರ್ಯರವರನ್ನೂ ಮ॥ ಪುತ್ತೂರು ರಾಘವಾಚಾರ್ಯರವರನ್ನೂ ತಮ್ಮ ಕಡೆಯಿಂದ ಕಳುಹಿಸಿದ್ದರು.

ಸುವಾಸಿನಿ, ಮಂಗಳೂರು, ಜೂಲೈ ೧೯೦೨

೮

ಎಡಿಟರವರ ಸ್ವಹಸ್ತದಲ್ಲಿ

ಈ ಕೆಳಗೆ ಹೆಸರು ಕೊಟ್ಟ ಪುಸ್ತಕಗಳು ಪರೀಕ್ಷಾರ್ಥವಾಗಿ ನಮ್ಮಲ್ಲಿಗೆ ಬಂದಿವೆ. ಅವುಗಳನ್ನು ಅವಕಾಶ ದೊರೆತಂತೆ ಪರೀಕ್ಷಿಸಿ ಬರೆಯುವೆವು .... (೭) ಅಜನೃಪಚರಿತೆ ಮಂ. ರಾ. ಎಸ್. ಜಿ. ನರಸಿಂಹಾಚಾರ್ಯರಿಂದ

ಸುವಾಸಿನಿ, ಆಗೊಸ್ತು ೧೯೦೨.

೯

'ಟೆಕ್ಸ್ಟ ಬುಕ್ ಕಮಿಟಿ' ಎಂಬ ಸಭೆಯವರು ಈ ಪುಸ್ತಕವನ್ನು ನೋಡಿ ಕೆಲವು ತಿದ್ದುಪಾಡುಗಳು ಆವಶ್ಯಕವಾಗಿ ಆಗಬೇಕೆಂದು ನಿಶ್ಚೈಸಿ ಸಭಾಸಾಮಾಜಿಕರಾದ ಎಂ. ಶಾಮರಾಯರವರು, ಆರ್. ನರಸಿಂಹಾಚಾರ್ಯರು, ಎಸ್. ಜಿ. ನರಸಿಂಹಾಚಾರ್ಯರು, ಬಿ. ಮಲ್ಲಪ್ಪನವರು, ಇವರುಗಳನ್ನು ಒಂದು ಉಪಸಭೆಯಾಗಿ ಸೇರಿ ತಿದ್ದುಪಾಡುಗಳನ್ನು ಮಾಡಬೇಕೆಂದು ಕೇಳಿಕೊಂಡ ಮೇರೆಗೆ ಈ ಉಪಸಭೆಯವರು ಪುಸ್ತಕವನ್ನು ತಿದ್ದಿದಾರೆ.

'ಕನ್ನಡದ ೧ನೆಯ ಪುಸ್ತಕವು'—ಎಂ. ಎಸ್. ಪುಟ್ಟಣ್ಣ
(ನಾಲ್ಕನೆಯ ಮುದ್ರಣ-೧೯೦೭)

೧೦

ಬಹುಮಾನ ಪಡೆದ ವರ್ತಮಾನವು

(ಈ ಬಾತ್ಮಿ ಬರೆದ ಮೆ ॥ ಎಸ್. ಶಾಮಯ್ಯಂಗಾರ್, ಅ ॥ ಸೆಕ್ರೆಟರಿ, ರೀಡಿಂಗ್‌ರೂಂ, ಮೇಲ್ಕೋಟೆ ಇವರಿಗೆ ಈ ವಾರದ ಬಹುಮಾನವನ್ನು ಕಳುಹಿಸಿದೇವೆ.)

ಮೇಲುಕೋಟೆಯ ವಾಚಕಶಾಲೆಯಲ್ಲಿ ನಡೆದ ಉಪನ್ಯಾಸದ ಸಾರಾಂಶ :

ಈಗಿನ ನಾಗರಿಕತೆಗೆ ಅನುಸಾರವಾಗಿ ಅನೇಕ ಉಪಯುಕ್ತಾಂಶಗಳನ್ನು ತಿಳಿದುಕೊಳ್ಳಲು ಅನುಕೂಲವಿಲ್ಲದಿರುವ ಇಲ್ಲಿನ ನಿವಾಸಿಗಳಿಗೆ ಸಾಮಾಜಿಕ, ನೈಮಿತ್ತಿಕ, ರಾಜಕೀಯ, ವಿದ್ಯಾವಿಷಯ, ನಾಗರಿಕತೆ, ವಾಣಿಜ್ಯ, ವಿಜ್ಞಾನ, ಕೃಷಿ, ಕಲಾಕೌಶಲ್ಯ, ವೈದ್ಯಕತ, ಇವೇ ಮೊದಲಾದ ವಿಷಯಜ್ಞಾನವನ್ನುಂಟುಮಾಡತಕ್ಕ ಉಪಯುಕ್ತಾಂಶಗಳು ನಮ್ಮ ಭರತಖಂಡದ ಸಹೋದರ ಭಾರತೀಯರಲ್ಲಿಯೂ ಪರದೇಶದ ಪಾಶ್ಚಾತ್ಯರಲ್ಲಿಯೂ ಹ್ಯಾಗೆ ವೃದ್ಧಿಯನ್ನೈದುತ್ತಲಿವೆಯೆಂದು ಅರಿತುಕೊಳ್ಳುವುದಕ್ಕೂ ಮಹನೀಯರ ಜೀವನಚರಿತ್ರೆಗಳನ್ನೂ ನೀತಿಬೋಧಕವಾದ ಕಾದಂಬರಿಗಳನ್ನೂ ಐತಿಹಾಸಿಕಗಳನ್ನೂ ತಿಳಿದುಕೊಳ್ಳುವುದಕ್ಕೂ ಅನುಕೂಲಿಸುವಂತೆ ಇಲ್ಲಿ ಕೆಲವರು ಸೇರಿ ೧೯೦೬ನೇ ನವಂಬರ್ ತಾ॥ ೨೫ ನೆ ಭಾನುವಾರ ಒಂದು ವಾಚಕಶಾಲೆ(ರೀಡಿಂಗ್ ರೂಂ) ಯನ್ನು ಸ್ಥಾಪಿಸಿದರು.

ಆದರೆ ಇಲ್ಲಿನ ಕೆಲವು ಮಹನೀಯರು ಈ ವಾಚಕಶಾಲೆಯ ಉದ್ದೇಶವೇನು ? ಇದರಿಂದ ಉಪಯೋಗವೇನು ? ಇತರ ನಮ್ಮ ಪುರಾತನಗ್ರಂಥಗಳನ್ನು ಓದಿದರೆ ಸಮಾಚಾರ ಪತ್ರಿಕೆಗಳಿಂದ ಉಂಟಾಗುವ ಉಪಯೋಗ ಉಂಟಾಗಲಾರದೆ ? ಇವೇ ಮೊದಲಾದ ಕೆಲವು ಪ್ರಶ್ನೆಗಳನ್ನು ಕೇಳಿದರು.

ಆದಕ್ಕಾಗಿ ನವಂಬರ್ ತಾ॥ ೩೦ನೇ ಶುಕ್ರವಾರ ಈ ಶಾಲೆಯಲ್ಲಿ ಒಂದು ಸಭೆಯು ಸೇರಿಸಲ್ಪಟ್ಟಿತು. ಈ ಸಭೆಗೆ ಗವರ್ನಮೆಂಟ್ ಟ್ರಾನ್ಸ್‌ಲೇಟರಾದ ಮ ॥ ಎಸ್. ಜಿ, ನರಸಿಂಹಾಚಾರ್ಯರೂ, ಇಲ್ಲಿನ ವೈದಿಕ ಶಿರೋಮಣಿಗಳಾದ ಸಂಸ್ಕೃತ ಕಾಲೇಜ್ ವಿದ್ವಾನ್ ಪಚ್ಚಿ ತಿರುನಾರಣೈಯ್ಯಂಗಾರ್ಯರೂ, ತಿರುಪತಿ ಪೇಷ್ಕಾರ್ರವರೂ, ಎ. ವಿ. ಸ್ಕೂಲ್ ಹೆಡ್‌ಮಾಸ್ಟರ್ ಮ॥ ಯಂ. ಜಿ. ಶಾಮಯ್ಯಂಗಾರ್ಯರೂ ದೇವಸ್ಥಾನದ ಪೇಷ್ಕಾರ್ರೂ ಮತ್ತು ಪ್ಲೀಡರ್ ಶಿಂಗ್ರಾಚಾರ್ರೇ ಆದಿಯಾಗಿ ಅನೇಕ ವೈದಿಕ ಲೌಕಿಕ ಮಹನೀಯರೂ ಈ ಶಾಲೆಯನ್ನು ಸ್ಥಾಪಿಸಿದ್ದರಿಂದ ತಮ್ಮಗಳಿಗೆ ಉಂಟಾದ ಮಹದಾನಂದವನ್ನು ಪ್ರದರ್ಶನಪಡಿಸಲು ದಯಮಾಡಿಸಿದ್ದರು. ಅನೇಕ ವಿದ್ಯಾರ್ಥಿಗಳೂ, ಇತರ ಮಹನೀಯರನೇಕರೂ ಸಹ ನೆರೆದಿದ್ದರು. ಅನಂತರ ಈ ಶಾಲೆಯ ಕಾರ್ಯದರ್ಶಿಗಳು ಸಭಿಕರ ಮತ್ತು ಶಾಲೆಯ ಸಾಮಾಜಿಕರ ಪ್ರಾರ್ಥನೆಯಂತೆ ಮ ॥ ಎಸ್. ಜಿ. ನರಸಿಂಹಾಚಾರ್ಯರನ್ನು ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವಂತೆ ವಿಜ್ಞಾಪಿಸಿದ್ದರ ಮೇರೆ ಅವರು ಅಗ್ರಾಸನವನ್ನು ವಹಿಸಿ ದೇಶಾಟನ ಮಾಡುವುದರಿಂದ ಎಷ್ಟು ಉಪಯೋಗವಾಗುತ್ತೋ ಅದಕ್ಕಿಂತ ವರ್ತಮಾನ ಪತ್ರಿಕೆಗಳನ್ನು ಓದುವುದರಿಂದ ತ್ರಿಗುಣಾಧಿಕವಾದ ಉಪಯೋಗವಾಗುತ್ತೆಂದೂ ಇತರ ದೇಶದ ನಾಗರೀಕತೆ, ಅಭಿವೃದ್ಧಿಗಳಿಗೆ ಕಾರಣ. ಇವೇ ಮೊದಲಾದಂಶಗಳು ತಿಳಿದು, ನಾವೂ ಅವರಂತೆ ವರ್ತಿಸಿದರೆ ಏಳಿಗೆಗೆ ಬರುತ್ತೇವೆಂಬ ವಿಷಯವನ್ನು ಅನೇಕ ಉದಾಹರಣೆಗಳಿಂದ ವಿಸ್ತಾರವಾಗಿ ವಿಶದಪಡಿಸಿ, ಈ ಶಾಲೆಯು ಉತ್ತರೋತ್ತರಾಭಿವೃದ್ಧಿಯನ್ನು ಹೊಂದಬೇಕೆಂದು ಅಪ್ಪಣೆ ಕೊಡಿಸಿದ್ದಲ್ಲದೆ "ಸಾಮಾನ್ಯ ವಿದ್ಯಾಭ್ಯಾಸ ಮತ್ತು ಪ್ರೌಢ ವಿದ್ಯಾ

ಭ್ಯಾಸ" ಎಂಬ ವಿಷಯವಾಗಿ ಒಂದು ರಮಣೀಯವಾದ ಉಪನ್ಯಾಸವನ್ನು ಮಾಡಿದರು.

* * *

ಕೊನೆಯಲ್ಲಿ ಅಗ್ರಾಸನಾಧಿಪತಿಗಳಿಗೂ ಸಭಿಕರಿಗೂ ಕೃತಜ್ಞತಾಪೂರ್ವಕ ವಂದನೆಗಳು ಅರ್ಪಿಸಿದ್ದರ ಮೇಲೆ ಸಭಿಕರೆಲ್ಲರೂ ಆನಂದಭರಿತರಾಗಿ ಈ ಶಾಲೆಯು ಉತ್ತರೋತ್ತರಾಭಿವೃದ್ಧಿಯಾಗಬೇಕೆಂದು ಆಶೀರ್ವದಿಸಿ ಸಭಾವಿಸರ್ಜನವಾಗಿ ಸ್ವಸ್ಥಾನಗಳಿಗೆ ತೆರಳಿದರು.

ವೃತ್ತಾಂತ ಪತ್ರಿಕೆ, ೨೦-೧೨-೧೯೦೬

೧೧

ಕರ್ಣಾಟಕ ಪತ್ರಿಕೆಗಳೂ, ಕರ್ಣಾಟಕ ಭಾಷೆಯೂ

ಪ್ರಾಚೀನ ಮತ್ತು ಅರ್ವಾಚೀನ ಗ್ರಂಥಕರ್ತರ ಗ್ರಂಥಸಂಶೋಧನದ ವಿಷಯದಲ್ಲಿಯೂ ಚರಿತ್ರಲೇಖನದ ವಿಷಯದಲ್ಲಿಯೂ ಶ್ರೀಮಾನ್ ಎಸ್. ಜಿ. ನರಸಿಂಹಾಚಾರ್ಯರವರಿಂದ ಘನಪ್ರಯತ್ನಗಳು ನಡೆಯಿಸಲ್ಪಡುತ್ತಿರುವುದರಿಂದ ನಾವು ಆ ವಿಷಯವಾಗಿ ಹೆಚ್ಚಾಗಿ ಬರೆಯಬೇಕಾದುದೇನೂ ಇಲ್ಲವು. . . .

ಶ್ರೀಮಾನ್ ಎಸ್. ಜಿ. ನರಸಿಂಹಾಚಾರ್ಯರಿಂದ ಬರೆಯಲ್ಪಟ್ಟ ಕವಿಚರಿತೆಯ ಸ್ವಲ್ಪ ಭಾಗವು ಶೀಘ್ರದಲ್ಲಿ ಹೊರಗೆ ಬರುವಂತಿದೆ.

ಕನ್ನಡದ ಪದಗಳ ಕೋಶವನ್ನು ಸಿದ್ಧಪಡಿಸುವ ವಿಷಯದಲ್ಲಿ ಎಷ್ಟೋ ಸಾರಿ ನಮ್ಮ ಭಾಷಾಭಿಮಾನಿಗಳು ಎಚ್ಚರಿಸಲ್ಪಟ್ಟಿದ್ದರೂ, ಯಾವ ಪ್ರಯೋಜನವೂ ಇಲ್ಲದೆ ಹೋಯಿತು. ಈಗ ದಿವಂಗತವಾಗಿರುವ "ಸುವಾಸಿನಿ" ಪತ್ರಿಕೆಯಲ್ಲಿ 1903ನೆಯ ಜೂನ್ ಮಾಸದಲ್ಲಿ "ಸಂಪಗೆ" ಎಂಬ ಮಾರ್ವೆಸರಿನಿಂದೊಬ್ಬರು "ಕನ್ನಡಕ್ಕೆ ಕೈಪಿಡಿ ಬೇಕು" ಎಂಬ ಶಿರೋಲೇಖನದ ಕೆಳಗೆ ಈ ವಿಷಯವಾಗಿ ಪ್ರಸ್ತಾವಿಸಿದ್ದರು. ಇದು ಮ|| ರಾ|| ಆರ್. ನರಸಿಂಹಾಚಾರ್, M. A. ಯವರನ್ನೂ ಮ|| ರಾ|| ಎಸ್. ಜಿ. ನರಸಿಂಹಾಚಾರ್ಯರನ್ನೂ ಉದ್ದೇಶಿಸಿ ಬರೆಯಲ್ಪಟ್ಟಿದ್ದಿತೆಂದು ನಾವು ಇಲ್ಲಿ ಪುನಃ ಹೇಳಬೇಕಾದುದಿಲ್ಲ. ಈಗಲಾದರೂ ಈ ವಿಷಯವನ್ನು ಕುರಿತು ಪುನಃ ಜ್ಞಾಪಿಸುವುದರಿಂದ ಫಲವುಂಟಾದೀತೋ ನೋಡಬೇಕು. . . .

ಕನ್ನಡ ನುಡಿಗನ್ನಡಿ, ೧-೭, ಮೇ ೧೯೦೭, ಪು. ೨೩೩–೩೪

೧೨

"ಕರ್ಣಾಟಕ ಕವಿಚರಿತೆ" (ಬೆಲೆ 3 ರೂ.) ವಿಲಾಸ : ಮ || ರಾ|| ಎಸ್. ಜಿ. ನರಸಿಂಹಾಚಾರ್, ಕನ್ನಡ ಟ್ರಾನ್ಸ್‌ಲೇಟರ್, ಎಜ್ಯುಕೇಷನಲ್ ಡಿಪಾರ್ಟ್‌ಮೆಂಟ್, ಬೆಂಗಳೂರು.

ಕನ್ನಡ ನುಡಿಗನ್ನಡಿ, ೧–೮, ಜೂನ್ ೧೯೦೭, ಪು. ೩೦೪

೧೩

ಧಾರವಾಡದಲ್ಲಿ ನಡೆದ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದ ಮ|| ರಾ || ಎಸ್. ಜಿ. ನರಸಿಂಹಾಚಾರ್ಯರ ಭಾಷಣದ ಅನುವಾದವನ್ನು ಮುಂದಣ ಲೇಖನದಲ್ಲಿ ಕೊಟ್ಟಿದ್ದೇವೆ. ಅದರಿಂದ ಕರ್ಣಾಟಕ ಭಾಷೆಯ ಪ್ರಾಶಸ್ತ್ಯವೂ, ಈಗಣ ಆದರ ಶೋಚನೀಯಸ್ಥಿತಿಯನ್ನು ನಿವಾರಿಸುವ ಉಪಾಯಗಳೂ ವ್ಯಕ್ತವಾಗುವುವು. "ಅತಿಮಧುರ"ದಂತೆ ಬಾಯಲ್ಲಿ ಹಾಕಿಕೊಂಡ ಕೂಡಲೆ ಕಹಿಯಾಗಿ ತೋರಿ, ಸವಿಯುತ್ತ ಸವಿಯುತ್ತ ಮಧುರವಾಗಿ ತೋರುವ ನಮ್ಮ ಬಡ ಕನ್ನಡಬಾಸೆಯ ವಿಷಯುವನ್ನು ನಮ್ಮ ವಾಚಕರೆಲ್ಲ ಬಹುಶ್ರದ್ಧೆಯಿಂದೋದುವರೆಂದು ನಂಬಿದ್ದೇವೆ. ಕ್ಲೋಸ್‌ಪೇಟೆಯ ಮ|| ರಾ|| ಆರ್. ಶ್ರೀನಿವಾಸ ರಾಯರು ಕಳುಹಿದ ಅಧ್ಯಕ್ಷಭಾಷಣದ ಸಾರಾಂಶವನ್ನು ನಮ್ಮ ಬಂಧುವಾದ "ಮೈಸೂರ್ ಸ್ಟಾರ್" ಪತ್ರಿಕೆಗೆ ಕಳಿಹಿದ್ದೇವೆ. "ಕರ್ಣಾಟಕ ಭಾಷಾಸೇವಕ" ಎಂಬ ಅಭಿಧಾನದಿಂದ ಕಳಿಹಿದ ಒಬ್ಬ ವಿದ್ಯಾವಂತರ ಈ ವಿಷಯದ ಲೇಖನವನ್ನೇ ಬೆಂಗಳೂರಿನ "ನಡೆಗನ್ನಡಿ"ಗೆ ಕಳಿಹಿದ್ದೇವೆ.

ಧಾರವಾಡದಲ್ಲಿ ನಡೆದ ಗ್ರಂಥಕರ್ತರ ಸಮ್ಮೇಲನದಲ್ಲಿ ಅಗ್ರಾಸನಾಧಿಪತಿಗಳಾದ ಮ|| ರಾ|| ಎಸ್.ಜಿ. ನರಸಿಂಹಾಚಾರ್ಯರು ಮಾಡಿದ ಉಪನ್ಯಾಸದ ಅನುವಾದ...

'ಕನ್ನಡ ನುಡಿಗನ್ನಡಿ', ೧-೮, ಜೂನ್ ೧೯೦೭, ಪು. ೨೭೦-೭೬;
೧-೯, ಜುಲೈ ೧೯೦೭, ಪು. ೩೨೪-೩೦

೧೪

ಕನ್ನಡ ಭಾಷಾಭಿವೃದ್ಧಿಯ ಪರಿಷತ್ತು ಧಾರ್ವಾಡದಲ್ಲಿ ನಡೆದ ಸಭೆಯು

(ಒಬ್ಬ ಬಾತ್ಮೀದಾರರಿಂದ)

ಈ ತಿಂಗಳ ಪ್ರಾರಂಭದಲ್ಲಿ ಧಾರ್ವಾಡದಲ್ಲಿ ಕನ್ನಡ ಭಾಷಾಭಿಮಾನಿಗಳು ಸೇರಿ ನಡಸಿದ ಕಾರ್ಯಗಳನ್ನು ಸಂಕ್ಷೇಪವಾಗಿ ತಿಳಿಸಿದೆ. ಇಲ್ಲಿ ಕನ್ನಡ ವಿದ್ಯಾವರ್ಧಕ ಸಂಘವೆಂದು ಒಂದು ಸಂಸ್ಥೆಯು ಸ್ಥಾಪಿಸಲ್ಪಟ್ಟು ಹದಿನೈದು ವರ್ಷಗಳಿಂದ ಪ್ರಾಬಲ್ಯಸ್ಥಿತಿಯಲ್ಲಿರುವದು

* * *

ಜೂನ್ ೨ನೆ ತಾ. ಪ್ರಾತಃಕಾಲ ಸಂಘದ ವಾರ್ಷಿಕ ಮಹಾಸಭೆ ನಡೆದು, ಹಿಂದಿನ ವರುಷದ ವರದಿಯು ಓದಲ್ಪಟ್ಟಮೇಲೆ ವ್ಯವಸ್ಥಾಪಕನ ಸಭಾಸದರ ಹೆಸರುಗಳು ಗೊತ್ತುಮಾಡಲ್ಪಟ್ಟವು. ಆಮೇಲೆ ಗ್ರಂಥಕರ್ತರ ಸಂಮೇಲನವು ಕೂಡಿತು. ಕಾರ್ಯದರ್ಶಿಗಳು ಮ|| ರಾ|| ಕರಿಗುದಿರಿ, ಬಿ. ಎ. ಎಲ್ ಎಲ್. ಬಿ. ಯವರು ಸಭಿಕರ ಸ್ವಾಗತ ಭಾಷಣವನ್ನೂ, ನಡೆಯಬೇಕಾದ ಸಭಾಕಾರ್ಯಗಳನ್ನೂ ಕುರಿತು ಪ್ರಸ್ತಾಪಿಸಿದರು. ಸಭಿಕರ ಪ್ರಾರ್ಥನೆಯಂತೆ ಮೈಸೂರು ಸರಕಾರದ ಕನ್ನಡ ಟ್ರಾನ್ಸ್‌ಲೇಟರ್ ಮ|| ರಾ||

ಎಸ್. ಜಿ. ನರಸಿಂಹಾಚಾರ್ಯರವರು ಅಗ್ರಾಸನವನ್ನು ವಹಿಸಿ ಕನ್ನಡ ಭಾಷೆಯ ಪೂರ್ವ ಕಾಲದ ಮತ್ತು ಈಗಿನ ಸ್ಥಿತಿಯನ್ನು ವಿವರಿಸಿ ಬಹು ಸರಸವಾಗಿ ಉಪನ್ಯಾಸ ಮಾಡಿದರು.

ವೃತ್ತಾಂತ ಪತ್ರಿಕೆ ೧೩-೬-೧೯೦೭

೧೫

ಕನ್ನಡ ಗ್ರಂಥಕರ್ತರ ಪ್ರಥಮ ಸಮ್ಮೇಳನದ ವರದಿ

—K. R.

ಸಭಿಕರ ಪ್ರಾರ್ಥನೆಯಂತೆ ಮೈಸೂರ್ ಸರ್ಕಾರದ ಕನ್ನಡ ಟ್ರಾನ್ಸ್ಲೇಟರ್ ಮಹಾರಾಜೇಶ್ರೀ ಯಸ್. ಜಿ. ನರಸಿಂಹಾಚಾರ್ಯರವರು ಅಗ್ರಾಸನವಹಿಸಿ ಕನ್ನಡ ಭಾಷೆಯ ಪೂರ್ವಕಾಲದ ಮತ್ತು ಈಗಿನ ಸ್ಥಿತಿಯನ್ನು ವಿವರಿಸಿ ಬಹುಸರಸವಾಗಿ ಉಪನ್ಯಾಸ ಮಾಡಿದರು. ಆಮೇಲೆ ನೆರೆದಿದ್ದ ಸಭಿಕರ ಭಾವಚಿತ್ರಗಳು ತೆಗೆಯಲ್ಪಟ್ಟವು...

ವಿದ್ಯಾದಾಯಿನಿ, ಭಾಗ ೧೫-ಸಂಚಿಕೆ ೬, ಜೂನ್ ೧೯೦೭, ಪು. ೧೨೬-೨೯

೧೬

ಪರಮಪದವನ್ನು ಹೊಂದಿದ ಮ। ರಾ। ಎಸ್. ಜಿ. ನರಸಿಂಹಾಚಾರ್ಯರು

ಮ। ರಾ। ಎಸ್. ಜಿ. ನರಸಿಂಹಾಚಾರ್ಯರು ಬೆಂಗಳೂರು ವಿಕ್ಟೋರಿಯ ವೈದ್ಯಶಾಲೆಯಲ್ಲಿ ಪರಮಪದವನ್ನು ಹೊಂದಿದರೆಂಬ ಅತ್ಯಂತ ದುಃಖಕರವಾದ ಸಂಗತಿ, ಈ ಸಂಚಿಕೆ ಅಚ್ಚಿಗೆ ಹೋಗುವ ಸಮಯದಲ್ಲಿ ಬಂದು ಮುಟ್ಟಿತು. ಇವರು ಇಹಲೋಕವನ್ನು ಬಿಟ್ಟುದರಿಂದ ನಮ್ಮ ಕನ್ನಡ ನಾಡಿಗೆ ಉಂಟಾದ ನಷ್ಟವು ಅಷ್ಟಿಷ್ಟಲ್ಲ. ಕರ್ನಾಟಕ ರಾಷ್ಟ್ರದ ಈ ಚಂದ್ರನು ಅಸ್ತಮಿಸಿದುದರಿಂದ ನಮ್ಮ ನಾಡಿನಲ್ಲೆಲ್ಲ ದಟ್ಟವಾದ ಮಬ್ಬು ಕವಿದಂತಾಯಿತು. ಭಾಷಾಮಾತೆಗೆ ಆಧಾರಸ್ತಂಭವಾಗಿದ್ದ ಇವರು ದಿವಂಗತರಾದುದರಿಂದ ಭಾಷಾಮಾತೆ ನಿರಾಧಾರೆಯಾದಳು. ಕರ್ಣಾಟಕಪಂಡಿತರೆಂಬ ಮುಕ್ತಾಹಾರಕ್ಕೆ ದಿವ್ಯರತ್ನಪ್ರಾಯರಾಗಿದ್ದ ಇವರು ಮರೆಯಾದುದರಿಂದ ಅಂಧಕಾರವು ಆವರಿಸಿದಂತಾಯ್ತು. ಭಾಷಾತರುಣಿಯ ಈ ತಿಲಕವು ಅಳಿಸಿಹೋದುದರಿಂದ ಆಕೆಯ ಮುಖತೇಜಸ್ಸು ಕುಂದಿದಂತಾಯ್ತು. ಇವರು ಇಷ್ಟು ಬೇಗನೆ ನಮ್ಮನ್ನು ಅಗಲಿ ಹೋಗುವರೆಂದು ಯಾರೂ ಭಾವಿಸಿರಲಿಲ್ಲ. ದೈವಗತಿ ವಿಚಿತ್ರವಾದುದು. ಮನುಷ್ಯಪ್ರಯತ್ನವೇನಿದೆ ? ಮಹಾನುಭಾವರು ! ಕಡೆಗೂ ತಮ್ಮ ಆತ್ಮಕ್ಕೆ ಶಾಂತಿಯನ್ನು ಮಾಡಿಕೊಂಡು ಹೊರಟೇಬಿಟ್ಟರು ! ಈ ದುಃಖವು ಶಮನವಾಗುವ ಬಗೆ ಹೇಗೋ ತಿಳಿಯದು. ಇವರ ಅಕಾಲ ಮರಣದಿಂದುಂಟಾದ ಅಪಾರದುಃಖವನ್ನು ಸಹಿಸುವುದಕ್ಕೆ ತಕ್ಕ ಶಕ್ತಿಯನ್ನು ಕರುಣೆಯಿಲ್ಲದ ಈ ದುರ್ದೈವವು ಇವರ ಭಾರ್ಯಾಪುತ್ರರಿಗಾದರೂ ಕೊಡಲೆಂದು ಕೋರುತ್ತೇವೆ. ಶಿಥಿಲವಾಗುತ್ತಿದ್ದ ಪ್ರಾಚೀನಕಾವ್ಯಗಳನ್ನು ಜೀರ್ಣೋದ್ಧಾರಮಾಡಿದ ಈ ಭಾಷಾಪೋಷಕರು

ಕನ್ನಡದಲ್ಲಿ ಜನಗಳಿಗೆ ಶ್ರದ್ಧೆ ಹುಟ್ಟಿಸುವುದಕ್ಕಾಗಿ ನಿರಂತರಶ್ರಮ ತೆಗೆದುಕೊಂಡ ಈ ಭಾಷಾಸಹಾಯಕರು, ಮ|| ರಾ|| ಆರ್. ನರಸಿಂಹಾಚಾರ್ಯರೊಡನೆ ಸಹಲೇಖಕರಾಗಿ ಕರ್ಣಾಟಕ ಭಾಷೆಯ ಮಹಿಮೆಯನ್ನೂ ಗ್ರಂಥಬಾಹುಳ್ಯವನ್ನೂ ನಮ್ಮ ಕನ್ನಡ ನಾಡಿಗೆ ತೋರಿಸಿಕೊಟ್ಟ ಈ ಭಾಷಾಪೋಷಕರು ಇಷ್ಟು ಕ್ಷಿಪ್ರದಲ್ಲಿ ನಮ್ಮಗಳನ್ನು ಅಗಲಿದುದು ಅತ್ಯಂತ ಪರಿತಾಪಜನಕವಾಗಿದೆ. ಕನ್ನಡದಲ್ಲಿ ಇವರು ಸಂಪೂರ್ಣಪಾಂಡಿತ್ಯವುಳ್ಳವರಾಗಿದ್ದರು. ಬಿ. ಎ. ಮೊದಲಾದ ಪಟ್ಟಗಳೂ ದಿವಾನ್ ಬಹದ್ದೂರ್ ಬಿರುದುಗಳೂ ಇಲ್ಲದೆಯೇ ಇವರು ಬಹು ಪ್ರಖ್ಯಾತರಾಗಿದ್ದರು. ನಿಗರ್ವಿಯೆಂಬ ಹೆಸರು ಇವರಿಗೆಯೇ ಸಲ್ಲತಕ್ಕದ್ದು.

ಸಂ. ಎಚ್. ಚೆನ್ನಕೇಶವ ಅಯ್ಯಂಗಾರ್,
'ಕನ್ನಡ ನುಡಿಗನ್ನಡಿ', ಮದರಾಸು, ನವೆಂಬರ್-ಡಿಸೆಂಬರ್ ೧೯೦೭

೧೭

ಕನ್ನಡ ಪಂಡಿತರಾಗಿಯೂ ಗವರ್ನಮೆಂಟ್ ವಿದ್ಯಾಭ್ಯಾಸದ ಇಲಾಖಾ ಕನ್ನಡ ಟ್ರಾನ್ಸ್ಲೇಟರಾಗಿಯೂ ಇದ್ದ ವೇ|| ಎಸ್. ಜಿ. ನರಸಿಂಹಾಚಾರ್ರು ಕಳೆದ ವಾರ ಬೆಂಗಳೂರಿನಲ್ಲಿ ಕಾಲುಘಣಿ ಆಗಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಈಗ ಮೈಸೂರು ವಿದ್ಯಾಭ್ಯಾಸದ ಇಲಾಖೆಯವರು ಉಪಯೋಗಿಸುವ ಅನೇಕ ಸ್ಕೂಲ್‌ಪುಸ್ತಕಗಳನ್ನು ಈ ಪಂಡಿತರು ರಚಿಸಿಯೂ ಶುದ್ಧಿಮಾಡಿಯೂ ಇದ್ದರು. ಇವರೂ ವೇ|| ಆರ್. ನರಸಿಂಹಾಚಾರ್ರೂ ಏಕೀಭವಿಸಿ ಕರ್ಣಾಟಕ ಕವಿಗಳ ಚರಿತ್ರೆಯೊಂದನ್ನು ಬರೆದು ಪ್ರಕಟಿಸಿದರು. ಅವರಷ್ಟು ಸುಲಲಿತವಾದ ಕನ್ನಡವನ್ನು ಬರೆಯತಕ್ಕವರು ಸದ್ಯ ಅಪರೂಪವೆಂದೇ ಹೇಳಬಹುದು. ಅವರಿಗೆ ಇನ್ನೂ ೫೦ ವರುಷ ತುಂಬಿರಲಿಲ್ಲ.

ವೃತ್ತಾಂತ ಪತ್ರಿಕೆ, ೨-೧-೧೯೦೮

೧೮

ಮೈಸೂರ ಸರ್ಕಾರದ ಕನ್ನಡ ಭಾಷಾಂತರಕಾರರಾದ ಮ|| ಎಸ್. ಜಿ. ನರಸಿಂಹಾಚಾರ್ಯರೆಂಬ ಪಂಡಿತೋತ್ತಮರು ಕಳೆದ ತಿಂಗಳಲ್ಲಿ ಅಕಾಲಮರಣವನ್ನು ಹೊಂದಿದುದಕ್ಕಾಗಿ ಎಷ್ಟು ವಿಷಾದಿಸಿದರೂ ಸಾಲದು. ಇಡೀ ಕನ್ನಡನಾಡಿಗೇ ಇವರ ಮರಣವು ಕೆಡಕನ್ನುಂಟುಮಾಡಿದೆ. ಉಭಯಭಾಷಾವಿಶಾರದರಾದಿವರು "ದಿಲೀಪ-ಅಜಚರಿತ್ರೆ"ಗಳ ಗ್ರಂಥಕರ್ತೃಗಳಾಗಿಯೂ "ಕಾವ್ಯಮಂಜರಿ-ಕಾವ್ಯಕಲಾನಿಧಿ"ಗಳ ಸಂಪಾದಕರಾಗಿಯೂ, "ಕರ್ಣಾಟಕ ಕವಿಚರಿತೆ"ಯ ಸಹಾಯಕಲೇಖಕರಾಗಿಯೂ ಇದ್ದು, ಕೀರ್ತಿದೇಹಿಗಳಾಗಿ ನಡೆದುಬಿಟ್ಟರು. ಇವರನ್ನೇ ನಂಬಿದ್ದ ಪತ್ನೀಪುತ್ರರ ಶೋಕವನ್ನು ಶ್ರೀಕೃಷ್ಣನೇ ಶಮನಮಾಡಬೇಕು.

ಶ್ರೀಕೃಷ್ಣಸೂಕ್ತಿ, ಉಡುಪಿ, ಸಂಪುಟ ೩, ಸಂಚಿಕೆ ೧, ಜನವರಿ ೧೯೦೮, ಪು. ೩೨.

೧೯

ಎಸ್. ಜಿ. ನರಸಿಂಹಾಚಾರ್ಯರ ಅಕಾಲಮರಣ : ೨೨-೧೨-೦೭

ಅಯ್ಯೋ ! ಕರ್ಣಾಟಸರಸ್ವತಿಯೇ ! ಕನ್ನಡದೇಶಜೀವಾತುವೇ ! ನಿನ್ನ ಅಭಿಮಾನಪುತ್ರನ ಅಳಿವಿನಲ್ಲಿ ನೀನಿಷ್ಟು ಶೋಕಿಸುವುದುಚಿತವೇ ? ನಿನ್ನ ಅನುಗ್ರಹವೊಂದಿದ್ದರೆ ಈ ದೇಶಮಾತೆಗೆ ಮಕ್ಕಳಿಗೆ ಕೊರತೆಯೇನು? ಆ ಮಕ್ಕಳಿಂದ ಅವಳು ಒಳ್ಳೆಯ ಸ್ಥಿತಿಗೆ ಬರುವುದರಲ್ಲಿ ಅಡ್ಡಿಯೇನು ? ನಿನ್ನ ತಂಗಿಯ ಮಕ್ಕಳನ್ನು ನಿನ್ನ ಮಕ್ಕಳೆಂದೇ ಭಾವಿಸಿ ಆ ದುಃಖದಿಂದ ಇಷ್ಟು ಕೊರಗುವಂತಿರುವುದು ಸರಿಯಲ್ಲ ; ಆ ದುಃಖವೇ ನಿನ್ನನ್ನು ಮಂಕುಮಾಡಿತೆಂದು ಹೇಳಬೇಕಾಗಿದೆ. ಪೂರ್ವದಲ್ಲಿ ನೀನು ನಿನ್ನ ತಂಗಿಯ ಪುತ್ರರಾದ ನೃಪತುಂಗ ಮೊದಲಾದವರನ್ನು ನಿನ್ನ ಮಕ್ಕಳೆಂದನುಗ್ರಹಿಸಿ ಪೋಷಿಸಿ ಅವರ ತೇಜಃಪ್ರಭಾವದಿಂದ ನಿನ್ನ ಬೆಳಕನ್ನು ಸರ್ವತ್ರ ಚದುರಿಸಿ, ಕಾವೇರಿಯಿಂದ ಗೋದಾವರೀ ಪರ್ಯಂತವಿರುವ ನಿನ್ನ ತಂಗಿಯ ತೌರುಮನೆಯನ್ನು ಉಚ್ಛ್ರಾಯಸ್ಥಿತಿಗೆ ತಂದು, ಅವಳನ್ನು ಸರ್ವೋತ್ಕೃಷ್ಟಳನ್ನಾಗಿ ಮೆರೆಯಿಸಲಿಲ್ಲವೇ ? ಈಗ ಈ ರೀತಿಯಲ್ಲಿ ಮಾಡದೆ ಕ್ಲೇಶಪಡುವುದಕ್ಕೆ ಕಾರಣವೇನು ? ಬಹುಶಃ ಆ ಕಾಲದ ರಾಜರುಗಳು ನಿನ್ನ ಬೆಳಕಿಗೆ ತಾವೂ ಸೇರಿ, ನಿನ್ನ ಪೋಷಣೆಯಲ್ಲಿ ಬಳೆದು, ಪ್ರಬಲರಾಗಬೇಕೆಂದು ನಿಶ್ಚಯಿಸಿ, ನಿನ್ನನ್ನು ಆಶ್ರಯಿಸಿದ್ದುದೇ ಕಾರಣವಾಗಿರಬಹುದು. ಅಲ್ಲಿಂದೀಚೆಗೆ ಚಾಲುಕ್ಯ ನೃಪರೂ ಕೂಡ ನಿನ್ನ ಸೇವೆಯೇ ತಮ್ಮ ಉಜ್ಜೀವನಹೇತುವೆಂದು ತಿಳಿದು, ನಿನ್ನ ತಂಗಿಯ ಮಕ್ಕಳಾದ ಹಂಪ, ಹೊನ್ನ, ರನ್ನರೆಂಬ ರತ್ನಗಳನ್ನು ತಮ್ಮ ಆಸ್ಥಾನರತ್ನಗಳನ್ನಾಗಿ ಮಾಡಿಕೊಂಡರಲ್ಲವೆ ? ಆ ಮಕ್ಕಳ ಜೊತೆಯಲ್ಲಿ ಇದ್ದಾಗ ನಿನ್ನ ಮಹಿಮೆಯು ಸರ್ವತ್ರ ಕಂಗೊಳಿಸುತಿದ್ದಿತು. ಆ ಕಾಲದಲ್ಲಿ ಅವರ ವಾಙ್ಮಯತೇಜಸ್ಸಿನಿಂದ ಅವರ ಸಹೋದರರಿಗೆ ನಿನ್ನ ತಂಗಿಯಾದ ದೇಶಮಾತೆಯ ಮೆಯ್ಸಿರಿಯನ್ನು ತಿಳಿಯಲು ಶಕ್ತಿಯುಂಟಾಯಿತು. ಆ ಮೂಲಕ ಅವರಲ್ಲಿ ಅಡಗಿದ್ದ ಪೌರುಷಾದಿಗಳು ನೆಲದಲ್ಲಿ ಅಡಗಿದ್ದ ಕಾಳು ಮಳೆ ಬೀಳಲು ಚಿಗುರಿ ಫಲೋನ್ಮುಖವಾಗುವಂತೆ ಉದ್ಭಿನ್ನವಾಗಿ ಹೊರಗೆ ಕಾಣಿಸಿಕೊಂಡು ಫಲೋನ್ಮುಖವಾಯಿತು. ಆಗಲ್ಲವೆ ದೇಶಮಾತೆಯು ಪುತ್ರವತಿಯಾಗಿ "ವೀರಪ್ರಸೂಃ" ಎಂಬ ಬಿರುದನ್ನು ಹೊಂದಿದಳು. ಅದೆಲ್ಲಕ್ಕೂ ನೀನೇ ಕಾರಣವಲ್ಲವೆ ? ಎಂಥ ಮಹನೀಯರಿಗೂ ಕೂಡ ಆಪತ್ತೆಂಬುವುದುಂಟು. ಅದನ್ನು ಎಲ್ಲರೂ ಅನುಭವಿಸಿಯೇ ತೀರಬೇಕು. ಮಾಡತಕ್ಕುದ್ದೇನು ? ಧೈರ್ಯವೇ ಸಾಧನಸಂಪತ್ತು. ಆ ಕಾಲದಲ್ಲಿ ಮಲ್ಲಿಕಾಫರೆಂಬ ಮ್ಲೇಚ್ಛಮೇಘವು ದಿಕ್ಕುಗಳನ್ನು ವ್ಯಾಪಿಸಿ ಆರ್ಭಟಿಸಿ ಅತಿವೃಷ್ಟಿಯಿಂದ ನಿನ್ನ ಸರ್ವತ್ರವ್ಯಾಪ್ತವಾಗಿದ್ದ ತೇಜಸ್ಸನ್ನು ಮಾಸಿದುದಲ್ಲದೆ, ನಿನ್ನ ಆಶ್ರಯದಲ್ಲಿ ಬದುಕಿ ಬಾಳಿದ ರಾಜರೂ ಕೂಡ ನಿರಾಶರಾಗಿ ಈ ದೇಶವನ್ನೇ ಬಿಟ್ಟು ಮನುಷ್ಯಗಂಧವಿಲ್ಲದ ದೇಶವನ್ನು ಸೇರಿ ಅಲ್ಲಿಯಾದರೂ ನಿನ್ನ ಕಥೆಯನ್ನು ಕೇಳುತ್ತಿರಬೇಕೆಂಬ ಆಶೆಯಿಂದ ಸೇರಿಕೊಳ್ಳುವಹಾಗೆ ಮಾಡಿತು. ನೀನೂ ಕೂಡ ಆ ವರ್ಷಧಾರೆಯಲ್ಲಿ ಇದ್ದರೆ ನಿರ್ನಾಮವಾಗಿ ಹೋಗುವೆ

ನೆಂದು ತಿಳಿದೋ, ನಿನ್ನ ಮಕ್ಕಳ ಪಾರ್ಥಿವಶರೀರವು ನಾಶ ಹೊಂದುತ್ತಿದ್ದರೂ ಅಂಜದೆ ಅವರಿಗೆ ವಾಙ್ಮಯಶರೀರವನ್ನು ಕೊಟ್ಟು ಅವರೊಡನೆ ಕೋಣೆಯಲ್ಲಿಯೂ, ಬಡಬಗ್ಗರ ಮನೆಗಳಲ್ಲಿಯೂ ಅಡಗಿಕೊಂಡೆ? ಅಲ್ಲಿ ಅಡಗಿಕೊಂಡುದುದು ಸಮಯನಿರೀಕ್ಷಣಕ್ಕಾಗಿಯೇ ಅಲ್ಲವೆ ? ಲೋಕದಲ್ಲಿ ಯಾವುದೂ ಸ್ಥಿರವಿಲ್ಲ, ಪರಿವರ್ತಿಸುತ್ತಲೇ ಇರುವುದು. ಅಲ್ಲಲ್ಲಿ ಬಡವರ ಮನೆಗಳಲ್ಲಿ ಅಡಗಿಕೊಂಡಿದ್ದರೂ ಅವರು ತಾಯಿಯ ಸ್ತನ್ಯಬಲವಿಲ್ಲದುದರಿಂದ ನಿನ್ನ ಅನುಗ್ರಹವೆಷ್ಟಿದ್ದರೂ ಜವಲೆಮಕ್ಕಳಾಗಿಯೇ ಆದರು. ಅವರಿಂದ ದೇಶಮಾತೆಗೆ ಯಾವ ಗೌರವವೂ ಉಂಟಾಗಲಿಲ್ಲ. ನಿನ್ನ ಸ್ವೈರಸಂಚಾರದ ಫಲವನ್ನನುಭವಿಸಲು ಅವರಿಗೆ ಅವಕಾಶವಿಲ್ಲದಿರುವುದೇ ಆ ಹೀನಸ್ಥಿತಿಗೆ ಕಾರಣವೆಂದು ಊಹಿಸಬಹುದು. ಇದಕ್ಕಾಗಿ ನೀನು ಚಿಂತೆಪಟ್ಟಂತೆ ಕಾಣಿಸಲಿಲ್ಲ. ಹೀಗೆ ಕೆಲವು ಕಾಲ ಕಳೆದ ಮೇಲೆ ಮೈಸೂರು ರಾಜಸೂರ್ಯೋದಯವು ಅಂತರಿಕ್ಷದಲ್ಲಿ ಆಗಲು, ದಿಕ್ಕುಗಳೆಲ್ಲವೂ ಬೆಳಗಿದುವು ; ಸಸ್ಯಗಳು ಮೊಳೆತುವು. ದ್ವಿಜರು ಎಲ್ಲೆಲ್ಲಿಯೂ ಚರಿಸಲಾರಂಭಮಾಡಿದರು ; ಕೋಗಿಲೆಗಳು ಕೂಗದೊಡಗಿದುವು ; ಆ ರಾಜರು ನಿನ್ನ ಪಾದಪದ್ಮದ ಮಕರಂದಪಾನದಲ್ಲಿ ಅತ್ಯುತ್ಸುಕರಾಗಿ ಪಾನಮಾಡಿ, ತಾವೂ ಪ್ರವೃದ್ಧರಾಗಿ, ತೇಜಸ್ವಿಗಳಾದ ಪುತ್ರರು ನಿನಗೆ ಯಾವಾಗ ಜನಿಸುವರೊ ಎಂದು ಕಾಲನಿರೀಕ್ಷಣೆಮಾಡುತ್ತಿದ್ದರು. ಮಹಾತ್ಮರ ಮನೋರಥವು ಎಂದೂ ವ್ಯರ್ಥವಾಗದು. ಅವರ ಕೈಹಿಡಿದುದರಿಂದ ನಿನ್ನ ತಂಗಿಯು ಕಾಂತಿಗೊಂಡಳು ; ತನ್ನ ಪ್ರಾಬಲ್ಯವನ್ನು ಅನ್ಯದೇಶಗಳಲ್ಲಿ ತೋರಲು ಹೊರಟಳು. ಆ ಕಾಲದಲ್ಲಿ ನಿನ್ನ ತಂಗಿಯು ನಿನ್ನನ್ನು ಕರೆದಳು. ಆಗ ನೀನು ಹೊರಟು ವಾಙ್ಮಯರೂಪದಲ್ಲಿದ್ದ ನಿನ್ನ ಮಕ್ಕಳನ್ನು ಒಳ್ಳೊಳ್ಳೆಯ ಸರಸ್ವತೀಭಂಡಾರವೆಂಬ ದೊಡ್ಡದೊಡ್ಡ ವಿಲಾಸಭವನಗಳಿಗೆ ಕರೆತಂದು, ಅಲ್ಲಿ ಸುಖವಾಗಿರುವಂತೆ ನೇಮಿಸಿ, ಬಳಿಕ ಪಾರ್ಥಿವಶರೀರದಲ್ಲಿ ತೇಜಸ್ವಿಗಳಾದ ನಿನ್ನ ತಂಗಿಯ ಪುತ್ರರುಗಳನ್ನು ಹುಡುಕುತ್ತ ಹೊರಟೆ. ಅವರಲ್ಲಿ ಕೆಲವರನ್ನು ನಿನ್ನ ಸ್ವಂತ ಮಕ್ಕಳಂತೆ ಪ್ರೀತಿಸಿ ಮಹಾತ್ಮರನ್ನು ಮಾಡಿದೆ. ಅವರಲ್ಲಿ ಅನೇಕರು ಪರಾಕ್ರಮಿಗಳೂ ಆದರು. ನೀನು ನಿನ್ನ ನಾಟ್ಯವನ್ನು ನಿನ್ನ ಮಕ್ಕಳೊಡನೆ ಆರಂಭಿಸಿ ಎಲ್ಲರನ್ನೂ ಮೋಹಗೊಳಿಸುತ್ತ ಬಂದೆಯಲ್ಲವೆ ? ಇದೆಲ್ಲವೂ ನಿನ್ನ ಅಭಿಮಾನದಿಂದಲೇ ಅಲ್ಲವೆ ಸಂಭವಿಸಿತು? ಇಂಥ ಶಕ್ತಿಯನ್ನೂ ಪ್ರಭಾವವನ್ನೂ ಈಗ ಏಕೆ ಮರೆತು ಚಿಂತಿಸುವಿಯೋ ಕಾಣೆ ? ಈ ಮಧ್ಯೆ ಇನ್ನೂ ಪ್ರಬಲವಾದ ಮತ್ತೊಂದು ತುರುಷ್ಕಮೇಘವು ಬಂದು, ನಿನ್ನ ನಾಡಿನಲ್ಲಿ ಕತ್ತಲೆಯನ್ನು ಕವಿಸಿ, ಆ ವಾಙ್ಮಯವಾದ ಮಕ್ಕಳನ್ನು ಜ್ವಾಲೆಗೆ ಆಹಾರ ಮಾಡಿತು. ಆ ದುಃಖದಿಂದ ಅತ್ಯಂತಕೃಶಳಾಗಿ ದೂಳು ಕವಿದು ಉಡಲು ಬಟ್ಟೆಯಿಲ್ಲದೆ ತಿರಿಕೆಯವಳಂತೆ ಆದೆಯಲ್ಲವೆ ? ಈ ಮರವೆಗೆ ಪ್ರತಿಕೂಲಕಾಲವೇ ಕಾರಣವೆಂದು ಯೋಚಿಸುವೆಯೊ ? ಅಂಥ ಕಾಲವಿನ್ನೆಂದೂ ಬರಲಾರದು. ನಿನ್ನ ಸಾಕಿದ ಮಕ್ಕಳು ಅಗ್ನಿಭಯದಿಂದಲೂ ಜಲಭಯದಿಂದಲೂ ಕ್ರಿಮಿಭಯದಿಂದಲೂ ನಡುಗುವ ಕಾಲವು ಆಗಲೇ ಅಸ್ತಮಿಸಿತು. ಅವರಿರುವ ಸ್ಥಲವೊಂದು ತಿಳಿದರೇನೇ ಸಾಕು. ಹೀಗಿರಲು ಅವರ ಮಾಹಾತ್ಮ್ಯ ತಿಳಿದರಂತೂ ಸರ್ವಪ್ರಯತ್ನದಿಂದಲೂ ಅವರನ್ನು ಹುಡುಕಿಕೊಂಡುಹೋಗಿ ಅವರ ಪಾದ

ಸೇವೆ ಮಾಡಲು ಯತ್ನಪಡುವರನೇಕರಿರುವರು. ಹೀಗೆ ನಿನ್ನ ಮಕ್ಕಳ ಇರವೇ ಇಷ್ಟು ಸ್ಪೃಹಣೀಯವಾಗಿರುವಾಗ ನೀನು ಭಯಪಡುವುದೇಕೆ ? ಆ ಮೈಸೂರು ನೃಪರೆಂಬ ಸಾಗರದಲ್ಲಿ ಚಾಮನೃಪನೆಂಬ ಚಂದ್ರನು ಹುಟ್ಟಿದುದನ್ನು ಮರತೆಯಾ ? ಆತನು ತನ್ನ ಕಿರಣದೊಂದಿಗೆ ನಿನ್ನ ಬೆಳಕನ್ನು ಸರ್ವತ್ರ ಆಪಾಮರಪಂಡಿತಮಂಡಲಿಗೂ ಎರಚಲು ಯತ್ನಿಸಲಿಲ್ಲವೆ ? ಅವನಿಂದ ಎಷ್ಟೋ ಜನಗಳು ಸೌಖ್ಯವನ್ನು ಹೊಂದಲಿಲ್ಲವೆ? ಆ ಕಾಲ ದಲ್ಲಿ ನಿನ್ನ ತಂಗಿಗೂ ನಿನಗೂ ಆಶ್ರಯಬಲವಿಲ್ಲವೆಂದು ಹೆದರಿದೆಯಾ ? ಆಗ ನಿನಗೆ ಸಂಗೀತಲಕ್ಷ್ಮಿಯು ಸಹಾಯಕಳಾಗಿ ಬರಲಿಲ್ಲವೆ? ನಿನ್ನ ತಂಗಿಗೆ ಅತ್ಯಂತ ಸುಂದರಳಾಗಿಯೂ ಸುಮುಖಳಾಗಿಯೂ ವೀರಮಾತೆಯಾಗಿಯೂ ಕಲಾಕುಶಲೆಯಾಗಿಯೂ ಇದ್ದ ಆಂಗ್ಲೇಯ ಮಾತೆಯ ಹಸ್ತಾವಲಂಬನವೂ ಸಿಕ್ಕಿದ್ದಿತಲ್ಲವೆ ? ಅವಳ ಆಶ್ರಯದಿಂದ ಶ್ಯಾಮಚಂದ್ರನು ಪೂರ್ಣಚಂದ್ರನಾಗಲಿಲ್ಲವೆ ? ಅವಳ ಅನುಗ್ರಹವೂ ಸೌಜನ್ಯವೂ ನಿನ್ನ ತಂಗಿಯ ಮಕ್ಕಳಲ್ಲಿ ಎಲ್ಲೆಲ್ಲಿಯೂ ಕಾಣಿಸಿಕೊಳ್ಳಲಿಲ್ಲವೆ ? ಆ ಕಾಲದಲ್ಲಿ ಎಲ್ಲಕ್ಕೂ ಮೊದ ಲಿನ ಗೂಳಿಯಂತೆ ಬಸಪ್ಪನೆಂಬುವನು ನಿನ್ನ ಪೋಷ್ಯವರ್ಗದಲ್ಲಿ ನುಗ್ಗಿ ಬಂದುದನ್ನು ಆಗಲೇ ಮರೆತುಬಿಟ್ಟೆಯಾ ? ಅವನೊಬ್ಬನಿಂದೇನಾದೀತು ? ಅವನ ಪೂರ್ವಜರಾದ ಸಹೋದರರೆಲ್ಲರೂ ಅಂಧಕಾರದಲ್ಲಿ ಕೋಣೆಗಳೆಂಬ ಸೆರೆಮನೆಗಳಲ್ಲಿ ನರಳುತ್ತ ಶತ್ರುಗಳ ಮಧ್ಯದಲ್ಲಿ ಕ್ಷಯಿಸುತ್ತಾ ಇದ್ದುದನ್ನು ನೆನೆನೆನೆಸಿ ಧೈರ್ಯಗುಂದಿದೆಯೊ ? ಹಿಂದಿನ ಮಕ್ಕ ಳಷ್ಟು ಈಗಿನ ಮಕ್ಕಳು ಸಮರ್ಥರಲ್ಲ ಎಂದು ತಿಳಿದೋ ಹೀಗೆ ದುಃಖಿಸುತ್ತಿರುವುದು ? ಅವರಿಗೆ ಸಿಕ್ಕದೆಹೋದ ಆಂಗ್ಲೇಯಮಾತೆಯ ಸ್ತನ್ಯವನ್ನು ಇವರು ಕುಡಿಯುತ್ತಿದ್ದರೂ ಅವರಷ್ಟು ಶಕ್ತರಲ್ಲವೆಂಬುದಾಗಿಯೋ ಈ ಕೊರತೆ ? ಶ್ಯಾಮಚಂದ್ರನೂ ಅಸ್ತಮಿಸಿದ ನಲ್ಲಾ ಎಂಬ ಕೊರತೆಯೊ ? ಬಹುಶಃ ಆ ಕೊರತೆಯು ನಿನ್ನಲ್ಲಿರಲಾರದೆಂಬುದಾಗಿಯೇ ತೋರುತ್ತದೆ. ಸಮುದ್ರಶಾಯಿಯಾಗಿ ಮನಸ್ಸಿನಲ್ಲಿಯೇ ಚಂದ್ರನನ್ನು ಸೃಷ್ಟಿಸಿದ ಕೃಷ್ಣನೇ ಈಗ ಹುಟ್ಟಿಯಿಲ್ಲವೆ ? ಚಂದ್ರನ ಪ್ರಭೆಯೇ ಇಷ್ಟು ಆಹ್ಲಾದಕವಾಗಿರುವಾಗ ಆ ಚಂದ್ರನಿಗೂ ಜನ್ಮಭೂಮಿಯಾದ ಕೃಷ್ಣನ ಪ್ರತಾಪವು ಇನ್ನೆಷ್ಟು ಇರಬಹುದು. ಹೀಗಿರಲು ಕೊರತೆಯೇಕೆ ? ಆ ಪೂರ್ವಜಪುತ್ರರ ಸ್ಥಿತಿಯೇ ನಿನ್ನ ಶೋಕಕ್ಕೆ ಕಾರಣ ವಾಗಿರಬಹುದು ? ಆ ಕೊರತೆಯನ್ನು ನರರಲ್ಲಿ ಸಿಂಹನಾದ ನೃಸಿಂಹನೆಂಬ ಈ ಪುತ್ರನು ನೀಗಾಡಲೆತ್ನಿಸಲಿಲ್ಲವೆ ? ಆ ಯತ್ನಕ್ಕೆ ಯೋಗ್ಯರಾದ ದೇಶಮಕ್ಕಳನ್ನು ಪ್ರೇಮಾನುರಾಗ ದೊಡನೆ "ಬಾ,ಬಾ !"ಎಂದು ಕರೆಯುತ್ತಿರುವ ಭಾಭನ ಹಸ್ತಾವಲಂಬವು ಅವನಿಗೆ ದೊರ ಕಿತಲ್ಲವೆ ? ಆಗ ಅವನು ತನ್ನ ಮಿತ್ರನ ಬಲದಿಂದ ಯತ್ನಿಸಿ "ಕರ್ಣಾಟಕ ಕಾವ್ಯಪುಷ್ಪ ಮಂಜರಿ"ಯನ್ನು ಎಲ್ಲೆಲ್ಲಿಯೂ ಬೆಳಸಲಿಲ್ಲವೆ ? ಆ ಮಂಜರಿಯು "ಕಲಾನಿಧಿ"ಯಾಗಿ ಪರಿಣಮಿಸಲಿಲ್ಲವೆ ? ಆ ಕಲಾನಿಧಿಯ ಬೆಳಕು ಈ ದೇಶದಲ್ಲಿ ಹರಡಿತಲ್ಲದೆ ಅನ್ಯದೇಶಗಳ ಲ್ಲಿಯೂ ಈಗ ಹರಡಿಕೊಳ್ಳುತ್ತಿದೆಯಲ್ಲವೆ ? ಅದರಿಂದ ನಿನ್ನ ಪೂರ್ವವಾತ್ಸಲ್ಯಕ್ಕೆ ಪಾತ್ರ ರಾದವರ ವಾಙ್ಮಯಶರೀರವು ಸ್ಥಿರವಾಗಿ ಎಲ್ಲೆಲ್ಲಿಯೂ ನಿಂತಿತಲ್ಲವೆ ? ಆ ಪೂರ್ವಜರು ಧೈರ್ಯದಿಂದ ಉದ್ಧೃತಕಂಠರಾಗಿ ವಾಙ್ಮಯಶರೀರದಲ್ಲಿ ನಿಂತು ಹೆದರದೆ ತಮ್ಮ ಆಗಿನ

ಸ್ಥಿತಿಯನ್ನೂ, ಆಗಿನ ಮಹಿಮೆಯನ್ನೂ, ಆಗಿನ ದೇಶಮಾತೆಯ ಉಚ್ಚ್ರಾಯತೆಯನ್ನೂ ಬೋಧಿಸುತಲೂ, ಈಗಿನವರಲ್ಲಿ ಅಡಗಿರುವ ಉತ್ಸಾಹದ ಮೊಳಕೆಯನ್ನು ತಮ್ಮ ವಾಗ್ವರ್ಷದಿಂದ ಸಸ್ಯೋನ್ಮುಖವಾಗಿ ಮಾಡಬೇಕೆಂದೂ ಇರುತ್ತಾರಲ್ಲವೆ ? ಅವರ ನಾಟಕವು ಎಲ್ಲರಿಗೂ ಹೃದಯಂಗಮವಾಗಿಲ್ಲವೆ ? ಅದನ್ನು ನೋಡುತಿದ್ದರೂ ಈ ಕೊರತೆ ಏಕೋ ಕಾಣೆ? ಆ ನೃಸಿಂಹನ ಹೃದಯದಲ್ಲಿ ನಿನ್ನ ಅನುಗ್ರಹದಿಂದ ಮೂಡಿದ್ದ ತೇಜಸ್ಸು ಪಕ್ವವಾಗಿ ಈಚೆಗೆ ಹೊರಡಲಿಲ್ಲವಲ್ಲಾ ಎಂಬ ಕೊರತೆಯೋ ? ಆ ಕೊರತೆಗಾಗಿ ನೀನು ಇಷ್ಟು ಚಿಂತೆಪಡಬೇಕಾಗಿಲ್ಲ. ಅಜನೃಪಚರಿತೆಯೂ, ದಿಲೀಪಚರಿತೆಯೂ, ಮುಕುಂದ ಮಾಲೆಯೂ, ಉತ್ತರರಾಮ ಚರಿತೆಯೂ, ಭಾರವಿಯೂ ಇರುವಾಗ ಆ ಚಿಂತೆಗೆ ಕಾರಣ ವೇನೂ ತೋರುವುದಿಲ್ಲ. ಒಂದೊಂದೇ ಆತನ ಬುದ್ಧಿಕೌಶಲವನ್ನೂ ವಾಚ್ಚಾತುರ್ಯವನ್ನೂ ಇತರ ಸಪತ್ನಿಯರಲ್ಲಿಲ್ಲದ ನಿನ್ನ ಮೇಲ್ಮೆಯನ್ನೂ ತಿಳಿಸುತ್ತಿದೆಯಲ್ಲವೆ ? ನಿನ್ನ ಪೂರ್ವಜ ಪುತ್ರರಿಗಿಂತಲೂ ಅತಿಶಯವಾದ ಮೇಲ್ಮೆಯೊಂದನ್ನು ಆತನಲ್ಲಿ ನೀನು ನೋಡಲಿಲ್ಲವೆ ? ಆತನು ಆಂಗ್ಲೇಯಸರಸ್ವತಿಯ ನವೀನಹಾವಭಾವಗಳನ್ನೂ, ಹರಮಿಟ್ (Hermit) ಎಂಬ ನಿನ್ನವೇಯ್ಸುರಿಯಲ್ಲಿ ಮೆರೆಯಿಸಲಿಲ್ಲವೇ ? ಇದೂ ಅಲ್ಲದೆ ಆತನು ನಿನ್ನ ಪ್ರಾಚೀನ ಪುತ್ರರ ಶಕ್ತಿಯನ್ನೂ, ನಿನ್ನ ತಾಯಿಯಾದ ಸಂಸ್ಕೃತಮಾತೆಯ ಅತಿಶಯವನ್ನೂ, ಆಂಗ್ಲೇಯ ಸರಸ್ವತಿಯ ಸೌಲಭ್ಯವನ್ನೂ ಸೇರಿಸಿ ನಿನಗೆ ಒಂದು ಹೊಸ ಶೋಭೆಯನ್ನೂ ಕೊಡಲು ಯತ್ನಿಸಿದವನಲ್ಲವೇ ? ಅದನ್ನು ಯೋಚಿಸಿಕೊಂಡೋ ನೀನು ದುಃಖಪಡು ವುದು ? ಅಂಥ ದುಃಖಕ್ಕೂ ಅವಕಾಶವಿಲ್ಲ. ಆತನ ಛಾಯಾನುವರ್ತಿಗಳು ನಿನ್ನನುಗ್ರಹ ವೊಂದಿದ್ದರೆ ಏಕೆ ಹುಟ್ಟಬಾರದು ? ಹುಟ್ಟದಿರುವುದಕ್ಕೆ ಪ್ರತಿಕೂಲಕಾಲದ ಸಂಭವವು ಇಲ್ಲದೆ, ಎಲ್ಲರೂ ನಿನ್ನ ತಂಗಿಯ ಸೇವೆಯಲ್ಲಿ ಯತ್ನಿಸುತ್ತಿರಲು ಅಂಥ ಕೊರತೆಯನ್ನು ಬಿಡು. ನಿನ್ನ ಅನುಗ್ರಹವನ್ನು ಬಯಸಿ ಬರುವರನೇಕರುಂಟಾಗುವರು. ಅದಕ್ಕಾಗಿ ನೀನು ಯೋಚಿಸುವುದು ಸರಿಯಲ್ಲ. ನಾವೀಗ ಕೊರತೆಪಡಬೇಕು. "ನಿನ್ನ ಮಕ್ಕಳಲ್ಲಿ ಬಲಿಷ್ಠ ನಾದವನ ಸಹಾಯವೂ ಹೋಯಿತಲ್ಲ ! ನಮಗೆ ಬೆನ್ನುತಟ್ಟಿ ಉತ್ಸಾಹಗೊಳಿಸುವನು ಹೋದನಲ್ಲಾ ! ತನ್ನ ದೇಹವನ್ನೂ ತನ್ನ ಶಕ್ತಿಯನ್ನೂ ತನ್ನ ಕಾಲವನ್ನೂ ನಮ್ಮ ಅಭಿ ವೃದ್ಧಿಗೋಸ್ಕರವೇ ಕಳೆಯಬೇಕೆಂದಿದ್ದವನು ಮಾಯವಾದನಲ್ಲಾ ! ನಮ್ಮ ಶರೀರಸ್ಥಿತಿಗೂ ನಮ್ಮ ಬುದ್ಧಿಗೂ ನಮ್ಮ ದೇಶಕ್ಕೂ ಸಹಜವಾದ ನಿನ್ನ ಸ್ತನ್ಯದಿಂದಲೇ ನಮ್ಮನ್ನು ವೃದ್ಧಿಗೊಳಿಸಬೇಕೆಂದಿದ್ದನಲ್ಲಾ ! ಆ ಯತ್ನವು ಇಷ್ಟಕ್ಕೆ ಪರಿಣಮಿಸಿತೇ !" ಎಂದು ನಾವೀಗ ದುಃಖಪಡಬೇಕು. ಈಗೀಗ ಸರ್ವತ್ರ ನಿನ್ನ ವಾಕ್ಕೆಂಬುವ ಬೆಳಕೇ ನಮ್ಮವರ ಕಣ್ಣಿಗೆ ಸರಿಯಾದ ಬೆಳಕೆಂದು ತಿಳಿಯುತ್ತ ಬರುವರು. ಆ ಬೆಳಕಿನ ಮೂಲಕವಾಗಿಯೇ ನಮ್ಮ ಅಜ್ಞರಾದ ಸಹೋದರರ ನೇತ್ರಗಳನ್ನು ಉನ್ಮೀಲನ ಮಾಡುವುದು ಸುಕರವೆಂದು ತಿಳಿಯುತ್ತ ಬರುವರು. "ಇಂಥ ಕಾಲದಲ್ಲಿ ಈತನು ಗತಿಸಿದನಲ್ಲಾ ! ಇವನಷ್ಟು ಸಮರ್ಥ ನಾದವನು ಹುಟ್ಟಲು ಇನ್ನೂ ಎಷ್ಟುಕಾಲ ಬೇಕೋ ?—ಎಂಬ ಚಿಂತೆಯಿಂದ ನೀನು ಕೊರಗುತ್ತಿದ್ದರೆ ಆ ಚಿಂತೆಯೇನೋ ಸರಿ ; ಅಂಥ ಚಿಂತೆಯು ಸಹಜ. ಅದರಿಂದ ಕೊರ

ಗುವೆಯಾದರೆ ಯುಕ್ತ. ಅದೇ ನಿನ್ನ ಶೋಕಕ್ಕೆ ಕಾರಣವಿರಬಹುದು. ಆತನು ನಿನ್ನ ಸೇವೆಯಲ್ಲಿ ಹೊಂದಿದ ತೇಜಸ್ಸನ್ನು ಧಾರ್ವಾಡದಲ್ಲಿ ತೋರಿಸಿದಾಗ ನಿನಗೆಷ್ಟು ಸಂತೋಷವಾಯಿತು ಹೇಳು. ಆತನು ಆಗ ತನ್ನಂತನೇಕರಿರುವರೆಂದು ಹೇಳಿದನಲ್ಲವೆ ? ಅಂಥವರು ನಿನ್ನನುಗ್ರಹದಿಂದ ಆತನಂತೇಕೆ ಬೇಗನೆ ಆಗಬಾರದು ? ನಿನ್ನ ಕರುಣಾಕಟಾಕ್ಷಕ್ಕೆ ನಮ್ಮ ದೇಶದವರನ್ನು ಪಾತ್ರರನ್ನಾಗಮಾಡು. ನಮಗೆ ಈಗ ನರಸಿಂಹನ ವಿಯೋಗದಿಂದುಂಟಾದ ದುಃಖವನ್ನು ಹೋಗಲಾಡಿಸು ! ನಿನ್ನ ತೇಜಸ್ಸನ್ನು ಪೂರ್ವದಂತೆಯೇ ನಿನ್ನ ಪುತ್ರರ ಮೂಲಕ ಪ್ರಚಾರಗೊಳಿಸು ! ಇದಕ್ಕೆ ಶ್ರೀ ಕೃಷ್ಣನ ಸಹಾಯವು ನಮಗೆ ಒದಗಲಿ !

M. A. R.

ವಿದ್ಯಾದಾಯಿನಿ, ಭಾಗ ೧೬, ಸಂಚಿಕೆ ೧, ಜನವರಿ ೧೯೦೮

೨೦

IN MEMORIAM

ನೆನಪು

ಮೆರೆವಾ ಪ್ಲವಂಗಸಂವ
ತ್ಸರದೊಳಗುರು ಮಾರ್ಗಶೀರ್ಷ ಕೃಷ್ಣ ತೃತೀಯಾ
ವರ ರವಿವಾಸರದಿರುಳದು
ನರಸಿಂಹಾಚಾರ್ಯಮಣಿಯನಪಹರಿಸಿದುದೇ ! ೧

ಶರದಿಂದುವನಲೆಗಳೆಯುಂತೆ,
ಧರೆಯೊಳ್ನೆರೆ ಮೆರೆವ ಯಶಮನೊಂದಿದ, ಯಸ್. ಜೀ.
ನರಸಿಂಹಾರ್ಯ ಕವೀಂದ್ರನ
ನರರೇ ! ಸುರಸತಿಯರೊಲ್ದು, ಸೆಳೆದುಯ್ದರೆ ! ಹಾ ! ೨

ಅಮಮಾ ! ಈ ಕವಿಯರಿಮೆಯ
ನಮರಾಧಿಪನರಿದು, ತನ್ನ ಸಭೆಗೀಳ್ದನೊ ! ಮೇಣ್,
ಕಮಲಭವನೀರ್ಷ್ಯೆಯಿಂ, ನಿಜ
ರಮಣೀಹೃದಯೇಶನೆಂದು, ಸುಟ್ಟುರಿಪಿದನೋ ! ೩

ರಸಿಕರ ತಲೆವಣಿಯಳಿದುದಂ !
ಮಸುಕಿಟ್ಟಳ್ ಮೊಗಕೆ 'ಷಟ್ಪದೀ' ಕಾಮಿನಿಯುಂ !
ಪೆಸರ್ವಡೆದ ಕಬ್ಬಿಗರ್ಕಳ
ಪೊಸಭಾಗ್ಯಂ ಬೆಂದುದಕಟ ! ಕನ್ನಡನಾಡೊಳ್ ೪

ಕನ್ನಡವೆಣ್ಗೆಸೆದಿರ್ದಾ
ರನ್ನದ ತಾಟಂಕಮಯ್ಯೊ ! ಪುಡಿಯಾದುದೆ ? ಹಾ !
ಇನ್ನೇವೆನೆಲೆಲೆ ! ಕವಿತಾ
ಕನ್ಯೆಯ ಮೆರೆವೈ(ರದಾ)ಳಿ ಪರಿದುದು ನೆಲನೊಳ್ ! ೫

N. Srikanta Shastri
Palace Pandit, Mysore

ಶ್ರೀ ಕೃಷ್ಣಸೂಕ್ತಿ, ಉಡುಪಿ,
ಸಂಪುಟ ೩—ಸಂಚಿಕೆ ೩, ಮಾರ್ಚಿ ೧೯೦೮, ಪು. ೮೯.

೨೧

A SAD MESSAGE

ದಿವಂಗತ ವೃತ್ತಾಂತ

ಗಗನಶಶಿ(ನಿ)ಧಿಹಿಮಾಂಶಂ—
ಪ್ರಗಣಿತ ಕ್ರಿಸ್ತಾಬ್ದಮಾಸದಶಕದೊಳಿರ್ಪ—
ತ್ತಿಗೆ ಮೇಲಷ್ಟಮದಿನದೊಳ್,
ಜಗಮಂ ಶ್ರೀರಂಗಸಾಮಿಯುಳಿದಂ ;—ಕಳಿದಂ. ೧

ಕುಲಮಂ ಪೇಳ್ವೊಡೆ, ಪೂತಗೌತಮಕುಲಂ ; ಚಾರಿತ್ರಮಂ ಪೇಳೆ, ನಿ
ರ್ಮಲಚಾರಿತ್ರಮುದಾತ್ತದಭ್ಯುದಯಮಂ ಪೇಳಲ್ಕೆ, ಕರ್ಣಾಟಮಂ
ಡಲಕರ್ಣಾಟಕಸತ್ಕವೀಶ್ವರವರಶ್ರೀನಾರಸಿಂಹಾರ್ಯಸೂ
ನು ಲಸದ್ರಂಗನಿವಾಸಭಕ್ತನೆನಲಿನ್ನೀ ರಂಗನಂ ಪೋಲ್ವರಾರ್ ? ೨

ನುಡಿವೆಣ್ಣೋಲೆಯ ಭಾಗ್ಯವೋಸರಿಸಿದತ್ತಯ್ಯಯ್ಯೊ ! ಬಿನ್ನಾಣದು
ಪ್ಪುಡುಗಿತ್ತಸ್ತಮಿಸಿತ್ತು ಶಾಂತತೆ ; ನಿಗರ್ವಂ ಗರ್ವಗುಂದಿತ್ತು ; ಸಂ
ಗಡಿಗಗ್ಗಿಂಪುರೆ ಜಾರಿದತ್ತು ; ಪಸೆನಿಂದಾ ಪೆಣ್ಣ ತಾಟಂಕಮಿಂ
ಪುಡಿವೋದತ್ತಯೊ !-ರಂಗಸಾಮಿ !-ಬಿದಿ ನಿನ್ನಂ ಕೊಂಡುಪೋಗಲ್, ವಲಂ
೩

ಅರಿವಿಲಿಯಾಗಿ ನೂರು ಬರಿಸಂಬರಮಿರ್ದೊಡಮೇನೊ ? ಗಾನಮಾ
ಧರೆಯೊಳಗುಳ್ಳ ಕಾಲದೊಳೆ ಬಿಜ್ಜೆಯನಾರ್ಜಿಸುತೊಲ್ದು, ಧರ್ಮಮಂ
ತರಮರಿತಾಗಿಸುತ್ತೆ, ಹರಹಾಸನಿಭಾರ್ಜುನಕೀರ್ತಿಯಿಂ ದಿಗಂ
ತರಮನೆ ಬೆಳ್ಪನಾಗಿಸಿದ ರಂಗನೆ ! ನಿನ್ನವೊಲಿರ್ದೊಡೊಪ್ಪದೇ ? ೪

ಒಂದೆರಡಕ್ಕರಂಗಳನೆಯೊಳ್ವವರೆಮ್ಮವೊಲಾರುಮಿಲ್ಲಮೆಂ
ಬೊಂದಭಿಮಾನದಿಂ ಬೆರೆತು ಬೀಗುವರಿರ್ಕ್ಕೆಮ ! ಸರ್ವವಿದ್ಯೆಯಂ
ಚೆಂದದೆ ಬಲ್ಲೊಡಂ, ಬರಿದೆ ಬಿಂಕಮನಾನದೆ, ಮೋನಮಿರ್ದ್ದ ನಿ
ನ್ನೊಂದೆಸಕಂ ನಿಗುಂಬಿಪುದು ಕುಂಭಿನಿಯೊಳ್, ವರ ರಂಗಸಾಮಿ! ಕೇಳ್! ೫

ವಿನಯಂ ವಿದ್ಯೆಗೆ ತಕ್ಕುದಾಯ್ತು ; ನಯದಿಂದಂ ಯೋಗ್ಯತಾಸಿದ್ಧಿ ಸಂ
ಜನಿಸಿತ್ತುತ್ತಮಯೋಗ್ಯತಾತಿಶಯದಿಂ ಲಕ್ಷ್ಮೀಕಟಾಕ್ಷಂ ದಿನಂ
ದಿನಮುಂ ವರ್ಧಿಸಿದತ್ತು ; ವಿತ್ತದೊದವಿಂ ಧರ್ಮಂ ಪೊದಳ್ದತ್ತು ; ರಂ
ಗನಿವಾಸಾಜ್ಞೆಯೊಳಯ್ಯ ! ನಿನ್ನೊಳಿನಲಿಂ, ನೀನೇ ವಲಂ ಮಾನ್ಯನಯ್! ೬

ಕೊರಲನವುಂಕುತಿರ್ಪ್ಪ ಕಫವಾತದ ಬಾಧೆಗಳಿಲ್ಲದಂತೆ, ವಿ
ಸ್ಮರಣೆಯುಮಿಲ್ಲದಂತೆ,—ತನುವಂ ಹರಣಂ ನೆರೆ ದಾಂಟುವನ್ನೆಗಂ,
ಹರಿಯ ಗುಣಾಳಿಯಂ ನೆನೆಯುತುಂ, ಹರಿಪಾದಸರೋಜತೀರ್ಥಮಂ
ಶಿರದೊಳಗಾನುತುಂ, ಹರಿಪದಕ್ಕಿರದೆಯ್ದಿದ ನೀನೆ ಧನ್ಯನಯ್ ! ೭

ಅನಿತಿನಿತೆಂದು ಲೆಕ್ಕಮಿಡಲಾನರಿಯೆಂ ;—ಭವದೀಯ ವಿದ್ಯೆಯಂ,
ವಿನಯಮನೊಳ್ಗುಣಂಗಳ, ನಿಗರ್ವವ, ನೇಹದ ಪೆಂಪನೊಲ್ಮೆಯಂ,
ಜನಹಿತಕಾರಿಯಪ್ಪ ನಿನತಿಚ್ಛೆಯನಾ ವರಧರ್ಮರಕ್ತಿಯಂ
ನೆನೆನೆನೆದಾವಗಂ, ಮರುಗುತಿರ್ದ್ದಪುದೆನ್ನಯ ಚಿತ್ತಮಕ್ಕಟ ! ೮

ಘಳವಿಷಯಾಶಾವಿಧುರತೆ
ಯೆಳವೆಯೊಳೇ ಪೊಳೆತುದಯ್ಯ ! ನಿನ್ನೊಳ್. ನಿನ್ನೊಂ
ದಳಘುಗುಣಂಗಳ ಬಣ್ಣಿಸ
ಲಳವಲ್ತೆನ್ನನ್ನರಪ್ಪ ಮಂದಗ್ಗೆಂದುಂ ೯

ಧರೆಯೊಳಗಷ್ಟಾವಿಂಶತಿ
ಬರಿಸಮೆ ಪರಮಾಯುವಾಯ್ತು ; ನಿನಗಾದೊಡಮಾ
ತೆರದೊಳ್ಗುಣಮಂ ತಳೆದರ
ನರಿಯೆಂ ನಾಂ—ನಿನ್ನನುಳಿದು ಪೆರರೊರ್ವರುಮಂ ೧೦

"ಕಳಿದರಿಗಾವಗಂ ಮರುಗಲಾಗದು ; ಬಂಧುಗಳೆಳ್ತೊಡಂತರಿಂ
ದಲೆವಡುವರ್ ಪೆರಂ ಕಳಿದರೆಂಬ" ಮಹಾತ್ಮರ ನೀತಿವಾಕ್ಯಮಂ
ಗಳಿಲನೆ ಚಿತ್ತದೊಳ್ನೆನೆದು, ನೂಂಕುತುಮೆನ್ನಯ ಶೋಕವೇಗಮಂ,
''ಕಳಿದನಿಗೀಯ ! ರಂಗವಿಭು! ಸದ್ಗತಿಯಂ'' ಗಡೆನುತ್ತೆ ಬೇಳ್ಪೆನಾಂ ೧೦

ಆಳಿವೊಡಲನಂಳಿದಂ, ಕೀರ್ತ್ಯ
ಜ್ವಳದೇಹಮನಾಂತ ರಂಗಸ್ವಾಮಿಯ ಗುಣಸಂ
ಕುಳಮೆರ್ದೆಗೊಂಡುದರಿಂದಂ,—
ನಲಮಿಂದೀ ತೆರದೊಳುಸಿರ್ದನೊರ್ವ್ವಂ ಕೆಳೆಯಂ. ೧೨

—An Admirer

ಶ್ರೀಕೃಷ್ಣಸೂಕ್ತಿ, ಡಿಸೆಂಬರ್ ೧೯೧೦, ಪು. ೩೫೮-೫೯
(ಎಸ್. ಜಿ. ನರಸಿಂಹಾಚಾರ್ಯರ ಪುತ್ರ ರಂಗಸ್ವಾಮಿ ಅಯ್ಯಂಗಾರ್ಯರು ನಿಧನರಾದುದರ ಬಗ್ಗೆ ಬಾಷ್ಪಾಂಜಲಿಕವಿತೆ)

೨೨

'ಶ್ರೀ ರಾಮಚರಿತೆ' ವಿಜ್ಞಾಪನೆ

" ಶ್ರೀ ಕಾಳಿದಾಸಮಹಾಕವಿಯಿಂದ ವಿರಚಿತವಾದ ರಘುವಂಶದ ಮೊದಲಿನಿಂದ ಎಂಟು ಸರ್ಗಗಳ ಪದ್ಯಗಳಲ್ಲಿ ಕೆಲವನ್ನು ಕುಸುಮಷಟ್ಪದಿಯ ದಿಲೀಪಚರಿತೆಯೆಂದೂ ಮತ್ತೆ ಕೆಲವನ್ನು ಭಾಮಿನೀಷಟ್ಪದಿಯ ಅಜನೃಪಚರಿತೆಯೆಂದೂ ಮೈಸೂರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಟ್ರಾನ್ಸ್ಲೇಟರಾಗಿದ್ದ ಕೀರ್ತಿಶೇಷರಾದ ಮ|| ರಾ|| ಎಸ್. ಜಿ. ನರಸಿಂಹಾಚಾರ್ಯರವರು ಕನ್ನಡದಲ್ಲಿ ಅನುವಾದಮಾಡಿರುವುದು ಸರಿಯಷ್ಟೆ.

ಅದರಿಂದ ಮುಂದೆ ಇರುವ ರಘುವಂಶದ ಇತರ ಸರ್ಗಗಳು ಇದುವರೆವಿಗೂ ಯಾರಿಂದಲೂ ಕನ್ನಡಿಸಲ್ಪಟ್ಟಂತೆ ಕಂಡುಬರಲಿಲ್ಲವಾದುದರಿಂದ ನಾನು ಶ್ರೀರಾಮ ಚರಿತೆಯೆಂದು ಹೆಸರಿಟ್ಟು ಒಂಭತ್ತನೆಯ ಸರ್ಗದಿಂದ ಏಳು ಸರ್ಗಗಳನ್ನು ತಕ್ಕಮಟ್ಟಿಗೆ ಕನ್ನಡಿಸಿದೆನು. ಇದರಲ್ಲಿ ಪೀಠಿಕಾಸಂಧಿಯು ಭಾಮಿನೀಷಟ್ಪದಿಯಲ್ಲೂ ಮಿಕ್ಕ ಆರು ಸಂಧಿಗಳು ಕುಸುಮಷಟ್ಪದಿಯಲ್ಲೂ ಬರೆದು ಅನುವಾದಮಾಡಲ್ಪಟ್ಟಿವೆ..."

ಎಂ. ಕೃಷ್ಣಪ್ಪ,
'ಶ್ರೀರಾಮಚರಿತೆ', ಕರ್ಣಾಟಕ ಗ್ರಂಥಮಾಲಾ ೬೨,
ಮೈಸೂರು, ೧೯೧೩.

೨೩

'ರಘುಪತಿಚರಿತಂ' ಅವತರಣಿಕೆ

"ಶ್ರೀ ಮಹಾಕವಿ ಕಾಳಿದಾಸ ವಿರಚಿತ ರಘುವಂಶ ಮಹಾಕಾವ್ಯವನ್ನು ಕನ್ನಡಿಸಬೇಕೆಂದು ಅನೇಕ ವರ್ಷಗಳ ಹಿಂದೆಯೇ ನಾನು ಯೋಚಿಸಿದ್ದೆನು. ಅಷ್ಟರಲ್ಲಿಯೇ ಮ|| ರಾ|| ಎಸ್.ಜಿ. ನರಸಿಂಹಾಚಾರ್ಯರವರು ಬರೆಯಲುಪಕ್ರಮಿಸಿರುವರೆಂದು ತಿಳಿದುದರಿಂದ 'ರಂಗನ ಮುಂದೆ ಸಿಂಗನೆ' ಎಂಬ ಗಾದೆಯನ್ನು ನೆನಪಿಗೆ ತಂದು ಕೈಬಿಟ್ಟೆನು. ಅವರು ದಿಲೀಪ ಚರಿತ್ರೆ ಮೊದಲುಮಾಡಿ, ಎಂಟನೆಯ ಸರ್ಗದವರೆಗೂ ಬರೆದರು.

ಮುಂದಕ್ಕೂ ಅವರೇ ಬರೆದು ಲೋಕೋಪಕಾರ ಮಾಡಲು ದೈವಸಂಕಲ್ಪವಿರಲಿಲ್ಲವಾಗಿ ಈಗ ನಾನು ಒಂಭತ್ತನೆಯ ಸರ್ಗದಿಂದ ಮೊದಲುಮಾಡಿ ನಾಲ್ಕು ಸರ್ಗಗಳನ್ನು 'ರಘುಪತಿಚರಿತ' ವೆಂಬ ಹೆಸರಿನಿಂದ ಕನ್ನಡಿಸಿರುವೆನು."

ಕೆ. ಆರ್. ನರಸಿಂಹಯ್ಯ,
'ರಘುಪತಿ ಚರಿತಂ', ಕರ್ಣಾಟಕ ಗ್ರಂಥಮಾಲೆ,
ಮೈಸೂರು, ೧೯೧೮

೨೪

'ಶ್ರೀ ರಾಮಾನುಜಸೂರಿಚರಿತಂ'

ಇವರ್ ಕೈಕೊಂಡ ಕಜ್ಜಂ ಫಲೋನ್ಮುಖಮಪ್ಪ ಸಮಯದೊಳ್ ಮುಗಿಲಿಲ್ಲದ ಗಗನದಿಂ ಬರಸಿಡಿಲೆರಗಿದಂತೆ ರಾಮಾನುಜಾಚಾರ್ಯನೊಳ್ಗೆಳೆಯಂ ಕುಶಾಗ್ರಮತಿಯುಂ ಕರ್ಣಾಟಕವಿತಾರಸಾಸ್ವಾದಲೋಲುಪನುಂ ಕವಿತಾವಧೂಟೀವರನುಮಪ್ಪ ನರಸಿಂಹಾಚಾರ್ಯಂ ಪರಾಸುವಾಗಲೊಡಂ ಕನ್ನಡಬಾಣಿ ಶೋಕಭಾರದಿಂ ಕುಗ್ಗಿದಳ್ ; ಕಂದಿ ಕುಂದಿದಳ್, ಕನ್ನಡಿಗರುಂ ಮುಂದುಗಾಣದೆ ಕಣ್ಗೆಟ್ಟರ್. ಗ್ರಂಥಪ್ರಕಟನೋದ್ಯಮದೊಳ್ ತನಗೆ ದಕ್ಷಿಣಭುಜದಂತಿರ್ದೀ ವಿದ್ವದ್ವರನಕಾಲದೊಳ್ ಕಾಲಾಧೀನಮಾಗೆ ರಾಮಾನುಜಾಚಾರ್ಯನುತ್ಸಾಹಮುಮುತ್ಸಾರಿತಮಾದುದು.

ಎಸ್. ಜಿ. ಗೋವಿಂದರಾಜಯ್ಯಂಗಾರ್,
'ಶ್ರೀರಾಮಾನುಜಸೂರಿಚರಿತಂ', ಕಸಾಪ.
೫೧-೧, ೨, ಜೂನ್-ಡಿಸೆಂಬರ್ ೧೯೬೬, ಪು. ೫

೨೫

(i) "ನನಗೆ ಬಂದ ಮೊದಲನೆಯ ಅನುಭವವೆಂದರೆ—ಉತ್ತರ ಕರ್ನಾಟಕ, ಮೈಸೂರು, ಮಂಗಳೂರು ಮುಂತಾದ ಭಾಗಗಳಲ್ಲಿರುವ ಕನ್ನಡದಲ್ಲಿ ಏಕರೂಪತೆ ಇಲ್ಲದಿರುವುದು. ಆಗ ನನಗೆ ತೀರ ಹೊಸದೊಂದು ವಿಚಾರ ಜಗ್ಗನೆ ಹೊಳೆಯಿತು. ಅದೇನೆಂದರೆ, ಕರ್ನಾಟಕದ ಎಲ್ಲ ಭಾಗಗಳ ಏಕರೂಪತೆ ಉಂಟಾಗದೆ ಕನ್ನಡದ ಉದ್ಧಾರವಾಗದೆಂಬ ಮಾತು. ತಟ್ಟನೆ, ೧೯೦೭ ರಲ್ಲಿ ಕರ್ನಾಟಕ ಗ್ರಂಥಕರ್ತರ ಸಮ್ಮೇಲನವನ್ನು ಹೂಡಿದೆ. ಕರ್ನಾಟಕತ್ವದ ಕಲ್ಪನೆಯಲ್ಲಿ ನನ್ನ ಜೊತೆಗೆ ನಿಂತು ಕೆಲಸ ಮಾಡಿದವರೆಂದರೆ ನರಗುಂದಕರ ರಾಮರಾಯರು. ಎಸ್. ಜಿ. ನರಸಿಂಹಾಚಾರ್ಯರು ಮೊದಲನೆಯ ಸಮ್ಮೇಲನಕ್ಕೆ ಅಧ್ಯಕ್ಷರು."

(ii) "ಆ ಕಾಲಕ್ಕೆ ಕರ್ನಾಟಕ ಏಕೀಕರಣದ ಕಲ್ಪನೆ ಎಸ್.ಜಿ. ನರಸಿಂಹಾಚಾರ್ಯ ರಂಥ ಕನ್ನಡದ ಕಟ್ಟಭಿಮಾನಿಗಳಿಗೆ ಕೂಡ ಇರಲಿಲ್ಲ. ಇಷ್ಟೇ ಅಲ್ಲ, ಅವರಿಗೆ ಅದು ಅಸಂಭವವಾಗಿಯೇ ತೋರುತ್ತಿತ್ತೆಂಬುದು ಅದೇ ವರ್ಷ, ಅಂದರೆ ೧೯೦೭ ನೆಯ ಇಸ್ವಿಯ ಮೇ ತಿಂಗಳ ಕೊನೆಗೆ ಕೂಡಿದ ಗ್ರಂಥಕರ್ತರ ಸಮ್ಮೇಲನದ ತಮ್ಮ ಅಧ್ಯಕ್ಷಭಾಷಣದಲ್ಲಿ ಅವರು, ಈಗ ಕರ್ನಾಟಕ ದೇಶವು ನಾಲ್ಕು ಭಾಗಗಳಾಗಿದೆ ಮುಂತಾಗಿ ಹೇಳಿ, ಕೊನೆಗೆ "ಅದು ಪುನಃ ಒಂದಾಗಿ ಸೇರುವ ಸಂಭವವಿಲ್ಲ" ಎಂದು ತೆಗೆದ ಉದ್ಗಾರದಿಂದ ಗೊತ್ತಾಗುವುದು."

ಆಲೂರ ವೆಂಕಟರಾಯ,

'ನನ್ನ ಜೀವನಸ್ಮೃತಿಗಳು', ಉತ್ತರರಂಗ,
ಪು. ೧೮೪-೮೫

ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರಿಯವರು (ಜನನ : ೧೯೩೩) ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗದಲ್ಲಿ ಪ್ರಾಧ್ಯಾಪಕರು. ಶ್ರೀಯುತರು ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ಗ್ರಂಥ ಸಂಪಾದನೆ, ನಿಘಂಟು ರಚನೆ ಮೊದಲಾದ ಶಾಸ್ತ್ರ ವಿಷಯಗಳಲ್ಲಿ ಗಾಢವಾದ ಪರಿಶ್ರಮ ಪಡೆದಿದ್ದಾರೆ. ಕನ್ನಡದ ವಿದ್ವತ್ ಪತ್ರಿಕೆಗಳಲ್ಲಿ, ಸ್ಮರಣ ಮತ್ತು ಸಂಭಾವನ ಗ್ರಂಥಗಳಲ್ಲಿ ಅನೇಕ ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ ; ವಿದ್ವತ್ ಸಮಾವೇಶಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಶ್ರೀಯುತರು ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದ ಸಂದರ್ಭದಲ್ಲಿ (೧೯೭೭), ಕನ್ನಡ ಸಂಶೋಧನ ಕ್ಷೇತ್ರದಲ್ಲಿ ತಾವು ಸಲ್ಲಿಸಿರುವ ಸೇವೆಗಾಗಿ ಸನ್ಮಾನಿತರಾಗಿದ್ದಾರೆ. 'ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ' ಯೋಜನೆಯ ಸಂಪಾದಕರೂ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪಾದಕ ಮಂಡಲಿಯ ಸದಸ್ಯರೂ ಆಗಿದ್ದಾರೆ.

ಸ್ವತಂತ್ರವಾಗಿ, ಸಹಕರ್ತೃವಾಗಿ ಈವರೆಗೆ ಶ್ರೀಯುತರು ಸುಮಾರು ೪೦ ಪುಸ್ತಕಗಳನ್ನು ರಚಿಸಿದ್ದಾರೆ, ಸಂಪಾದಿಸಿದ್ದಾರೆ. 'ಮಹಾಕಾವ್ಯ ಲಕ್ಷಣ', 'ಕನ್ನಡ ಛಂದಸ್ಸು', 'ಶ್ರೀವತ್ಸ ನಿಘಂಟು', 'ಸಾಹಿತ್ಯ ಮಂಥನ', 'ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ', 'ಕನ್ನಡ ಛಂದಃಸ್ವರೂಪ', 'ಶಬ್ದಾರ್ಥ ವಿಹಾರ'—ಇವು ಅವರ ಗಮನಾರ್ಹ ಗ್ರಂಥಗಳಲ್ಲಿ ಕೆಲವು. ಇವುಗಳಲ್ಲಿ ಕೆಲವು ಬಹುಮಾನಿತ ಗ್ರಂಥಗಳು.

ಪ್ರಸ್ತುತ, 'ಎಸ್. ಜಿ. ನರಸಿಂಹಾಚಾರ್ಯರ ಕವಿತೆಗಳು' ಈ ಮಾಲೆಗೆ ಸೇರಿರುವ ಇನ್ನೊಂದು ಮಹತ್ತ್ವದ ಗ್ರಂಥ.

IBH

ಐಬಿಎಚ್ ಪ್ರಕಾಶನ

ಗಾಂಧಿನಗರ, ಬೆಂಗಳೂರು 560 (

SG NARASIMHACHARYARA
RS 30.00
KAN 17056 1